ಎಂ. ವೀರಪ್ಪ ಮೊಯಿಲಿಯವರ ರಾಜಕೀಯ ಚಿಂತನೆಗಳು

ಅಭಿವೃದ್ಧಿ ಅಧ್ಯಯನ ವಿಭಾಗದಲ್ಲಿ ಪಿಎಚ್.ಡಿ. ಪದವಿಗಾಗಿ
ಹಂಪಿ, ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರಪಡಿಸಿದ
ಸಂಶೋಧನ

ಮಹಾಪ್ರಬಂಧ

ಸಂಶೋಧಕ
ಪ್ರಭಾಕರ. ಬ. ನರಗುಂದ
ಶ್ರೀ ಬಿ. ಆರ್. ದರೂರ ಸಂಶೋಧನ ಕೇಂದ್ರ
ಹಾರೂಗೇರಿ, ಜಿಲ್ಲೆ : ಬೆಳಗಾವಿ.

ನೋಂದಣಿ ಸಂಖ್ಯೆ : BRDSH/00106

ಮಾರ್ಗದರ್ಶಕರು
ಡಾ. ಎ.ಎಸ್. ಆನಿಕಿವಿ
ಶ್ರೀ ಬಿ. ಆರ್. ದರೂರ ಸಂಶೋಧನ ಕೇಂದ್ರ
ಹಾರೂಗೇರಿ, ಜಿಲ್ಲೆ : ಬೆಳಗಾವಿ.

ಶ್ರೀ ಬಿ. ಆರ್. ದರೂರ ಸಂಶೋಧನ ಕೇಂದ್ರ
ಹಾರೂಗೇರಿ, ಜಿಲ್ಲೆ : ಬೆಳಗಾವಿ
ಮಾನ್ಯತೆ : ಕನ್ನಡ ವಿಶ್ವವಿದ್ಯಾಲಯ, ಹಂಪಿ.

೨೦೧೨

ಎಂ. ವೀರಪ್ಪ ಮೊಯಿಲಿಯವರ ರಾಜಕೀಯ ಚಿಂತನೆಗಳು

ಅಭಿವೃದ್ಧಿ ಅಧ್ಯಯನ ವಿಭಾಗದಲ್ಲಿ ಪಿಎಚ್.ಡಿ. ಪದವಿಗಾಗಿ
ಹಂಪಿ, ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರಪಡಿಸಿದ
ಸಂಶೋಧನ

ಮಹಾಪ್ರಬಂಧ

ಸಂಶೋಧಕ

ಪ್ರಭಾಕರ. ಬ. ನರಗುಂದ
ಶ್ರೀ ಬಿ. ಆರ್. ದರೂರ ಸಂಶೋಧನ ಕೇಂದ್ರ
ಹಾರೂಗೇರಿ, ಜಿಲ್ಲೆ : ಬೆಳಗಾವಿ.

ಮಾರ್ಗದರ್ಶಕರು

ಡಾ. ಎ.ಎಸ್. ಆನಿಕಿವಿ
ಶ್ರೀ ಬಿ. ಆರ್. ದರೂರ ಸಂಶೋಧನ ಕೇಂದ್ರ
ಹಾರೂಗೇರಿ, ಜಿಲ್ಲೆ : ಬೆಳಗಾವಿ.

ಶ್ರೀ ಬಿ. ಆರ್. ದರೂರ ಸಂಶೋಧನ ಕೇಂದ್ರ

ಹಾರೂಗೇರಿ, ಜಿಲ್ಲೆ : ಬೆಳಗಾವಿ

ಮಾನ್ಯತೆ : ಕನ್ನಡ ವಿಶ್ವವಿದ್ಯಾಲಯ, ಹಂಪಿ.

೨೦೧೨

ಮಾರ್ಗದರ್ಶಕರ ದೃಢೀಕರಣ ಪತ್ರ

ಪಿ.ಬಿ. ನರಗುಂದ ಇವರು 'ಎಂ. ವೀರಪ್ಪ ಮೊಯಿಲಿಯವರ ರಾಜಕೀಯ ಚಿಂತನೆಗಳು' ಎಂಬ ಶೀರ್ಷಿಕೆಯ ಮಹಾಪ್ರಬಂಧವನ್ನು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದು, ಅಭಿವೃದ್ಧಿ ಅಧ್ಯಯನ (ರಾಜ್ಯಶಾಸ್ತ್ರ) ವಿಭಾಗದಲ್ಲಿ ಪಿಎಚ್.ಡಿ ಪದವಿಗಾಗಿ ಹಾರೂಗೇರಿ ಶ್ರೀ ಬಿ.ಆರ್. ದರೂರ ಸಂಶೋಧನ ಕೇಂದ್ರದ ಮೂಲಕ ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸುತ್ತಿರುವರು ಪ್ರಸ್ತುತ ಮಹಾಪ್ರಬಂಧ ಈ ಮೊದಲು ಇಡಿಯಾಗಿ ಅಥವಾ ಬಿಡಿಯಾಗಿ ಎಲ್ಲಿಯೂ ಪ್ರಕಟವಾಗಿಲ್ಲವೆಂದು ಯಾವುದೇ ಪದವಿಗಳಿಗಾಗಿ ಸಲ್ಲಿಸಿರುವುದಿಲ್ಲವೆಂದು ಈ ಮೂಲಕ ದೃಢೀಕರಿಸುತ್ತೇನೆ.

ಸ್ಥಳ : ಹಾರೂಗೇರಿ

ದಿನಾಂಕ : 25/06/2012

(ಡಾ.ಎ.ಎಸ್. ಆನಿಕಿವಿ)
ಮಾರ್ಗದರ್ಶಕರು
ಶ್ರೀ ಬಿ.ಆರ್. ದರೂರ
ಸಂಶೋಧನ ಕೇಂದ್ರ, ಹಾರೂಗೇರಿ

ಅಭ್ಯರ್ಥಿಯ ಪ್ರಮಾಣ ಪತ್ರ

'ಎಂ. ವೀರಪ್ಪ ಮೊಯಿಲಿಯವರ ರಾಜಕೀಯ ಚಿಂತನೆಗಳು' ಎಂಬ ಶೀರ್ಷಿಕೆಯ ಈ ಮಹಾಪ್ರಬಂಧವನ್ನು ಡಾ.ಎ.ಎಸ್. ಆನಿಕಿವಿ ಅವರ ಮಾರ್ಗದರ್ಶನದಲ್ಲಿ ಸಿದ್ದಪಡಿಸಿ, ಪಿಎಚ್.ಡಿ ಪದವಿಗಾಗಿ ಹಾರೂಗೇರಿಯ ಶ್ರೀ ಬಿ.ಆರ್. ದರೂರ ಸಂಶೋಧನ ಕೇಂದ್ರದ ಮೂಲಕ ಹಂಪಿ, ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸುತ್ತಿದ್ದೇನೆ. ಈ ಪ್ರಬಂಧವನ್ನು ನಾನು ಈ ಮೊದಲು ಇಡಿಯಾಗಿ ಅಥವಾ ಬಿಡಿಯಾಗಿ ಪ್ರಕಟಿಸಿರುವುದಿಲ್ಲವೆಂದು ಈ ಮೂಲಕ ಪ್ರಮಾಣೀಕರಿಸುತ್ತೇನೆ.

ಸ್ಥಳ : ಹಾರೂಗೇರಿ

ದಿನಾಂಕ : 25/06/2012

PBN

(ಪ್ರಭಾಕರ ಬಸವಣ್ಣೆಪ್ಪ ನರಗುಂದ)
ಸಂಶೋಧಕ
ಶ್ರೀ ಬಿ.ಆರ್. ದರೂರ
ಸಂಶೋಧನ ಕೇಂದ್ರ, ಹಾರೂಗೇರಿ

ಪರಿವಿಡಿ

ಅಧ್ಯಾಯ –೧ ವಿಷಯ ಪ್ರವೇಶ

೧.೧ ಪ್ರಸ್ತಾವನೆ

೧.೨ ಅಧ್ಯಯನದ ಉದ್ದೇಶ

೧.೩ ಅಧ್ಯಯನದ ಸ್ವರೂಪ

೧.೪ ಅಧ್ಯಯನದ ವ್ಯಾಪ್ತಿ

೧.೫ ಅಧ್ಯಯನದ ವಿಧಾನ

೧.೬ ಸಾಹಿತ್ಯ ಪರಾಮರ್ಶೆ

ಅಧ್ಯಾಯ-೧

ವಿಷಯ ಪ್ರವೇಶ

೧.೧ ಪ್ರಸ್ತಾವನೆ

ರಾಜಕೀಯ ಚಿಂತನೆಗಳು ರಾಜ್ಯ ಮತ್ತು ರಾಷ್ಟ್ರದ ಆಡಳಿತಕ್ಕೆ ಮಾರ್ಗದರ್ಶನಗಳಾಗುತ್ತವೆ. ಆದರೆ ಇಂದು ಚಿಂತನೆ ಮತ್ತು ಆಡಳಿತದ ನಡುವೆ ವ್ಯತ್ಯಾಸವಿದೆ. ಇಂದು ಅಂತರಾಷ್ಟ್ರೀಯ, ರಾಷ್ಟ್ರೀಯ ಮತ್ತು ರಾಜ್ಯ ಮಟ್ಟದಲ್ಲಿ ಆಡಳಿತವನ್ನು ಗಮನಿಸಲಾಗಿ ಅದು ಸ್ವಾರ್ಥ, ಅಧಿಕಾರದ ದಾಹ, ಪಕ್ಷಪಾತ, ಭ್ರಷ್ಟಾಚಾರ, ಜಾತಿ ಆಧರಿತ ಆಡಳಿತವನ್ನು ಕಾಣುತ್ತೇವೆ. ಇದು ಇಡೀ ಸಮೂದಾಯಕ್ಕೆ ಒಂದು ದೊಡ್ಡ ಸಮಸ್ಯೆಯಾಗಿದೆ. ಸಮುದಾಯಕ್ಕೆ ಒಳ್ಳೆಯ ಆಡಳಿತವನ್ನು ನೀಡಿ ಸಮುದಾಯದ ಅಭಿವೃದ್ಧಿಯನ್ನು ಬಯಸುವ ಸಮುದಾಯದ ಚಿಂತನೆಯನ್ನು ಹೊಂದಿರುವ ಜನಪ್ರತಿನಿಧಿಗಳು ಅಧಿಕಾರ ಹಿಡಿಯಬೇಕು. ಇಲ್ಲದಿದ್ದರೆ ಪ್ರಜಾಪ್ರಭುತ್ವ ಮೌಲ್ಯಗಳನ್ನು ಕಳೆದುಕೊಳ್ಳುತ್ತದೆ. ಮತ್ತು ಸಮುದಾಯ ವಿನಾಶದಂಚಿಗೆ ತಳ್ಳಲ್ಪಡುತ್ತದೆ. ಇಂತಹ ಸಮಸ್ಯೆಗಳಿಂದ ಮುಕ್ತಿ ಹೊಂದಿ ಸಮುದಾಯಕ್ಕೆ ಒಳ್ಳೆಯ ಆಡಳಿತ ನೀಡುವ ಚಿಂತಕರ ಅವಶ್ಯಕತೆ ಇದೆ. ಪ್ಲೇಟೋ ಹೇಳುವ ಹಾಗೆ ತತ್ವಜ್ಞಾನಿಯಾದವನು ರಾಷ್ಟ್ರವನ್ನು ಆಳಬೇಕು. (Philosopher Should rule the nation) ಇದು ಸಾರ್ವತ್ರಿಕ ಸತ್ಯವಾಗಿದೆ. ಸಮುದಾಯದ ಬಗೆಗೆ ಚಿಂತನೆ ಹೊಂದಿದ ಜನಪ್ರತಿನಿಧಿಗಳು ಇಂದು ದೊರೆಯುತ್ತಿಲ್ಲ. ಇಂತಹ ಸಮಸ್ಯೆಗೆ ಪರಿಹಾರ ಕಂಡುಕೊಳ್ಳಲು ಚಿಂತನೆಗಳು ಅವಶ್ಯವಾಗಿವೆ.

ಆ ಮೂಲಕ ಕರ್ನಾಟಕ ರಾಜ್ಯವು ಸಾಮಾಜಿಕ, ಹಾಗೂ ಸಾಂಸ್ಕೃತಿಕ ವೈಶಿಷ್ಟತೆಗಳಿಂದ ಗುರುತಿಸಿಕೊಂಡಿದೆ. ಹೀಗೆ ಗುರುತಿಸಿಕೊಳ್ಳಲು ಆಯಾ ಕ್ಷೇತ್ರದಲ್ಲಿ ಕ್ರೀಯಾಶೀಲರಾಗಿ ಕಾರ್ಯವನ್ನು ಮಾಡಿದ ಅನೇಕ ಮಹನೀಯರು ಕಂಡು ಬರುತ್ತಾರೆ.

ಅವರಲ್ಲಿ ಮಾನ್ಯ ಶ್ರೀ ಎಂ. ವೀರಪ್ಪ ಮೊಯಿಲಿಯವರು ಈ ಮೂರು ಕ್ಷೇತ್ರಗಳಲ್ಲಿ ತಮ್ಮ ಚಟುವಟಿಕೆಗಳ ಮೂಲಕ ಗುರುತಿಸಿಕೊಂಡವರು.

ಎಂ. ವೀರಪ್ಪ ಮೊಯಿಲಿಯವರು ಕರ್ನಾಟಕ ಕಂಡ ಅಪರೂಪದ ಮುಖ್ಯಮಂತ್ರಿಗಳಲ್ಲಿ ಒಬ್ಬರು. ಕೆಳ ಸಮುದಾಯದಲ್ಲಿ ಜನಿಸಿ ರಾಷ್ಟ್ರ ರಾಜಕಾರಣದಲ್ಲಿ ಪ್ರಸಿದ್ಧಿಯನ್ನು ಪಡೆದವರು. ಮೊಯಿಲಿಯವರು ಕಡು ಬಡತನ, ಅಸ್ಪೃಶ್ಯತೆಯ ವಾತಾವರಣದಂತಹ ಕಹಿ ಅನುಭವಗಳನ್ನು ಅನುಭವಿಸಿದವರು. ಅವಮಾನವನ್ನು ಸ್ವ-ಸಾಮರ್ಥ್ಯದಿಂದ ಮತ್ತು ಸತತ ಪ್ರಯತ್ನದಿಂದ ಮೆಟ್ಟಿ ನಿಂತವರು. ಮೊಯಿಲಿಯವರು ಪರಿಶ್ರಮ ಜೀವಿ, ಅಧ್ಯಯನಶೀಲ ವ್ಯಕ್ತಿತ್ವವುಳ್ಳವರು. ರಾಜಕೀಯ ಚಿಂತನೆಯ ಕೌಶಲ್ಯತೆಯನ್ನು ಬಾಲ್ಯದಿಂದಲೇ ಕರಗತ ಮಾಡಿಕೊಂಡವರು. ಇವುಗಳ ಜೊತೆಗೆ ಕಾನೂನನ್ನು ವಿಶೇಷವಾಗಿ ಅಭ್ಯಸಿಸಿದವರು. ಇವೆಲ್ಲದರ ಜೊತೆಗೆ ಕನ್ನಡ, ಸಾಹಿತ್ಯ, ಮತ್ತು ಸಾಂಸ್ಕೃತಿಕ ಕಾರ್ಯ ಚಟುವಟಿಕೆಯಲ್ಲಿ ಸಕ್ರೀಯವಾಗಿ ತಮ್ಮನ್ನು ತಾವು ತೊಡಗಿಸಿಕೊಂಡವರು. ಮೊಯಿಲಿಯವರು ಸಮಾಜಮುಖಿಯಾದ ನ್ಯಾಯಪರ ಹೋರಾಟದಲ್ಲಿ ಮುಂದಾಳತ್ವವನ್ನು ವಹಿಸಿಕೊಂಡವರು. ಜೊತೆಗೆ ತಮ್ಮ ಉತ್ತಮ ಭಾಷಣ ಕಲೆಯಿಂದ ಜನಸಾಮಾನ್ಯರ ಮನಸ್ಸನ್ನು ಗೆದ್ದವರು. ಕರ್ನಾಟಕದ ರಾಜಕೀಯ ಇತಿಹಾಸದಲ್ಲಿ ಅವರು ಮಾಡಿದ ಸಾಧನೆಯನ್ನು ಗುರುತಿಸುವುದು ಪ್ರಸ್ತುತ ಸಂದರ್ಭದಲ್ಲಿ ಅವಶ್ಯಕವಾಗಿದೆ. ಮೊಯಿಲಿಯವರು ಸಮಾಜದ ಎಲ್ಲಾ ರಂಗದಲ್ಲಿ ಗುರುತಿಸಿಕೊಂಡಿದ್ದರೂ ಸಹ ಈ ಅಧ್ಯಯನದಲ್ಲಿ ವಿಶೇಷವಾಗಿ ಅವರ 'ರಾಜಕೀಯ ಚಿಂತನೆ'ಯನ್ನು ಮುಖ್ಯವಾಗಿಟ್ಟುಕೊಂಡು ಅಧ್ಯಯನದಲ್ಲಿ ತೊಡಗುವುದರ ಮೂಲಕ ಎಂ. ವೀರಪ್ಪ ಮೊಯಿಲಿಯವರ ರಾಜಕೀಯ ಚಿಂತನೆಗಳ ಸ್ವರೂಪ, ವೈಶಿಷ್ಟ್ಯಗಳ ಕುರಿತು ವಿಶ್ಲೇಷಣಾತ್ಮಕ ವಿಧಾನದ ಮೂಲಕ ಅಧ್ಯಯನ ಮಾಡುವುದು ಮುಖ್ಯವಾಗಿದೆ.

"ಅಸಾಧಾರಣ ವ್ಯಕ್ತಿಗಳು ಸಾಮಾನ್ಯವಾಗಿ ಕಷ್ಟ-ಕೋಟಲೆಗಳ ಮಡಿಲಿನ ನಡುವೆಯೇ ಜೀವಿಸಬೇಕಾಗುತ್ತದೆ. ಆದರೆ ಮೊಯಿಲಿಯಂತವರು ಇವುಗಳನ್ನು ತಮ್ಮ ಸಾಧನೆಗಳ ಸೋಪಾನವಾಗಿಸಿಕೊಳ್ಳುತ್ತಾರೆ. ಇಂತಹ ವ್ಯಕ್ತಿಗಳ ಯಶಸ್ವಿಗೆ ಎರಡು ಸಂಗತಿಗಳು ಕಾರಣವಾಗುತ್ತವೆ. ಉನ್ನತ ಧೀಶಕ್ತಿ ಮತ್ತು ಪರಿಶುದ್ಧ ಚರಿತ್ರೆ. ಮೊದಲನೆಯದು ಅವರಿಗೆ ವ್ಯವಹಾರಿಕ ಪ್ರಜ್ಞೆ, ಕೌಶಲ್ಯ ಮತ್ತು ಸೂಕ್ಷ್ಮ ಗ್ರಾಹಿತ್ವ ಇವುಗಳನ್ನು ಕೊಟ್ಟರೆ, ಎರಡನೆಯದು

ಸತ್ಯ, ಸೌಂದರ್ಯ, ನ್ಯಾಯ, ಪ್ರೀತಿ, ಮತ್ತು ಸೃಜನಶೀಲತೆ ಈ ಗುಣಗಳನ್ನು ಅವರಿಗೆ ನೀಡುತ್ತದೆ. ಅವರು ಈ ಗುಣಗಳನ್ನೆ ಆಯುಧಗಳಾಗಿಸಿಕೊಂಡು ಬದುಕಿನ ಯುದ್ಧದಲ್ಲಿ ಹೋರಾಡುತ್ತಾರೆ. ತಮಗೆ ಕಂಡ ಸತ್ಯಕ್ಕಾಗಿ ಯಾವ ಪ್ರತಿಕೂಲ ಪರಿಸ್ಥಿತಿಯನ್ನು ಕೆಚ್ಚೆದೆಯಿಂದ ಎದುರಿಸುತ್ತಾರೆ. ಸೌಂದರ್ಯ ಪ್ರಜ್ಞೆ ಅವರ ವಿಶಿಷ್ಟಗುಣ. ಮತ್ತವರು ಸರಿ–ತಪ್ಪುಗಳ ನಡುವಿನ ಸಂಘರ್ಷವನ್ನು ನಿವಾರಿಸಲು ನ್ಯಾಯಅನ್ಯಾಯ ವಿವೇಚನೆಯನ್ನು ಧರಿಸುತ್ತಾರೆ" ಎಂದು ಮೊಯಿಲಿಯವರನ್ನು ಕುರಿತು ಪ್ರೊ. ಬಿ. ಶೇಖ್ ಅಲಿಯವರು 'ಎಲ್ಲಿ ಮನಕಳುಕಿರದೊ ಎಲ್ಲಿ ತಲೆಬಾಗಿರದೊ' ಕೃತಿಯ ಮುನ್ನುಡಿಯಲ್ಲಿ ಹೇಳಿಕೊಂಡಿದ್ದಾರೆ. ಈ ಗುಣವನ್ನು ಹೊಂದಿದ ಎಂ. ವೀರಪ್ಪ ಮೊಯಿಲಿಯವರು ಎಲ್ಲಾ ಜಾತಿ–ಧರ್ಮಗಳ ಸಂಕೋಲೆ ದಾಟಲು ಪ್ರಯತ್ನಿಸಿದ್ದಾರೆ. ಅವರಲ್ಲಿರುವ ಸೃಜನಶೀಲತೆಯು ಅವರನ್ನು ರಾಜಕೀಯ ಚಿಂತಕರನ್ನಾಗಿ ಪರಿವರ್ತಿಸಿದೆ.

೧.೨ ಅಧ್ಯಯನದ ಉದ್ದೇಶ

ಶ್ರೇಣಿಕೃತ ಸಮಾಜದ ಅತ್ಯಂತ ಕೆಳ ಸಮುದಾಯದ ಹಂತದಿಂದ ಅದರ ತುತ್ತ ತುದಿಯವರೆಗೆ ಪ್ರಯಾಣ ಮಾಡುವುದು ಅದು ಸಾಧಾರಣ ಸಾಧನೆಯೆನಲ್ಲ. ಒಬ್ಬ ಶ್ರೀಮಂತ ಕುಟುಂಬದಲ್ಲಿ ಜನಿಸಿದವ ಯಾರಾದರೂ ರಾಜಕೀಯ ರಂಗದಲ್ಲಿ ಸಾಮಾಜಿಕ ರಂಗದಲ್ಲಿ ಸಾಹಿತ್ಯಿಕ ರಂಗದಲ್ಲಿ ಈ ಬಗೆಯ ಸಾಧನೆಯನ್ನು ಮಾಡಿದರೆ ಅದೇನು ಆಶ್ಚರ್ಯ ಪಡುವಂತದ್ದಲ್ಲ. ಆದರೆ, ತಳ ಸಮುದಾಯದಲ್ಲಿ ಹುಟ್ಟಿ ಒಂದು ಹೊತ್ತಿನ ತುತ್ತಿಗೂ ಕಷ್ಟ ಪಟ್ಟು, ಹಲವು ಸಮಸ್ಯೆಗಳನ್ನು ಎದುರಿಸಿ ರಾಜ್ಯ ಮತ್ತು ದೇಶಕ್ಕೆ ಏನಾದರೂ ಒಳ್ಳೆಯದನ್ನು ಮಾಡಬೇಕೆಂಬ ಮನಸ್ಸನ್ನು ಇಟ್ಟುಕೊಂಡು ಅವಿರತವಾಗಿ ಹಗಲಿರುಳು ತನ್ನ ನಾಡಿನ ಜನರಿಗಾಗಿ ಒಳಿತನ್ನು ಮಾಡುವ ಯೋಜನೆಯನ್ನು ಹಾಕಿಕೊಂಡು ಕ್ರೀಯಾಶೀಲ ವ್ಯಕ್ತಿಯಾಗಿ ಎಂ. ವೀರಪ್ಪ ಮೊಯಿಲಿಯವರು ಪರಿಶ್ರಮ ಪಟ್ಟಿದ್ದಾರೆ. ಪ್ರಾಚೀನ ಕಾಲದಲ್ಲಿ ರಾಜರು ಸಿಂಹಾಸನದಲ್ಲಿ ಕುಳಿತು ತಮ್ಮ ಪ್ರಾಂತ್ಯವನ್ನು ಆಳುತ್ತಿದ್ದ ದಿನಗಳಿದ್ದವು. ಆದರೆ, ಭಾರತವು ಸ್ವಾತಂತ್ರ್ಯ ಪಡೆದ ನಂತರ ಪ್ರಜಾಪ್ರಭುತ್ವದಲ್ಲಿ ಜನರು ತಮ್ಮ ನಾಯಕನನ್ನೂ ತಾವೇ ಆಯ್ಕೆ ಮಾಡಿಕೊಳ್ಳಬೇಕಾದ ಸಂದರ್ಭ ಒದಗಿ ಬಂದಿತು. ಇಂತಹ ಸಂದರ್ಭದ ನಡುವೆ ಜನರ ಇಚ್ಛಾಶಕ್ತಿ ಮೂಲಕವಾಗಿ ಮೊಯಿಲಿಯವರು ರಾಜಕೀಯ ರಂಗವನ್ನು ಪ್ರವೇಶಿಸಿದರು. ಜನರು ಮೊಯಿಲಿಯವರ ಅರ್ಹತೆಯನ್ನು ಗುರುತಿಸಿ ಜನಾಭಿಪ್ರಾಯ ನೀಡಿರುವುದು

ಮೊಯಿಲಿಯವರ ವ್ಯಕ್ತಿತ್ವಕ್ಕೆ ಸಂದ ಗೌರವ. 'ರಾಜಕಾರಣ'ವು ಪ್ರಕ್ಷುಬ್ದ ಸ್ಥಿತಿಯನ್ನು ಒಳಗೊಂಡಿರುವುಂತಹದ್ದು, ಇಂತಹ ಸಂದರ್ಭದಲ್ಲಿ ಮೊಯಿಲಿಯವರು ದೂರದೃಷ್ಟಿವುಳ್ಳ ಆಡಳಿತ, ರಚನಾತ್ಮಕ ಕ್ರಿಯೆ, ಮಾನಸಿಕ ಸ್ಥೈರ್ಯ, ದೃಢ ನಿರ್ಧಾರ, ಪರಿಶ್ರಮ ಇವುಗಳೆಲ್ಲವನ್ನೂ ಬೆಳಸಿಕೊಂಡು ಸಹನಾಶೀಲ ಮನೋಭಾವದಿಂದ ಈ ಕ್ಷೇತ್ರದಲ್ಲಿ ತಾವು ಮುಂದುವರೆದುದು ಅಮೋಘವಾದದು. ಇವುಗಳಿಗೆ ಅಪರಿಮಿತವಾಗಿರುವ ಶಕ್ತಿ ಮತ್ತು ಸಾಮರ್ಥ್ಯಗಳು ಇವರಿಗೆ ದೊರೆತಿವೆ.

ರಾಜಕೀಯ ರಂಗದಲ್ಲಿ ಸೋಲು-ಗೆಲುವು ಹುದ್ದೆ ಇವೆಲ್ಲಕ್ಕಿಂತ ಮಿಗಿಲಾಗಿ ಜನರ ಆಸೆ ಆಕಾಂಕ್ಷೆ, ಚಿಂತನೆ ಮುಖ್ಯವಾಗಿರುವ ಸಂದರ್ಭದಲ್ಲಿ ಮೊಯಿಲಿಯವರು ತಮ್ಮ ರಾಜಕೀಯ ನೆಲೆಯನ್ನು ವಿಸ್ತರಿಸಿಕೊಂಡವರು. ವಾಸ್ತವ ಸಮಾಜದ ಸಾಮಾಜಿಕ ವ್ಯವಸ್ಥೆಯನ್ನು ಕಟ್ಟುವ ದೂರ ದೃಷ್ಟಿಯನ್ನಿಟ್ಟುಕೊಂಡು ಬುದ್ಧಿ ಜೀವಿಗಳ ತತ್ವದಲ್ಲಿ, ಅವರ ಆಚಾರ-ವಿಚಾರ ಆಲೋಚನೆಗಳನ್ನು ತಮ್ಮ ರಾಜಕೀಯ ಜೀವನದಲ್ಲಿ ಅಳವಡಿಸಿಕೊಂಡು ಅನುಷ್ಠಾನಕ್ಕೆ ತರಲು ಪ್ರಯತ್ನಿಸಿದವರು ಮೊಯಿಲಿಯವರು.

ಅಧ್ಯಯನದ ಉದ್ದೇಶಗಳ ಪಟ್ಟಿ

ಪ್ರಸ್ತುತ ಅಧ್ಯಯನದಲ್ಲಿ ಕೆಲವು ಉದ್ದೇಶಗಳನ್ನು ಇಟ್ಟುಕೊಳ್ಳಲಾಗಿದೆ. ಅವುಗಳು ಈ ಕೆಳಗಿನಂತಿವೆ.

೧) ಮೊಯಿಲಿಯವರು ಹಾಗೂ ಅವರ ಸಮಕಾಲೀನ ಕರ್ನಾಟಕದ ರಾಜಕೀಯ ಚಿಂತಕರ ವಿಚಾರಗಳನ್ನು ತುಲನಾತ್ಮಕವಾಗಿ ನೋಡುವುದು ಆ ಮೂಲಕ ಮೊಯಿಲಿಯವರು ಹಾಗೂ ಇತರರ ನಡುವೆ ಇರುವ ಸಾಮ್ಯತೆಯನ್ನು ಗುರುತಿಸುವುದು.

೨) ಮೊಯಿಲಿಯವರ ಸಾಮಾಜಿಕ ಜೀವನದ ಹಿನ್ನೆಲೆಯನ್ನು ಅವಲೋಕಿಸುವುದು.

೩) ಇಲ್ಲಿಯವರೆಗಿನ ಮೊಯಿಲಿಯವರ ರಾಜಕೀಯ ಸ್ಥಿತಿಗಳನ್ನು ಗುರುತಿಸುವುದು.

೪) ಮೊಯಿಲಿಯವರ ರಾಜಕೀಯ ಚಿಂತನೆಗಳನ್ನು ಪರಾಮರ್ಶಿಸುವುದು.

೫) ಮೊಯಿಲಿಯವರ ರಾಜಕೀಯ ಚಿಂತನೆಯ ಸೆಲೆಗಳ ಹುಡುಕಾಟ.

೬) ಮೊಯಿಲಿಯವರ ಕಾರ್ಯಯೋಜನೆ, ಅನುಷ್ಠಾನ ಮತ್ತು ಅನ್ವೇಷಣೆಗಳನ್ನು ಸಾದರಪಡಿಸುವುದು ಮುಖ್ಯವಾಗಿದೆ.

ಎಂ. ವೀರಪ್ಪ ಮೊಯಿಲಿ ಮೂಡಬಿದರೆಯ ಹಿಂದುಳಿದ ಗ್ರಾಮದಲ್ಲಿ ಜನಿಸಿ, ತುಳಿದ ಹಾದಿ, ಸಾಧಿಸಿದ ಕಾರ್ಯ, ಎದುರಿಸಿದ ಅಡೆ ತಡೆಗಳು ಮುಂತಾದವುಗಳನ್ನು ನೋಡಿದಾಗ ಮೊಯಿಲಿಯವರಲ್ಲಿರುವ ಛಲ, ಆತ್ಮ ವಿಶ್ವಾಸ ಎದ್ದು ಕಾಣುತ್ತವೆ. ದೇಶದ ಬಡವರ ಉದ್ಧಾರ ಅಭಿವೃದ್ಧಿಯ ಮೇಲಿರುವ ಅವರ ದೃಷ್ಟಿ ಮೊಯಿಲಿಯವರ ಜೀವನದ ಅಘಾದವಾದ ಅಧ್ಯಾಯಗಳಾಗಿವೆ. ಸುಧಾರಣೆಗಳ ಬಗ್ಗೆ ಅವರಿಗಿರುವ ನಿಲುವು ಒಲುವು ಆಡಳಿತದಲ್ಲಿ ಅವರ ವಿಶಿಷ್ಟ ಜ್ಞಾನ ಎಂತಹವರನ್ನು ಹುಬ್ಬೇರಿಸುತ್ತದೆ. ಅವರಲ್ಲಿರುವ ಕ್ರೀಯಾಶೀಲ ಸಾಹಿತ್ಯ ಚಟುವಟಿಕೆಯು ಸಾಮಾಜಿಕ ಸ್ಪಂದನವಾಗಿ ಸಾಂಸ್ಕೃತಿಕ ಚಿಂತನೆಗಳಲ್ಲಿ ವಿಶಿಷ್ಟವಾಗಿ ಕಂಡು ಬರುತ್ತವೆ. ಈ ಎಲ್ಲಾ ಅಂಶಗಳನ್ನು ಗಮನಿಸಲಾಗಿ ಮೊಯಿಲಿಯವರ ರಾಜಕೀಯ ಚಿಂತನೆಗಳನ್ನು ಕುರಿತು ಇಲ್ಲಿಯವರೆಗೆ ಅಧ್ಯಯನಗಳು ನಡೆದಿಲ್ಲ. 'ಮೊಯಿಲಿಯವರ ಸಾರ್ವಜನಿಕ ಜೀವನ ಮತ್ತು ಸಾಹಿತ್ಯ; ಸಮಗ್ರ ಅಧ್ಯಯನ' ಎಂಬ ಶಿರ್ಷಿಕೆಯಡಿಯಲ್ಲಿ ಅಧ್ಯಯನ ನಡೆಯುತ್ತಿದೆ. 'DEVELOPMENT AND SOCIAL JUSTICE' (A CASE STUDY OF VEERAPPA MOILY REGIME) ಎಂಬ ಅಧ್ಯಯನ ನಡೆದಿದೆ. ಆ ಕಾರಣದಿಂದಾಗಿ ಮೊಯಿಲಿಯವರ 'ರಾಜಕೀಯ ಚಿಂತನೆ'ಯನ್ನು ಮುಖ್ಯವಾಗಿಟ್ಟುಕೊಂಡು ಚಿಂತನೆಯ ಆಳ ಮತ್ತು ಅಗಲಗಳ ಗುರುತಿಸುವ ಹಾಗೂ ಅವುಗಳನ್ನು ವಿಶ್ಲೇಷಿಸುವ ಉದ್ದೇಶ ಈ ಅಧ್ಯಯನದ್ದಾಗಿದೆ.

ಕರ್ನಾಟಕದ ರಾಜಕೀಯ ಇತಿಹಾಸದಲ್ಲಿ ಹಲವು ಜನಪ್ರತಿನಿಧಿಗಳು ತಮ್ಮದೇ ಆದ ಸಾಧನೆಯನ್ನು ಮಾಡಿದ್ದಾರೆ. ಅಂತಹ ವ್ಯಕ್ತಿಗಳಲ್ಲಿ ಮೊಯಿಲಿಯವರು ಕೂಡಾ ಒಬ್ಬರು. ಮೊಯಿಲಿಯವರು ತಮ್ಮ ರಾಜಕೀಯ ರಂಗದಲ್ಲಿ ಕಠಿಣ ಪರಿಶ್ರಮದಿಂದ ಈ ಹಿಂದಿನ ಜನ ಪ್ರತಿನಿಧಿಗಳು ಹಾಕಿಕೊಟ್ಟ ಮಾರ್ಗದಲ್ಲಿ ಮುನ್ನಡೆದು ತಮ್ಮದೇ ಆದ ಸ್ಪಂತಿಕೆ, ವಿಚಾರಗಳನ್ನು, ಸಾಹಿತ್ಯ ಹಾಗೂ ಆಡಳಿತದ ಮೂಲಕ ತೋರಿಸಿಕೊಟ್ಟಿದ್ದಾರೆ. ಇವರೆಲ್ಲರ ನಡುವೆ ಮೊಯಿಲಿಯವರು ಉಳಿದ ಜನಪ್ರತಿನಿಧಿಗಳಿಗಿಂತ ಹೇಗೆ ಭಿನ್ನವಾಗಿದ್ದಾರೆ ಎಂಬುದನ್ನು ಗುರುತಿಸುವ ಯತ್ನ ನಮ್ಮದಾಗಿದೆ. ಸಾಮಾನ್ಯವಾಗಿ ಅಧಿಕಾರದಲ್ಲಿದ್ದವರು ಅಧಿಕಾರದಿಂದ ನಿರ್ಗಮಿಸಿದ ಮೇಲೆ ಅವರ ವೈಯಕ್ತಿಕ ವರ್ಚಸ್ಸು ಕಡಿಮೆಯಾಗುವುದು

ಸಹಜವಾಗಿದೆ. ಇದಕ್ಕೆ ಹೊರತಾದ ವ್ಯಕ್ತಿತ್ವ ಉಳ್ಳವರು ಮೊಯಿಲಿಯವರು ಇಂದಿಗೂ ಸಹ ರಾಜ್ಯ ಮತ್ತು ರಾಷ್ಟ್ರ ರಾಜಕಾರಣದಲ್ಲಿ ಮೊಯಿಲಿಯವರ ರಾಜಕೀಯ ಚಿಂತನೆಯ ಮೂಲಕ ತಮ್ಮ ಅಸ್ತಿತ್ವವನ್ನು ಉಳಿಸಿಕೊಂಡಿರುವುದು ವ್ಯಕ್ತಿತ್ವಕ್ಕೆ ನಿದರ್ಶನ. ಅವರು ಸಾಹಿತ್ಯ, ಸಂಸ್ಕೃತಿ ಮತ್ತು ರಾಜಕಾರಣಗಳ ಮೂಲಕ ತಮ್ಮತನವನ್ನು ರೂಪಿಸಿಕೊಂಡಿರುವುದು ಅನನ್ಯತೆಗೆ ಕಾರಣವಾಗಿದೆ. ಈ ಕಾರಣದಿಂದಾಗಿ ಮೊಯಿಲಿಯವರ ವಿಶಿಷ್ಟವಾದ ರಾಜಕೀಯ ಚಿಂತನೆಗಳು ಅಧ್ಯಯನಕ್ಕೆ ಅರ್ಹವಾಗಿವೆ. ಆದ್ದರಿಂದ ಮೊಯಿಲಿಯವರ ವ್ಯಕ್ತಿತ್ವ ಮತ್ತು ಆಡಳಿತದ ಹಿನ್ನೆಲೆಯಲ್ಲಿ ರೂಪಗೊಂಡ ಅವರ ರಾಜಕೀಯ ವಿಚಾರಗಳನ್ನು ಒಂದೆಡೆಯಲ್ಲಿ ಸಂಯೋಜಿಸುವ ಪ್ರಯತ್ನ ಈ ಅಧ್ಯಯನದಲ್ಲಿದೆ.

ಎಂ. ವೀರಪ್ಪ ಮೊಯಿಲಿ ವಾಸ್ತವದ ನೆಲೆಯಿಂದ ಗುರುತಿಸಿಕೊಂಡ ಅಪ್ಪಟ ರಾಜಕಾರಣಿ, ನಿಷ್ಠಾವಂತಿಕೆ, ದೇಶಪ್ರೇಮ ಉಳ್ಳವರು. ಅವರಲ್ಲಿ ಸಂಕುಚಿತ ಮನೋಭಾವನೆ, ಸ್ವಾರ್ಥ ಯಾವತ್ತೂ ಕಂಡು ಬರಲಿಲ್ಲ. ಅವರ ದೂರದೃಷ್ಟಿ ಸ್ತುತ್ಯಾರ್ಹ. ಅದು ಸ್ವಂತಕ್ಕಾಗಿರದೇ ಸಮಾಜಮುಖಿಯಾಗಿರುವುದು ವಿಶೇಷ. ಮೊಯಿಲಿಯವರು ಮಾತಿನ ಮಲ್ಲರಲ್ಲ, ಅವರ ದ್ಯೇಯೋದ್ದೇಶ ಆದರ್ಶ ಸಮಾಜ ನಿರ್ಮಾಣವಾಗಿದೆ. ಅವರೆಂದು ಕಷ್ಟ ನಷ್ಟಗಳಿಗೆ ಹೆದರಿದವರಲ್ಲ. ರಾಜಕೀಯ ಏಳು–ಬೀಳು, ಸೋಲು–ಗೆಲುವಿಗೆ ಕಟ್ಟು ಬಿದ್ದವರಲ್ಲ ಮತ್ತು ಕಂಗೆಟ್ಟವರಲ್ಲ. ಅವರು ರಾಜಕಾರಣಿಗಿಂತಲೂ ಹೆಚ್ಚಾಗಿ ಒಬ್ಬ ರಾಜಕೀಯ ಚಿಂತಕರಾಗಿ, ವಿದ್ವಾಂಸನಂತೆ ಗೋಚರಿಸುತ್ತಾರೆ. ಈ ಎಲ್ಲ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಈ ಅಧ್ಯಯನದಲ್ಲಿ ತೊಡಗಲಾಗಿದೆ.

೧.೩ ಅಧ್ಯಯನದ ಸ್ವರೂಪ

ಎಂ. ವೀರಪ್ಪ ಮೊಯಿಲಿಯವರ ರಾಜಕೀಯ ಚಿಂತನೆಗಳು ಎಂಬ ಶೀರ್ಷಿಕೆಯಡಿಯಲ್ಲಿ ಅಧ್ಯಯನದ ಸ್ಥೂಲಸ್ವರೂಪ ಈ ಕೆಳಗಿನಂತಿದೆ.

ಅಧ್ಯಾಯ ಒಂದರಲ್ಲಿ ಅಧ್ಯಯನದ ಉದ್ದೇಶ, ಸ್ವರೂಪ, ವ್ಯಾಪ್ತಿ ಮತ್ತು ವಿಧಾನ ಮತ್ತು ಸಾಹಿತ್ಯ ಪರಾಮರ್ಶೆಯನ್ನು ಒಳಗೊಂಡಿದ್ದು, ಒಟ್ಟು ಮಹಾಪ್ರಬಂಧದ ಕಾರ್ಯ ಯೋಜನೆ, ಉದ್ದೇಶ ಹಾಗೂ ಪ್ರಬಂಧದ ಸ್ವರೂಪದ ಹಿನ್ನೆಲೆಯಲ್ಲಿ ಅದರ ವ್ಯಾಪ್ತಿಯನ್ನು ಈ ಪ್ರಬಂಧದಲ್ಲಿ ಪ್ರವೇಶಕ್ಕೆ ಸಿದ್ಧ ಪಡಿಸಲಾದ ಅಂಶಗಳ ಕುರಿತು ಸ್ಪಷ್ಟ ಪಡಿಸಲಾಗಿದೆ.

ಅಧ್ಯಾಯ ಎರಡು ಕರ್ನಾಟಕದ ರಾಜಕೀಯ ಚರಿತ್ರೆಯನ್ನು ಕುರಿತದ್ದಾಗಿದೆ. ಈ ಅಧ್ಯಾಯದಲ್ಲಿ ೧೯೫೬ರಲ್ಲಿ ಏಕೀಕೃತಗೊಂಡ ಕರ್ನಾಟಕ ರಾಜ್ಯ ತನ್ನ ಅಸ್ತಿತ್ವವನ್ನು ಕಾಪಾಡಿಕೊಂಡು ಬಂದ ಇದುವರೆಗಿನ ಸ್ಥಿತಿಗತಿಗಳು ಮತ್ತು ಚಿಂತನೆಗಳನ್ನು ವಿಶ್ಲೇಷಿಸುವುದರ ಜೊತೆಗೆ ಕೆ.ಸಿ. ರೆಡ್ಡಿ ಮೊದಲುಗೊಂಡು ಸದಾನಂದಗೌಡರವರೆಗೆ ಹಲವು ಮುಖ್ಯಮಂತ್ರಿಗಳ ವಿವರಗಳನ್ನು ಸಂಕ್ಷಿಪ್ತವಾಗಿ ನೀಡಲಾಗಿದೆ. ಈ ಎಲ್ಲಾ ಮುಖ್ಯಮಂತ್ರಿಗಳಲ್ಲಿ ಏಳು ವರ್ಷ ಅಧಿಕಾರವನ್ನು ಪಡೆದು ಸಾಮಾಜಿಕ ನ್ಯಾಯ ಅನುಷ್ಠಾನದ ಅಡಿಯಲ್ಲಿ ಸಂಕಲ್ಪವನ್ನು ಮಾಡಿಕೊಂಡ ಡಿ.ದೇವರಾಜ್ ಅರಸರು ಕರ್ನಾಟಕದ ಅತ್ಯಂತ ಪ್ರಭಾವಿ ಮುಖ್ಯಮಂತ್ರಿಗಳಲ್ಲಿ ಒಬ್ಬರು ಎಂಬುದು ಮಹತ್ವದ್ದು. ಆದ್ದರಿಂದ ಅವರನ್ನು ರಾಜ್ಯದ 'ದ್ರುವತಾರೆ' ಎಂದು ಕರೆಯುತ್ತಾರೆ. ಡಾ.ಬಿ.ಆರ್.ಅಂಬೇಡ್ಕರವರ ಸಾಮಾಜಿಕ ನ್ಯಾಯದ ತತ್ವದಡಿಯಲ್ಲಿ ತಮ್ಮ ರಾಜಕೀಯ ಚಿಂತನೆಗಳನ್ನು ಅನುಷ್ಠಾನಗೊಳಿಸಿ ಆ ಮೂಲಕ ಸಮಾನತೆಯನ್ನು ತರುವ ಪ್ರಯತ್ನ ಮಾಡಿದವರು ಎಂ.ವೀರಪ್ಪ ಮೊಯಿಲಿ. ಡಿ. ದೇವರಾಜ ಅರಸರ ಅನಂತರದ ಸ್ಥಾನ ಮೊಯಿಲಿಯವರದು.

ಈ ಅಧ್ಯಾಯದಲ್ಲಿ ಕರ್ನಾಟಕ ರಾಜ್ಯದ ಮುಖ್ಯಮಂತ್ರಿಗಳ ಸಾಧನೆ, ರಾಜಕೀಯ ನಡೆ–ನುಡಿ ಮತ್ತು ಅವರುಗಳ ಚಿಂತನೆಗಳನ್ನು ಕುಲಂಕುಷವಾಗಿ ಚರ್ಚಿಸಿ, ಹಿಂದಿನ ಮುಖ್ಯಮಂತ್ರಿಗಳಿಗಿಂತ ಮೊಯಿಲಿಯವರು ಹೇಗೆ ಭಿನ್ನರಾಗಿದ್ದಾರೆ ಎಂದು ಗುರುತಿಸುವ ಪ್ರಯತ್ನ ಮಾಡಲಾಗಿದೆ. ಪ್ರತಿಯೊಬ್ಬ ಮುಖ್ಯಮಂತ್ರಿಗೆ ತನ್ನದೇ ಆದ ಜವಾಬ್ದಾರಿ ಸಂಕಲ್ಪ ಒತ್ತಡ ಹಾಗೂ ಒತ್ತಾಸೆಗಳಿರುತ್ತವೆ. ಜೊತೆಗೆ ರಾಜ್ಯದ ಅಭಿವೃದ್ಧಿ ದೃಷ್ಟಿ ಅವರ ಕಣ್ಮುಂದೆ ಇರುತ್ತದೆ. ಅಂತಹ ಕಾರ್ಯಯೋಜನೆಗಳನ್ನು ಮಾಡಬೇಕಾದರೆ ರಾಜಕಾರಣದಲ್ಲಿ ಚಿಂತನೆಯ ಹಿನ್ನೆಲೆ ಇರಬೇಕು. ಆ ಚಿಂತನೆಗಳಿಗೆ ಅಧ್ಯಯನದ ಹಿನ್ನಲೆ ಇಲ್ಲದಿದ್ದರೆ ಆ ರಾಜಕಾರಣವು ಯಶಸ್ವಿಯಾಗಿ ಮುನ್ನಡೆಯಲಾರದು. ಅಂದರೆ ತತ್ವವಿಲ್ಲದ ರಾಜಕೀಯ ಸಪ್ತ ಪಾಪಗಳಲ್ಲಿ ಒಂದಾಗಿ ನಿಲ್ಲುತ್ತದೆ. ಹಾಗಾಗಿ ಪ್ರಮುಖ ಮುಖ್ಯಮಂತ್ರಿಗಳ ರಾಜಕೀಯ ಚಿಂತನೆಗಳ ಜೊತೆಗೆ ಕರ್ನಾಟಕದ ರಾಜಕೀಯ ಚರಿತ್ರೆಯನ್ನು ಚಿಂತನೆಗಳ ಹಿನ್ನೆಲೆಯಲ್ಲಿ ಸಮಾಲೋಚಿಸಲಾಗಿದೆ. P.N.-8

ಅಧ್ಯಾಯ ಮೂರು ಎಂ. ವೀರಪ್ಪ ಮೊಯಿಲಿಯವರ ಜೀವನ ಸಾಧನೆಗೆ ಸಂಬಂಧಪಟ್ಟಿದ್ದಾಗಿದೆ. ರಾಜಕೀಯ ಚಿಂತನೆಗಳ ಹಾಗೂ ಬದುಕಿನ ಸಂಬಂಧಕ್ಕೂ ಒಂದು ಅವಿನಾಭಾವ ಸಂಬಂಧ ಇರುತ್ತದೆ. ವ್ಯಕ್ತಿ ತಾನು ಹುಟ್ಟಿದ ಪರಿಸರದ ಪ್ರಭಾವಕ್ಕೆ ಒಳಗಾಗಿರುತ್ತಾನೆ. ಆ ಪರಿಸರದ ಪ್ರಭಾವದ ಅಂಶಗಳಿಂದ ಪ್ರೇರೇಪಿತಗೊಂಡು ಹೊಸ ಚಿಂತನೆಗಳ ಮೂಲಕ ಬದುಕನ್ನು ಕಟ್ಟಿಕೊಳ್ಳಲು ಹಾತೊರೆಯುತ್ತಾನೆ. ವ್ಯಕ್ತಿಗೆ ವ್ಯಕ್ತಿತ್ವದ ಚಿಂತನೆ ಅಡಿಗಲ್ಲಾಗಿರುತ್ತದೆ. ಹೀಗಾಗಿ ವೀರಪ್ಪ ಮೊಯಿಲಿಯವರ ರಾಜಕೀಯ ಚಿಂತನೆ, ಅವರು ಬಾಳಿ ಬದುಕಿದ ಪರಿಸರ ಅಧ್ಯಯನ ಹಾಗೂ ಅವರು ಕಂಡುಕೊಂಡ ಆದರ್ಶ ತತ್ವಗಳು ಅನಿವಾರ್ಯವಾಗಿ ಕೊನೆಯಲ್ಲಿ ನಿಲ್ಲುತ್ತವೆ. ಈ ಅಧ್ಯಾಯದಲ್ಲಿ ಪ್ರಮುಖವಾಗಿ ಮೊಯಿಲಿಯವರ ಬಾಲ್ಯ, ಶಿಕ್ಷಣ, ವೃತ್ತಿ, ರಾಜಕೀಯ ಆಡಳಿತ ಹಾಗೂ ಸಾಂಸ್ಕೃತಿಕ ಬದುಕಿನ ಹಲವು ಮಜಲುಗಳನ್ನು ದಾಖಲಿಸುವ ಪ್ರಯತ್ನ ಮಾಡಲಾಗಿದೆ.

ಅಧ್ಯಾಯ ನಾಲ್ಕರಲ್ಲಿ ಮೊಯಿಲಿಯವರ ರಾಜಕೀಯ ಚಿಂತನೆಯ ಪ್ರಭಾವದ ನೆಲೆಗಳ ಕುರಿತು ಅಧ್ಯಯನವನ್ನು ಒಳಗೊಂಡಿದ್ದು, ಸಾಮಾಜಿಕ, ರಾಜಕೀಯ, ಆರ್ಥಿಕ, ಶೈಕ್ಷಣಿಕ, ನ್ಯಾಯಿಕ ಸಾಂಸ್ಕೃತಿಕ ಹೀಗೆ ಹಲವು ನೆಲೆಗಳಲ್ಲಿ ಅವರ ರಾಜಕೀಯ ಚಿಂತನೆಯನ್ನು ಪ್ರಸ್ತುತ ಪಡಿಸಲಾಗಿದೆ. ಮೊಯಿಲಿಯವರು ತಮ್ಮ ಆಡಳಿತದಲ್ಲಿ ಸಾರ್ವಜನಿಕ ಅಭಿಪ್ರಾಯಗಳಿಗೆ ಆದ್ಯತೆ ನೀಡಿದರು. ದುರ್ಬಲ ವರ್ಗದವರ ಅಭಿವೃದ್ಧಿಗಾಗಿ ರೂಪಿಸಲಾದ ಕಾರ್ಯಕ್ರಮಗಳನ್ನು ಪ್ರಾಮಾಣಿಕವಾಗಿ ಹಾಗೂ ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಿ ನಿರಂತರವಾಗಿ ಬಡಜನರ ಶ್ರೇಯೋಭಿವೃದ್ಧಿಗಾಗಿ ಶ್ರಮಿಸಿದ ಕಾರ್ಯ ವೈಖರಿಯನ್ನು ಗುರುತಿಸಲಾಗಿದೆ. ಮೊಯಿಲಿಯವರು ರಾಜ್ಯದ ಹಣಕಾಸು ಸಚಿವರಾಗಿದ್ದ ಸಂದರ್ಭದಲ್ಲಿ ಕೈಗೊಂಡ ಕ್ರಮಗಳ ಕುರಿತು ಒತ್ತಿ ಹೇಳಲಾಗಿದೆ. ಮುಖ್ಯಮಂತ್ರಿ ಮತ್ತು ಅರ್ಥಮಂತ್ರಿ ಆಗಿದ್ದ ಸಂದರ್ಭದಲ್ಲಿ ರಾಜ್ಯದ ಆರ್ಥಿಕ ಸ್ಥಿತಿಗತಿ ಮತ್ತು ಅಭಿವೃದ್ಧಿಯನ್ನು ಸ್ಪಷ್ಟಪಡಿಸಲಾಗಿದೆ. ಶಿಕ್ಷಣ ಸಚಿವರಾಗಿದ್ದಾಗ ಶೋಷಿತ ಮತ್ತು ದುರ್ಬಲವರ್ಗದವರಿಗಾಗಿ, ಸಾಕ್ಷರತಾ ಅಭಿಯಾನ ಹಮ್ಮಿಕೊಂಡಿದ್ದು, ಅವರ ರಾಷ್ಟ್ರೀಯ ಚಿಂತನೆಗೆ ಮನ್ನಣೆ ನೀಡಿದೆ. ಕನ್ನಡ ಮತ್ತು ಸಾಂಸ್ಕೃತಿಕ ಕ್ಷೇತ್ರಕ್ಕೆ ಮೊಯಿಲಿಯವರು ನೀಡಿದ ಕೊಡುಗೆಯನ್ನು ಈ ಅಧ್ಯಾಯದಲ್ಲಿ ಉಲ್ಲೇಖಿಸಲಾಗಿದೆ. ಮುಂಚೆ ತರುಣ ನ್ಯಾಯವಾದಿಯಾಗಿದ್ದ ಮೊಯಿಲಿಯವರು ಯಾವಾಗಲೂ ಸಹ ಗಂಭೀರವಾಗಿ ಗುಲಾಮಗಿರಿ ಮತ್ತು ಮೂಢನಂಬಿಕೆಗಳ ವಿರುದ್ಧ ಧ್ವನಿ ಎತ್ತಿದವರು, ಗೇಣಿದಾರರು ಮತ್ತು ಬಡ ಕಾರ್ಮಿಕರ ಮೇಲೆ ಭೂ ಮಾಲಿಕರು ಮಾಡಿದ

ದಬ್ಬಾಳಿಕೆಯನ್ನು ಹತ್ತಿಕ್ಕಲು ತಮ್ಮದೇ ಆದ ಹೋರಾಟವನ್ನು ಮಾಡಿದ್ದಾರೆ. ಇವುಗಳ ಜೊತೆಗೆ ನ್ಯಾಯಿಕವಾಗಿ ಪ್ರಸ್ತುತ ಸಂದರ್ಭದಲ್ಲಿ ಕೇಂದ್ರ ಕಾನೂನು ಸಚಿವರಾಗಿ ಕಾರ್ಯನಿರ್ವಹಿಸಿ, ಸದ್ಯ ಕಾರ್ಪೊರೇಟ ಸಚಿವರಾಗಿ ಕಾರ್ಯನಿರ್ವಹಿಸುತ್ತಿರುವುದು ಅವರ ರಾಜಕೀಯ ಚಿಂತನೆಗೆ ಪ್ರತಿಬಿಂಬವಾಗಿದೆ. ಹೀಗೆ ಮೊಯಿಲಿಯವರು ನ್ಯಾಯವಾದಿಯಾಗಿ, ರಾಜಕಾರಣಿಯಾಗಿ, ಹಲವು ಪದವಿಯನ್ನು ಪಡೆದುಕೊಂಡು ರಾಜಕೀಯ ಚಿಂತನೆಯ ಮೂಲಕ ಯೋಜನೆ ಮತ್ತು ಅನುಷ್ಠಾನಗೊಳಿಸುವಿಕೆಯನ್ನು ಈ ಅಧ್ಯಾಯದಲ್ಲಿ ಕುಲಂಕಷವಾಗಿ ವಿವರವಾಗಿ ಚರ್ಚಿಸಲಾಗಿದೆ.

ಅಧ್ಯಾಯ ಐದು ಮೊಯಿಲಿಯವರ ರಾಜಕೀಯ ಚಿಂತನೆಯ ಸೆಲೆಗಳನ್ನು ಅನ್ವೇಷಿಸುವುದಾಗಿದೆ. ಮೊಯಿಲಿಯವರ ರಾಜಕೀಯ ಚಿಂತನೆಯ ಮೂಲ ಸೆಲೆಗಳನ್ನು ಅಥವಾ ಪ್ರಭಾವ ಬೀರಿರುವ ಪರಿಸರ ಹಾಗೂ ವ್ಯಕ್ತಿಗಳ ಕುರಿತು ವಿವರಿಸಲಾಗಿದೆ. ಒಬ್ಬ ವ್ಯಕ್ತಿ ಉನ್ನತ ಮಟ್ಟಕ್ಕೆ ಹೋಗಿದ್ದರೆ, ಆ ವ್ಯಕ್ತಿಯ ಹಿಂದಿನ ಹೆಜ್ಜೆಯಲ್ಲಿ ಸತತ ಅಧ್ಯಯನದ ಪರಿಶ್ರಮ, ತಾನು ಬಾಳಿ ಬದುಕಿದ ಪರಿಸರದ ಒತ್ತಡ ಹಾಗೂ ಆದರ್ಶ ವ್ಯಕ್ತಿಗಳ ಪ್ರಭಾವ ಇದ್ದೇ ಇರುತ್ತವೆ. ಎಂ. ವೀರಪ್ಪ ಮೊಯಿಲಿಯವರು ರಾಜಕೀಯ ರಂಗಕ್ಕೆ ಪ್ರವೇಶಿಸಲು ಹಲವು ಕಾರಣ ಹಾಗೂ ಪ್ರಭಾವಗಳುಂಟು ಅವುಗಳನ್ನು ಗುರುತಿಸುವುದಾದರೆ, ಮೊಯಿಲಿಯವರು ಬಾಲ್ಯದಲ್ಲಿ ಅನುಭವಿಸಿದ ಕಹಿ ಅನುಭವದ ಅಸ್ಪೃಶ್ಯತೆ ಹಾಗೂ ಸಾಮಾಜಿಕವಾಗಿ ಭದ್ರತೆ ಇಲ್ಲದಿರುವುದು ಹೀಗಾಗಿ ಬಾಲ್ಯದಲ್ಲಿ ಛಲವನ್ನು ಇಟ್ಟುಕೊಂಡು ಅಚಲ ನಿರ್ಧಾರವನ್ನು ತೊಟ್ಟುಕೊಂಡು ಏನಾದರೂ ಸಾಧಿಸಿ ತೋರಿಸಬೇಕೆಂಬ ಅಪೇಕ್ಷೆಯನ್ನು ಹೊಂದಿದ್ದರು. ಇಂತಹ ಸಂದಂರ್ಭದಲ್ಲಿ ಉನ್ನತ ಶಿಕ್ಷಣವನ್ನು ಪೂರೈಸಿದರು. ಮೊಯಿಲಿಯವರು ಬಡವರಿಗೆ ದೀನ-ದಲಿತರಿಗೆ ಸರಿಯಾದ ನ್ಯಾಯ ದೊರಕಿಸಿಕೊಡಬೇಕೆಂಬ ನಂಬಿಕೆಯಿಂದ ಕೆಲಕಾಲ ವಕೀಲ ವೃತ್ತಿಯನ್ನು ಕೈಕೊಂಡರು. ರಾಷ್ಟ್ರದ ಮಹಾನ್ ನಾಯಕರ ಆದರ್ಶ ತತ್ವಗಳು ಇವರನ್ನು ಸೆರೆ ಹಿಡಿದವು. ಅವರ ತತ್ವದಡಿಯಲ್ಲಿ ಜೀವನ ಸಾಗಿಸಬೇಕೆಂಬ ಮಹಾತ್ವಕಾಂಕ್ಷೆಯನ್ನು ಹೊಂದಿದ್ದರು. ನ್ಯಾಯವಾದಿಗಳಾಗಿ ಸೇವೆ ಸಲ್ಲಿಸುತ್ತಿರುವಾಗ ಜನರ ಪ್ರೀತಿಪಾತ್ರಗಳಿಸಿದರು. ಜನರು ಇವರಲ್ಲಿರುವ ಉತ್ತಮ ನಾಯಕತ್ವ ಗುರುತಿಸಿ ಇವರನ್ನು ರಾಜಕೀಯ ರಂಗಕ್ಕೆ ಕರೆದೊಯ್ದರು. ರಾಜಕೀಯ ಪ್ರವೇಶಿಸಿದ ಮೊಯಿಲಿಯವರು ತಮ್ಮ ವ್ಯಾಪಕವಾದ ಅಧ್ಯಯನದ ಮೂಲಕ ರಾಷ್ಟ್ರೀಯ ನಾಯಕರಾದ ಗಾಂಧಿ, ಅಂಬೇಡ್ಕರ್, ಲೋಹಿಯಾ,

ಪೆರಿಯಾರ್, ಇಂದಿರಾಗಾಂಧಿ, ಡಿ.ದೇವರಾಜ ಅರಸರಂತಹ ವ್ಯಕ್ತಿಗಳ ಪ್ರಭಾವ ಹಾಗೂ ಅವರ ರಾಜಕೀಯ ಚಿಂತನೆ ಇವರನ್ನು ಸೆರೆ ಹಿಡಿದವು. ಹೀಗೆ ಇವರ ಮೇಲೆ ಆಗಿರುವ ಇತರ ಪ್ರಭಾವಗಳನ್ನು ಕುರಿತು ಈ ಅಧ್ಯಾಯದಲ್ಲಿ ಚರ್ಚಿಸಲಾಗಿದೆ.

ಅಧ್ಯಾಯ ಆರು ಮೊಯಿಲಿಯವರ ಯೋಜನೆ, ಅನುಷ್ಠಾನ, ಅನ್ವೇಷಣೆ ಒಳಗೊಂಡಿದೆ. ಈ ಅಧ್ಯಾಯದಲ್ಲಿ ಅವರು ಹಾಕಿಕೊಟ್ಟ ಸುದೀರ್ಘ ಯೋಜನೆಗಳು ಹಾಗೂ ತಮ್ಮ ರಾಜಕೀಯ ಚಿಂತನೆಗಳ ಮೂಲಕ ಅವುಗಳ ಅನುಷ್ಠಾನ ಕುರಿತು ಚರ್ಚಿಸಲಾಗಿದೆ. ಅವರ ಮುಂದಿರುವ ಹೊಸ ಯೋಜನೆಯ ಕನಸನ್ನು ಈ ಅಧ್ಯಾಯದಲ್ಲಿ ಗುರುತಿಸಲಾಗಿದೆ. ಯಾವುದೇ ಒಂದು ಯೋಜನೆಯು ಅನುಷ್ಠಾನಗೊಂಡು ಜನಸಾಮಾನ್ಯರಿಗೆ ತಲುಪುವುದು ಸುಲಭದ ಕಾರ್ಯವಲ್ಲ. ಆ ಯೋಜನೆಯ ಸಾಧ್ಯಾ-ಸಾಧ್ಯತೆಗಳನ್ನು, ಪರಿಣಾಮಗಳನ್ನು, ಸಾಫಲ್ಯ ಮತ್ತು ವೈಫಲ್ಯಗಳನ್ನು ಈ ಅಧ್ಯಾಯದಲ್ಲಿ ಚರ್ಚಿಸಲಾಗಿದೆ. ಮೊಯಿಲಿಯವರು ಒಬ್ಬ ಕನಸುಗಾರ. ಸಮೃದ್ಧ ರಾಷ್ಟ್ರ ಕಟ್ಟುವ ಕನಸು ಅವರದು. ಆ ನಿಟ್ಟಿನಲ್ಲಿ ಅವರ ಯೋಜನೆಯ ಅನುಷ್ಠಾನಗಳು ದೀರ್ಘಕಾಲಿಕವಾದ ಆಲೋಚನೆಗಳಾಗಿವೆ. ಹೀಗಾಗಿ ರಾಷ್ಟ್ರದ ಸಮರ್ಥ ಕ್ರೀಯಾ ಯೋಜನೆಯ ಅನ್ವೇಷಕರಾಗಿ ಗುರುತಿಸಿಕೊಂಡಿದ್ದಾರೆ ಎಂಬುದನ್ನು ಈ ಅಧ್ಯಾಯದಲ್ಲಿ ಒತ್ತಿ ಹೇಳಲಾಗಿದೆ.

ಅಧ್ಯಾಯ ಏಳುರಲ್ಲಿ ಒಟ್ಟು ಅಧ್ಯಯನದ ಸಮಾರೋಪವಾಗಿದ್ದು ಎಂ. ವೀರಪ್ಪ ಮೊಯಿಲಿಯರ ರಾಜಕೀಯ ಚಿಂತನೆಯ ಅಧ್ಯಯನದಲ್ಲಿ ಕಂಡುಕೊಂಡ ಫಲಿತವನ್ನು ಈ ಅಧ್ಯಾಯದಲ್ಲಿ ಗುರುತಿಸಿಲಾಗಿದೆ. ಈ ಮೂಲಕವಾಗಿ ರಾಜಕೀಯ ಚಿಂತಕರ ಕಾರ್ಯ-ಸಾಧನೆ, ಯೋಜನೆ, ಆಡಳಿತ, ಸಮಾಜಮುಖಿಯಾಗಿರುವ ಧೋರಣೆ ಮುಂತಾದ ಅಂಶಗಳ ಕುರಿತು ಈ ಅಧ್ಯಾಯದಲ್ಲಿ ಚರ್ಚೆಯನ್ನು ಬೆಳೆಸುವುದರ ಜೊತೆ ಮೊಯಿಲಿಯವರ ಚಿಂತನೆಗಳು ಇನ್ನುಳಿದ ಚಿಂತಕರಿಗಿಂತ ಹೇಗೆ ಭಿನ್ನವಾಗಿ ಕಂಡು ಬರುತ್ತವೆ ಎಂಬುದನ್ನು ಸ್ಪಷ್ಟ ಪಡಿಸಲಾಗಿದೆ.

ಮಹಾಪ್ರಬಂಧದ ಕೊನೆಯಲ್ಲಿ ಪೂರಕವಾದ ಅನುಬಂಧಗಳನ್ನು ನೀಡಲಾಗಿದೆ. ಇದರಲ್ಲಿ ಮೊಯಿಲಿಯವರ ಜೊತೆಯಲ್ಲಿ ನಡೆಸಿರುವ ಸಂದರ್ಶನ ಪ್ರಮುಖವಾದುದ್ದು ಅವರ ಬದುಕಿನ ಘಟನೆಗಳು, ಹಾಗೂ ಪರಾಮರ್ಶನ ಗ್ರಂಥಗಳ ಪಟ್ಟಿ ನೀಡಲಾಗಿದೆ.

ಹೀಗೆ ಮಹಾಪ್ರಬಂಧವು ಏಳು ಅಧ್ಯಾಯಗಳನ್ನು ಒಳಗೊಂಡಿದ್ದು, ಎಂ. ವೀರಪ್ಪ ಮೊಯಿಲಿಯವರ ರಾಜಕೀಯ ಚಿಂತನೆಯ ಜೊತೆಗೆ ಅವರ ಬದುಕು-ಬರಹ, ಆಡಳಿತದ ಕಾರ್ಯವೈಖರಿ ಮುಂತಾದವುಗಳನ್ನು ಗಮನದಲ್ಲಿಟ್ಟುಕೊಂಡು ಮಹಾಪ್ರಬಂಧದ ಅಧ್ಯಯನ ಸ್ವರೂಪವನ್ನು ರೂಪಿಸಲಾಗಿದೆ.

೧.೪ ಅಧ್ಯಯನದ ವ್ಯಾಪ್ತಿ

ಪ್ರಸ್ತುತ ಅಧ್ಯಯನಕ್ಕೆ ಎಂ. ವೀರಪ್ಪ ಮೊಯಿಲಿಯವರ ರಾಜಕೀಯ ಚಿಂತನೆ ಎಂಬ ವಿಷಯವನ್ನು ಆಯ್ದುಕೊಂಡು ಸಾಮಾಜಿಕ, ರಾಜಕೀಯ, ಆರ್ಥಿಕ, ಶೈಕ್ಷಣಿಕ, ನ್ಯಾಯಿಕ, ಸಾಂಸ್ಕೃತಿಕ ಚಿಂತನೆಗಳ ಬಗೆಯನ್ನು ಅಧ್ಯಯನ ಮಾಡಲಾಗಿದೆ. ಇದರ ಜೊತೆಗೆ ರಾಷ್ಟ್ರದ ಪ್ರಮುಖ ಚಿಂತಕರ ವಿಚಾರಧಾರೆಯನ್ನು ಅಧ್ಯಯನದ ವ್ಯಾಪ್ತಿಗೆ ಒಳಪಡಿಸಲಾಗಿದೆ. ಮೊಯಿಲಿಯವರ ಯೋಜನೆಗಳು, ಅನುಷ್ಠಾನ ಹಾಗೂ ಅನ್ವೇಷನೆಗಳನ್ನು ಗಮನದಲ್ಲಿಟ್ಟುಕೊಂಡು ಅವರ ಸಾಮಾಜಿಕ ಬದುಕಿನ ಪರಿಸರ, ಪ್ರಭಾವ, ಪ್ರೇರಣೆಯನ್ನು ಮುಖ್ಯವಾಗಿ ಅನುಲಕ್ಷಿಸಿ ಅಧ್ಯಯನದ ಚೌಕಟ್ಟನ್ನು ಸಿದ್ದಪಡಿಸಲಾಗಿದೆ.

೧.೫ ಅಧ್ಯಯನದ ವಿಧಾನ

ಅಧ್ಯಯನದ ಉದ್ದೇಶಗಳಿಗೆ ಅನುಗುಣವಾಗಿ ಎಂ. ವೀರಪ್ಪ ಮೊಯಿಲಿಯವರ ರಾಜಕೀಯ ಚಿಂತನೆಗಳು ಎಂಬ ಮಹಾಪ್ರಬಂಧವನ್ನು ವಿಶ್ಲೇಷನಾತ್ಮಕ ವಿಧಾನದ ಮೂಲಕ ಅಧ್ಯಯನ ಕೈಕೊಳ್ಳಲಾಗಿದೆ. ಪ್ರಸ್ತುತ ಅಧ್ಯಯನಕ್ಕೆ ಮೂಲ ಆಕರ ಸಾಮಗ್ರಿ ಹಾಗೂ ಪೂರಕ ಆಕರ ಸಾಮಗ್ರಿಗಳ ಜೊತೆಗೆ ವೀರಪ್ಪ ಮೊಯಿಲಿಯವರ ಒಡನಾಡಿಗಳು, ಮತ್ತು ನಿಕಟ ವ್ಯಕ್ತಿಗಳಿಂದ ಮಾಹಿತಿಯನ್ನು ಕಲೆ ಹಾಕಲಾಗಿದೆ. ಇದರ ಜೊತೆಗೆ ಮೊಯಿಲಿಯವರು ಅಧಿಕಾರದಲ್ಲಿದ್ದಾಗ ಅವರ ಆಪ್ತ ಕಾರ್ಯದರ್ಶಿಗಳು ಹಾಗೂ ಇತರ ಆಡಳಿತಗಾರರ ಮೌಖಿಕ ಸಂದರ್ಶನ ಮಾಡಲಾಯಿತು. ಇವುಗಳೊಂದಿಗೆ ಮೊಯಿಲಿಯವರನ್ನು ವೈಯಕ್ತಿಕ ಸಂದರ್ಶನ ಮಾಡಿ ಶ್ರೀಯುತರು ರಚಿಸಿರುವ ಕೃತಿ ಹಾಗೂ ಅವರ ಕುರಿತು ಪ್ರಕಟವಾಗಿರುವ ಬೇರೆಯವರ ಕೃತಿಗಳನ್ನು ಪರಾಮರ್ಶಿಸಿ ಇವುಗಳೊಂದಿಗೆ ಅಂತರ್ಜಾಲದಲ್ಲಿ ಕೆಲ ಮಾಹಿತಿಗಳನ್ನು ಪಡೆಯುವುದರ ಮೂಲಕ ಪ್ರಸ್ತುತ ಅಧ್ಯಯನವನ್ನು ವಿಶ್ಲೇಷನಾತ್ಮಕ ವಿಧಾನದ ಮೂಲಕ ಕೈಗೊಳ್ಳಲಾಗಿದೆ.

೧.೬ ಸಾಹಿತ್ಯ ಪರಾಮರ್ಶೆ(Review of Literature)

ಪ್ರಸ್ತುತ ಮಹಾಪ್ರಬಂಧದಲ್ಲಿ ಪ್ರಮುಖವಾದ ಆಕರ ಗ್ರಂಥಗಳನ್ನು ಉಲ್ಲೇಖಿಸಿ ಅಧ್ಯಯನದ ದೃಷ್ಟಿಯಿಂದ ಕೆಲವು ಕೃತಿಗಳನ್ನು ಪರಾಮರ್ಶಿಸಲಾಗಿದೆ. ಅವುಗಳಲ್ಲಿ ಮೊಯಿಲಿಯವರು ರಚಿಸಿರುವ ಮತ್ತು ಮೊಯಿಲಿಯವರನ್ನು ಕುರಿತು ಬಂದಿರುವ ಗ್ರಂಥಗಳನ್ನು ಈ ಅಧ್ಯಯನಕ್ಕೆ ಬಳಸಿಕೊಳ್ಳಲಾಗಿದೆ. ರಾಷ್ಟ್ರೀಯ ಚಿಂತನ ದರ್ಶನ, ಕಿರುದಾರಿ ಹೆದ್ದಾರಿ, ಚಿಂತನ ದರ್ಶನ, ತೆಂಬರೆ, ಕೊಟ್ಟ, ಶ್ರೀ ರಾಮಾಯಣ ಮಹಾನ್ವೇಷಣಂ ಮಹಾಕಾವ್ಯ ಮುಂತಾದವುಗಳು ಈ ಅಧ್ಯಯನದ ಪ್ರಮುಖ ಆಕರಗಳು.

ಎಂ.ವೀರಪ್ಪ ಮೊಯಿಲಿಯವರ ರಾಜಕೀಯ ಚಿಂತನೆಗಳಿಗೆ ಸಂಬಂದಿಸಿದಂತೆ ಇದುವರೆಗೆ ನಡೆದಿರುವ ಸಂಶೋಧನೆ, ಮಹಾಪ್ರಬಂಧಗಳನ್ನು ಮತ್ತು ಇತರೆ ಮಹಾಪ್ರಬಂಧಗಳನ್ನು ಪೂರಕ ಆಕರ ಸಾಮಗ್ರಿಯಾಗಿ ಬಳಸಿಕೊಳ್ಳಲಾಗಿದೆ.

“ಎಂ. ವೀರಪ್ಪ ಮೊಯಿಲಿಯವರ ಸಾರ್ವಜನಿಕ ಜೀವನ ಮತ್ತು ಸಾಹಿತ್ಯ: ಸಮಗ್ರ ಅಧ್ಯಯನ” ಶಿರ್ಷಿಕೆಯಡಿಯಲ್ಲಿ ವಿ.ಪ್ರಸನ್ನಕುಮಾರ ಅವರಿಂದ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ಮಾನಸಗಂಗೋತ್ರಿ, ಮೈಸೂರು, ಇಲ್ಲಿ ಅಧ್ಯಯನ ನಡೆಯುತ್ತಿದೆ. ಇದನ್ನು ಹೊರತು ಪಡಿಸಿ ಅವರ ಬಗೆಗೆ ಸಂಶೋಧನೆಗಳು ನಡೆದಿಲ್ಲ. ಈ ಹಿನ್ನೆಲೆಯಲ್ಲಿ ಈ ಅಧ್ಯಯನ ಅವರ ರಾಜಕೀಯ ಚಿಂತನೆಗಳನ್ನು ವಿಶ್ಲೇಷಿಸಲಿದೆ. ರಾಜ್ಯ ಮತ್ತು ರಾಷ್ಟ್ರ ನಾಯಕರ ಚಿಂತನೆ ಕುರಿತು ಹಲವು ಅಧ್ಯಯನಗಳು ನಡೆದಿವೆ. ಈ ಅಧ್ಯಯನದ ಸಂದರ್ಭದಲ್ಲಿ ಅವುಗಳನ್ನು ಪರಾಮರ್ಶಿಸಲಾಗಿದೆ. ಅವುಗಳು ಈ ಕೆಳಗಿನಂತಿವೆ.

ಡಾ.ಪಾಟೀಲ ಪುಟ್ಟಪ್ಪನವರ ಬದುಕು, ಬರಹ ಹಾಗೂ ಸಾಧನೆ ಒಂದು ಅಧ್ಯಯನ ಎಂಬ ಮಹಾಪ್ರಬಂಧವನ್ನು ಎಸ್.ಬಿ. ಕಲ್ಲೂರವರು ಕರ್ನಾಟಕ ವಿಶ್ವವಿದ್ಯಾಲಯಕ್ಕೆ ೨೦೦೦ರಲ್ಲಿ ಮಂಡಿಸಿದ್ದಾರೆ. ಇದರಲ್ಲಿ ಪಾಟೀಲ ಪುಟ್ಟಪ್ಪನವರ ಜೀವನ ವ್ಯಕ್ತಿತ್ವ, ಸಾಹಿತ್ಯಿಕ ಧೋರಣೆಗಳು ಮತ್ತು ರಾಜಕೀಯ ಜೀವನವನ್ನು ಗಮನಿಸಿ ಅಧ್ಯಯನ ಮಾಡಲಾಗಿದೆ. ಪತ್ರಿಕಾರಂಗದ ಸಾಧನೆಯ ಜೊತೆಗೆ ಸಾರ್ವತ್ರಿಕ ಸಾಧನೆಗಳನ್ನು ಸಮಗ್ರವಾಗಿ ವಿಶ್ಲೇಷಿಸಲಾಗಿದೆ.

ರಾಜಕಾರಣಿಗಳಿಗೆ ಎಷ್ಟೇ ರಾಜಕೀಯ ಹಾಗೂ ರಾಜತಾಂತ್ರಿಕ ಅನುಭವ ಇದ್ದರು ಸಾಲದು. ರಾಜಕಾರಣಿಗಳು ರಾಜನೀತಿಯ ಚೌಕಟ್ಟನ್ನು ಬಿಟ್ಟು ಮಾತನಾಡಬಾರದು. ಸಾರ್ವಜನಿಕ ಜೀವನದಲ್ಲಿರುವವರು ಮಾತನಾಡುವಾಗ ಜವಾಬ್ದಾರಿ ಅರಿತು ಮಾತನಾಡಿದರೆ ಒಳ್ಳೆಯದು. ಇಂತಹ ಚಿಂತನೆಗಳ ಹಿನ್ನೆಲೆಯಲ್ಲಿ ಪುಟ್ಟಪ್ಪನವರ ರಾಜಕಾರಣಿಗಳ ಬದುಕಿಗೆ ಸಂಬಂದಿಸಿದಂತೆ ಅವರ ವಿಚಾರ ಗಮನಸೆಳೆಯುವಂತಹವು.

ಎಸ್.ವಾಯ್. ಗುಬ್ಬನ್ನವರವರ ೧೯೭೪ರಲ್ಲಿ ಹರ್ಡೆಕರ ಮಂಜಪ್ಪನವರ ಒಂದು ಅಧ್ಯಯನ ಎಂಬ ಶಿರ್ಷಿಕೆಯಡಿಯಲ್ಲಿ ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ ೧೯೭೪ರಲ್ಲಿ ಮಂಡಿಸಿರುವ ಮಹಾಪ್ರಬಂಧದಲ್ಲಿ ಸಾಮಾಜಿಕ ಕಾರ್ಯಗಳನ್ನು, ಲೇಖನ ಮತ್ತು ಪತ್ರಿಕಾ ವ್ಯವಸಾಯವನ್ನು ಅಸಾಧಾರಣ ನಿಷ್ಠೆಯಿಂದ, ಏಕಾಗ್ರತೆಯಿಂದ ನಡೆಸಿ ಸಾತ್ವಿಕ ಜೀವನದ ಆದರ್ಶವನ್ನು ನಿದರ್ಶನ ಪಡಿಸಿದವರು ಹರ್ಡೇಕರ ಮಂಜಪ್ಪನವರು. ಯಾವ ದೃಷ್ಠಿಯಿಂದ ನೋಡಿದರು ಮಂಜಪ್ಪನವರ ಜೀವನ ಬೆರಗುಗೊಳಿಸುವಂತಹದು. ಅವರು ತಮ್ಮ ಮಟ್ಟಿಗೆ ಸನ್ಯಾಸಿಯಂತೆ ವಿರಕ್ತ ಜೀವನ ನಡೆಸಿದವರು.

ಕರ್ನಾಟಕದಲ್ಲಿ ಅವರಿಂದ ಪ್ರಭಾವಿತರಾಗದ ಜೀವನ ಕ್ಷೇತ್ರ ಯಾವುದೂ ಇಲ್ಲ. ರಾಷ್ಟ್ರೀಯ ಮನೋವೃತ್ತಿ ಸಮಾಜಸುಧಾರಣೆ, ಖಾದಿ ವೃತ ಪ್ರಚಾರ, ಮೌಲಿಕ ಸಾಹಿತ್ಯ ರಚನೆ, ಪತ್ರಿಕೆಗಳ ಹಾಗೂ ಉಪನ್ಯಾಸಗಳ ಮೂಲಕ ಜನಜಾಗೃತಿ, ಭಾರತೀಯ ಸಂಸ್ಕೃತಿಗೆ ಅನುಗುಣವಾದ ಶಿಕ್ಷಣ ಸಂಸ್ಥೆಗಳ ನಿರ್ಮಾಣ ಧಾರ್ಮಿಕ ಆಚರಣೆಗಳ ನವೀಕರಣದಂತಹ ಚಿಂತನೆಗಳನ್ನು ಹೊಂದಿ ನಾಲ್ಕು ದಶಕಗಳ ಕಾಲ ದುಡಿದು ಯಶಸ್ವಿಯಾದವರು ಅವರು. **"ಕರ್ನಾಟಕದ ಗಾಂಧೀ"** ಎಂದೇ ಪ್ರಖ್ಯಾತರಾದ ಹರ್ಡೆಕರ ಮಂಜಪ್ಪನವರು ಇತರರಿಗೆ ಮಾದರಿಯಾಗಿದ್ದಾರೆ.

ಬಿ.ಎಂ. ಪಾಟೀಲರ ರಾಜಕೀಯ ನಾಯಕತ್ವ (ಅವರ ರಾಜಕೀಯ ಕೊಡುಗೆಗಳ ಒಂದು ಚಿತ್ರಣ) ಎಂಬ ವಿಷಯದ ಸಂಶೋಧಕರಾದ ಬಿ. ಎಂ. ನುಚ್ಚಿಯವರು ೨೦೦೯ರಲ್ಲಿ ಕ.ವಿ.ವಿ. ಧಾರವಾಡಕ್ಕೆ ಮಂಡಿಸಿದ ಮಹಾಪ್ರಬಂಧದಲ್ಲಿ ರಾಜಕೀಯ ನಾಯಕತ್ವದ ಬೆಳವಣಿಗೆಯಲ್ಲಿ ಸಾಂಪ್ರದಾಯಿಕ ಸಮಾಜ ವಹಿಸುವ ಪಾತ್ರವನ್ನು ಗಮನಿಸಿಲಾಗಿದೆ. ಪ್ರಾದೇಶಿಕ ಅಭಿವೃದ್ಧಿಯಲ್ಲಿ ರಾಜಕೀಯ ನಾಯಕರು ತಾಳುವ ದೃಢ ಸಂಕಲ್ಪ ತಮ್ಮ ನಾಯಕತ್ವವನ್ನು ಸಶಕ್ತಗೊಳಿಸುತ್ತವೆ. ರಾಜಕೀಯ ನಾಯಕರು ಸಾಮಾಜಿಕ ಕ್ಷೇತ್ರದಲ್ಲಿ

ಸಕ್ರೀಯವಾಗಿ ಪಾಲ್ಗೊಳ್ಳುವುದನ್ನು ಮತ್ತು ರಾಜಕೀಯ ನಾಯಕರ ಆದರ್ಶಗಳ ಬಗ್ಗೆ ಈ ಮಹಾಪ್ರಬಂಧದಲ್ಲಿ ಚರ್ಚಿಸಲಾಗಿದೆ.

ಎಂ.ಬಿ. ದಳಪತಿಯವರು ಮಹಾತ್ಮಾ ಗಾಂಧೀ ಮತ್ತು ಸ್ವರಾಜ್ಯ (ಗಾಂಧೀಜಿಯವರ ರಾಜಕೀಯ ಚಿಂತನೆಯ ಒಂದು ಅಧ್ಯಯನ) ಕ.ವಿ.ವಿ. ಧಾರವಾಡಕ್ಕೆ ೨೦೦೨ರಲ್ಲಿ ಮಂಡಿಸಿರುವ ಮಹಾಪ್ರಬಂಧದಲ್ಲಿ ಗಾಂಧೀಜಿಯವರ ರಾಜಕೀಯ ಚಿಂತನೆಯಲ್ಲಿ ಸ್ವರಾಜ್ಯವು ಪ್ರಮುಖ ಚಿಂತನೆಯಾಗಿದೆ. ಅಧಿಕಾರ ವಿಕೇಂದ್ರಿಕರಣ ಮೂಲಕ ಸ್ವರಾಜ್ಯ ಸ್ಥಾಪಿಸಬಹುದು. ಪಂಚಾಯತ್ ರಾಜ್ಯದ ಮೂಲಕ ನೈಜ ಸ್ವರಾಜ್ಯ ಸ್ಥಾಪಿಸುವ ರೀತಿಯಲ್ಲಿ ಗಾಂಧೀಜಿಯವರು ಹೇಗೆ ಹೇಳಿದ್ದಾರೆ. ಎಂಬುದನ್ನು ವಿಶ್ಲೇಷಣಾತ್ಮಕವಾಗಿ ಪ್ರಸ್ತುತ ಮಹಾಪ್ರಬಂಧದಲ್ಲಿ ವಿವೇಚಿಸಲಾಗಿದೆ.

ಸುಮಂಗಲಾ ಮಟ್ಟಿಯವರು ಕ.ವಿ.ವಿ. ಧಾರವಾಡ ೨೦೦೮ರಲ್ಲಿ ಮಂಡಿಸಿರುವ ಬಸವೇಶ್ವರರ ರಾಜಕೀಯ ಚಿಂತನೆಗಳು ಮಹಾಪ್ರಬಂಧದ ಮೂಲ ಉದ್ದೇಶ ಇಂದಿನ ಜಾತಿ ವ್ಯವಸ್ಥೆಯಲ್ಲಿ ಬಸವಣ್ಣನವರನ್ನು ಜಾತ್ಯಾತೀತರನ್ನಾಗಿ ನೋಡುವ ಅವರ ವಿಚಾರಗಳ ಸರ್ವಕಾಲಿಕತೆಯನ್ನು ಸರ್ವರಿಗಾಗಿರುವುದನ್ನು ತೋರಿಸುತ್ತದೆ. ಸಮಾಜ ಜೀವಿಯಾದ ಬಸವಣ್ಣನವರ ಚಿಂತನೆಗಳು ಸಹಜವಾಗಿಯೇ ಸಮಾಜದರ್ಶನಗಳಾಗಿವೆ. ಇವರ ಚಿಂತನೆಗಳು ಸಾಮಾಜಿಕ, ಧಾರ್ಮಿಕ, ಆರ್ಥಿಕ, ರಾಜಕೀಯ ಸಾಂಸ್ಕೃತಿಕ ಎಂದು ವಿಂಗಡಿಸಲಾಗಿದೆ. ಬಸವೇಶ್ವರರ ಪ್ರಜಾಪ್ರಭುತ್ವದ ಪ್ರತಿಪಾದನೆ, ನ್ಯಾಯ, ಸ್ವಾತಂತ್ರ್ಯದ ವಿಚಾರಗಳನ್ನು ಗಮನಿಸಲಾಗಿದೆ.

ಕನ್ನಡ ವಿಶ್ವವಿದ್ಯಾಲಯ ಹಂಪಿಗೆ ೨೦೧೧ರಲ್ಲಿ ಸಲ್ಲಿಸಲಾದ ಡಾ.ಪ್ರಭಾಕರ ಕೋರೆಯವರ ರಾಜಕೀಯ, ಸಾಮಾಜಿಕ ಹಾಗೂ ಸಾಂಸ್ಕೃತಿಕ ಕೊಡುಗೆಗಳು ಒಂದು ಅಧ್ಯಯನದಲ್ಲಿ ಸಂಶೋಧಕರಾದ ಸತೀಶ ಪಾಟೀಲರು ಡಾ.ಪ್ರಭಾಕರ ಕೋರೆಯವರ ನಾಯಕತ್ವದ ಬಗೆಗೆ ಅವರ ರಾಜಕೀಯ, ಸಾಮಾಜಿಕ, ಶೈಕ್ಷಣಿಕ ಕೊಡುಗೆಗಳ ಕುರಿತು ಕೋರೆಯವರ ಸಾಧನೆಗಳ ಬಗೆಗೆ ಈ ಅಧ್ಯಯನದಲ್ಲಿ ವಿಮರ್ಶಿಸಲಾಗಿದೆ. ಎಂ.ವೀರಪ್ಪ ಮೊಯಿಲಿಯವರ ರಾಜಕೀಯ ಚಿಂತನೆಯ ಅಧ್ಯಯನಕ್ಕೆ ಸಂಬಂಧಿಸಿದಂತೆ ಪೂರಕ ಆಕಾರಗಳನ್ನಾಗಿ ಈ ಕೆಳಗಿನ ಸಾಹಿತ್ಯಿಕ ಕೃತಿಗಳನ್ನು ಪರಾಮರ್ಶಿಸಲಾಗಿದೆ. ಅವುಗಳನ್ನು ಇಲ್ಲಿ ವಿಶ್ಲೇಷಿಸಲಾಗಿದೆ.

ವಡ್ಡರ್ಸೆ ರಘುರಾಮ ಶೆಟ್ಟಿಯವರು ರಚಿಸಿದ ಬಹುರೂಪಿ ಅರಸು ಗ್ರಂಥದಲ್ಲಿ ಈ ರೀತಿ ವಿಶ್ಲೇಷಿಸಿದ್ದಾರೆ.

ಕರ್ನಾಟಕ ರಾಜಕೀಯ ಇತಿಹಾಸದಲ್ಲಿ 'ದೇವರಾಜ ಅರಸು' ತಮ್ಮದೇ ಆದ ಹೆಜ್ಜೆ ಗುರುತುಗಳನ್ನು ಮೂಡಿಸಿದ್ದಾರೆ. ಸ್ವಾತಂತ್ರ್ಯದ ನಂತರ ಭಾರತ ಇತಿಹಾಸದಲ್ಲಿ ಕರ್ನಾಟಕದ ಪುಟಗಳನ್ನು "ಅರಸು ಯುಗ" ಎಂದು ವರ್ಣಿಸುವ ಮಟ್ಟಿಗೆ ಅರಸು ಅವರ ಕಾಣಿಕೆ ಸಂದಿದೆ. ಸಮಾಜದ ಹಿಂದುಳಿದ ವರ್ಗಗಳ ಸಾಮಾಜಿಕ ನ್ಯಾಯ ಚಿಂತನೆಯನ್ನು ಹೊಂದಿದ್ದ ಅರಸು, ಹಿಂದುಳಿದ ವರ್ಗಕ್ಕೆ ಸೇರದ ಅವರನ್ನು ಹಿಂದುಳಿದ ವರ್ಗಗಳ ಧುರೀಣರು ಎಂದು ರಾಜಕೀಯವಾಗಿ ಗುರುತಿಸಲಾಗುತ್ತಿದೆ. ಅರಸು ಅವರು ಅನುಷ್ಠಾನಕ್ಕೆ ತಂದ 'ಭೂ ಸುಧಾರಣೆ' ದುರ್ಬಲ ವರ್ಗದವರಿಗೆ ನೈಜ ಶಕ್ತಿ ತುಂಬಿತು. ಹಿಂದುಳಿದ ವರ್ಗದವರನ್ನು ಆರ್ಥಿಕವಾಗಿ ಬಲಗೊಳಿಸಬೇಕೆಂಬ ಚಿಂತನೆ ನನಸಾಯಿತು. ದೇವರಾಜ ಅರಸರಂತೆ ಅನೇಕ ಚಿಂತನೆಗಳನ್ನು ಹೊಂದಿದ್ದ ಮೊಯಿಲಿಯವರು ತಮ್ಮ ರಾಜಕೀಯದಲ್ಲಿ ಆದರ್ಶಗಳಾಗಿ ಪಾಲಿಸಿಕೊಂಡಿರುವುದನ್ನು ಅರಸು ಅವರ ಚಿಂತನೆಗಳಿಗೆ ಮೊಯಿಲಿಯವರ ಚಿಂತನೆಗಳು ಹೇಗೆ ಭಿನ್ನವಾಗಿದೆ ಎಂಬುದನ್ನು ಈ ಅಧ್ಯಯನದಲ್ಲಿ ಪರಾಮರ್ಶಿಸಲಾಗಿದೆ.

೨೦೦೯ರಲ್ಲಿ ದೇಜಗೌ ಅವರು ರಚಿಸಿದ 'ಕರ್ನಾಟಕದ ಜ್ಯೋತಿ ಕೆಂಗಲ್ ಹನುಮಂತಯ್ಯ' ಎಂಬ ಕೃತಿಯಲ್ಲಿ ಕರ್ನಾಟಕ ಏಕೀಕರಣ, ವಿಧಾನಸೌಧ ನಿರ್ಮಾಣ ಕೋಲಾರದ ಚಿನ್ನದ ಗಣಿಯ ರಾಷ್ಟ್ರೀಕರಣ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸ್ಥಾಪನೆ, ರೇಲ್ವೆ ಇಲಾಖೆಗೆ ಕಾಯಕಲ್ಪ ಹೀಗೆ ಶಾಸ್ವತವಾದ ಮೌಲ್ಯವುಳ್ಳ ಕಾರ್ಯಗಳನ್ನು ಮಾಡಬೇಕೆಂಬ ಅವರ ಚಿಂತನೆಯನ್ನು ಪ್ರಸ್ತುತ ಕೃತಿಯಲ್ಲಿ ಉಲ್ಲೇಖಿಸಲಾಗಿದೆ. ಇವರ ಚಿಂತನೆಗಳು ಕರ್ನಾಟಕದ ಇತರ ರಾಜಕೀಯ ನಾಯಕರಲ್ಲೂ ಪ್ರಭಾವ ಬೀರಿದೆ. ಅದರಂತೆ ಮೊಯಿಲಿಯವರು ಇವರನ್ನು ಆದರ್ಶವಾಗಿಟ್ಟುಕೊಂಡಿದ್ದಾರೆ ಆದ್ದರಿಂದ ಅಧ್ಯಯನಕ್ಕೆ ಈ ಕೃತಿಯನ್ನು ಪರಾಮರ್ಶಿಸಲಾಗಿದೆ.

'ಬಂಗಾರಪ್ಪ ಸದನ ಸ್ಪಂದನ' ಗ್ರಂಥದಲ್ಲಿ ದೇಜಗೌ ಅವರು ಬಂಗಾರಪ್ಪನವರ ಚಿಂತನೆಯ ಬಗೆಗೆ ಈ ಕೆಳಗಿನಂತೆ ವಿಶ್ಲೇಷಿಸಿದ್ದಾರೆ.

ನೇರ ನಡೆ ನುಡಿಯ ಶ್ರೀ ಸಾರೆಕೊಪ್ಪದ ಬಂಗಾರಪ್ಪ ದೀನದಲಿತರ ಬಗ್ಗೆ ವಿಶೇಷವಾಗಿ ಚಿಂತನೆ ನಡೆಸಿ, ಅವರಿಗೆ ಅನ್ನ ಬಟ್ಟೆ ವಸತಿಗಳನ್ನೊದಗಿಸಬೇಕಾದದ್ದು

ಸರಕಾರದ ಪವಿತ್ರ ಕರ್ತವ್ಯವೆಂದು ಭಾವಿಸಿದ್ದರು. ತಮ್ಮ ಜೀವನದುದ್ದಕ್ಕೂ ಪ್ರತಿಪಾದಿಸುತ್ತ ತಮಗೆ ಅಧಿಕಾರ ಲಭಿಸಿದಾಗ ದೀನದಲಿತರಿಗೆ ಹಲವು ಯೋಜನೆಗಳನ್ನು ರೂಪಿಸಿ ಜಾರಿಗೆ ತಂದಿದ್ದಾರೆ. ಇವರ ಸಾಮಾಜಿಕ, ಆರ್ಥಿಕ, ಧಾರ್ಮಿಕ, ರಾಜಕೀಯ, ಚಿಂತನೆಗಳ ಬಗೆಗಿನ ನಿಲುವುಗಳು ಸಮಕಾಲೀನ ಸಮಸ್ಯೆಗಳ ವಿಶ್ಲೇಷಣಾ ಸಾಮರ್ಥ್ಯವನ್ನು ಹೊಂದಿವೆ. ಬಂಗಾರಪ್ಪನವರ ವಿಚಾರಧಾರೆಗಳ ಆಶಯವನ್ನು ಈ ಕೃತಿ ವ್ಯಕ್ತಪಡಿಸುತ್ತದೆ. ಆದ್ದರಿಂದ ನನ್ನ ಅಧ್ಯಯನಕ್ಕೆ ಈ ಗ್ರಂಥವನ್ನು ಅವಲೋಕಿಸಿದ್ದೇನೆ.

"ಶ್ರಮಿಕ ಶಿಲ್ಪಿ : ಬಾಬು ಜಗಜೀವನ ರಾಮ" ಎಂಬ ಲೇಖನದಲ್ಲಿ ಸಮಕಾಲೀನ ಸಾಮಾಜಿಕ ಚಿಂತಕ ಜಗಜೀವನರಾಮ ಅವರ ಚಿಂತನೆಗಳು ಹೇಗಿದ್ದವು ಎಂಬುದಕ್ಕೆ ಅವರು ಬರೆದ "ಭಾರತದಲ್ಲಿ ಜಾತಿವಾದ ಮತ್ತು ಹರಿಜನರ ಸಮಸ್ಯೆ" ಎನ್ನುವ ಕೃತಿಯ ಮೂಲಕ ಡಾ.ಹಿಮ್ಮಡಿಯವರು ಅನೇಕ ಮಾಹಿತಿಗಳನ್ನು ಒದಗಿಸಿದ್ದಾರೆ. ಒಬ್ಬ ಸಮಾಜಶಾಸ್ತ್ರಜ್ಞನು ಸಮಾಜವನ್ನು ನೋಡುವ, ವಿಶ್ಲೇಷಿಸುವ ಒಂದು ಶಿಸ್ತು ಈ ಲೇಖನದಲ್ಲಿ ಕಾಣುತ್ತದೆ. ಯಾರು ಸಾಮಾಜಿಕ ನ್ಯೂನ್ಯತೆಗಳಿಂದ ಅಪಮಾನ ಮತ್ತು ತಿರಸ್ಕಾರಕ್ಕೆ ಗುರಿಯಾಗುತ್ತಾರೋ, ಅವರು ತಮ್ಮನ್ನು ಬಿಗಿದಿಟ್ಟಿರುವ ಸಂಕೋಲೆಯಿಂದ ಬಿಡುಗಡೆ ಹೊಂದಬೇಕಾದರೆ ಎಂತಹ ತ್ಯಾಗಕ್ಕೂ ಸಿದ್ದರಾಗಿರಬೇಕು ಎಂದು ಹೇಳಿದ್ದಾರೆ. ಅವರು ತಮ್ಮ ಮಾತಿನಂತೆ ಛಲದಿಂದ ಹೋರಾಡುತ್ತ ರಾಷ್ಟ್ರ ನಾಯಕರಾಗಿ ಬೆಳೆದ ಬಾಬು ಜಗಜೀವನರಾಮರ ಚಿಂತನೆಗಳನ್ನು ಅಧ್ಯಯನದ ಪೂರಕ ಆಕರಗಳನ್ನಾಗಿ ಬಳಸಿಕೊಳ್ಳಲಾಗಿದೆ. ಮೇಲಿನ ಗ್ರಂಥಗಳು ಅಧ್ಯಯನಕ್ಕೆ ಮಾದರಿ ವದಗಿಸುತ್ತವೆ.

ಅಧ್ಯಯನಕ್ಕೆ ಪೂರಕವಾಗಿ ದಿನ ಪತ್ರಿಕೆಗಳನ್ನು ನಿಯತಕಾಲಿಕೆಗಳು, ಸಾಪ್ತಾಹಿಕಗಳನ್ನು ಗಮನಿಸಲಾಗಿದೆ. ಮೊಯಿಲಿಯವರ ಹೆಚ್ಚಿನ ಮಾಹಿತಿಗಾಗಿ ಅಂತರ್ಜಾಲವನ್ನು ಪರಿಶೀಲಿಸಲಾಗಿದೆ. ದಾಖಲೆಗಳಿಗಾಗಿ ಕ್ಷೇತ್ರ ಕಾರ್ಯವನ್ನು ಮಾಡಲಾಗಿದೆ.

ಅಧ್ಯಾಯ –೨ ಕರ್ನಾಟಕದ ಪ್ರಮುಖ ರಾಜಕೀಯ ನಾಯಕರ ಚಿಂತನೆಗಳು

೨.೧ ಪ್ರಸ್ತಾವನೆ

೨.೨ ಕರ್ನಾಟಕದ ಮುಖ್ಯಮಂತ್ರಿಗಳು

೨.೩ ಕರ್ನಾಟಕದ ಮುಖ್ಯಮಂತ್ರಿಗಳ ಜೀವನ ಸಾಧನೆ ಮತ್ತು ಚಿಂತನೆಗಳು

ಅಧ್ಯಾಯ-೨

ಕರ್ನಾಟಕದ ಪ್ರಮುಖ ರಾಜಕೀಯ ನಾಯಕರ ಚಿಂತನೆಗಳು

೨.೧ ಪ್ರಸ್ತಾವನೆ

ಕರ್ನಾಟಕದ ಚರಿತ್ರೆಯನ್ನು ಇಲ್ಲಿನ ಅರಸರು, ಸಂತರು, ಕವಿಗಳು ಬುದ್ಧಿ ಜೀವಿಗಳು ಸಮಾಜ ಸುಧಾರಕರು ಮತ್ತು ಕಲಾಕಾರರು ರೂಪಿಸಿರುವರು. ಉತ್ತರದ ಆರ್ಯ ಸಂಸ್ಕೃತಿ ಮತ್ತು ದಕ್ಷಿಣ ಭಾರತದ ದ್ರಾವಿಡ ಸಾಂಸ್ಕೃತಿಗಳ ಮಿಲನವನ್ನು ಕರ್ನಾಟಕದಲ್ಲಿ ಕಾಣಬಹುದಾಗಿದೆ. ಭಾರತದ ಅನ್ಯ ಭಾಗಗಳಲ್ಲಿ ಕಾಣಬಹುದಾದ ರಾಜ ಮನೆತನಗಳ ಸುದೀರ್ಘ ಪರಂಪರೆಯನ್ನು ಕರ್ನಾಟಕದಲ್ಲಿಯೂ ಕಾಣಬಹುದು. ಶಾತವಾಹನರಿಂದ ಕ್ರಿ.ಪೂ. ೩ನೇ ಶತಮಾನದಿಂದ ಕ್ರಿ.ಶ. ೨೦ನೇ ಶತಮಾನದ ಮಧ್ಯಾವಧಿಯವರೆಗೆ ಆರಂಭಿಸಿ ಮೈಸೂರು ಒಡೆಯರ ವರೆಗೆ ಹಲವು ಮನೆತನಗಳು ನಮ್ಮ ರಾಜ್ಯವನ್ನು ಆಳಿದರು. ಗೌತಮಿಪುತ್ರ ಶಾತಕರ್ಣಿ, ಮಯೂರವರ್ಮ, ಇಮ್ಮಡಿ ಪುಲಕೇಶಿ, ಆರನೇಯ ವಿಕ್ರಮಾದಿತ್ಯ, ಕೃಷ್ಣದೇವರಾಯ, ಕೆಳದಿ ಚೆನ್ನಮ್ಮ, ಕಿತ್ತೂರು ಚೆನ್ನಮ್ಮ, ಬೆಳವಡಿ ಮಲ್ಲಮ್ಮ ಮೊದಲಾದ ವೀರಾಗ್ರಣಿಗಳಿಗೆ ಜನ್ಮವಿತ್ತ ನಾಡು ಕನ್ನಡ. ಅಂತಹ ವೀರಾಗ್ರಣಿಗಳ ಸಾಲಿಗೆ ಸೇರಬಹುದಾದ ಕಪ್ಪೆ ಅರಭಟ್ಟನೆಂಬ ಐತಿಹಾಸಿಕ ವ್ಯಕ್ತಿಯ ದಾಖಲೆ ಕ್ರಿ.ಶ.೭ನೇ ಶತಮಾನದ ಬದಾಮಿಶಾಸನದಲ್ಲಿದೆ.

> **"ಸಾಧುಂಗೆ ಸಾಧು ಮಾಧುರ್ಯಂಗೆ ಮಾಧುರ್ಯಂ**
>
> **ಬಾಧಿಪ್ಪ ಕಲಿಗೆ ಕಲಿಯುಗ ವಿಪರಿತನ್**
>
> **ಮಾಧವನೀತನ್ ಪೆರನಲ್ಲ"**

ಕರ್ನಾಟಕದ ವೀರರ ಮಾಹಿತಿಯನ್ನು ನೀಡುವ ಈ ಶಾಸನವು ರಾಜಕೀಯ ಚರಿತ್ರೆಯ ವಿವರಗಳನ್ನು ನೀಡುತ್ತದೆ. ಇದರಿಂದ ಕರ್ನಾಟಕದ ಇತಿಹಾಸ ಪ್ರಾರಂಭವಾಗುತ್ತದೆ. ಜಾತ್ಯಾತೀತ ಆದರ್ಶ, ವಿಶಾಲ ಮನೋಭಾವನೆ, ಸಹನೆ ಇವೇ ಅತ್ಯಾಧುನಿಕ ವಿಚಾರಗಳೆಂದು ಮಾತನಾಡುವ ಇಂದಿನ ಪ್ರಪಂಚಕ್ಕೆ ಇಂದಿನ ಕರ್ನಾಟಕದಲ್ಲಿ ಅವು ದೈನಂದಿನ ಜೀವನ ಕ್ರಮವಾಗಿದ್ದವೆಂಬುದು ಅದರ ಇತಿಹಾಸವನ್ನು ಅವಲೋಕಿಸಿದಾಗ ಗೋಚರವಾಗುತ್ತದೆ.

ಸುಮಾರು ೨೦೦೦ವರ್ಷಗಳ ಇತಿಹಾಸವುಳ್ಳ ಕರ್ನಾಟಕ ರಾಜಕೀಯ ಚರಿತ್ರೆಯಲ್ಲಿ ಸಂಘಟನೆ, ವಿಘಟನೆ, ಸಾಮರಸ್ಯ, ಸಂಘರ್ಷಗಳು ನಿರಂತರವಾಗಿ ಮುಂದುವರೆದುಕೊಂಡು ಬಂದಿವೆ. ಚಾಲುಕ್ಯರು, ರಾಷ್ಟ್ರಕೂಟರು, ವಿಜಯನಗರದ ಚಕ್ರವರ್ತಿಗಳು, ವಿಜಾಪೂರದ ಆದಿಲ್‌ಶಾಹಿಗಳು, ಮೈಸೂರು ಒಡೆಯರು ಮುಂತಾದ ರಾಜ ಮನೆತನಗಳ ಅರಸರು ಕರ್ನಾಟಕದಲ್ಲಿ ಆಡಳಿತ ನಡೆಸಿದ್ದಾರೆ. ವಿಜಯನಗರದ ಪತನ ನಂತರ ಕೆಲ ಕಾಲ ಪಾಳೆಗಾರರಿಗೆ ಹಂಚಿಹೋಗಿದ್ದ ಕರ್ನಾಟಕದ ಬಹುಭಾಗವನ್ನು ಒಂದೂಗೂಡಿಸಿದ ಹೆಗ್ಗಳಿಕೆ ಮೈಸೂರಿನ ಒಡೆಯರುಗಳಿಗೂ ಮತ್ತು ನವಾಬ ಹೈದರಾಲಿಗೂ ಸಲ್ಲುತ್ತದೆ. ಶ್ರೀಂಗ ಪಟ್ಟಣದ ಅರಸ ಟಿಪ್ಪು ಗೆದ್ದದ್ದಕ್ಕಿಂತ ಕಳೆದುಕೊಂಡಿದ್ದೇ ಹೆಚ್ಚು. ಬ್ರಿಟಿಷರೊಡನೆ ಜಾಣ್ಮೆಯಿಂದ ವ್ಯವಹರಿಸಿ ಕೈಬಿಟ್ಟು ಹೋಗಿದ್ದ ಸಂಸ್ಥಾನವನ್ನು ಉಳಿಸಿಕೊಂಡುದುದು, ಮಹಾರಾಣಿ ಲಕ್ಷ್ಮಮ್ಮಣಿಯವರ ಮಹತ್ತರ ಸಾಧನೆಯಾಗಿದೆ. ಇಡೀ ದೇಶದಲ್ಲಿ ಹಲವು ವಿಚಾರಗಳಲ್ಲಿ ಕರ್ನಾಟಕ ಮುಂಚೂಣಿಯಲ್ಲಿದೆ. ಹಲವು ಪ್ರಥಮಗಳನ್ನು ಸಾಧಿಸಿ ಮೆಚ್ಚುಗೆಗೆ ಪಾತ್ರವಾಗಿದೆ. ಕರ್ನಾಟಕದ ವೀರವನಿತೆ ಕಿತ್ತೂರು ರಾಣಿ ಚೆನ್ನಮ್ಮಾ ಬ್ರಿಟಿಷರ ವಿರುದ್ಧ ತೋರಿದ ಕೆಚ್ಚು ಧೈರ್ಯ ಪ್ರದರ್ಶಿಸಿದ ರಾಷ್ಟ್ರಭಕ್ತಿ ಸ್ಮರಣೀಯ. ಝಾನ್ಸಿ ರಾಣಿ ಲಕ್ಷ್ಮೀಬಾಯಿಗೂ ೩೩ ವರ್ಷ ಮುಂಚೆ ಇಡೀ ಭಾರತದಲ್ಲಿ ಬ್ರಿಟಿಷರ ವಿರುದ್ಧ ಹೋರಾಡಿದ ಪ್ರಪ್ರಥಮ ಮಹಿಳೆ ರಾಣಿ ಚೆನ್ನಮ್ಮಾ.

ಇಡೀ ದೇಶದಲ್ಲಿ ಮೊದಲ ಬಾರಿಗೆ ಪ್ರಜಾಪ್ರತಿನಿಧಿ ಸಭೆ ಸ್ಥಾಪಿಸಿದ ಹೆಗ್ಗಳಿಕೆ ಮೈಸೂರು ಸಂಸ್ಥಾನದ್ದು (೧೮೮೧). ಅದರ ಹರಿಕಾರರಾದ ದಿವಾನ ಸಿ. ರಂಗಾಚಾರ್ಯಲು ಮತ್ತು ಅಂದಿನ ಅರಸು ೧೦ನೇ ಚಾಮರಾಜ ಒಡೆಯರು ಅಭಿನಂದನಾರ್ಹರಾಗಿದ್ದಾರೆ. ಆ ಮೂಲಕ ಪ್ರಜೆಗಳು ಆಡಳಿತದಲ್ಲಿ ಸಕ್ರೀಯವಾಗಿ ಭಾಗವಹಿಸುವಂತಾಯಿತು. ಇಡೀ

[illegible]

[illegible]

[illegible]

ಭಾರತದಲ್ಲಿ ಯಾವ ಸಂಸ್ಥಾನವು ರಾಜ್ಯ ಸಂವಿಧಾನವನ್ನು ಹೊಂದಿರಲಿಲ್ಲ ಅಂತಹ ಸಮಯದಲ್ಲಿ ಅಂದರೆ ೧೯೨೩ರಲ್ಲಿ ರಾಜ್ಯ ಸಂವಿಧಾನವನ್ನು ರೂಪಿಸಿಕೊಂಡದ್ದು, ಕರ್ನಾಟಕ(ಮೈಸೂರ ರಾಜ್ಯ) ಮಹಿಳೆಯರಿಗೆ ಮತದಾನದ ಹಕ್ಕು ನೀಡಿದ ಪ್ರಥಮ ರಾಜ್ಯವೆಂಬ ಪ್ರಶಂಸೆಗೆ ಅದು ಪಾತ್ರವಾಗಿದೆ.

ಭಾರತದಲ್ಲೇ ಮೊದಲ ಬಾರಿಗೆ ಪಂಚಾಯತ ರಾಜ್ಯ ವ್ಯವಸ್ಥೆಯನ್ನು ೧೯೮೭ರಲ್ಲಿ ಜಾರಿಗೊಳಿಸಿ ಗ್ರಾಮ ಪಂಚಾಯಿತಿಗಳನ್ನು ಅಸ್ತಿತ್ವಕ್ಕೆ ತಂದ ಹಿರಿಮೆ ಕರ್ನಾಟಕದ್ದಾಗಿದೆ. ಈ ಪಂಚಾಯತ್ ರಾಜ್ಯ ವ್ಯವಸ್ಥೆಯಲ್ಲಿ ಮಹಿಳೆಯರಿಗೆ ಮೀಸಲಾತಿ ನಿಗಧಿಗೊಳಿಸಿರುವ ಪ್ರಥಮ ರಾಜ್ಯ ಕರ್ನಾಟಕ ಹೀಗೆ ಹಲವು ಕ್ಷೇತ್ರಗಳಲ್ಲಿ ವೈವಿಧ್ಯಮಯ ಸಾಧನೆಗಳಲ್ಲಿ ಹೆಸರು ಮಾಡಿರುವ ಕರ್ನಾಟಕದ ರಾಜಕೀಯ ಇತಿಹಾಸದ ಅಧ್ಯಯನ ತನ್ನದೇ ಆದ ಪ್ರಾಮುಖ್ಯತೆ ಹೊಂದಿದೆ.

ಕರ್ನಾಟದಲ್ಲಿ ೧೯೧೮ರಲ್ಲಿ ರಾಜಕೀಯ ಪಕ್ಷಗಳು ತಲೆ ಎತ್ತಿದವು. ಅವುಗಳಲ್ಲಿ ಮುಖ್ಯವಾದವುಗಳೆಂದರೆ ಪ್ರಜಾಮಿತ್ರಮಂಡಳಿ, ಪ್ರಜಾಪಕ್ಷ ೧೯೩೪ರಲ್ಲಿ ಈ ಎರಡು ಪಕ್ಷಗಳು ವಿಲೀನಗೊಂಡವು. ಈ ಎಲ್ಲಾ ಪಕ್ಷಗಳು ಜವಾಬ್ದಾರಿ ಸರ್ಕಾರದ ರಚನೆಯಲ್ಲಿ ಮಹತ್ತರ ಪಾತ್ರ ವಹಿಸಿದವು. ಆ ನಂತರ ೧೯೩೮ರಲ್ಲಿ ಈ ಪಕ್ಷಗಳು ಕಾಂಗ್ರೇಸ್ ಪಕ್ಷದಲ್ಲಿ ವಿಲೀನಗೊಂಡು ಹೆಚ್ಚು ಪರಿಣಾಮಕಾರಿಯಾಗಿ ಕೆಲಸ ಮಾಡತೊಡಗಿದವು. ೧೯೪೭ರ ಹೊತ್ತಿಗೆ ಕಾಂಗ್ರೆಸ್ ಸಂವಿಧಾನಬದ್ಧ ಸರ್ಕಾರ ರಚಿಸಲು ‘ಮೈಸೂರು ಚಲೋ’ ಚಳುವಳಿಯನ್ನು ಕೈಕೊಂಡಿತು. ಈ ಚಳುವಳಿಯ ನಂತರ ೧೯೪೭ ಅಕ್ಟೋಂಬರ್–೨೪ರ ವಿಜಯ ದಶಮಿಯಂದು ಪ್ರಜಾನಾಯಕರು–ಗಳನ್ನೊಳಗೊಂಡಂತೆ ಕೆ.ಸಿ.ರೆಡ್ಡಿಯವರ ನೇತೃತ್ವದಲ್ಲಿ ಜಬಾಬ್ದಾರಿ ಸರಕಾರ ಅಸ್ತಿತ್ವಕ್ಕೆ ಬಂದಿತು. ಇದು ಕರ್ನಾಟಕ ರಾಜ್ಯದ ಪ್ರಪ್ರಥಮ ಮಂತ್ರಿ ಮಂಡಲವಾಗಿದೆ (Cabinet). ಕ್ಯಾಸಂಬಳ್ಳಿ ಚಂಗಲರಾಯ ರೆಡ್ಡಿ ರಾಜ್ಯದ ತಾತ್ಕಾಲಿಕ ಸರ್ಕಾರದ ಪ್ರಪ್ರಥಮ ಮುಖ್ಯಮಂತ್ರಿಯಾದರು. ಮೈಸೂರು ಮಹಾರಾಜರ ಒಪ್ಪಿಗೆಯಂತೆ ಮೈಸೂರು ಅರಮನೆಯಲ್ಲಿ ಅಕ್ಟೋಂಬರ್ ೨೯, ೧೯೪೭ರಲ್ಲಿ ಮಂತ್ರಿಮಂಡಲದ ಸಮಾವೇಶ ನಡೆಯಿತು. ಒಂಬತ್ತು ಮಂತ್ರಿಗಳನ್ನೊಳಗೊಂಡ ಈ ಹೊಸ ಸರ್ಕಾರದ ಮಂತ್ರಿಮಂಡಲದಲ್ಲಿ ಆರು ಮಂದಿ ಕಾಂಗ್ರೆಸ್ಸಿಗರು ಮೂರು ಮಂದಿ ಕಾಂಗ್ರೆಸ್ಸೇತರರೂ ಇದ್ದರು.

ಮೈಸೂರು ರಾಜ್ಯದಲ್ಲಿ ಜವಾಬ್ದಾರಿ ಸರ್ಕಾರ ರಚನೆಯಾಗುವದಕ್ಕಿಂತ ಮುಂಚೆ ಆಡಳಿತದ ಮುಖ್ಯಸ್ಥರನ್ನು ದಿವಾನರೆಂದು ಕರೆಯುತ್ತಿದ್ದರು. ೧೮೮೧ ರಲ್ಲಿ ಮೈಸೂರು ಅರಸರಿಗೆ ರಾಜ್ಯದ ಆಡಳಿತವನ್ನು ಬ್ರಿಟಿಷರು ಒಪ್ಪಿಸಿದರು. ಮೊದಲನೇ ದಿವಾನರಾಗಿ ಶ್ರೀರಂಗಾಚಾರ್ ನೇಮಿಸಲ್ಪಟ್ಟರು. ಹೀಗೆ ಅನೇಕ ದಿವಾನರು ಆಡಳಿತ ನಡೆಸಿದ ನಂತರ ಜವಾಬ್ದಾರಿ ಸರ್ಕಾರದ ಆಡಳಿತದ ನೇತಾರರಾದ ಮುಖ್ಯ ಮಂತ್ರಿಗಳು ಅಧಿಕಾರ ನಡೆಸಿದರು. ಶ್ರೀ ಕೆ.ಸಿ. ರೆಡ್ಡಿ ಸೇರಿದಂತೆ ಶ್ರೀ ನಿಜಲಿಂಗಪ್ಪ, ಶ್ರೀ ದೇವರಾಜ ಅರಸು, ಶ್ರೀ ಎಂ ವೀರಪ್ಪಮೊಯಿಲಿ, ಶ್ರೀ ಬಿ.ಡಿ ಜತ್ತಿ ಹೀಗೆ ಅನೇಕ ಜನ ಮುಖ್ಯ ಮಂತ್ರಿಗಳು ಆಡಳಿತವನ್ನು ನಡೆಸಿ ಅನೇಕ ಸಾಧನೆಗಳನ್ನು ಮಾಡಿದ್ದಾರೆ. ಇಲ್ಲಿಯವರೆಗೆ ಕರ್ನಾಟಕವನ್ನು ಆಳಿದ ಮುಖ್ಯಮಂತ್ರಿಗಳ ಪಟ್ಟಿಯನ್ನು ಈ ಕೆಳಗೆ ಕೊಡಲಾಗಿದೆ.

೨ : ೨ – ಕರ್ನಾಟಕದ ಮುಖ್ಯಮಂತ್ರಿಗಳು

ಕ್ರ.ಸಂ.	ಹೆಸರು	ಅವಧಿ ಆರಂಭ	ಅವಧಿ ಅಂತ್ಯ
೧	ಕೆ.ಸಿ. ರೆಡ್ಡಿ	೨೫ ಅಕ್ಟೋಬರ್ ೧೯೪೭	೩೦ ಮಾರ್ಚ ೧೯೫೨
೨	ಕೆಂಗಲ್ ಹನುಮಂತಯ್ಯ	೩೦ ಮಾರ್ಚ ೧೯೫೨	೧೯ ಆಗಸ್ಟ್ ೧೯೫೬
೩	ಕಡಿದಾಳ ಮಂಜಪ್ಪ	೧೯ ಆಗಸ್ಟ್ ೧೯೫೬	೩೧ ಅಕ್ಟೋಬರ್ ೧೯೫೬
೪	ಎಸ್. ನಿಜಲಿಂಗಪ್ಪ	೦೧ ನವೆಂಬರ್ ೧೯೫೬ ೨೧ ಜೂನ ೧೯೬೨	೧೬ ಮೇ ೧೯೫೮ ೨೯ ಮೇ ೧೯೬೮
೫	ಬಿ.ಡಿ. ಜತ್ತಿ	೧೬ ಮೇ ೧೯೫೮	೦೯ ಮಾರ್ಚ ೧೯೬೨
೬	ಎಸ್.ಆರ್. ಕಂಠಿ	೧೪ ಮಾರ್ಚ ೧೯೬೨	೨೦ ಜೂನ ೧೯೬೨
೭	ವೀರೇಂದ್ರ ಪಾಟೀಲ	೨೯ ಮೇ ೧೯೬೮ ೩೦ ನವೆಂಬರ್ ೧೯೮೯	೧೮ ಮಾರ್ಚ ೧೯೭೧ ೧೦ ಅಕ್ಟೋಬರ್ ೧೯೯೦
೮	ಡಿ. ದೇವರಾಜ ಅರಸ	೨೦ ಮಾರ್ಚ ೧೯೭೨	೩೧ ಡಿಸೆಂಬರ್ ೧೯೭೭

		೨೮ ಫೇಬ್ರುವರಿ ೧೯೭೮	೦೭ ಜನೇವರಿ ೧೯೮೦
೯	ಆರ್. ಗುಂಡುರಾವ	೧೨ ಜನೇವರಿ ೧೯೮೦	೦೬ ಜನೇವರಿ ೧೯೮೩
೧೦	ರಾಮಕೃಷ್ಣ ಹೆಗಡೆ	೧೦ ಜನೇವರಿ ೧೯೮೩ ೦೮ ಮಾರ್ಚ ೧೯೮೫ ೧೬ ಫೇಬ್ರುವರಿ ೧೯೮೬	೨೯ ಡಿಸೆಂಬರ್ ೧೯೮೪ ೧೩ ಫೇಬ್ರುವರಿ ೧೯೮೬ ೧೦ ಆಗಸ್ಟ್ ೧೯೮೮
೧೧	ಎಸ್.ಆರ್. ಬೋಮ್ಮಾಯಿ	೧೩ ಆಗಸ್ಟ್ ೧೯೮೮	೨೧ ಏಪ್ರೀಲ್ ೧೯೮೯
೧೨	ಎಸ್. ಬಂಗಾರಪ್ಪ	೧೭ ಅಕ್ಟೂಬರ್ ೧೯೯೦	೧೯ ನವೆಂಬರ್೧೯೯೨
೧೩	ಎಂ. ವೀರಪ್ಪ ಮೊಯಿಲಿ	೧೯ ನವೆಂಬರ್೧೯೯೨	೧೧ ಡಿಸೆಂಬರ್ ೧೯೯೪
೧೪	ಎಚ್.ಡಿ. ದೇವೆಗೌಡ	೧೧ ಡಿಸೆಂಬರ್ ೧೯೯೪	೩೧ ಮೇ ೧೯೯೬
೧೫	ಜೆ.ಎಚ್. ಪಟೇಲ್	೩೧ ಮೇ ೧೯೯೬	೦೭ ಅಕ್ಟೂಬರ್ ೧೯೯೯
೧೬	ಎಸ್.ಎಂ. ಕೃಷ್ಣ	೧೧ ಅಕ್ಟೂಬರ್ ೧೯೯೯	೨೮ ಮೇ ೨೦೦೪
೧೭	ಧರಂ ಸಿಂಗ್	೨೮ ಮೇ ೨೦೦೪	೨೮ ಜನೇವರಿ ೨೦೦೬
೧೮	ಎಚ್.ಡಿ. ಕುಮಾರಸ್ವಾಮಿ	೦೩ ಫೇಬ್ರುವರಿ ೨೦೦೬	೦೮ ಅಕ್ಟೂಬರ್೨೦೦೭
೧೯	ಬಿ.ಎಸ್. ಯಡಿಯೂರಪ್ಪ	೧೨ ನವೆಂಬರ್ ೨೦೦೭ ೩೦ ಮೇ ೨೦೦೮	೧೯ ನವೆಂಬರ್ ೨೦೦೭ ೦೩ ಆಗಸ್ಟ್ ೨೦೧೧
೨೦	ಡಿ.ವ್ಹಿ. ಸದಾನಂದಗೌಡ	೦೪ ಆಗಸ್ಟ್ ೨೦೧೧	–ಅಧಿಕಾರದಲ್ಲಿದ್ದಾರೆ–

೨.೩. ಕರ್ನಾಟಕದ ಪ್ರಮುಖ ಮುಖ್ಯಮಂತ್ರಿಗಳ ಜೀವನ ಸಾಧನೆ ಮತ್ತು ಚಿಂತನೆಗಳು

ಒಂದು ರಾಜ್ಯದ ಪ್ರಗತಿ ಆ ರಾಜ್ಯವನ್ನಾಳಿದ ರಾಜಕೀಯ ಚಿಂತಕರ ಮೇಲೆ ಅವಲಂಬಿಸಿರುತ್ತದೆ. ಅವರು ತಮ್ಮ ರಾಜಕೀಯದ ಅವಧಿಯಲ್ಲಿಯ ಆಡಳಿತ

ಸುಧಾರಣೆಯನ್ನು ಮಾಡಿದ ಕಾರ್ಯ ವೈಖರಿಯ ಕುಶಲತೆಯನ್ನು ಅವಲಂಬಿಸಿರುತ್ತದೆ. ಒಂದು ರಾಜ್ಯದ ಸರ್ವಾಂಗೀಣ ಪ್ರಗತಿಯನ್ನು ಗುರುತಿಸಲು ಹೊರಟರೆ ಅದಕ್ಕೆ ಕಾರಣೀಭೂತರಾದ ಮಹನೀಯರ ಆದರ್ಶಾತ್ಮಕ ಚಿಂತನೆಗಳು, ಸಾಧನೆಗಳು ಅವರ ಮಹತ್ವದ ಕೊಡುಗೆಗಳಾಗಿರುತ್ತವೆ. ಆ ನಿಟ್ಟಿನಲ್ಲಿ ಕರ್ನಾಟಕ ರಾಜ್ಯದಲ್ಲಿ ಹಲವು ಮುಖ್ಯಮಂತ್ರಿಗಳು ಆಗಿ ಹೋಗಿದ್ದಾರೆ. ಅವರ ರಾಜಕೀಯ ಚಿಂತನೆಗೂ ಮತ್ತು ಪ್ರಸ್ತುತ ಎಂ. ವೀರಪ್ಪ ಮೊಯಿಲಿಯವರ ಚಿಂತನೆಗೂ ಇರುವ ಸಾಮ್ಯತೆಯನ್ನು ಹಾಗೂ ವಿಭಿನ್ನತೆಯನ್ನು ಗುರುತಿಸುವ ಪ್ರಯತ್ನವನ್ನು ಈ ಹಿನ್ನೆಲೆಯಲ್ಲಿ ಮಾಡಲಾಗಿದೆ.

ಕೆ. ಸಿ. ರೆಡ್ಡಿ

ಮೈಸೂರು ಸಂಸ್ಥಾನದ ಅರಸರ ಆಳ್ವಿಕೆ ಮುಗಿದ ನಂತರ ಕರ್ನಾಟಕದಲ್ಲಿ ಸ್ವಾತಂತ್ರ್ಯ ನಂತರ ೨೫-೧೦-೧೯೪೭ರಂದು ಸ್ಥಾಪನೆಗೊಂಡ ಮೊದಲ ಸರಕಾರದ ಜವಾಬ್ಧಾರಿ ಮುಖ್ಯಮಂತ್ರಿಯಾಗಿ ಕೆ.ಸಿ ರೆಡ್ಡಿಯವರು ಅಧಿಕಾರವಹಿಸಿಕೊಂಡರು. ಜನಪ್ರತಿನಿಧಿಗಳು ಜವಾಬ್ಧಾರಿಯುತ ಅಧಿಕಾರ ಕೊಟ್ಟಾಗ ಕೆ.ಸಿ ರೆಡ್ಡಿಯವರು ತುಂಬಾ ಜಾಗರೂಕತೆಯಿಂದ ನಿರ್ವಹಿಸಿದರು. ಕ್ಯಾಸಂಬಳ್ಳಿ ಚೆಂಗಲರಾಯ ರೆಡ್ಡಿಯವರು ಕೋಲಾರ ಜಿಲ್ಲೆಯ ಬಂಗಾರಪೇಟೆ ತಾಲೂಕಿನ ಕ್ಯಾಸಂಬಳ್ಳಿಯ ಶ್ರೀಮಂತ ರೈತ ಕುಟುಂಬದಲ್ಲಿ ಜನಿಸಿದರು. ಪ್ರಾಥಮಿಕ ಹಾಗೂ ಹೈಸ್ಕೂಲ ವಿದ್ಯಾಭ್ಯಾಸವು ಕೋಲಾರ ಮತ್ತು ಬೆಂಗಳೂರಿನಲ್ಲಿ ಆಯಿತು. ಮದ್ರಾಸನಲ್ಲಿ ಪದವಿ ಶಿಕ್ಷಣ ಪೂರೈಸಿ , ೧೯೨೬ ರಲ್ಲಿ ಬಿ.ಎಲ್ ಪದವಿ ಮುಗಿಸಿ ವಕೀಲ ವೃತ್ತಿಯನ್ನು ಕೈಗೊಂಡರು. ಮುಂದೆ ಅವರು ಕಾಂಗ್ರೆಸ್ ಹಾಗೂ ಜಸ್ಟೀಸ್ ಪಾರ್ಟಿಗಳ ಪ್ರಭಾವದಿಂದ ರಾಜಕೀಯದಲ್ಲಿ ಹೆಚ್ಚಿನ ಒಲವು ಗಳಿಸಿದರು.

೧೯೩೨ ರಲ್ಲಿ ಕೋಲಾರದಲ್ಲಿ ನ್ಯಾಯ ವಿಧೇಯಕ ಸಭೆಗೆ ಆಯ್ಕೆಯಾಗುವುದರ ಮೂಲಕ ರಾಜಕೀಯ ಪ್ರವೇಶ ಮಾಡಿದರು. ಈ ಅವಕಾಶವನ್ನು ಕೆ.ಸಿ ರೆಡ್ಡಿಯವರು ಸದುಪಯೋಗಪಡಿಸಿಕೊಂಡು ಉತ್ತಮ ಆಡಳಿತ ನೀಡಿ ರಾಜಕೀಯ ಕ್ಷೇತ್ರದಲ್ಲಿ ಸಾಕಷ್ಟು ಕೆಲಸ ಮಾಡುವುದರ ಮೂಲಕ ಜನಪ್ರೀಯತೆಯನ್ನು ಪಡೆದರು. ನಂತರ ಪ್ರಜಾ ಪ್ರತಿನಿಧಿ ಸಭೆಗೂ ಆಯ್ಕೆಯಾಗಿ ಮೇಲ್ಮನೆ ಮತ್ತು ಕೆಳಮನೆಗಳೆರಡರಲ್ಲಿ ರೈತರ ಪರ ಕೆಲಸ ಮಾಡಿದರು. ಗಾಂಧೀಜಿಯವರ ಪ್ರಭಾವದಿಂದ ಕಾಂಗ್ರೆಸ್ ಪಕ್ಷ ಸೇರಿ, ಗಾಂಧೀಜಿಯವರ ಅನುಯಾಯಿಗಳಾದರು. ೧೯೪೨ ರಲ್ಲಿ ಕ್ವಿಟ್ ಇಂಡಿಯಾ ಚಳುವಳಿಯಲ್ಲಿ ಭಾಗವಹಿಸಿ

ಸ್ವಾತಂತ್ರ್ಯಕ್ಕಾಗಿ ಜೈಲು ಸೇರಿದರು. ೧೯೪೬ ರಲ್ಲಿ ಬಿಡುಗಡೆಯಾಗಿ ಮೈಸೂರು ಕಾಂಗ್ರೆಸ್ ಪಕ್ಷದ ಅಧ್ಯಕ್ಷರಾಗಿ ತಮ್ಮ ರಾಜಕೀಯ ಜೀವನ ಮುಂದುವರೆಸಿದರು. ರಾಜ್ಯಕ್ಕೆ ಪ್ರತ್ಯೇಕ ಸಂವಿಧಾನ ರಚಿಸುವ ಉದ್ದೇಶದಿಂದ ೧೯೪೮ರ ಮಾರ್ಚನಲ್ಲಿ ಚುನಾವಣೆ ನಡೆಸಲಾಯಿತು. ೭೬ ಸ್ಥಾನಗಳಲ್ಲಿ ೬೭ನ್ನು ಕಾಂಗ್ರೆಸ್ ಗೆದ್ದುಕೊಂಡಿತು. ಮುಂದೆ ೨೬ ನವೆಂಬರ್ ೧೯೪೯ರಂದು ಭಾರತದ ಸಂವಿಧಾನ ಸ್ವೀಕರಿಸುವುದಾಗಿ ಸಂವಿಧಾನ ರಚನಾ ಸಮಿತಿ ಘೋಷಿಸಿದ್ದರಿಂದ ಪ್ರತ್ಯೇಕ ಸಂವಿಧಾನ ರಚನೆಯ ಕಾರ್ಯ ಸ್ಥಗಿತಗೊಂಡಿತು. ಇದೇ ರಾಜ್ಯ ಸಂವಿಧಾನ ರಚನಾ ಸಮಿತಿಯು ವಿಧಾನಸಭೆಯಾಗಿ ಪರಿವರ್ತನೆ ಹೊಂದಿತು

ರೈತ ಕಾರ್ಮಿಕ ಪರವಾಗಿದ್ದ ರೆಡ್ಡಿ ಸಂಪುಟವು ಅನೇಕ ಮಹತ್ವದ ಯೋಜನೆಗಳನ್ನು ಜಾರಿಗೊಳಿಸಿತು. ಪ್ರಮುಖ ಸಾರಿಗೆ ಮಾರ್ಗಗಳನ್ನು ರಾಷ್ಟ್ರೀಕರಿಸಲಾಯಿತು. ಶರಾವತಿಯಲ್ಲಿ ಮಹಾತ್ಮಾ ಗಾಂಧಿ ಜಲವಿದ್ಯುತ್ ಘಟಕ ಕಾರ್ಯರಂಭ ಮಾಡಿತು. ದಂಡು ಮತ್ತು ಬೆಂಗಳೂರುನ್ನು ಒಗ್ಗೂಡಿಸಿ ಬೆಂಗಳೂರು ಕಾರ್ಪೊರೇಷನ್ ರಚಿಸಲಾಯಿತು. ಬೆಂಗಳೂರು ಕಾರ್ಪೊರೇಷನ್‌ಗೆ ದೇಶದಲ್ಲಿ ಮೊದಲಬಾರಿಗೆ ೧೯೫೦ರಲ್ಲಿ ಪ್ರೌಢ ಮತದಾನದಂತೆ ಚುನಾವಣೆ ನಡೆಸಲಾಯಿತು. ತುಂಗಭದ್ರ ಹಾಗೂ ಭದ್ರಾ ಯೋಜನೆ ಪೂರ್ಣಗೊಳಿಸಲಾಯಿತು. ವಿಧಾನಸೌಧವನ್ನು ನಿರ್ಮಿಸಬೇಕೆಂಬ ಉದ್ದೇಶದಿಂದ ೧೯೫೧ರಲ್ಲಿ ಭಾರತದ ಪ್ರಧಾನಿ ನೆಹರೂ ಅವರಿಂದ ಶಂಕುಸ್ಥಾಪನೆ ಮಾಡಿಸಲಾಯಿತು. ಲೆಕ್ಕ ಪತ್ರ ಇಲಾಖೆ, ಸಾಂಖಿಕ ಇಲಾಖೆ, ಮುಂತಾದ ಇಲಾಖೆಗಳು ಅಸ್ತಿತ್ವಕ್ಕೆ ಬಂದವು. ಕೆ.ಸಿ.ರೆಡ್ಡಿಯವರ ಆಡಳಿತದ ಅವಧಿಯಲ್ಲಿ ೪೦ಕ್ಕೂ ಹೆಚ್ಚು ಕಾನೂನುಗಳು ಜಾರಿಗೆ ಬಂದವು. ಅವರು ಮುಂದೆ ಕೇಂದ್ರ ಸಚಿವರಾಗಿದ್ದಾಗಲೂ ಕೂಡ ಅನೇಕ ಯೋಜನೆಗಳು ಯಶಸ್ವಿಯಾಗಿ ಜಾರಿಗೊಳ್ಳುವಲ್ಲಿ ಸಾಫಲ್ಯವನ್ನು ಕಂಡವು. ಇವರು ನೆಹರೂ ಸಂಪುಟದಲ್ಲಿ ಉತ್ಪದನಾ ಸಚಿವರಾಗಿದ್ದರು. ಆಗ ಅನೇಕ ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆಗಳು ಭಾರತದ ಪ್ರಮುಖ ನಗರಗಳಲ್ಲಿ ಸ್ಥಾಪಿಸಲಾಯಿತು. ಮತ್ತು ೧೯೬೦ರಲ್ಲಿ ವಾಣಿಜ್ಯ ಹಾಗೂ ಕೈಗಾರಿಕಾ ಮಂತ್ರಿಯಾಗಿ ೧೯೬೨ ವರೆಗೆ ಕಾರ್ಯನಿರ್ವಹಿಸಿದರು. ಈ ಹೊತ್ತಿಗೆ ಲೋಕಸಭೆಗೆ ಚುನಾವಣೆಗಳು ಘೋಷಣೆಯಾದವು ೧೯೬೨ರಲ್ಲಿ ಪುನಃ ಲೋಕಸಭೆಗೆ ಆಯ್ಕೆಯಾಗಿ ಕಾಂಗ್ರೆಸ್‌ನ ಉಪನಾಯಕರಾಗಿ ಕೆಲಸ ಮಾಡಿದರು. ಮಧ್ಯಪ್ರದೇಶದ ರಾಜ್ಯಪಾಲರಾಗಿ ನೇಮಕಗೊಂಡರು. ಬೆಂಗಳೂರಿನಲ್ಲಿ ತಮ್ಮ ನಿವೃತ್ತಿ ಜೀವನ ಕಳೆಯುತ್ತ ೧೯೭೬ರಲ್ಲಿ ಕೆ.ಸಿ.ರೆಡ್ಡಿಯವರು ದಿವಂಗತರಾದರು.

ಹೀಗೆ ಕರ್ನಾಟಕ ಕಂಡ ಅಪರೂಪದ ಮುಖ್ಯಮಂತ್ರಿಯಾಗಿ ಆಳಿ ತಮ್ಮ ಕಾರ್ಯಗಳಿಂದ ಯಶಸ್ವಿ ಪುರುಷರಾಗಿ ಕರ್ನಾಟಕದ ಚರಿತ್ರೆಯಲ್ಲಿ ರಾಜಕೀಯವಾಗಿ ಅಚ್ಚಳಿಯದಂತೆ ಹೆಸರು ಮಾಡಿದರು.

ಕೆಂಗಲ್ ಹನುಮಂತಯ್ಯ

ಕೆಂಗಲ್ ಹನುಮಂತಯ್ಯನವರು ರಾಮನಗರ ತಾಲೂಕಿನ ಲಕ್ಕಪ್ಪನ ಹಳ್ಳಿಯಲ್ಲಿ ಜನಿಸಿದರು. ತಾಯಿ ನಂಜಮ್ಮ, ತಂದೆ ವೆಂಕಟೇಶ. ರೈತ ಕುಟುಂಬದಲ್ಲಿ ಜನಿಸಿದ ಹನುಮಂತಯ್ಯ ತಮ್ಮ ಜೀವನದಲ್ಲಿ ಅತ್ಯಂತ ಕಡು ಕಷ್ಟದಿಂದ ಬೆಳೆದವರು. ಸ್ನೇಹಿತರ ನೆರವಿನಿಂದ ತಮ್ಮ ಪ್ರಾಥಮಿಕ ಹಾಗೂ ಹೈಸ್ಕೂಲ್ ಶಿಕ್ಷಣವನ್ನು ಮುಗಿಸಿ ೧೯೩೦ರಲ್ಲಿ ಬಿ.ಎ. ಪದವಿಯನ್ನು ಮುಗಿಸಿದರು. ಮುಂದೆ ಬೆಂಗಳೂರಿನ ಬಿ.ಪುಟ್ಟಮ್ಮನವರನ್ನು ಮದುವೆಯಾಗಿ ಸಂಸಾರಿಕ ಜೀವನವನ್ನು ನಡೆಸಿದರು.

ಕೆಂಗಲ್ ಹನುಂತಯ್ಯನವರು ಆಕರ್ಷಕ ವ್ಯಕ್ತಿತ್ವವನ್ನು ಹೊಂದಿದ ವ್ಯಕ್ತಿ. ಯಾವಾಗಲೂ ಶುಭ್ರವಾದ ಬಟ್ಟೆಯನ್ನು ಧರಿಸಿಕೊಂಡು ಆಕರ್ಷಕ ಮೈಕಟ್ಟನ್ನು ಹೊಂದಿದ್ದರು. ಆಕಸ್ಮಿಕವಾಗಿ ಅವರು ರಾಜಕೀಯ ಜೀವನಕ್ಕೆ ಕಾಲಿಟ್ಟರು. ಹನುಮಂತಯ್ಯನವರು ರಾಜಕೀಯ ಪ್ರವೇಶ ಮಾಡಿದಾಗ ರಾಜಕೀಯ ಶ್ರೀಮಂತವಾಗಿತ್ತು. ಬಡತನದಿಂದ ಬಂದ ಕೆಂಗಲ್ ಶ್ರೀಮಂತರ ಜೊತೆ ಸ್ಪರ್ಧೆ ಮಾಡುವುದು ಕಷ್ಟದ ಕೆಲಸವಾಗಿತ್ತು. ಆದ್ದರಿಂದ ಅವರ ಪ್ರತಿಭೆ ಹಾಗೂ ಹೋರಾಟಗಳೇ ಅವರಿಗೆ ಬಂಡವಾಳವಾದವು. ಹೋರಾಟದ ಮೂಲಕ ಸ್ವಾತಂತ್ರ್ಯ ಸಂಗ್ರಾಮದಲ್ಲಿ ದುಮುಕಿ ೧೯೪೦ರಲ್ಲಿ ಬೆಂಗಳೂರು ನಗರ ಸಭೆ ಸದಸ್ಯರಾದರು. ೧೯೪೨ರಲ್ಲಿ ಮಹಾತ್ಮ ಗಾಂಧೀಜಿಯವರು ಕ್ವಿಟ್ ಇಂಡಿಯಾ ಚಳುವಳಿಗೆ ಕರೆ ಕೊಟ್ಟರು. ಈ ಚಳುವಳಿಯಲ್ಲಿ ಭಾಗವಹಿಸಿ ಕೆಂಗಲ್‌ರು ಜೈಲು ಶಿಕ್ಷೆ ಅನುಭವಿಸಿದರು. ಸ್ವತಂತ್ರ್ಯದ ಚಳುವಳಿಗಳು ಕೆಂಗಲ್‌ರವರನ್ನು ಏಳುಸಾರಿ ಜೈಲು ಸೆರೆವಾಸ ಅನುಭವಿಸುವಂತೆ ಮಾಡಿತು. ೧೯೪೪ರಲ್ಲಿ ಪ್ರಜಾಪ್ರತಿನಿಧಿ ಸಭೆಗೆ ಕಾಂಗ್ರೆಸ್‌ನಿಂದ ಕಾರ್ಯದರ್ಶಿಗಳಾಗಿ ಆಯ್ಕೆಯಾದರು. ೧೯೪೭ರಲ್ಲಿ ಭಾರತ ರಾಜ್ಯಾಂಗ ಸಭೆ ಪ್ರಾರಂಭವಾದ ದಿನದಿಂದ ೧೯೫೨ರವರೆಗೆ ಅಂದರೆ ವಿಸರ್ಜನೆಯಾಗುವವರೆಗೆ ಅದರ ಸದಸ್ಯರಾದರು. ಮುಂದೆ ಮೈಸೂರು ಪ್ರದೇಶ ಕಾಂಗ್ರೆಸ್ ಪಕ್ಷದ ಅಧ್ಯಕ್ಷರಾಗಿ ೧೯೫೨ರಲ್ಲಿ ಮೈಸೂರು ವಿಧಾನ ಸಭೆಯಿಂದ ಚುನಾಯಿತರಾದರು.

೧೯೫೨ ಮಾರ್ಚ್ ತಿಂಗಳಲ್ಲಿ ಮೈಸೂರು ರಾಜ್ಯ ಸಂಸ್ಥಾನದ ಮೊದಲ ಮುಖ್ಯಮಂತ್ರಿಯಾದರು.

ಕೆಂಗಲ್ ಹನುಮಂತಯ್ಯನವರು ಮುಖ್ಯ ಮಂತ್ರಿಯಾದ ಮೇಲೆ ಅನೇಕ ಜನಪ್ರಿಯ ಕಾರ್ಯಗಳನ್ನು ಮಾಡಿದರು. ಅವುಗಳಲ್ಲಿ ಕೆಲವನ್ನು ಇಲ್ಲಿ ಕೊಡಲಾಗಿದೆ. ರಾಜ್ಯದಲ್ಲಿ ಹೊಸಮಾದರಿಯ ಶಿಕ್ಷಣ ವ್ಯವಸ್ಥೆಯನ್ನು ಜಾರಿಗೊಳಿಸಿದರು. ಜನತಾ ಶಿಕ್ಷಣ ನೀಡಿ ಪ್ರಜಾಪ್ರಭುತ್ವವನ್ನು ಕಾಪಾಡಬೇಕೆಂದು ಹೇಳಿದರು. ಶಿಕ್ಷಣದ ಪಠ್ಯಕ್ರಮದಲ್ಲಿ ನೂತನ ಅಂಶಗಳನ್ನು ಜಾರಿಗೆ ತಂದರು. ಗಾಂಧೀಜಿಯವರ ಸರ್ವೋದಯ ದಿನಾಚರಣೆಯಿಂದ ಶಾಲಾ ವರ್ಷವನ್ನು ಆರಂಭಿಸುವುದು, ಕಡ್ಡಾಯ ಹಾಗೂ ದೈಹಿಕ ಸೇವೆ ಮಾಡುವುದು ನೈತಿಕ ಮತ್ತು ಮನೆಗೆಲಸಗಳ ಅಳವಡಿಕೆ. ಕ್ರಿಯಾತ್ಮಕ ವಿದ್ಯಾಭ್ಯಾಸ ಭೂದಾನ ವಿದ್ಯಾದಾನ ಹೀಗೆ ಮುಂತಾದ ವಿಷಯಗಳನ್ನು ಶಿಕ್ಷಣದಲ್ಲಿ ಜಾರಿಗೊಳಿಸಿದರು. ಮಾಸ್ತಿ ಡಿ.ವಿ. ಗುಂಡಪ್ಪ ಡಿ.ಎಲ್.ನರಸಿಂಹಚಾರ್ ಮೊದಲಾದ ಪ್ರಸಿದ್ಧ ಸಾಹಿತಿಗಳ ನೇತೃತ್ವದಲ್ಲಿ ಸಾಹಿತ್ಯ ಹಾಗೂ ಸಂಸ್ಕೃತಿ ಪ್ರಸಾರ ಯೋಜನೆಯನ್ನು ಜಾರಿಗೆ ತಂದರು. ಕನ್ನಡದ ಅಭಿವೃದ್ಧಿಗೆ ಹಲವು ಯೋಜನೆಗಳನ್ನು ಜಾರಿಗೆ ತಂದರು. ಕರ್ನಾಟಕವನ್ನೆಲ್ಲ ಕನ್ನಡೀಕರಣಗೊಳಿಸಿದರು. ಮುಖ್ಯಮಂತ್ರಿ ಕೆಂಗಲ್ ಹನುಮಂತಯ್ಯ ಅವರ ಅಚ್ಚಳಿಯದಂಥ ಶ್ಲಾಘನೀಯ ಕೆಲಸವೆಂದರೆ, ಅವರು ನಿರ್ಮಿಸಿದ 'ವಿಧಾನಸೌಧ' ಇದು ಕೇವಲ ಕಲ್ಲಿನ ಕಟ್ಟಡವಲ್ಲ ಅದು ಕರ್ನಾಟಕ ರಾಜಕಾರಣದ ಕುಸರಿ ಕೆಲಸ. ನೋಡಲು ಮನೋಹರವಾದ ಈ ಭವ್ಯ ಕಟ್ಟಡ ದೇಶದ ಇತಿಹಾಸದಲ್ಲಿಯೇ ಪ್ರಮುಖವಾಗಿರುವಂಥಹದ್ದು. ಕೆಂಗಲ್‌ರು ಕರ್ನಾಟಕ ಏಕೀಕರಣ ಚಳುವಳಿಯಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡು ಏಕೀಕರಣಕ್ಕಾಗಿ ಮುಖ್ಯಮಂತ್ರಿ ಹುದ್ದೆಗೆ ರಾಜೀನಾಮೆ ನೀಡಿದರು. ಮುಂದೆ ಲೋಕಸಭೆ ಸದಸ್ಯರಾಗಿ, ಆಡಳಿತ ಸುಧಾರಣಾ ಸಮಿತಿಯ ಅಧ್ಯಕ್ಷರಾಗಿ, ಕೇಂದ್ರ ಸರಕಾರದ ಕಾನೂನು ಮತ್ತು ಸಮಾಜ ಕಲ್ಯಾಣ ಸಚಿವರಾಗಿ, ನಂತರ ರೇಲ್ವೆ ಮಂತ್ರಿಯಾದರು. ಇವರ ಸೇವೆಯನ್ನು ಪರಿಗಣಿಸಿ ಸಂಘ ಸಂಸ್ಥೆಗಳು ಅನೇಕ ಪ್ರಶಸ್ತಿಯನ್ನು ನೀಡಿದ್ದಾರೆ.

ಕೆಂಗಲ್ ಹನುಂತಯ್ಯನವರು ಮುಖ್ಯಮಂತ್ರಿಗಳಾಗಿ ಜನಪ್ರೀಯ ವಕೀಲರಾಗಿ ರಾಜಕೀಯ ಮಟ್ಟದಲ್ಲಿ ಆಕರ್ಷಕ ವ್ಯಕ್ತಿತ್ವವನ್ನು ಉಳ್ಳವರು. ಭಾರತ ಸ್ವಾತಂತ್ರ್ಯ ಚಳುವಳಿಯಲ್ಲಿ ಪಾಲ್ಗೊಂಡ ಹಿರಿಯ ರಾಜಕೀಯ ಚಿಂತಕ. ಶ್ರೀಯುತರು ತಮ್ಮ ಅನೇಕ

ಚಿಂತನೆಗಳನ್ನು ತಮ್ಮ ಆಡಳಿತದಲ್ಲಿ ಜಾರಿಗೊಳಿಸಿದರು. ಮೊದಲಿಗೆ ಶಿಕ್ಷಣದಲ್ಲಿ ಸುಧಾರಣೆ ತರುವ ಪ್ರಯತ್ನ ಇವರದಾಗಿತ್ತು. ಸರ್ವೋದಯ ಸ್ವಾವಲಂಬಿಗಳಾಗಿರಬೇಕೆಂಬ ಕನಸನ್ನು ಕಂಡವರು ಕ್ರಿಯಾತ್ಮಕ ವಿದ್ಯಾಭ್ಯಾಸದ ಕಡೆಗೆ ಇವರ ಒಲವು ಹೆಚ್ಚಿತ್ತು. ರಾಜ್ಯಕ್ಕೆ ಮಾದರಿ ಶಿಕ್ಷಣ ಸಂಸ್ಥೆಗಳನ್ನು ಜಾರಿಗೊಳಿಸುವ ನಿಮಿತ್ಯ ಹಲವು ಶಿಕ್ಷಣ ತಜ್ಞರನ್ನು ವಿದ್ಯಾಭ್ಯಾಸ ಸುಧಾರಣೆ ಸಮಿತಿಗೆ ನೇಮಿಸಿದರು. ಜನತಾ ಶಿಕ್ಷಣ ಶ್ರೀಯುತರ ಮುಖ್ಯ ಚಿಂತನೆಯಾಗಿತ್ತು. ಜನತಾ ಶಿಕ್ಷಣದ ಮೂಲಕವಾಗಿ ಪ್ರಜಾಪ್ರಭುತ್ವವನ್ನು ಉಳಿಸಿ ಬೆಳೆಸಬೇಕೆಂಬ ಆಲೋಚನ ಲಹರಿ ಇವರಲ್ಲಿತ್ತು. ಜೊತೆಗೆ ಸಾಹಿತ್ಯ ಮತ್ತು ಸಂಸ್ಕೃತಿ ಪ್ರಸಾರಕ್ಕಾಗಿ ಹಲವು ಗ್ರಂಥಗಳನ್ನು ಪ್ರಕಟಿಸಿ ಓದುಗರಿಗೆ ಅನುವು ಮಾಡಿಕೊಟ್ಟರು. ಆ ಮೂಲಕವಾಗಿ ಶ್ರೀಯುತರು ಯೋಚಿಸಿದ ಸಾಹಿತ್ಯ ಸಂಸ್ಕೃತಿ ಪ್ರಚಾರ ಯೋಜನೆ ಜನಪ್ರೀಯಗೊಂಡಿತು. ಮತ್ತು ಕರ್ನಾಟಕದ ಏಕೀಕರಣದ ಮೂಲಕ ತಾವೊಬ್ಬ ದಕ್ಷ ಆಡಳಿತಗಾರರಾಗಿ ಉತ್ತಮ ಅಭಿವೃದ್ಧಿ ಮಾಡಿದ್ದಾರೆ. ಕೇಂದ್ರ ಆಡಳಿತ ಸುಧಾರಣೆಯ ಅಧ್ಯಕ್ಷರಾಗಿದ್ದಾಗ ೨೫,೦೦೦ ಪುಟಗಳ ವರದಿಯನ್ನು ಸಿದ್ದಪಡಿಸಿ ಸರ್ಕಾರಕ್ಕೆ ಒಪ್ಪಿಸಿದರು ಇದು ಭಾರತ ಸಂವಿಧಾನದಷ್ಟು ಮುಖ್ಯವಾದ ಅಧ್ಯಯನ ಇದರಲ್ಲಿದೆ. ಈ ವರದಿಯು ರಾಜಕೀಯ ತಜ್ಞರ ಅಧ್ಯಯನದ ಕೈಗನ್ನಡಿಯಾಗಿದೆ. ಇಂತಹ ರಾಜಕೀಯ ಚಿಂತಕ ಯುವಕರಿಗೆ ಸ್ಫೂರ್ತಿದಾಯಕ. ಹೀಗೆ ಕೆಂಗಲ್ ಹನುಮಂತಯ್ಯನವರು ತಮ್ಮ ಅಪಾರ ಅನುಭವದ ರಾಜಕೀಯ ಚಿಂತನೆಯನ್ನು ನಾಡಿಗೆ ನೀಡಿದ್ದಾರೆ.

ತಮ್ಮ ವಿಶಿಷ್ಟ ಕಾರ್ಯ ಸಾಧನೆಗಳಿಂದ ರಾಷ್ಟ್ರ ಮಟ್ಟದಲ್ಲಿ ಹೆಸರು ಗಳಿಸಿದ ಕೆಂಗಲ್ ಹನುಮಂತಯ್ಯನವರು ೧-೧೨-೧೯೮೦ರಲ್ಲಿ ಬೆಂಗಳೂರಿನ ಸೇಂಟ್ ಮಾರ್ಥಾಸ್ ಆಸ್ಪತ್ರೆಯಲ್ಲಿ ಹೃದಯಾಘಾತದಿಂದ ನಿಧನರಾದರು. ಭಾರತದ ರಾಜಕೀಯ ಇತಿಹಾಸದಲ್ಲಿ ಕೆಂಗಲ್ ಹನುಮಂತಯ್ಯನವರ ಹೆಸರು ಚಿರಸ್ಮರಣೀಯವಾದದ್ದು.

ಎಸ್. ನಿಜಲಿಂಗಪ್ಪ

ಸಿದ್ದವನಹಳ್ಳಿ ನಿಜಲಿಂಗಪ್ಪನವರು ಬಳ್ಳಾರಿ ಜಿಲ್ಲೆಯ ಹರಪನಹಳ್ಳಿಯ ಹಲುವಾಗಿನಲ್ಲಿ ಜನಿಸಿದರು. ತಂದೆ ಅಡಿವೆಪ್ಪ, ತಾಯಿ ನೀಲವ್ವ, ಬಡ ರೈತ ಕುಟುಂಬದಲ್ಲಿ ಜನಿಸಿದ ಎಸ್. ನಿಜಲಿಂಗಪ್ಪ ಪ್ರಾಥಮಿಕ ಶಿಕ್ಷಣವನ್ನು ತಮ್ಮ ಗ್ರಾಮದಲ್ಲಿ ಮುಗಿಸಿದರು. ಉನ್ನತ ಶಿಕ್ಷಣ ಪಡೆದ ನಂತರ ೧೯೨೬ರಲ್ಲಿ ಚಿತ್ರದುರ್ಗದಲ್ಲಿ ವಕೀಲಿ ವೃತ್ತಿಯನ್ನು ಪ್ರಾರಂಭಿಸಿದರು. ೧೯೩೬ರಲ್ಲಿ ಡಾ. ನಾ.ಸು. ಹರ್ಡೀಕರ ಅವರ ಪ್ರಭಾವದಿಂದ ಕಾಂಗ್ರೇಸ್‌ನ್ನು ಸೇರಿದರು.

ಅನೇಕ ರಾಷ್ಟ್ರೀಯ ಚಳುವಳಿಯಲ್ಲಿ ಭಾಗವಹಿಸಿದ ನಿಜಲಿಂಗಪ್ಪನವರು ತಮ್ಮ ಚಾಣಾಕ್ಷತನದಿಂದ ರಾಜಕೀಯವಾಗಿ ಬೆಳೆದರು. ಕರ್ನಾಟಕದ ಏಕೀಕರಣದಲ್ಲಿ ಎಸ್. ನಿಜಲಿಂಗಪ್ಪನವರ ಪಾತ್ರ ಮಹತ್ವಪೂರ್ಣವಾದುದು. ಫಜಲ್ ಅಲಿ ಆಯೋಗದ ವರದಿ ಮೇಲೆ ಏಕೀಕರಣವಾದಾಗ ನಿಜಲಿಂಗಪ್ಪನವರೇ ಕರ್ನಾಟಕದ ಪ್ರಥಮ ಮುಖ್ಯಮಂತ್ರಿಯಾದರು. ೧೯೫೫ರಲ್ಲಿ ಮೈಸೂರು ಸರ್ಕಾರದಲ್ಲಿ ವೇತನ ಆಯೋಗ ರಚಿಸಿ ಸರ್ಕಾರಿ ನೌಕರರಿಗೆ ಸಂಬಳ ಹೆಚ್ಚಿಸಿದರು. ೧೯೫೭ರಲ್ಲಿ ಬಿ.ಡಿ. ಜತ್ತಿಯವರ ಅಧ್ಯಕ್ಷತೆಯಲ್ಲಿ ಭೂ ಸುಧಾರಣಾ ಮಂಡಳಿಯನ್ನು ರಚಿಸಿದರು.

ನಿಜಲಿಂಗಪ್ಪನವರು ೧೯೬೦ರಲ್ಲಿ ಕೆ.ಪಿ.ಸಿ.ಸಿ. ಅಧ್ಯಕ್ಷತೆಯನ್ನು ವಹಿಸಿದರು. ಕೇಂದ್ರ ಸರ್ಕಾರ ಎಸ್. ನಿಜಲಿಂಗಪ್ಪ ಅವರನ್ನು ಸಹಕಾರ ಕೃಷಿ ಅಧ್ಯಯನ ಮಂಡಳಿ ಹಾಗೂ ರಾಷ್ಟ್ರೀಯ ತೈಲ ನಿಗಮ ಕಂಪನಿಯ ಅಧ್ಯಕ್ಷರನ್ನಾಗಿ ನೇಮಕ ಮಾಡಿತು. ೧೯೬೯ರಲ್ಲಿ ಪೆಟ್ರೋಲ್ ವಿತರಣೆಗೆ ಸೂಕ್ತ ವ್ಯವಸ್ಥೆಯನ್ನು ಮಾಡಿದರು.

ನಿಜಲಿಂಗಪ್ಪನವರು ತಮ್ಮ ಅಧಿಕಾರಾವಧಿಯಲ್ಲಿ ಮಾಡಿದ ಸಾಧನೆಗಳು ಅವಿಸ್ಮರಣೀಯವಾದವುಗಳು. ಅವುಗಳಲ್ಲಿ ೧೯೫೫ರಲ್ಲಿ ವಿದ್ಯುತ್‌ಶಕ್ತಿ ಮಂಡಳಿ ಸ್ಥಾಪನೆ, ಪಂಚವಾರ್ಷಿಕ ಯೋಜನೆಯಡಿಯಲ್ಲಿ ತುಂಗಭದ್ರಾ ಮೇಲ್ದಂಡೆ ನಾಲೆ ಯೋಜನೆ ಮುಂತಾದವು. ೧೯೬೫ರಲ್ಲಿ ಬೆಂಗಳೂರಿಗೆ ಕಾವೇರಿ ನದಿಯಿಂದ ಕುಡಿಯುವ ನೀರಿನ ಯೋಜನೆಯನ್ನು ರೂಪಿಸಿದರು. ೧೯೬೪ರಲ್ಲಿ ಬೆಂಗಳೂರು ಕೃಷಿ ವಿಜ್ಞಾನ ವಿಶ್ವವಿದ್ಯಾಲಯ ಪ್ರಾರಂಭವಾಯಿತು. ಹಾಸನ–ಮಂಗಳೂರು ರೈಲು ಮಾರ್ಗಕ್ಕೆ ಕೇಂದ್ರದ ಅನುಮತಿ ಪಡೆದುಕೊಂಡರು. ಕರ್ನಾಟಕ ಏಕೀಕರಣವಾಗಿದ್ದರಿಂದ ಸರ್ವರೀತಿಯ ಅಭಿವೃದ್ಧಿ ಕಾರ್ಯಗಳನ್ನು ಮಾಡಿದರು. ಒಟ್ಟಿನಲ್ಲಿ ಕರ್ನಾಟಕವು ಕಂಡ ಅತ್ಯಂತ ಮುತ್ಸದ್ಧಿ ರಾಜಕಾರಣಿ ಎಂದರೆ ಎಸ್. ನಿಜಲಿಂಗಪ್ಪನವರು ಎಂಬುದರಲ್ಲಿ ಎರಡು ಮಾತಿಲ್ಲ.

ಎಸ್.ಆರ್. ಕಂಠಿ

ಕರ್ನಾಟದಕ ಕಿರು ಅವಧಿಯ ಮುಖ್ಯಮಂತ್ರಿಗಳಾಗಿ ಜನಪ್ರೀಯರಾಗಿದ್ದವರು ಶ್ರೀ ಎಸ್.ಆರ್. ಕಂಠಿಯವರು ಇವರು ೧೯೬೨ರಲ್ಲಿ ಶಿಕ್ಷಣ ಮಂತ್ರಿಗಳಾಗಿ ವಿಶ್ವವಿದ್ಯಾಲಯಗಳನ್ನು ನಿರ್ಮಿಸುವುದರ ಜವಾಬ್ದಾರಿಯನ್ನು ನಿಭಾಯಿಸಿದವರು. ಇವರ ಕಾಲದಲ್ಲಿ ಶಿಕ್ಷಣ ಏರುಪೇರಾಗಿರುವುದನ್ನು ಗಮನಿಸಿ ಶಿಕ್ಷಣದ ಗುಣಮಟ್ಟವನ್ನು ಹೆಚ್ಚಿಸಲಿಕ್ಕೆ

ಪ್ರಯತ್ನಿಸಿದರು. ಖಾಸಗಿ ಶಿಕ್ಷಣ ಸಂಸ್ಥೆ ಮತ್ತು ಅನುದಾನಿತ ಖಾಸಗೀ ಶಿಕ್ಷಣ ಸಂಸ್ಥೆ ಶಿಕ್ಷಕರ ಸಮಸ್ಯೆಗೆ ಸ್ಪಂದಿಸುವ ವಿಚಾರವನ್ನು ವ್ಯಕ್ತ ಪಡಿಸಿದವರು. ನಾಡಿನ ತುಂಬಾ ಅನೇಕ ಶಾಲಾ ಕಾಲೇಜುಗಳನ್ನು ತೆರೆದು ಶಿಕ್ಷಣಕ್ಕೆ ಅನುಕೂಲ ಮಾಡಿಕೊಟ್ಟರು. ಇವರು ಹೆಚ್ಚಾಗಿ ಶಿಕ್ಷಣಕ್ಕೆ ಒತ್ತು ಕೊಟ್ಟಿದ್ದನ್ನು ಗಮನಿಸಬಹುದಾಗಿದೆ.

ಬಿ. ಡಿ. ಜತ್ತಿ

ಬಸಪ್ಪ ದಾನಪ್ಪ ಜತ್ತಿಯವರು ಆಗಿನ ಬಿಜಾಪೂರ ಜಿಲ್ಲೆಯ ಜಮಖಂಡಿ ತಾಲೂಕಿನ ಚಿಕ್ಕ ಹಳ್ಳಿಯಾದ ಸಾವಳಗಿಯಲ್ಲಿ ೧೦-೯-೧೯೧೨ರಲ್ಲಿ ಜನಿಸಿದರು. ತಂದೆ ದಾನಪ್ಪ ತಾಯಿ ಭಾಗ್ಯವ್ವ. ಇವರ ವಿದ್ಯಾಭ್ಯಾಸವನ್ನು ತಮ್ಮ ಸ್ವಗ್ರಾಮದಲ್ಲಿ ಮುಗಿಸಿ, ೧೯೨೯ರಲ್ಲಿ ಮೆಟ್ರಿಕ್ ಪಾಸಾದರು. ೧೯೩೪ಬಿ.ಎ. ಪದವಿ ಪೂರ್ಣಗೊಳಿಸಿದರು.

ಗ್ರಾಮ ರಾಜ್ಯದ ಕನಸನ್ನು ಕಂಡ ಜತ್ತಿಯವರು ತಮ್ಮ ಉನ್ನತ ಶಿಕ್ಷಣದ ಫಲವಾಗಿ ರಾಜಕೀಯಕ್ಕೆ ಧುಮುಕಿದರು. ಅವರ ಗ್ರಾಮದ ಆಗು-ಹೋಗುಗಳ ಅಪಾರ ಕಾಳಜಿಯಿಂದಾಗಿ ಪಂಚಾಯತಿಯ ಸ್ಥಾಪನೆಯಾಯಿತು. ಆಗ ಆ ಪಂಚಾಯತಿಯ ಅಧ್ಯಕ್ಷರಾಗಿ ರಾಜಕೀಯವಾಗಿ ಬೆಳೆಯ ತೊಡಗಿದರು. ಸಾರ್ವಜನಿಕ ಕಲ್ಯಾಣಕ್ಕಾಗಿ ತಮ್ಮ ಸಮಯವನ್ನು ಮೀಸಲಿಟ್ಟ ಸಮಯ ಪ್ರಜ್ಞೆಯುಳ್ಳವರು ಎನಿಸಿಕೊಂಡರು. ಕಾಂಗ್ರೇಸ್ ಪಕ್ಷದಲ್ಲಿ ಗುರುತಿಸಿಕೊಂಡರು. ಸ್ನೇಹಿತರು ಹಾಗೂ ಅಭಿಮಾನಿಗಳ ಒತ್ತಾಯದ ಮೇಲೆ ಅನೇಕ ಹುದ್ದೆಗಳನ್ನು ಅಲಂಕರಿಸಿದರು. ೧೯೫೮ ಜತ್ತಿಯವರು ಮೈಸೂರಿನ ವಿಧಾನ ಮಂಡಲದ ಕಾಂಗ್ರೇಸ್ ಪಕ್ಷದ ನಾಯಕರಾಗಿ ಆಯ್ಕೆಗೊಂಡರು. ರಾಜ್ಯದ ಮುಖ್ಯಮಂತ್ರಿಯಾದ ಇವರ ಅವಧಿ ೧೬-೦೫-೧೯೫೮ರಿಂದ ೦೯-೦೩-೧೯೬೨ರವೆಗೆ ಈ ಅವಧಿಯಲ್ಲಿ ಅವರು ರಾಜ್ಯದ ಉನ್ನತಿಗಾಗಿ ಶ್ರಮಿಸಿದರು.

ರಾಜ್ಯ ಮತ್ತು ರಾಷ್ಟ್ರ ರಾಜಕಾರಣದಲ್ಲಿ ಎದ್ದು ಕಾಣುವ ಮತ್ತೊಬ್ಬ ರಾಜಕೀಯ ಚಿಂತಕ ಬಿ.ಡಿ. ಜತ್ತಿಯವರು. ಸಣ್ಣ ಕೈಗಾರಿಕೆಗಳಿಗೆ ಉತ್ತೇಜನ ನೀಡಬೇಕೆಂಬ ಚಿಂತನೆ ಅವರದಿತ್ತು ಆ ಮೂಲಕವಾಗಿ ಗ್ರಾಮೀಣ ಪ್ರದೇಶದಲ್ಲಿ ಗುಡಿ ಕೈಗಾರಿಕೆಗಳನ್ನು ಬೆಳೆಸಬೇಕು, ಬೃಹತ್ತಾದ ಕಾರ್ಖಾನೆಗಳನ್ನು ನಿರ್ಮಿಸುವುದರ ಮೂಲಕ ರಾಜ್ಯದ ಉದ್ಯಮಗಳ ಅಭಿವೃದ್ಧಿಯನ್ನು ಬೆಳೆಸಬೇಕೆಂಬ ನಿಟ್ಟಿನಲ್ಲಿ ಪ್ರಯತ್ನಿಸಿದರು. ಗಡಿ ಪ್ರದೇಶ ಕಡತಗಳ

ವಿಲೇವಾರಿ ತಕ್ಕ ಮಟ್ಟಿಗೆ ಬಗೆಹರಿಸುವ ನಿಟ್ಟಿನಲ್ಲಿ ಇವರು ತಮ್ಮದೇ ಆದ ರಾಜಕೀಯ ಸಿದ್ಧಾಂತವನ್ನು ಇಟ್ಟುಕೊಂಡವರು.

ಮುಖ್ಯಮಂತ್ರಿಗಳಾದ ಮೇಲೆ ಸಣ್ಣ ಕೈಗಾರಿಕಾಗಳ ಬೆಳವಣಿಗೆ ಹಳ್ಳಿ ಪ್ರದೇಶಗಳಲ್ಲಿ ವಿವಿಧ ಕಾರಣಗಳಿಂದ ಕುಂಠಿತವಾಗಿರುವುದು ಜತ್ತಿಯವರ ಗಮನಕ್ಕೆ ಬಂದಿತು. ಅವು ಬೆಳೆಯಬೇಕಾದರೆ, ಬೇಕಾದ ಆರ್ಥಿಕ ಸಹಾಯ ಮತ್ತು ಸಲಕರಣೆಗಳನ್ನು ಒದಗಿಸುವ ಕಾರ್ಯವನ್ನು ನಿರ್ವಹಿಸಿದರು. ಬೃಹತ್ ಕಾರ್ಖಾನೆಗಳನ್ನು ಕ್ರಮೇಣ ಬೆಳೆಸುವುದರಿಂದ ರಾಜ್ಯದ ಅಭಿವೃದ್ಧಿಯನ್ನು ಹೆಚ್ಚಿಸಬಹುದೆಂದು ಮನಗಂಡ ಜತ್ತಿಯವರು ಭದ್ರಾವತಿ ಉಕ್ಕಿನ ಮತ್ತು ಕಬ್ಬಿಣ ಕಾರಖಾನೆಗೆ ಮತ್ತು ರಾಜ್ಯದ ಇನ್ನಿತರ ಬೆಳವಣಿಗೆಯಲ್ಲಿ ಸಹಾಯ ಹಸ್ತ ಚಾಚಿದರು. ಶರವತಿ ವಿದ್ಯುತ್ ಯೋಜನೆಯನ್ನು ರೂಪಿಸಿ ಆ ಕಾರ್ಯವನ್ನು ಯಶಸ್ವಿಯಾಗಿ ತಮ್ಮ ಅವಧಿಯಲ್ಲಿ ಆರಂಭಿಸಿದರು. ಅಖಿಲ ಭಾರತ ಕಾಂಗ್ರೆಸ್ ಪಕ್ಷದ ಪ್ರತಿನಿಧಿಯಾಗಿ ಭಾರತದ ಉಪರಾಷ್ಟ್ರಪತಿ ಸ್ಥಾನಕ್ಕೆ ಸ್ಪರ್ಧಿಸಿ ಜತ್ತಿಯವರು ಅಗಷ್ಟ-೨೭, ೧೯೭೪ರಂದು ನಡೆದ ಚುನಾವಣೆಯಲ್ಲಿ ಬಹುಮತ ಪಡೆದು ರಾಷ್ಟ್ರದ ಉಪರಾಷ್ಟ್ರಪತಿಯಾಗಿ ಆಯ್ಕೆಗೊಂಡರು. ಕರ್ನಾಟಕ ರಾಜ್ಯದ ಅಭಿವೃದ್ಧಿ ಕೆಲಸಗಳನ್ನು ಮಾಡಿದರು.

ವೀರೇಂದ್ರ ಪಾಟೀಲ

ಕರ್ನಾಟಕದ ಗಟ್ಟಿ ಆಡಳಿತಗಾರನೆಂದು ಹೆಸರು ಪಡೆದವರು ವೀರೇಂದ್ರ ಪಾಟೀಲ. ಇವರು ಕರ್ನಾಟಕದ ಪ್ರಬುದ್ಧ ಮುತ್ಸದ್ದಿ ರಾಜಕಾರಣಿಗಳಾಗಿದ್ದವರು. ತಮ್ಮ ಆಡಳಿತದಲ್ಲಿ ಅನೇಕ ಹೊಸ ಚಿಂತನೆಗಳನ್ನು ಯೋಜನೆಗಳನ್ನು ಜಾರಿಗೊಳಿಸಿದವರು. ಶ್ರೀಯುತರು ನೀರಾವರಿ ಯೋಜನೆಗಳಿಗೆ ಅತೀ ಹೆಚ್ಚು ಪ್ರೋತ್ಸಾಹವನ್ನು ನೀಡಿದರು. ಇದರಿಂದ ರೈತರ ಕೃಷಿ ಭೂಮಿಗಳಿಗೆ ನೀರಿನ ಸೌಲಭ್ಯ ಒದಗಿಸಿ ಅನೇಕ ಸಮಸ್ಯೆಗಳಿಗೆ ಸ್ಪಂಧಿಸಿದರು. ನೀರಾವರಿ ಸೌಲಭ್ಯದಿಂದ ಮಾತ್ರ ದೇಶದ ರೈತರ ಅಭಿವೃದ್ಧಿಯಾಗುತ್ತದೆ ಎಂದು ನಂಬಿದ್ದರು. ಆ ನಿಟ್ಟನಲ್ಲಿ ತಮ್ಮ ಚಿಂತನೆಯನ್ನು ಕಾರ್ಯರೂಪಕ್ಕೆ ತಂದವರು. ಅದೇ ರೀತಿ ೨ನೇ ಬಾರಿ ಮತ್ತೆ ಮುಖ್ಯಮಂತ್ರಿ ಗದ್ದುಗೆಯನ್ನೇರಿದವರು. ವೀರೇಂದ್ರ ಪಾಟೀಲರು ಹಣಕಾಸು ನಿರ್ವಹನೆಯ ಶಿಸ್ತು ರಾಜ್ಯದ ಮುಖ್ಯಮಂತ್ರಿಗಳಿಗೆ ಮಾದರಿ. ಕೈಗಾರಿಕಾ ಕ್ರಾಂತಿಯ ಚಿಂತನೆಯನ್ನು ಹೊಂದಿದ್ದ ಪಾಟೀಲರು ಕೈಗಾರಿಕೆಗಳನ್ನು ಅನುಷ್ಠಾನಕ್ಕೆ ತಂದರು.

ಡಿ.ದೇವರಾಜ ಅರಸು

೧೯೭೦ರ ನಂತರದ ದಶಕದಲ್ಲಿ ದೀರ್ಘಕಾಲ ಮುಖ್ಯಮಂತ್ರಿಯಾಗಿ ದೇವರಾಜು ಅರಸು ಕರ್ನಾಟಕ ಕಂಡ ಶ್ರೇಷ್ಠ ಮುಖ್ಯ ಮಂತ್ರಿಯಾಗಿದ್ದಾರೆ. ದೇವರಾಜ ಅರಸರು ಮೈಸೂರು ಜಿಲ್ಲೆಯ ಹುಣುಸೂರು ತಾಲೂಕಿನ ಕಲ್ಲಳ್ಳಿ ಗ್ರಾಮದಲ್ಲಿ ೧೯೧೫ರಲ್ಲಿ ಜನಿಸಿದರು. ತಂದೆ, ದೇವರಾಜ ತಾಯಿ-ದೇವೀರಮ್ಮಣ್ಣಿ. ಇವರದು ಮೈಸೂರಿನ ಅರಸು ಮನೆತನಕ್ಕೆ ಸೇರಿದ ವಂಶ. ದೇವರಾಜ ಅರಸರು ಎಂಟು ವರ್ಷದವರಿದ್ದಾಗಲೇ ತಮ್ಮ ತಂದೆಯನ್ನು ಕಳೆದಕೊಂಡರು. ತಾಯಿಯ ಮಡಿಲಲ್ಲಿ ಬೆಳೆದರು. ತಮ್ಮ ಪ್ರಾಥಮಿಕ ವಿದ್ಯಾಭ್ಯಾಸವನ್ನು ಕಲ್ಲಳ್ಳಿಯಲ್ಲೇ ಮುಗಿಸಿದರು. ಹೈಸ್ಕೂಲನ್ನು ಸಾಹಿತಿ ಚದುರಂಗರ ಜೊತೆ ಮೈಸೂರಿನಲ್ಲಿ ಮುಗಿಸಿ ಮುಂದೆ ಬಿ.ಎಸ್ಸಿ. ಓದಿ ಕಲ್ಲಳ್ಳಿಗೆ ಬಂದು ಕೃಷಿ ಕಾಯಕವನ್ನು ಮಾಡಿದರು.

೧೯೩೮ರಲ್ಲಿ ಮೈಸೂರಿನಲ್ಲಿ ಅನಿರೀಕ್ಷಿತ ರಾಜಕೀಯ ಬೆಳವಣಿಗೆಯಿಂದ ಮೈಸೂರು ಸಂಸ್ಥಾನದ ಮಹಾರಾಜರ ನೆರವಿನಿಂದ ಹುಣುಸೂರಿನಲ್ಲಿ ಪ್ರಜಾಪ್ರತಿನಿಧಿ ಸಭೆ ಚುನಾವಣೆಗೆ ಸ್ಪರ್ಧಿಸಬೇಕಾಯಿತು. ಈ ಚುನಾವಣೆಯಲ್ಲಿ ಗೆದ್ದಾಗ ಅರಸರಿಗೆ ಕೇವಲ ೨೬ವರ್ಷ ಮುಂದೆ ೧೯೫೨ರಲ್ಲಿ ಪ್ರಜಾತಂತ್ರ ವ್ಯವಸ್ಥೆಯಲ್ಲಿ ವಿಧಾನಸಭೆಗೆ ಆಯ್ಕೆಗೊಂಡರು. ಮುಂದೆ ಹುಣಸೂರು ಕ್ಷೇತ್ರದಿಂದ ಗೆದ್ದು ಬಂದು ಮುಖ್ಯಮಂತ್ರಿಯಾದರು.

ಡಿ. ದೇವರಾಜ ಅರಸರು ಕರ್ನಾಟಕದ ಧೀಮಂತ ಮುಖ್ಯಮಂತ್ರಿಗಳು. ಶ್ರೀಯುತರ ರಾಜಕೀಯ ಚಿಂತನೆಗಳಲ್ಲಿ ಒಂದಾದ ಹಿಂದುಳಿದವರ ಹಾಗೂ ಅಲ್ಪಸಂಖ್ಯಾತರ ಪ್ರಗತಿಗಾಗಿ ಸದಾ ಮಿಡಿಯುವ ಹೃದಯ ಅವರದಾಗಿತ್ತು. ಭೂ ಸುಧಾರಣೆಯು ಅವರ ಅಚಲ ಚಿಂತನೆಯಾಗಿತ್ತು. ಕೈಗಾರಿಕಾ ಕ್ಷೇತ್ರದ ಬೆಳವಣಿಗೆಗೆ ಶ್ರಮಿಸಿದರು. ಅನೇಕ ಹಿರಿಯ ರಾಜಕೀಯ ಚಿಂತಕರ ಆದರ್ಶವಾದವನ್ನು ಅರಸರು ನಂಬಿದ್ದರು. ಗಾಂಧೀಜಿಯವರ ಚಿಂತನೆಯನ್ನು ರಾಜ್ಯದಲ್ಲಿ ಅನುಷ್ಠಾನಕ್ಕೆ ತರಲು ಪ್ರಯತ್ನಿಸಿದವರು. ಭಾರತೀಯ ನೆಲದಲ್ಲಿ ಜಾತಿಗಳನ್ನು ತೊರೆದು ಹಾಕುವ ಅತ್ಯುನ್ನತ ಚಿಂತನೆ ಅವರದಾಗಿತ್ತು. ಯುವಕರು ಕ್ರೀಡೆಯಲ್ಲಿ ಸಕ್ರೀಯವಾಗಿ ಭಾಗವಹಿಸಲು ಕ್ರೀಡೆಗೆ ಹೆಚ್ಚಿನ ಯೋಜನೆ ರೂಪಿಸಿದರು. ಪರಿಶಿಷ್ಟ ಜಾತಿ ವರ್ಗಗಳಿಗೆ ನಿವೇಶನ ಹಂಚಿದರು. ಇಂತಹ ಮಹತ್ವಾಕಾಂಕ್ಷೆ ಚಿಂತನೆಯನ್ನು ಹೊಂದಿದ್ದರು. ಬಡ ಮಕ್ಕಳಿಗೆ ಹೈಸ್ಕೂಲ ಶಿಕ್ಷಣಕ್ಕೆ ಶುಲ್ಕ ವಿನಾಯತಿಯನ್ನು ಮಾಡಿದರು. ಹೀಗೆ ಅರಸರು ಅನೇಕ ಚಿಂತನೆಗಳನ್ನು ಹೊಂದಿ ಅವುಗಳನ್ನು ಕಾರ್ಯಗತಗೊಳಿಸಿದವರು.

ದೇವರಾಜ ಅರಸರು ತಮ್ಮ ಅಧಿಕಾರ ಅವಧಿಯಲ್ಲಿ ಅನೇಕ ಜನಪರ ಕೆಲಸಗಳನ್ನು ಮಾಡಿದ್ದಾರೆ. ಅಂತಹವುಗಳಲ್ಲಿ ಕೆಲವನ್ನು ಇಲ್ಲಿ ಕೊಡಲಾಗಿದೆ.

೧. ಅರಸರು ಮೊದಲು ಮಾಡಿದ ಕಾರ್ಯವೆಂದರೆ ತಲೆಯ ಮೇಲೆ ಮಲ ಹೊರುವ ಅಮಾನವೀಯ ಕ್ರಮವನ್ನು ೧೯೭೩ರ ಅಗಷ್ಟ-೧೫ರ ಮಂತ್ರಿಮಂಡಲದ ಸಭೆಯಲ್ಲಿ ನಿಷೇಧಿಸಲು ನಿರ್ಧರಿಸುವುದು.

೨. ಭೂನ್ಯಾಯ ಮಂಡಳಿಗಳನ್ನು ಜನತಾ ಪ್ರತಿನಿಧಿಗಳ ಮೂಲಕ ಪ್ರತಿ ತಾಲೂಕಿಗೆ ಒಂದರಂತೆ ಸ್ಥಾಪಿಸಲಾಯಿತು.

೩. ಹಿಂದುಳಿದ ವರ್ಗಗಳಿಗೆ ಶಿಕ್ಷಣ ಹಾಗೂ ನೌಕರಿಯಲ್ಲಿ ಹೆಚ್ಚಿನ ಮೀಸಲಾತಿ ಲಭಿಸಬೇಕೆಂಬ ಉದ್ದೇಶದಿಂದ ಹಾವನೂರ ಅವರ ನೇತೃತ್ವದಲ್ಲಿ ಹಿಂದುಳಿದ ವರ್ಗಗಳ ಆಯೋಗವನ್ನು ರಚಿಸಿದರು.

೪. ರಾಜ್ಯದಲ್ಲಿ ಶೇ.೧೪ರಷ್ಟು ಇರುವ ಪರಿಶಿಷ್ಟ ಜಾತಿಯವರನ್ನು ಸೇರಿಸಿಕೊಂಡು ಮೀಸಲಾತಿಯನ್ನು ನೀಡಿದರು. ಸರ್ಕಾರಿ ಕೈಗಾರಿಕೆಗಳು ನಿಗಮಗಳು ಮಂಡಳಿಗಳು ಹಾಗೂ ಅನುದಾನ ಪಡೆದ ಶಿಕ್ಷಣ ಸಂಸ್ಥೆಗಳಿಗೂ ನೌಕರಿಯ ಆಯ್ಕೆ ಬಡತಿ ಹಾಗೂ ವಿದ್ಯಾರ್ಥಿಗಳು ಶಿಕ್ಷಣ ಸಂಸ್ಥೆಗಳಲ್ಲಿ ಪ್ರವೇಶ ನೀಡುವ ವಿಚಾರಕ್ಕೂ ಮೀಸಲಾತಿಯನ್ನು ನೀಡಿದರು.

೫. ಹಿಂದುಳಿದ ವರ್ಗಗಳ ಹಾಗೂ ಅಲ್ಪಸಂಖ್ಯಾತರ ಇಲಾಖೆಯನ್ನು ಸ್ಥಾಪಿಸಲಾಯಿತು.

ಈ ಮೇಲಿನ ಧ್ಯೇಯೋದ್ದೇಶ ಇಡೇರಿಕೆಗಾಗಿ ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಮಂಡಳಿಯು ಅಸ್ತಿತ್ವಕ್ಕೆ ಬಂದು ಇದಕ್ಕೆ ಒಬ್ಬ ನಿರ್ದೇಶಕರನ್ನು ನೇಮಿಸಲಾಯಿತು. ಹೀಗೆ ಅವರ ಕಾರ್ಯ ಜನಪರವಾಯಿತು. ಮತ್ತು ೧೯೭೪ರಲ್ಲಿ ನವಿಲುತೀರ್ಥ ಯೋಜನೆ ಪ್ರಾರಂಭಿಸಲಾಯಿತು. ೧೯೭೭ರ ನವ್ಹಂಬರ್ ೧ರಿಂದ ಕನ್ನಡ ಆಡಳಿತ ಭಾಷೆಯಾಗಿ ಬಳಸಲಾಗುವುದು ಎಂದು ಘೋಷಿಸಿದರು. ನಿರುದ್ಯೋಗಿ ಪದವಿಧರರಿಗೆ ಸ್ವೈಫಂಡರಿ ಯೋಜನೆಯಂತೆ ೧೩೦೦೦ಜನ ಉದ್ಯೋಗ ಪಡೆದರು. ಕಾಳಿ ವಿದ್ಯುತ್ ಯೋಜನೆ, ಜನತಾ ಮನೆ ಯೋಜನೆ ೩ ಲಕ್ಷಕ್ಕೂ ಅಧಿಕ ಜನರಿಗೆ ನಿವೇಶನ ಒದಗಿಸಲಾಯಿತು. ವಿಶ್ವವಿದ್ಯಾಲಯಗಳಿಗೆ ಏಕರೂಪ ಕಾನೂನು, ನೌಕರರ ವೇತನ ಪುನರ್

ವಿಮರ್ಶೆ ಆಯೋಗ ರಚಿಸಿ ಅದರ ನಿರ್ಣಯಗಳನ್ನು ಕಾರ್ಯಚರಣೆಗೆ ತರಲಾಗಿದೆ. ಸಿಬ್ಬಂದಿಯ ಬ್ಯಾಂಕ ಖಾತೆಗೆ ವೇತನ ಜಮಾಯಿಸುವ ಮಹತ್ವದ ನಿರ್ಧಾರ ತೆಗೆದುಕೊಂಡರು. ಇದರಿಂದ ಖಾಸಗಿ ಶಿಕ್ಷಣ ಸಂಸ್ಥೆಗಳನ್ನು ನಿಯಂತ್ರಣ ಮಾಡಲಾಯಿತು.

ಒಟ್ಟಾರೆಯಾಗಿ ಕರ್ನಾಟಕದಲ್ಲಿ ಅರಸು ಆಡಳಿತ ತನ್ನದೇ ಆದ ಸಾಧನೆಯನ್ನು ಮಾಡಿದೆ. ಬಡ ಬಗ್ಗರ ಪ್ರಗತಿಗಾಗಿ ಅನೇಕ ದೃಢ ನಿರ್ಧಾರ ಕೈಗೊಂಡರು. ಭೂ-ಸುಧಾರಣೆ ಅವರ ಗಣ್ಯ ಸಾಧನೆ. ಕೈಗಾರಿಕಾ ಕ್ಷೇತ್ರದಲ್ಲೂ ರಾಜ್ಯವು ಆಗ ಗಣನೀಯ ಪ್ರಗತಿ ಸಾಧಿಸಿತು. ಅರಸು ಒಳ್ಳೆಯ ಹೋರಾಟಗಾರ, ದುಡಿಮೆಗಾರ, ಹಾಗೂ ಗಾಂಧೀವಾದಿಯಾಗಿದ್ದರೂ ಮಾರ್ಕ್ಸವಾದದಲ್ಲಿ ಅವರಿಗೆ ಅಪಾರ ನಂಬಿಕೆ. ಭಾರತದ ಇತಿಹಾಸದಲ್ಲಿ ಜಾತಿಗಳೇ ಮುಖ್ಯವಾಗಿರುವ ಸಂದರ್ಭದಲ್ಲಿ ಹಿಂದುಳಿದ ವರ್ಗಗಳಿಗೆ ಸೂಕ್ತ ಸ್ಥಾನ ನೀಡಬೇಕೆಂದರು. ರಾಜ್ಯದಲ್ಲಿ ವಿಶೇಷವಾಗಿ ಕ್ರೀಡೆ, ಸಾಂಸ್ಕೃತಿಕ ಚಟುವಟಿಕೆಗಳಿಗೆ ಪ್ರೋತ್ಸಾಹಿಸಿದರು. ಹೀಗೆ ದೇವರಾಜ ಅರಸು ಅವರ ಸದೃಢ ಆಡಳಿತ ಕರ್ನಾಟಕ ರಾಜ್ಯವನ್ನು ಸುಭೀಕ್ಷೆಗೊಳಿಸಿತು. ಅರಸು ಅವರು ಹಿಂದುಳಿದವರ ಪರವಾಗಿ ಅಪಾರ ಕೆಲಸ ಮಾಡಿದರು. ಇಂದಿಗೂ ಅರಸರನ್ನು ಅವರ ಸಾಧನೆಗಳು ಸದಾಕಾಲ ನೆನಪಿನಲ್ಲಿ ಇರುವಂತೆ ಮಾಡಿವೆ.

ಆರ್. ಗುಂಡೂರಾವ್

ಆರ್. ಗುಂಡೂರಾವ್ ಅವರು ಕೊಡಗು ಜಿಲ್ಲೆಯ ಸೋಮವಾರ ಪೇಟೆಯ ಕುಶಾಲನಗರದಲ್ಲಿ ೧೯೩೭ರ ಏಪ್ರೀಲ್-೮ರಂದು ಜನಿಸಿದರು. ತಂದೆ ಕೆ. ರಾಮರಾವ್ ಶಾಲಾ ಮಾಸ್ತರರಾಗಿದ್ದರು. ತಂದೆಯವರು ಸರಳ ಸಜ್ಜನಿಕೆ, ಪ್ರಾಮಾಣಿಕ ವ್ಯಕ್ತಿಯಾಗಿದ್ದರು. ತಾಯಿ-ಚಿನ್ನಮ್ಮ ಇವರು ಧರ್ಮಭಕ್ತಿ ಸಂಪ್ರದಾಯ ಶರಣೆಯಾಗಿದ್ದರು. ಗುಂಡೂರಾವ್ ಓದಿದ್ದು ಕೇವಲ ಇಂಟರ್ ಮಿಡಿಯೆಟ್, ಶಾಲಾ ಶಿಕ್ಷಣ ಅವರನ್ನೂ ಹೆಚ್ಚು ಆಕರ್ಷಿಸಲಿಲ್ಲ. ಸಾರ್ವಜನಿಕ ಜೀವನ ಅವರ ಗಮನ ಸೆಳೆಯಿತು.

ರಾಜಕೀಯದಲ್ಲಿ ಏನೂ ಅರಿಯದ ಆರ್. ಗುಂಡೂರಾವ್ ಅವರು ಕಾಂಗ್ರೆಸ್‌ನ ವಿರುದ್ಧ ಸ್ವಂತ ಪಕ್ಷವನ್ನು ಸ್ಥಾಪಿಸಿ ರಾಜಕೀಯಕ್ಕೆ ಧುಮಕಿದರು. ಪಕ್ಷಕ್ಕೆ 'ಆರ್ ಗುಂಡೂರಾವ್ ಪಾರ್ಟಿ' ಎಂದು ನಾಮಕಾರಣ ಮಾಡಿ ಕುಶಾಲನಗರದಿಂದ ನಗರ ಸಭೆಗೆ ಸ್ಪರ್ಧಿಸಿದರು. ಕೊಡಗು ಜಿಲ್ಲೆಯ ಒಂಬತ್ತು ಸ್ಥಾನಗಳಿಗೆ ಸ್ಪರ್ಧಿಸಿ ಕಾಂಗ್ರೆಸ್‌ನ ವಿರುದ್ಧ ವಿಜಯ ಸಾಧಿಸಿ ಹೊರ ಹೊಮ್ಮಿದರು. ೧೯೬೧-೬೨ರಲ್ಲಿ ಅವರು ನಗರ ಸಭೆಯ

ಅಧ್ಯಕ್ಷರಾಗಿ ಕಾಂಗ್ರೆಸ್ಸಿನ ಹಳೆಯ ಹುಲಿಗಳನ್ನು ಮಣಿಸಿದರು. ಇವರ ರಾಜಕೀಯ ವರ್ಚಸ್ಸನ್ನು ಮೆಚ್ಚಿ ಕಾಂಗ್ರೆಸ್ಸಿನ ನಾಯಕರು ಗುಂಡೂರಾವ್ ಅವರನ್ನು ಬೇಗನೆ ಸೆಳೆದುಕೊಂಡರು. ಹೀಗೆ ನಂತರ ಕಾಂಗ್ರೆಸ್‌ನಲ್ಲಿ ಬೆಳೆದುಕೊಂಡರು. ವಿವಿಧ ಪದವಿಗಳನ್ನು ಗಳಿಸಿಕೊಂಡು ೧೯೭೨ರಲ್ಲಿ ಕೊಡಗಿನ ಸೋಮವಾರ ಪೇಟೆಯಿಂದ ವಿಧಾನಸಭೆಗೆ ಸ್ಪರ್ಧಿಸಿ ಸುಲಭ ಜಯ ಸಾಧಿಸಿದರು. ಒಂದೇ ವರ್ಷದಲ್ಲಿ ಮಂತ್ರಿಯಾದರು. ಆಗ ದೇವರಾಜ ಅರಸ ಮುಖ್ಯ ಮಂತ್ರಿಯಾಗಿದ್ದರು. ಈ ನಡುವೆ ರಾಷ್ಟ್ರ ರಾಜಕಾರಣದಲ್ಲಿ ಅಲ್ಲೋಲ ಕಲ್ಲೋಲ ಉಂಟಾಗಿ ತುರ್ತುಪರಿಸ್ಥಿತಿ ಘೋಷಣೆಯಾಯಿತು. ದೇವರಾಜ ಅರಸರು ಗುಂಡೂರಾವ್‌ರನ್ನು ಬಲಗೈ ಬಂಟನಾಗಿ ಮಾಡಿಕೊಂಡು ರಾಷ್ಟ್ರರಾಜಕಾರಣಕ್ಕೆ ಪರಿಚಯಿಸಿಕೊಟ್ಟರು. ೧೯೮೦ರಲ್ಲಿ ರಾಜ್ಯದ ಮುಖ್ಯಮಂತ್ರಿಯಾದರು.

ರಾಮಕೃಷ್ಣ ಹೆಗಡೆ

ಕರ್ನಾಟಕ ರಾಜಕೀಯ ಇತಿಹಾಸದಲ್ಲಿ ರಾಮಕೃಷ್ಣ ಹೆಗಡೆ ಒಬ್ಬ ಅಪರೂಪದ ರಾಜಕೀಯ ಚಿಂತಕ. ರಾಜ್ಯ ರಾಜಕಾರಣದಿಂದ ರಾಷ್ಟ್ರೀಯ ಮಟ್ಟದಲ್ಲಿ ಹೆಸರು ಮಾಡಿದವರು. ಹೆಗಡೆಯವರು ಬಾಲ್ಯದಿಂದಲೇ ಒಳ್ಳೆಯ ಸಂಸ್ಕಾರ ಹಾಗೂ ಶಿಕ್ಷಣವನ್ನು ಪಡೆದವರು. ಸರಸ್ವತಮ್ಮ ಹಾಗೂ ಮಹಾಬಲೇಶ್ವರ ದಂಪತಿಗಳ ಮಗನಾಗಿ ಹೆಗಡೆ ೧೯೨೭ರಲ್ಲಿ ಕೃಷಿಕ ಮನೆತನದಲ್ಲಿ ಜನಿಸಿದರು. ಹವ್ಯಕ ಸಮಾಜದಲ್ಲಿ ಹುಟ್ಟಿದ ಹೆಗಡೆಯವರಿಗೆ ಆರ್ಯಸಂಸ್ಕೃತಿಯ ಸಂಪ್ರದಾಯ, ಶಿಸ್ತು, ನಿಷ್ಠೆ, ತಾಳ್ಮೆಗಳನ್ನು ಕಲಿಸಿಕೊಟ್ಟಿತು. ರಾಮಕೃಷ್ಣ ಹೆಗಡೆಯವರು ಲಖನೌದಲ್ಲಿ ರಾಜಕೀಯ ಶಾಸ್ತ್ರದ ಎಂ.ಎ. ಮತ್ತು ಎಲ್.ಎಲ್.ಬಿ. ಪದವಿ ಪಡೆದುರು ನಂತರ ಶಿರಸಿಯಲ್ಲಿ ವಕೀಲಿವೃತ್ತಿಯನ್ನು ಪ್ರಾರಂಭಿಸಿದರು.

೧೯೫೪ರಲ್ಲಿ ಉತ್ತರ ಕನ್ನಡ ಜಿಲ್ಲೆಯ ಜಿಲ್ಲಾ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರಾಗಿ ರಾಜಕೀಯ ಪ್ರವೇಶ ಮಾಡಿದರು. ೧೯೫೭ರಲ್ಲಿ ಶಿರಸಿ–ಸಿದ್ದಾಪೂರ ಮತಕ್ಷೇತ್ರದಿಂದ ಅಂದಿನ ಮೈಸೂರು ರಾಜ್ಯ ವಿಧಾನ ಸಭೆಗೆ ಪ್ರಚಂಡ ಬಹುಮತದಿಂದ ಆಯ್ಕೆಯಾದರು. ಶಿರಸಿಯಲ್ಲಿ ಗೇಣಿದಾರರ ಚಳಿವಳಿಯನ್ನು ಹುಟ್ಟುಹಾಕಿ ಅನೇಕ ರೈತರನ್ನು ಸಂಘಟಿಸಿ ಚಳುವಳಿಯನ್ನು ಪ್ರಾರಂಭಿಸಿದರು. ಬಹುಬೇಗನೆ ರಾಜಕೀಯದಲ್ಲಿ ಉನ್ನತ ಮಟ್ಟಕ್ಕೇರಿದರು. ಮತ್ತು ಎಸ್. ನಿಜಲಿಂಗಪ್ಪನವರ ಸಚಿವ ಸಂಪುಟದಲ್ಲಿ ಯೋಜನೆ ಹಾಗೂ ಅಭಿವೃದ್ಧಿ ಖಾತೆ

ಪಡೆದರು. ನಂತರ ೧೯೫೮ರಲ್ಲಿ ಮೈಸೂರು ಕಾಂಗ್ರೆಸ್ ಪಕ್ಷದ ಪ್ರಧಾನ ಕಾರ್ಯದರ್ಶಿಯಾಗಿ ನೇಮಕವಾಗಿ ಪಕ್ಷ ಸಂಘಟನೆ ಮಾಡಿದರು.

೧೯೮೩ ಜನೇವರಿಯಲ್ಲಿ ಜರುಗಿದ ವಿಧಾನಸಭೆಯ ಚುನಾವಣೆಯಲ್ಲಿ ಕರ್ನಾಟಕದ ಜನತಾ ಪಕ್ಷಕ್ಕೆ ಜಯ ತಂದು ಕೊಟ್ಟು ರಾಜ್ಯದ ಮುಖ್ಯಮಂತ್ರಿಯಾದರು. ೧೯೮೫ರ ಜನೇವರಿಯಲ್ಲಿ ಜರುಗಿದ ಚುನಾವಣೆಯಲ್ಲಿ ಮತ್ತೊಮ್ಮೆ ಜನತಾ ಪಕ್ಷ ಅಧಿಕಾರಕ್ಕೇರಿತು. ಜನತಾ ಪಕ್ಷದ ಮುಖಂಡರಾಗಿದ್ದ ರಾಮಕೃಷ್ಣ ಹೆಗಡೆ ಮತ್ತೆ ಮುಖ್ಯಮಂತ್ರಿಗಳಾಗಿ ನೇಮಕವಾದರು. ಮುಖ್ಯಮಂತ್ರಿಯಾದ ಮೇಲೆ ಅನೇಕ ಜನಪರ ಕೆಲಸಗಳನ್ನು ಮಾಡಿದ್ದಾರೆ. ಅವುಗಳಲ್ಲಿ ಕೆಲವೊಂದನ್ನು ಇಲ್ಲಿ ನೀಡಲಾಗಿದೆ.

ರಾಷ್ಟ್ರಮಟ್ಟದಲ್ಲಿ ಹೆಸರು ಮಾಡಿದ ಕರ್ನಾಟಕದ ಅತ್ಯಂತ ಕ್ರೀಯಾಶೀಲ ಮುಖ್ಯಮಂತ್ರಿ ರಾಮಕೃಷ್ಣ ಹೆಗಡೆ. ಹೆಗಡೆಯವರು ಸಾಮಾಜಿಕ ಕಳಕಳಿಯ ರಾಜಕೀಯ ಚಿಂತಕರು. ಅಧಿಕಾರ ವಿಕೇಂದ್ರೀಕರಣ ಅವರ ಪ್ರಮುಖ ಚಿಂತನೆ. ಇವರು ಜಿಲ್ಲಾ ಪರಿಷತ್, ತಾಲೂಕು ಪಂಚಾಯತ, ಮಂಡಳ ಪಂಚಾಯತ ಮತ್ತು ನ್ಯಾಯ ಪಂಚಾಯತ ಕಾಯ್ದೆಯನ್ನು ಅನುಷ್ಠಾನಕ್ಕೆ ತಂದು ಅಧಿಕಾರ ವಿಕೇಂದ್ರೀಕರಣದತ್ತ ಮುನ್ನೆಡೆದು ರಾಜ್ಯದ ಆಡಳಿತ ಇಡೀ ದೇಶಕ್ಕೆ ಮಾದರಿಯಾಗುವ ಹಾಗೆ ತಮ್ಮ ಚಿಂತನೆಯನ್ನು ಕಾರ್ಯ ರೂಪಕ್ಕೆ ತಂದವರು. ಇವರು ಮೌಲ್ಯಾಧಾರಿತ ರಾಜಕಾರಣದ ಪರಿಕಲ್ಪನೆಯನ್ನು ಪ್ರಚಾರಗೊಳಿಸಿದವರು. ಜೊತೆಗೆ ಪಕ್ಷಾಂತರ ವಿರುದ್ದ ಕ್ರಮ ಜರುಗಿಸುವ ಕಾಯ್ದೆಯನ್ನು ಅನುಷ್ಠಾನಕ್ಕೆ ತಂದರು. ಹೆಗಡೆಯವರು ರೈತರ ಸಮಸ್ಯೆ ಹಾಗೂ ಕುಡಿಯುವ ನೀರಿಗೆ ಕೊಳವೆ ಭಾವಿ ನಿರ್ಮಾಣ ಮಾಡಿಸುವುದರ ಮೂಲಕ ಹಳ್ಳಿ ಪಟ್ಟಣಗಳಿಗೆ ನೀರಿನ ಸೌಲಭ್ಯವನ್ನು ಒದಗಿಸಿದವರು ಇವರ ಪ್ರಮುಖ ಚಿಂತನೆಯಲ್ಲೊಂದಾದ ಹಸಿರುಗೊಳಿಸುವ ಕಾರ್ಯಕ್ರಮವೂ ಒಂದಾಗಿದೆ. ಕೈಗಾರಿಕರಣದಿಂದ ಪರಿಸರ ನಾಶವನ್ನು ತಡೆಗಟ್ಟುವ ನಿಟ್ಟಿನಲ್ಲಿ ನಗರ ಪ್ರದೇಶದ ಪ್ರತಿಯೊಂದು ಬಡಾವಣೆಗಳಿಗೆ ಉದ್ಯಾನವನ್ನು ನಿರ್ಮಿಸಿದರು. ಅದರಿಂದ "ಮನೆಯೊಂದು ಮರ ಒಂದು" ಎಂಬ ಕಾರ್ಯಕ್ರಮ ಹಮ್ಮಿಕೊಳ್ಳುವುದರ ಮೂಲಕ ಪರಿಸರದ ಕಾಳಜಿಯನ್ನು ತಮ್ಮ ರಾಜಕೀಯ ಚಿಂತನೆಯಲ್ಲಿ ಅಳವಡಿಸಿಕೊಂಡಿದ್ದಾರೆ.

ಮುಖ್ಯಮಂತ್ರಿಯಾದ ನಂತರ ಇವರು ಲೋಕಾಯುಕ್ತರ ರಚನೆ ಮಾಡಿದ್ದು ಇತಿಹಾಸವಾಗಿದೆ. ಇದೇ ರೀತಿ ಅವರ ಮುಂದಾಳತ್ವದಲ್ಲಿ ಜಿಲ್ಲಾ, ಮಂಡಳ ಪಂಚಾಯತಿ

ಕಾಯ್ದೆಯ ಅನುಷ್ಠಾನ, ಅಧಿಕಾರ ವಿಕೇಂದ್ರಿಕರಣ, ಕೊಳವೆ ಬಾವಿ ನಿರ್ಮಾಣ ನೀರಿಲ್ಲದೇ ಕಂಗೆಡುತ್ತಿದ್ದ ಹಳ್ಳಿ ಪಟ್ಟಣಗಳಲ್ಲಿ ನೀರಿನ ಯೋಜನೆಗಳನ್ನು ಹಾಗೂ ಪರಿಸರ ಸಂರಕ್ಷಣೆಗೆ ಸೂಕ್ತ ಕ್ರಮ ಕೈಗೊಂಡರು. ಮನೆಗಳ ಮುಂದೆ ಮರಗಳನ್ನು ನೆಡಲಾಯಿತು. ಕ್ಯಾಪಿಟೇಶನ್ ಶುಲ್ಕ ರದ್ದುಗೊಳಿಸುವ ಕ್ರಮಕೈಗೊಳ್ಳಲಾಯಿತು. ಅನೇಕ ಸಾಮಾಜಿ, ಧಾರ್ಮಿಕ ಆರ್ಥಿಕ ಚಟುವಟಿಕೆಗಳ ಮೂಲಕ ರಾಜ್ಯದ ಜನತೆಯ ಗಮನ ತನ್ನತ್ತ ಸೆಳೆದುಕೊಂಡರು.

ಹೆಗಡೆಯವರು ಸ್ವಂತ ಬಲದಿಂದ ಮುಖ್ಯಮಂತ್ರಿಯಾಗಿ ಆಳ್ವಿಕೆ ನಡೆಸಿದ ಒಬ್ಬ ರಾಜಕೀಯ ಮುತ್ಸದ್ಧಿಯಾದರು. ತಮ್ಮ ಆಳ್ವಿಕೆ ಅವಧಿಯಲ್ಲಿ ಅನೇಕ ಕಷ್ಟ-ನಷ್ಟಗಳನ್ನು ಅನುಭವಿಸಿ ರಾಜ್ಯದಲ್ಲಿ ಅತ್ಯಂತ ಭೀಕರ ಬರಗಾಲ ಪರಿಸ್ಥಿಯ ಸಂದರ್ಭದಲ್ಲಿ ಎದೆಗುಂದದೆ ಅನೇಕ ಕೆಲಸಗಳನ್ನು ಮಾಡಿದರು. ಮುಂದೆ ರಾಮಕೃಷ್ಣ ಹೆಗಡೆಯವರ ಮೇಲೆ ಕೆಲ ಆಪಾದನೆಗಳು ಬಂದಾಗ ಮುಖ್ಯಮಂತ್ರಿ ಹುದ್ದೆ ತ್ಯಜಿಸಿ, ರಾಜಕೀಯದ ತೆರೆ ಮರೆಯಲ್ಲಿದ್ದುಕೊಂಡು ಕೆಲಸ ಮಾಡಿದರು.

ಎಸ್.ಆರ್. ಬೊಮ್ಮಾಯಿ

ಧೀಮಂತ ವ್ಯಕ್ತಿತ್ವದ ನಿಸ್ವಾರ್ಥ, ಕರ್ಮ ನಿಷ್ಠ ಬಹುಬುದ್ಧಿಶಾಲಿ ಅಲ್ಲದೇ ಹಿರಿಯ ಮುತ್ಸದ್ದಿಯಾದ ಶ್ರೀ ಸೋಮಪ್ಪ ರಾಯಪ್ಪ ಬೊಮ್ಮಾಯಿಯವರು ಹೆಗಡೆಯವರ ನಂತರ ಕರ್ನಾಟಕದ ಮುಖ್ಯಮಂತ್ರಿಯಾಗಿ ಅಧಿಕಾರ ಸ್ವೀಕರಿಸಿದರು. ಎಸ್.ಆರ್. ಬೊಮ್ಮಾಯಿಯವರು ಜನಿಸಿದ್ದು ಜೂನ್-೬, ೧೯೨೪ರಂದು ಧಾರವಾಡ ಜಿಲ್ಲೆಯ ಶಿಗ್ಗಾಂವಿ ತಾಲೂಕಿನ ಕರಡಗಿಯಲ್ಲಿ. ತಂದೆ ರಾಯಪ್ಪ ತಾಯಿ ಶ್ರೀಮತಿ ಶಿವಮ್ಮ. ಬೊಮ್ಮಾಯಿಯವರದು ರೈತ ಕುಟುಂಬ ತಂದೆ ತಾಯಿಯವರು ಮಗನಿಗೆ ಇರಿಸಿದ ಪ್ರೀತಿಯ ಹೆಸರು-ಸೋಮಪ್ಪ. ಬೊಮ್ಮಾಯಿ ಎಂಬುದು ಅವರ ಮನೆತನದ ಹೆಸರಾಗಿದೆ. ಇವರ ಪ್ರಾಥಮಿಕ ಹಾಗೂ ಹೈಸ್ಕೂಲು ವಿದ್ಯಾಭ್ಯಾಸ ಕಮಡೊಳ್ಳಿ, ಪದವಿ ಅಭ್ಯಾಸ ಹಾಗೂ 'ಕಾನೂನು' ಪದವಿ ಹುಬ್ಬಳ್ಳಿಯಲ್ಲಿ.

೧೯೬೭ರಲ್ಲಿ ಲೋಕಸೇವಕ ಸಂಘದ ವತಿಯಿಂದ ಕರ್ನಾಟಕದ ವಿಧಾನಸಭೆಗೆ ಕುಂದಗೋಳ ಕ್ಷೇತ್ರದಿಂದ ಸ್ಪರ್ಧಿಸಿ ಜಯಗಳಿಸಿದರು ರಾಜಕೀಯ ಪ್ರವೇಶಕ್ಕೆ ಈ ಜಯ ನಾಂದಿಯಾಯಿತು. ೧೯೬೯ರಲ್ಲಿ ಇವರು ಇಂಡಿಯನ್ ನ್ಯಾಷನಲ್ ಕಾಂಗ್ರೆಸ್ ಸೇರಿದರು. ೧೯೭೨ರಲ್ಲಿ ಸ್ಥಳೀಯ ಸಂಸ್ಥೆಗಳ ಮತಕ್ಷೇತ್ರದಿಂದ ವಿಧಾನ ಪರಿಷತ್‌ಗೆ ಆಯ್ಕೆಗೊಂಡರು.

೧೯೭೬-೭೭ರಲ್ಲಿ ಇವರು ವಿಧಾನ ಪರಿಷತ್‌ನಲ್ಲಿ ವಿರೋಧ ಪಕ್ಷದ ನಾಯಕರಾಗಿದ್ದುಕೊಂಡು ಬಹು ಸಮರ್ಥರೀತಿಯಲ್ಲಿ ಕಾರ್ಯನಿರ್ವಹಿಸಿ ಎಲ್ಲರ ಮೆಚ್ಚುಗೆ ಗಳಿಸಿದರು.

ಶ್ರೀಯುತ ಎಸ್.ಆರ್. ಬೊಮ್ಮಾಯಿಯವರು ಮೊದಲಿನಿಂದಲು ತಮ್ಮ ರಾಜಕೀಯ ಚಿಂತನೆಯಲ್ಲಿ ಹಿಂದುಳಿದ ಜನಾಂಗದ ಪ್ರಗತಿಗಾಗಿ ಪ್ರೋತ್ಸಾಹ ನೀಡುತ್ತಾ ಸಾಗಿದವರು. ಹಿಂದುಳಿದ ಜನಾಂಗದವರಿಗಾಗಿಯೇ ಮೀಸಲಾದ ಸಂಸತ್ತಿನ ಕಮೀಟಿಯ ಅಧ್ಯಕ್ಷರಾಗಿ ಹಲವು ನಿಟ್ಟಿನಲ್ಲಿ ತಮ್ಮ ಚಿಂತನೆಯನ್ನು ಅನುಷ್ಠಾನಕ್ಕೆ ತಂದವರು ಪೋರ್ಚುಗೀಸರ ವಸಹಾತುವಾಗಿದ್ದ ಗೋವಾವನ್ನು ಸ್ವತಂತ್ರ್ಯಗೊಳಿಸಲು "ಗೋವಾ ವಿಮೋಚನ ಸಂಸ್ಥೆ" ಸ್ಥಾಪಿಸುವುದರ ಮೂಲಕ ಯಶಸ್ಸನ್ನು ಪಡೆದವರು. ಅನೇಕ ಶಾಲಾ ಕಾಲೇಜುಗಳನ್ನು ತೆರೆಯುವುದರ ಮೂಲಕ ಶೈಕ್ಷಣಿಕ ಪ್ರಗತಿ ಸಾಧಿಸಿದರು. ಕೃಷಿ ಕ್ಷೇತ್ರದ ಅಭಿವೃದ್ಧಿಗೆ ಹೆಚ್ಚಿನ ಒತ್ತನ್ನು ನೀಡಿದವರು. ಪಂಚಾಯತ್ ರಾಜ್ ಯೋಜನೆಗೆ ಒಂದು ವ್ಯವಸ್ಥಿತ ರೂಪವನ್ನು ನೀಡಿದರು. ಜಿಲ್ಲಾ ಮತ್ತು ಮಂಡಳ ಪಂಚಾಯತ್ ಸ್ಥಾಪನೆಗೆ ಕಾರ್ಯಯೋಜನೆಯನ್ನು ರೂಪಿಸಿದರು. ರಾಜ್ಯದಲ್ಲಿ ಏಕರೂಪ ಯೋಜನೆಗಳನ್ನು ಕಾರ್ಯಗತಗೊಳಿಸಲು ಶ್ರಮಿಸಿದವರು. ಕೇಂದ್ರ ಸರ್ಕಾರಿ ಘಟಕಗಳಲ್ಲಿ ಕನ್ನಡಿಗರಿಗೆ ನೌಕರಿಯಲ್ಲಿ ಆಗುತ್ತಿರುವ ಅನ್ಯಾಯವನ್ನು ಗಮನಿಸಿ ಕನ್ನಡಿಗ ಉದ್ಯೋಗ ಸಮಿತಿಯನ್ನು ನೇಮಿಸಿದರು. ಇದರಿಂದ ತಮ್ಮ ರಾಜ್ಯಾಡಳಿತ ವ್ಯವಸ್ಥೆಯಲ್ಲಿ ಪ್ರತಿಹಂತದಲ್ಲಿ ಕನ್ನಡಕ್ಕೆ ಆದ್ಯತೆಯನ್ನು ನೀಡಿದವರು. ಶಾಲೆಗಳ ಕಟ್ಟಡ ನಿರ್ಮಾಣ, ವಿದ್ಯುತ್, ವನಮಹೋತ್ಸವ ಕಾರ್ಯಕ್ರಮ, "ಕಲಿ-ಸಂಪಾದಿಸು" ಯೋಜನೆ ಹಸಿರು ಕಾರ್ಡ ಯೋಜನೆ ಮುಂತಾದವು ಇವರ ರಾಜಕೀಯ ಚಿಂತನೆಯಲ್ಲಿ ಜೀವ ಪಡೆದು ಕಾರ್ಯರೂಪಕ್ಕೆ ಬಂದಂತವು.

೧೯೭೭ರಲ್ಲಿ ಜನತಾ ಪಾರ್ಟಿ ಸ್ಥಾಪನೆಗೊಂಡಾಗ ಇವರು ಕರ್ನಾಟಕ ಘಟಕದ ಅಧ್ಯಕ್ಷರಾದರು. ೧೯೮೩ ಮತ್ತು ೧೯೮೫ರಲ್ಲಿ ಹುಬ್ಬಳ್ಳಿ ಗ್ರಾಮೀಣ ಮತಕ್ಷೇತ್ರದಿಂದ ವಿಧಾನಸಭೆ ಚುನಾವಣೆಯಲ್ಲಿ ಬಹುಮತದಿಂದ ಆರಿಸಿ ಬಂದರು. ೧೯೮೮ರಲ್ಲಿ ರಾಮಕೃಷ್ಣ ಹೆಗಡೆಯವರ ಸರ್ಕಾರ ಪತನವಾದ ನಂತರ ಎಸ್.ಆರ್. ಬೊಮ್ಮಾಯಿಯವರು ಜನತಾ ಪಕ್ಷದ ಮೂಲಕ ಆಗಸ್ಟ ೧೨, ೧೯೮೮ರಂದು ಕರ್ನಾಟಕ ಮುಖ್ಯಮಂತ್ರಿಯಾದರು.

ಎಸ್.ಆರ್. ಬೊಮ್ಮಾಯಿ ಅವರ ಸಾಧನೆಗಳು ರಾಜ್ಯದಲ್ಲಿ ಹಚ್ಚಹಸಿರಾಗಿವೆ. ಶ್ರೀ ಬೊಮ್ಮಾಯಿ ಹಿಂದಿನಿಂದಲೂ ಹಿಂದುಳಿದ ಜನಾಂಗದವರ ಪ್ರಗತಿಗಾಗಿ ಸಾಕಷ್ಟು ಪ್ರೋತ್ಸಾಹ ನೀಡುತ್ತಲೇ ಬಂದಿದ್ದಾರೆ. ಹಿಂದುಳಿದ ಜನಾಂಗದವರಿಗಾಗಿ ನಿಯುಕ್ತಗೊಂಡಿದ್ದ ಪಾರ್ಲಿಮೆಂಟರಿ ಕಮೀಟಿಯ ಅಧ್ಯಕ್ಷರಾಗಿ ಇವರು ಅಮೋಘ ಕೆಲಸ ಮಾಡಿದ್ದಾರೆ. ಬಾಬರಿ ಮಸೀದೆ ಕೆಡವಿದ ಹಿನ್ನೆಲೆಯ ಅಧ್ಯಯನ ನಡೆಸಲು ಕೇಂದ್ರ ಸರ್ಕಾರ ನೇಮಿಸಿದ್ದ ಸಮಿತಿಯ ಅಧ್ಯಕ್ಷರಾಗಿ ನೀಡಿರುವ ವರದಿ ಒಂದು ಚರಿತ್ರಾರ್ಹವಾಗಿದೆ. ಗೋವಾ ವಿಮೋಚನೆಗಾಗಿ ಹೋರಾಡಿದರು. ಶಾಲಾ ಕಾಲೇಜುಗಳಿಗೆ ಹೆಚ್ಚಿನ ಪ್ರೋತ್ಸಾಹ ನೀಡಿದ್ದಾರೆ. ಕೃಷಿ ಕೇಂದ್ರದ ಅಭಿವೃದ್ಧಿಗಾಗಿ ಶ್ರಮಿಸಿದ ಸಚಿವರಾಗಿದ್ದಾರೆ. ಕ್ಷಾಮ ನಿವಾರಣೆಗಾಗಿ ಇವರು ಕೈಕೊಂಡ ಕಾರ್ಯಕ್ರಮಗಳು, ಅಭಿವೃದ್ಧಿ ಚಟುವಟಿಕೆಗಳು ಜನಮನದಲ್ಲಿ ಹಸಿರಾಗಿ ಉಳಿದಿವೆ. ಆಡಳಿತದಲ್ಲಿ ಪಾರದರ್ಶಕತೆ ತಂದರು. ೧೯೮೮ರಲ್ಲಿ ಹೈದ್ರಾಬಾದ್-ಕರ್ನಾಟಕ ಡವಲಪ್‌ಮೆಂಟ್ ಕಮೀಟಿ ನೇಮಿಸಿ ಅದಕ್ಕೆ ೨ಕೋಟಿ ರೂಪಾಯಿಗಳನ್ನು ತೆಗೆದಿರಿಸಿದರು. ಕನ್ನಡಿಗರಿಗೆ ಉದ್ಯೋಗದಲ್ಲಿ ತಾರತಮ್ಯವನ್ನು ತೆಗೆದು ಹಾಕಿ "ಕನ್ನಡಿಗರಿಗೆ ಉದ್ಯೋಗ ಸಮೀತಿ" ನೇಮಿಸಿದರು. ೭೯,೦೦೦ ಕುಟುಂಬಗಳಿಗೆ ಹಸಿರುಕಾರ್ಡ ನೀಡುವ ಯೋಜನೆ ಜಾರಿಗೆ ತಂದರು. ಹೀಗೆ ನಿಸ್ವಾರ್ಥದ ವ್ಯಕ್ತಿತ್ವವನ್ನು ಹೊಂದಿರುವ ಅವರು ಮನ್ನಣೆಗೆ ಪಾತ್ರರಾಗಿದ್ದಾರೆ.

ಎಸ್. ಬಂಗಾರಪ್ಪ

ಶಿವಮೊಗ್ಗ ಜಿಲ್ಲೆಯ ಸಾರೆಕೊಪ್ಪದ ಬಂಗಾರಪ್ಪ ಚುರುಕು ಬುದ್ಧಿಯುಳ್ಳವರು, ಹುಟ್ಟು ಹೋರಾಟಗಾರರು ಆತ್ಮ ವಿಶ್ವಾಸದ ಉತ್ತಮ ರಾಜಕೀಯಪಟುವಾಗಿದ್ದಾರೆ. ಹಿಡಿದ ಕೆಲಸ ಸಾಧಿಸುವ ಹಠವಾದಿ. ಶ್ರೀ ಎಸ್. ಬಂಗಾರಪ್ಪನವರು ಕೇವಲ ರಾಜಕೀಯ ವ್ಯಕ್ತಿಯಲ್ಲ. ಸಾಹಿತ್ಯ, ಸಂಗೀತ ಪ್ರಿಯರೂ ಹೌದು. ಬಂಗಾರಪ್ಪನವರು ೧೯೩೩, ಅಕ್ಟೋಬರ್‌ನಲ್ಲಿ ಕಲ್ಲವ್ವ ಮತ್ತು ಕಲ್ಲಪ್ಪ ದಂಪತಿಗೆ ಮುದ್ದು ಮಗನಾಗಿ ಜನಿಸಿದರು. ಅವರ ಪ್ರಾಥಮಿಕ ಶಿಕ್ಷಣವು ೧೯೩೯ರಲ್ಲಿ ಶಿರಾಳಕೊಪ್ಪದಲ್ಲಿ ಮುಗಿಯಿತು. ಮುಂದೆ ದಾವಣಗೆರೆ ಹಾಗೂ ಮೈಸೂರಿನಲ್ಲಿ ಉನ್ನತ ಶಿಕ್ಷಣ ಮುಗಿಯಿತು. ತಮ್ಮ ವಿದ್ಯಾಭ್ಯಾಸದ ವೇಳೆಯಲ್ಲಿ ಲೋಹಿಯಾ ಅವರ ಚಿಂತನೆಗಳನ್ನು ಮೈಗೂಡಿಸಿಕೊಂಡರು.

ಎಸ್.ಬಂಗಾರಪ್ಪನವರು ಅಧಿಕಾರ ಅವಧಿಯಲ್ಲಿ ದೀನ ದಲಿತರ ಕ್ಷೇಮಕ್ಕಾಗಿ ತಮ್ಮ ಹಲವಾರು ಚಿಂತನೆಗಳನ್ನು ಕಾರ್ಯಗತಗೊಳಿಸಿದ್ದಾರೆ. ಅಕ್ಷಯ, ಆಶ್ರಯ ಮತ್ತು ವಿಶ್ವ ಯೋಜನೆಗಳು ಅತ್ಯಂತ ಪರಿಣಾಮಕಾರಿಯಾದವು. ಹಳ್ಳಿಯ ಬಡ ಮಕ್ಕಳನ್ನು ಶಾಲೆಗೆ ಸೇರಿಸುವಲ್ಲಿ ಕ್ರಮ ಕೈಗೊಂಡರು. ಹಳ್ಳಿಗಳಲ್ಲಿ ಸಂಪೂರ್ಣ ಸಾಕ್ಷರತೆಯನ್ನು ಸಾಧಿಸುವ ಯೋಜನೆ ಮತ್ತು ವಿದ್ಯಾರ್ಥಿ ವೇತನ ಯೋಜನೆ ಆರಂಭಿಸಿದರು. ವಸತಿ ರಹಿತರಿಗೆ ವಸತಿಗಳನ್ನು ನೀಡಿದರು. ಬಡವರ, ದಲಿತರ ಮನೆ ಬಾಗಿಲಿಗೆ ಹೋಗಿ ಆರೋಗ್ಯ ನೀಡುವ ಚಿಕಿತ್ಸಕ ಕಾರ್ಯಕ್ರಮಗಳನ್ನು ರೂಪಿಸಿದರು. ಗ್ರಾಮ ಮತ್ತು ಗುಡಿ ಕೈಗಾರಿಕೆಗಳ ಮೂಲಕ ಗ್ರಾಮ, ಹಾಗೂ ಕರ್ನಾಟಕದ ಆರ್ಥಿಕ ಶಕ್ತಿಯನ್ನು ಹೆಚ್ಚಿಸುವ ಸಲುವಾಗಿ ವಿಶ್ವೇಶ್ವರಯ್ಯ ಮತ್ತು ಮಹಾತ್ಮ ಗಾಂಧೀಜಿಯವರ ವಿಚಾರಗಳ ಬೆಳಕಿನಲ್ಲಿ ಹಲವು ಯೋಜನೆಗಳನ್ನು ಅನುಷ್ಠಾನಗೊಳಿಸಿದರು. ಬಡವರ ನೆಮ್ಮದಿಯ ಬಾಳಿಗಾಗಿ, ಸಾಂಸ್ಕೃತಿಕ ವಿಕಾಸಕ್ಕಾಗಿ 'ಆರಾಧನಾ' ಯೋಜನೆಗಳನ್ನು ರೂಪಿಸಲಾಗಿದೆ. ಪುರೋಹಿತ ಶಾಹಿಯನ್ನು ಅನುರ್ಜಿತಗೊಳಿಸುವ ಸಲುವಾಗಿ ಈ ಯೋಜನೆ ಜಾರಿಗೆ ತಂದರು. ಆರ್ಥಿಕ, ಸಾಮಾಜಿಕ, ಶೈಕ್ಷಣಿಕ ಹಾಗೂ ಸಾಂಸ್ಕೃತಿಕ ಕ್ರಾಂತಿಗೆ ನಾಂದಿ ಹಾಡಿದರು.

ಎಂ.ವೀರಪ್ಪ ಮೊಯಿಲಿ

ದಕ್ಷಿಣ ಕನ್ನಡ ಜಿಲ್ಲೆಯ ಅತ್ಯಂತ ಪ್ರಾಮಾಣಿಕ ವ್ಯಕ್ತಿ ಎನಿಸಿದ ಮೊಯಿಲಿಯವರು ಕಾರ್ಕಳ ತಾಲೂಕಿನ ಮೂಡಬಿದರೆಯ ಮಾರ್ಪಡಿಯಲ್ಲಿ ೧೯೪೦ ಜನೇವರಿ ೧೨ ರಂದು ತಂದೆ ತಮ್ಮಯ್ಯ, ತಾಯಿ ಪೂವಮ್ಮ ದಂಪತಿಗಳಿಗೆ ಜನಿಸಿದರು. ಇವರದು ಹಿಂದುಳಿದ ದೇವಾಡಿಗ ಮನೆತನ. ನಾರಾಯಣ ಮತ್ತು ವಾಸು ದೇವಾಡಿಗ ಇವರ ಸಹೋದರರಾಗಿದ್ದಾರೆ. ತಮ್ಮ ಪ್ರಾಥಮಿಕ ಶಿಕ್ಷಣವನ್ನು ಕಾರ್ಕಳದಲ್ಲಿ ಹಾಗೂ ವಿವಿಧ ಕಡೆ ಮುಗಿಸಿದ್ದಾರೆ. ಖಿ.ಜೆ. ಜೈನ ಕಾಲೇಜಿನಲ್ಲಿ ಹೈಸ್ಕೂಲ ಶಿಕ್ಷಣ ಹಾಗೂ ಸರ್ಕಾರಿ ಪದವಿ ಕಾಲೇಜಿನಲ್ಲಿ ಬಿ.ಎ. ಪಾಸ್ ಮಾಡಿದರು. ಕಾನೂನು ಪದವಿಯೊಂದಿಗೆ ಅರ್ಥಶಾಸ್ತ್ರದಲ್ಲಿ ವಿಶೇಷ ಅಧ್ಯಯನ ಮಾಡಿದ್ದಾರೆ. ವಕೀಲ ವೃತ್ತಿಯನ್ನು ಅವರು ಕೈಗೊಂಡರು. ದಲಿತ, ಹಿಂದುಳಿದ ವರ್ಗದ ಸಾಮಾಜಿಕ ನ್ಯಾಯಕ್ಕಾಗಿ ಅವರ ಸೇವೆಯನ್ನು ಮೀಸಲಿಟ್ಟರು.

೧೯೭೨ರಲ್ಲಿ ಪ್ರಥಮ ಬಾರಿಗೆ ವಿಧಾನ ಸಭೆಗೆ ಜಯಗಳಿಸಿದ ವೀರಪ್ಪ ಮೊಯಿಲಿಯವರು ಸತತವಾಗಿ ಐದು ಬಾರಿ ಚುನಾವಣೆಗಳಲ್ಲಿ ಜಯಗಳಿಸಿದ್ದಾರೆ. ಮೂರು

ಬಾರಿ ಸಚಿವರಾಗಿ, ಒಮ್ಮ ವಿರೋಧ ಪಕ್ಷದ ನಾಯಕರಾಗಿ, ಮುಖ್ಯಮಂತ್ರಿಯಾಗಿ ಅನೇಕ ಜನಹಿತ ಕಾರ್ಯಕ್ರಮಗಳನ್ನು ರೂಪಿಸಿದ ಕೀರ್ತಿ ಮೊಯಿಲಿಯವರಿಗೆ ಸಲ್ಲುತ್ತದೆ. ದೇವರಾಜ ಅರಸರ ಕಾಲದಲ್ಲಿ ಸಣ್ಣ ಕೈಗಾರಿಕೆಗಳ ರಾಜ್ಯಮಂತ್ರಿಯಾಗಿ ಸಂಪುಟ ಸೇರಿದ ಮೊಯಿಲಿಯವರು ಔದ್ಯೋಗಿಕ ಕ್ರಾಂತಿಯನ್ನೇ ಉಂಟು ಮಾಡಿದರು ಅವರ ಮೂವತ್ತಾಲ್ಕನೇ ವಯಸ್ಸಿನಲ್ಲಿ ರಾಜಕೀಯ ರಂಗದಲ್ಲಿ ಉನ್ನತ ಶಿಖರಕ್ಕೇರಿದರು.

ನನ್ನ ಈ ಅಧ್ಯಯನವು "ಎಂ.ವೀರಪ್ಪ ಮೊಯಿಲಿಯವರ ರಾಜಕೀಯ ಚಿಂತನೆಗಳು" ಎಂದು ಇರುವುದರಿಂದ ಇವರ ಸಮಗ್ರ ಚಿಂತನೆಗಳನ್ನು "ರಾಜಕೀಯ ಚಿಂತನೆಗಳು" ಎಂಬ ಅಧ್ಯಯನದಲ್ಲಿ ಚರ್ಚಿಸಲಾಗಿದೆ.

ಹೆಚ್.ಡಿ.ದೇವೇಗೌಡ

ಕರ್ನಾಟಕದ ಮುತ್ಸದ್ದಿ ಮುಖ್ಯಮಂತ್ರಿ ಹಾಗೂ ಕನ್ನಡದ ಒಬ್ಬ ಪ್ರಧಾನಿಯಾಗಿ ಇಡೀ ದೇಶವನ್ನೇ ಪ್ರತಿನಿಧಿಸಿದ ವ್ಯಕ್ತಿ ಹೆಚ್.ಡಿ. ದೇವೇಗೌಡರು. ೧೯೩೩ರಲ್ಲಿ ಹಾಸನ ಜಿಲ್ಲೆಯ ಹೊಳೇನರಸಿಪುರ ತಾಲೂಕಿನ ಹರದನಹಳ್ಳಿಯಲ್ಲಿ ಈರಮ್ಮ ಹಾಗೂ ದೊಡ್ಡೆಗೌಡ ದಂಪತಿಗಳ ಮಗನಾಗಿ ಜನಿಸಿದರು.

ಹೆಚ್.ಡಿ.ದೇವೇಗೌಡರು ವಿಧ್ಯುಕ್ತವಾಗಿ ಯಾವುದೇ ರಾಜಕೀಯ ಪಕ್ಷ ಸೇರದೇ ಸ್ವಂತ ಬಲದಿಂದ ರಾಜಕೀಯ ಪಕ್ಷ ಕಟ್ಟಿಕೊಂಡು ೧೯೬೨ರಲ್ಲಿ ಸ್ವತಂತ್ರ್ಯ ಅಭ್ಯರ್ಥಿಯಾಗಿ ಹೊಳೆನರಸಿಪುರದಿಂದ ಆಯ್ಕೆಯಾದರು. ಸತತವಾಗಿ ೬ ಬಾರಿ ಹೊಳೆನರಸಿಪುರ ಕ್ಷೇತ್ರದಿಂದ ವಿಧಾನಸಭೆಗೆ ಆಯ್ಕೆಗೊಂಡದ್ದು ಇತಿಹಾಸವಾಗಿದೆ. ೧೯೮೩ರಲ್ಲಿ ವಿಧಾನಸಭೆಗೆ ನಡೆದ ಚುನಾವಣೆಯಲ್ಲಿ ಅಪಾರ ಬಹುಮತ ಗಳಿಸಿ ಜನತಾ ದಳ ಸರ್ಕಾರ ರಚಿಸಲು ಸಮರ್ಥವಾದಾಗ ಇವರು ರಾಮಕೃಷ್ಣ ಹೆಗಡೆಯವರ ಸಂಪುಟದಲ್ಲಿ ನೀರಾವರಿ ಖಾತೆಯ ಮಂತ್ರಿಯಾದರು.

ಎಚ್.ಡಿ. ದೇವೆಗೌಡರು ರಾಜ್ಯ ಮತ್ತು ರಾಷ್ಟ್ರ ರಾಜಕಾರಣದಲ್ಲಿ ಹೆಸರು ಮಾಡಿದ ರಾಜಕಾರಣಿಯಾಗಿದ್ದು, ಕರ್ನಾಟಕದ ಮುಖ್ಯಮಂತ್ರಿಯಾಗಿ ಭಾರತದ ಪ್ರಧಾನಿಯಾಗಿ ಅಪಾರ ಅನುಭವವನ್ನು ಪಡೆದವರು. ಶ್ರೀಯುತರು ಮುಖ್ಯಮಂತ್ರಿ ಹಾಗೂ ಪ್ರಧಾನ ಮಂತ್ರಿಯಾಗಿದ್ದಾಗ ಹಲವು ರಾಜಕೀಯ ಚಿಂತನೆಯನ್ನು ಅನುಷ್ಠಾನಗೊಳಿಸುವಲ್ಲಿ

ಯಶಸ್ವಿಯಾದವರು. ಜನತಾ ದರ್ಶನದಂತಹ ಕಾರ್ಯಕ್ರಮವನ್ನು ಅನುಷ್ಠಾನಕ್ಕೆ ತರುವ ಮೂಲಕ ಜನರ ಸಮಸ್ಯೆಯನ್ನು ಬಹುಬೇಗನೆ ಪರಿಹರಿಸುವ ಚಿಂತನೆಯನ್ನು ಜಾರಿಗೊಳಿಸಿದವರು. ಸಾಮಾಜಿಕ ನ್ಯಾಯ ಅನುಷ್ಠಾನದ ಪರವಾಗಿ ತಮ್ಮ ಚಿಂತನೆಯನ್ನು ವಿಸ್ತರಿಸಿಕೊಂಡವರು. ಬಡವರಿಗೆ ರಿಯಾಯ್ತಿ ದರದಲ್ಲಿ ಅಕ್ಕಿ, ಶಿಕ್ಷಕರ ನೇಮಕಾತಿ, ನಿರ್ಮಲ ಕರ್ನಾಟಕ ಯೋಜನೆ ಮುಂತಾದವುಗಳಿಗೆ ಆದ್ಯತೆ ನೀಡಿ ತಮ್ಮ ಚಾಣಾಕ್ಷತೆ ಮೆರೆದರು ಜನರ ಸೇವೆಯ ಒಳತಿಗಾಗಿ ಆ ಮೂಲಕ ರಾಜ್ಯದ ಅಭಿವೃದ್ಧಿ ಆಗಬೇಕೆಂದು ಕನಸು ಕಂಡವರು. ರಾಜಕಾರಣಿಗಳಿಗೆ ಆಚಾರ ಸಂಹಿತೆ ಇರಬೇಕು. ದೇಶದಲ್ಲಿ ಅನೇಕ ಜನ ಬುದ್ಧಿವಂತರು ವಿಚಾರಶೀಲರು ಆಡಳಿತ ನಡೆಸಲು ಮುಂದೆ ಬರಬಹುದು. ಆದರೆ ಅವರಿಗೆ ಬಡವರ ಬಗ್ಗೆ ಹೃದಯವಂತಿಕೆ ಇರದಿದ್ದರೆ ಯಾವ ಪ್ರಯೋಜನವು ಆಗುವುದಿಲ್ಲ. ಸ್ವಾತಂತ್ರ್ಯ ಬಂದು ೬೦ ವರ್ಷ ಗತಿಸಿದರೂ ಹಳ್ಳಿಗಳ ಅಭಿವೃದ್ಧಿ ಸಾಧಿಸಿಲ್ಲ. ಆದರೆ ರಾಜಕಾರಣಿಗಳು ಮಾತ್ರ ಅಧಿಕಾರದಲ್ಲಿದ್ದು, ದೇಶದ ಅಭಿವೃದ್ಧಿಗೆ ಚಿಂತಿಸದೇ ಬದುಕನ್ನು ಸವೆಸುತ್ತಿರುವುದು ಅಭಿವೃದ್ಧಿ ಆಗದಿರಲು ಕಾರಣವಾಗಿದೆ ಎಂದರು. ಜನರ ನಿರೀಕ್ಷೆಯನ್ನು ಹಾಗೂ ರಾಜ್ಯದ ಋಣವನ್ನು ಅಧಿಕಾರದಲ್ಲಿರುವಾಗಲೇ ತೀರಿಸಬೇಕು. ಇದು ನನ್ನೊಬ್ಬನ ರಾಜಕೀಯ ಚಿಂತನೆಯಾಗದೇ ಪ್ರತಿಯೊಬ್ಬರ ಚಿಂತನೆಯಾಗಬೇಕು ಎಂದಿದ್ದಾರೆ.

೧೯೯೪, ನವ್ಹೆಂಬರ್ ೧೨ರಂದು ಕರ್ನಾಟಕದ ೧೪ನೇ ಮುಖ್ಯಮಂತ್ರಿಗಳಾಗಿ ಆಯ್ಕೆಯಾದರು. ಅವರು ಮುಖ್ಯಮಂತ್ರಿಯಾಗಿ, ಪ್ರಧಾನ ಮಂತ್ರಿಯಾಗಿ ಅನೇಕ ಸಾಧನೆಗಳನ್ನು ಮಾಡಿದರು. ಅವುಗಳಲ್ಲಿ ಕೆಲವೊಂದನ್ನು ಈ ಕೆಳಗಿನಂತೆ ನೋಡಬಹುದು.

- ಜನತಾದರ್ಶನ ಕಾರ್ಯಕ್ರಮವನ್ನು ಜನಪ್ರಿಯಗೊಳಿಸಿದರು.
- ೧೯೬೪ರಿಂದ ಸ್ಥಗಿತಗೊಂಡಿದ್ದ ಕೃಷ್ಣ ಮೇಲ್ದಂಡೆ ಯೋಜನೆಯನ್ನು ೧೦೦೦ಕೋಟಿ ರೂಪಾಯಿ ನೀಡುವುದರಿಂದ ಪ್ರಾರಂಭಗೊಳಿಸಿದರು.
- ಬಡವರಿಗೆ ರಿಯಾಯ್ತಿ ದರದಲ್ಲಿ ಅಕ್ಕಿ ಪೂರೈಕೆ, ಶಾಲಾ ಶಿಕ್ಷಕರ ನೇಮಕಾತಿ ಮಾಡಿದರು.
- ರೈತರ ಸಾಲದ ಮೇಲಿನ ಸುಸ್ತಿ ಬಡ್ಡಿ ಮನ್ನಾ ಮಾಡಿದರು
- ಗ್ರಾಮೀಣ ವಿದ್ಯಾರ್ಥಿಗಳಿಗೆ ನೇಮಕಾತಿಯಲ್ಲಿ ಶೇ.೧೫%ರ ಕೃಪಾಂಕ ನೀಡಿದರು.

- ಸಾಹಿತಿ ಕಲಾವಿದರಿಗೆ ವೈದ್ಯಕೀಯ ವೆಚ್ಚದ ಸಹಾಯ ಹಾಗೂ ರಾಜ್ಯದ ಬಡಜನತೆಯ ವೈದ್ಯಕೀಯ ವೆಚ್ಚ ಭರಿಸಲು ೧೦೦ಕೋಟಿ ರೂಪಾಯಿಗಳ ಆವರ್ತ ನಿಧಿ ಸ್ಥಾಪನೆ.
- ಕಾವೇರಿ ನದಿಯಿಂದ ಬೆಂಗಳೂರು ನಗರಕ್ಕೆ ಕುಡಿಯುವ ನೀರಿನ ಯೋಜನೆಯನ್ನು ೧೦೭ಕೋ. ರೂಪಾಯಿಗಳನ್ನು ಸರ್ಕಾರದಿಂದ ನೀಡಿದರು.
- ಕೆರೆಗಳ ದುರಸ್ಥಿ, ಬ್ಯಾರೇಜ್ ನಿರ್ಮಾಣ, ಏತನೀರಾವರಿ ಯೋಜನೆ, ಮಧ್ಯಮ ಮತ್ತು ಸಣ್ಣ ನೀರಾವರಿ ಯೋಜನೆ ಕಾಮಗಾರಿಗಳನ್ನು ಪೂರ್ಣಗೊಳಿಸಲು ನಬಾರ್ಡನಿಂದ ಹಣಕಾಸು ಸಹಾಯ ಪಡೆಯಲಾಯಿತು.
- ಯಾವುದೇ ತೆರಿಗೆ ವಿಧಿಸದ ಜನಪ್ರೀಯ ಬಜೆಟ್‌ನ್ನು ಮಂಡಿಸಲಾಯಿತು. ಕನ್ನಡ ಚಲನಚಿತ್ರಗಳಿಗೆ ಶೇ.೧೦೦ರಷ್ಟು ತೆರಿಗೆ ಮನ್ನಾ ಮಾಡಲಾಯಿತು. ಹೀಗೆ ಜನತಾದಳ ಸರ್ಕಾರದ ಧ್ಯೇಯವಾಗಿರುವ ಸಾಮಾಜಿಕ ನ್ಯಾಯಕ್ಕಾಗಿ ಅನೇಕ ಯೋಜನೆಗಳನ್ನು ರೂಪಿಸಿದರಲ್ಲದೆ ಪ್ರಧಾನಿಯಾಗಿ ಕೂಡಾ ಅನೇಕ ಸಾಧನೆಗಳನ್ನು ಕೆಲವೇ ದಿನಗಳಲ್ಲಿ ಮಾಡಿದ್ದಾರೆ.

ಜೆ.ಎಚ್.ಪಟೇಲ

ಕರ್ನಾಟಕ ಈವರೆಗೆ ಕಂಡಿರುವ ಮುಖ್ಯಂತ್ರಿಗಳಲ್ಲಿ ಜಯದೇವಪ್ಪ ಹಾಲಪ್ಪ ಪಟೇಲರು ವಿಶೇಷ ಉಲ್ಲೇಖನಿಯರು. ಇವರು ಶಿವಮೊಗ್ಗ ಜಿಲ್ಲೆಯ ಕಾರಿಗನೂರಿನ ಜಮೀನ್ದಾರ ಶ್ರೀ ಹಾಲಪ್ಪ ಪಟೇಲ್ ಶ್ರೀಮತಿ ಮಹಾದೇವಮ್ಮನವರ ಸುಪುತ್ರ ೧೯೩೦, ಅಕ್ಟೂಬರ್ ೦೧ರಂದು ಜನಿಸಿದರು. ಕತ್ತಲಗೆರೆ, ಕುಂದೂರು, ದಾವಣಗೆರೆಯಲ್ಲಿ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣವನ್ನು ಮುಗಿಸಿ, ಮೈಸೂರು ವಿಶ್ವವಿದ್ಯಾಲಯದಿಂದ ಬಿ.ಎ. ಪದವಿ ಪಡೆದು ಅಂದಿನ ಮುಂಬೈ ಪ್ರದೇಶದ ಬೆಳಗಾಂವನ ರಾಜಾ ಲಕ್ಕಮ್ಮಗೌಡ ಕಾಲೇಜಿನಲ್ಲಿ ಎಲ್.ಎಲ್.ಬಿ.ಪದವಿ ಪಡೆದರು.

ಚೆನ್ನಗಿರಿ ವಿಧಾನ ಸಭಾ ಕ್ಷೇತ್ರದಿಂದ ೧೯೭೮ರಲ್ಲಿ ರಾಜ್ಯ ವಿಧಾನಸಭೆಗೆ ಆಯ್ಕೆಯಾದರು. ೧೯೯೪ರಲ್ಲಿ ಪುನಃ ಆಯ್ಕೆಯಾಗಿ ೧೯೯೪ರಲ್ಲಿ ಎಚ್.ಡಿ.ದೇವೇಗೌಡರ ಸರ್ಕಾರದ ಅವಧಿಯಲ್ಲಿ ಉಪಮುಖ್ಯಂತ್ರಿಯಾದರು. ೧೯೯೬ರಲ್ಲಿ ದೇವೇಗೌಡರಿಗೆ ಪ್ರಧಾನಮಂತ್ರಿಯಾಗುವ ಅವಕಾಶ ದೊರಕಿತು. ಆಗ ಜೆ.ಎಚ್. ಪಟೇಲರು

ಮುಖ್ಯಮಂತ್ರಿಯಾದರು. ಮುಂದೆ ಅನೇಕ ಜನಪರ ಕಾಯಕ್ರಮಗಳನ್ನು ರೂಪಿಸಿದರು. ಅವುಗಳಲ್ಲಿ ನೀರಾವರಿ ಸೌಲಭ್ಯಗಳನ್ನು ನೀಡುವುದು. ಆಹಾರ ಧಾನ್ಯದ ಉತ್ಪಾದನೆಯಲ್ಲಿ ಹೆಚ್ಚಳ, ನಮ್ಮ ಮನೆ ನಮ್ಮ ತೋಟ ಯೋಜನೆ, ವಸತಿಯೋಜನೆ, ಶಿಕ್ಷಣ, ಉದ್ಯೋಗ, ವಿದ್ಯುತ್, ಕೈಗಾರಿಕೆ, ಮೂಲಭೂತ ಸೌಕರ್ಯಗಳನ್ನು ಮಾಡುವುದರ ಮೂಲಕ ಜನಪ್ರೀಯಗೊಂಡರು. ಸ್ವಚ್ಛ ಗ್ರಾಮಯೋಜನೆ, ಮುಂತಾದ ಹೊಸ ಯೋಜನೆಗಳನ್ನು ಜಾರಿಗೊಳಿಸಿದರು. ಜೆ.ಎಚ್. ಪಟೇಲರು ಒಬ್ಬ ದಕ್ಷ ಹಾಗೂ ಉತ್ತಮ ಆಡಳಿತಗಾರರಾಗಿದ್ದಲ್ಲದೇ ನಿಷ್ಠಾವಂತ ವ್ಯಕ್ತಿತ್ವವುಳ್ಳವರಾಗಿದ್ದರು. ಅವರು ನೇರ ನಡೆ-ನುಡಿಯ ವ್ಯಕ್ತಿಯಾಗಿದ್ದರು ಮತ್ತು ಹಾಸ್ಯಪ್ರಜ್ಞೆಯುಳ್ಳವರಾಗಿದ್ದರು. ಅದಕ್ಕೆ ಒಳ್ಳೆಯ ಉದಾಹರಣೆ ಅವರು ಇಂಧನ ಸಚಿವರಾಗಿದ್ದಾಗ ಇಂಧನ ಮತ್ತು ಅಬಕಾರಿಗೆ ಸಂಬಂಧಿಸಿದಂತೆ ವಿಧಾನಸಭೆಯಲ್ಲಿ ಉತ್ತರ ಕೊಡುವ ಸಮಯದಲ್ಲಿ ಉತ್ತರವನ್ನು ಕಿಕ್‌ನಿಂದ ಪ್ರಾರಂಭಿಸಬೇಕೊ ಅಥವಾ ಶಾಕ್‌ನಿಂದ ಪ್ರಾರಂಭಿಸಬೇಕೊ ಎಂದು ಕೇಳಿದರು. ಇದು ಸದನವನ್ನು ನಗೆಕಡಲಿನಲ್ಲಿ ತೇಲಿಸಿತು. ಅವರು ಉತ್ತಮ ಸಂಸದೀಯಪಟು.

ಎಸ್.ಎಂ.ಕೃಷ್ಣ

ಮಂಡ್ಯ ಜಿಲ್ಲೆಯ ಸೋಮನಹಳ್ಳಿಯ ಸುಸಂಸ್ಕೃತ ಮನೆತನದಲ್ಲಿ ಜನಿಸಿದ ಕೃಷ್ಣ ತಮ್ಮ ಬಾಲ್ಯ ಶಿಕ್ಷಣವನ್ನು ಮಂಡ್ಯದಲ್ಲಿ ಹಾಗೂ ಪದವಿ ಶಿಕ್ಷಣ ಹಾಗೂ ಉನ್ನತ ವ್ಯಾಸಂಗವನ್ನು ಬೆಂಗಳೂರು ಹಾಗೂ ಅಮೇರಿಕಾದಲ್ಲಿ ಪೂರೈಸಿದರು. ೧-೫-೧೯೩೨ರಂದು ಎಸ್.ಸಿ. ಮಲ್ಲಯ್ಯ ಹಾಗೂ ಪೂರ್ವಮ್ಮ ದಂಪತಿಗಳ ಮಗನಾಗಿ ಜನಿಸಿದರು. ಕೃಷ್ಣರವರು ಅಮೇರಿಕಾದಲ್ಲಿ ವ್ಯಾಸಂಗದ ಸಮಯದಲ್ಲಿ ಜಾನ್.ಎಫ್.ಕೆನಡಿಯವರಂತಹ ರಾಜಕೀಯ ನಾಯಕರ ಭಾಷಣಗಳನ್ನು ಕೇಳಿದವರು. ಅವೇ ಅವರನ್ನು ರಾಜಕೀಯದಲ್ಲಿ ಧುಮುಕುವಂತೆ ಪ್ರೇರಪಿಸಿತು. ಬೆಂಗಳೂರಿನ ಶ್ರೀ ರೇಣುಕಾಚಾರ್ಯ ಕಾಲೇಜಿನಲ್ಲಿ ಕೆಲ ದಿನಗಳ ಕಾಲ ಉಪನ್ಯಾಸಕ ವೃತ್ತಿ ಕೈಗೊಂಡರು. ಉಪನ್ಯಾಸಕ ವೃತ್ತಿ ಬಹಳ ದಿನ ರುಚಿಸಲಿಲ್ಲ. ೧೯೬೨ರಲ್ಲಿ ಮದ್ದೂರು ವಿಧಾನಸಭಾ ಕ್ಷೇತ್ರದಿಂದ ವಿಧಾನಸಭೆಗೆ ಆಯ್ಕೆಯಾಗುವ ಮುಖಾಂತರ ರಾಜಕೀಯ ಜೀವನವನ್ನು ಪ್ರಾರಂಭಿಸಿದರು. ಪ್ರಗತಿಪರ ರಾಜಕೀಯ ವಿಚಾರಗಳು ಹಾಗೂ ಸಮಾಜ ಸೇವೆಯ ಅನುಭವವನ್ನು ಪಡೆದಿದ್ದರು. ಅಂತೆಯೇ ರಾಜಕೀಯವು ಅವರನ್ನು ಹೆಚ್ಚು ಆಕರ್ಷಿಸಿತು.

೧೯೬೮–೭೧ರಲ್ಲಿ ಲೋಕಸಭೆಗೆ ಆಯ್ಕೆಯಾಗಿ ಅನೇಕ ಸಾಮಾಜಿಕ, ಆರ್ಥಿಕ ಮೂಲಭೂತ ಸಮಸ್ಯೆಗಳ ಕುರಿತು ಸರಕಾರದ ಗಮನ ಸೆಳೆದರು. ೧೯೭೨ರಲ್ಲಿ ಲೋಕಸಭೆಗೆ ರಾಜಿನಾಮೆ ನೀಡಿ ೧೯೭೭ರವರೆಗೆ ವಿಧಾನ ಪರಿಷತ್‌ನ ಸದಸ್ಯರಾಗಿ ಕೈಗಾರಿಕೆ ಮತ್ತು ಸಂಸದೀಯ ವ್ಯವಹಾರಗಳ ಸಚಿವರಾಗಿ ಕಾರ್ಯ ನಿರ್ವಹಿಸಿದರು. ೧೯೯೨ರಿಂದ ೧೯೯೪ರವರೆಗೆ ಮೊಯಿಲಿಯವರ ಮಂತ್ರಿಮಂಡಲದಲ್ಲಿ ಉಪಮುಖ್ಯಮಂತ್ರಿಯಾಗಿ ಕಾರ್ಯನಿರ್ವಹಿಸಿದರು. ಪುನಃ ೧೯೯೯ರಲ್ಲಿ ಕಾಂಗ್ರೇಸ್ ಪಕ್ಷ ಬಹುಮತ ಪಡೆದು ಎಸ್.ಎಂ.ಕೃಷ್ಣರವರು ಮುಖ್ಯಮಂತ್ರಿಯಾಗಿ ಅಧಿಕಾರ ವಹಿಸಿದರು. ಮುಖ್ಯಮಂತ್ರಿಯಾಗಿ ಅಧಿಕಾರ ವಹಿಸಿಕೊಂಡ ನಂತರ ಗಣನೀಯ ಮಟ್ಟದಲ್ಲಿ ಸಾಧನೆಗಳನ್ನು ಮಾಡಿದರು. ಮತ್ತು ಯೋಜನೆಗಳನ್ನು ರೂಪಿಸಿದರು.

ಎಸ್.ಎಂ.ಕೃಷ್ಣಾರವರ ಸಾಧನೆಗಳನ್ನು ಸಂಕ್ಷಿಪ್ತವಾಗಿ ನೋಡುವುದಾದರೆ, ಮೊಟ್ಟ ಮೊದಲನೆಯದಾಗಿ ಬೆಂಗಳೂರನ್ನು ಅಭಿವೃದ್ಧಿಪಡಿಸಲು ಚಿಂತನೆ ಹೊಂದಿ ಕ್ರಮಕೈಕೊಂಡರು. ಬೆಂಗಳೂರಿನಲ್ಲಿ ಆಧುನಿಕ ವಿಶ್ವದಲ್ಲಿನ ಮಾಹಿತಿ ತಂತ್ರಜ್ಞಾನವನ್ನು ಅಭಿವೃದ್ಧಿ ಪಡಿಸಿ ಇಡೀ ವಿಶ್ವದಲ್ಲಿ ಭಾರತ ಹಾಗೂ ಕರ್ನಾಟಕದ ಪ್ರಾಮುಖ್ಯತೆಯನ್ನು ಎತ್ತಿ ಹಿಡಿಯುವಂತೆ ಮಾಡಿದರು. ಕರ್ನಾಟಕದ ರಾಜ್ಯಾಡಳಿತದ ವಿಕೇಂದ್ರಿಕರಣಕ್ಕೆ ಪ್ರಥಮ ಆದ್ಯತೆ ನೀಡಿದರು. ಆಲಮಟ್ಟಿ ಆಣೆಕಟ್ಟನ್ನು ೫೧೯ ಅಡಿ ಎತ್ತರಕ್ಕೆ 'ಏರಿಸಿ ಕ್ರಸ್ಟ್‌ಗೇಟ್‌ಗಳನ್ನು ನಿರ್ಮಿಸುವಲ್ಲಿ ಯಶಸ್ವಿಯಾದರು. ೩೦೦೦೦ ಕೆರೆಗಳಲ್ಲಿನ ಹೂಳನ್ನು ಎತ್ತಿ ಪುನಶ್ಚೇತನಗೊಳಿಸುವ ಕಾರ್ಯಕ್ಕೆ ಆದ್ಯತೆಯ ಮೇರೆಗೆ ಹಣಕಾಸು ಒದಗಿಸಿದರು. ಒಣಭೂಮಿ ಅಭಿವೃದ್ಧಿಗೆ ಕೃಷಿಕರಿಗೆ ಆಧುನಿಕ ತಂತ್ರಜ್ಞಾನ ನೀಡುವ ಉದ್ದೇಶದಿಂದ 'ರೈತ ಮಿತ್ರ' ವ್ಯವಸ್ಥೆಯನ್ನು ಸ್ಥಾಪಿಸಿದರು. ಅಕ್ರಮ ಪಂಪಸೆಟ್‌ಗಳನ್ನು ಸಕ್ರಮಗೊಳಿಸುವ ಕಾರ್ಯಕ್ರಮವನ್ನು ಕೈಗೊಳ್ಳುತ್ತಾ ಸ್ತ್ರೀಯರ ಸರ್ವತೋಮುಖ ಅಭಿವೃದ್ಧಿಗೆ ಇಂಬುಕೊಡುವ ಉದ್ದೇಶದಿಂದ 'ಸ್ತ್ರೀ ಶಕ್ತಿ' ಸ್ವ–ಸಹಾಯ ಘಟಕಗಳನ್ನು ತೆರೆಯಲಾಯಿತು. ಸ್ವರ್ಣ ಜಯಂತಿ ರೋಜಗಾರ ಯೋಜನೆಯಡಿಯಲ್ಲಿ ೧೮,೩೦೦ಜನರಿಗೆ ಸ್ವ–ಉದ್ಯೋಗವನ್ನು ನೀಡಲಾಯಿತು. ಆರೋಗ್ಯ ಪೂರ್ಣ ಸುಂದರ ಕರ್ನಾಟಕಕ್ಕೆ ಸರ್ಕಾರ ರೂಪಿಸಿರುವ ಸ್ವಚ್ಛಗ್ರಾಮ ಯೋಜನೆ ಮುಂತಾದವು ಕೃಷ್ಣಾರವರ ಸಾಧನೆಗಳು. ರಾಜ್ಯದ ೧೬ನೇ ಮುಖ್ಯಮಂತ್ರಿಯಾದ ಎಸ್.ಎಂ.ಕೃಷ್ಣಾರವರ ವ್ಯಕ್ತಿತ್ವ ಹಾಗೂ ನಮ್ಮ ಕಾರ್ಯಮಂತ್ರ

ಮತದಾರರಿಗೆ ಕೊಟ್ಟ ಮಾತಿನಂತೆ ನಡೆಯುವುದೇ ನನ್ನ ಆಡಳಿತದ ತಂತ್ರ. ಎಂದು ಎಸ್.ಎಂ.ಕೃಷ್ಣಾ ಸಾರಿದರು.

ಕರ್ನಾಟಕ ರಾಜ್ಯದಲ್ಲಿ ಹಲವಾರು ರಾಜಕೀಯ ಚಿಂತಕರು ತಮ್ಮ ನಿಲುವನ್ನು ಆಶಯವನ್ನು ವ್ಯಕ್ತ ಪಡಿಸಿದ್ದು ಇವುಗಳನ್ನು ಗಮನಿಸಲಾಗಿ, ಈ ಎಲ್ಲಾ ರಾಜಕಾರಣಿಗಳ ಚಿಂತನೆಗಳಿಗಿಂತ ಎಂ. ವೀರಪ್ಪ ಮೊಯಿಲಿಯವ ರಾಜಕೀಯ ಚಿಂತನೆಗಳು ವಿಭಿನ್ನ ಹಾಗೂ ವಿಶಿಷ್ಟ ರೀತಿಯಲ್ಲಿವೆ. ಆಯಾ ರಾಜಕೀಯ ವ್ಯಕ್ತಿಗಳು ತಮ್ಮ ಚಿಂತನೆಗಳನ್ನು ಅನುಷ್ಠಾನದಲ್ಲಿ ಅಳವಡಿಸಿದಾಗ ಮಾತ್ರ ಅದಕ್ಕೊಂದು ಹೆಚ್ಚಿನ ಮನ್ನಣೆ ದೊರೆಯುತ್ತದೆ. ಆ ನಿಟ್ಟಿನಲ್ಲಿ ಇಲ್ಲಿಯ ರಾಜಕೀಯ ನಾಯಕರ ಚಿಂತನೆಯನ್ನು ಸ್ಥೂಲವಾಗಿ ಸಮೀಕ್ಷಿಸಲಾಗಿದೆ.

ಅಧ್ಯಾಯ–೩ ಎಂ. ವೀರಪ್ಪ ಮೊಯಿಲಿಯವರ ಜೀವನ ಮತ್ತು ಸಾಧನೆಗಳು

ಅಧ್ಯಾಯ-೩

ಎಂ. ವೀರಪ್ಪ ಮೊಯಿಲಿ ಅವರ ಜೀವನ ಮತ್ತು ಸಾಧನೆಗಳು

೩.೧ ಪ್ರಸ್ತಾವನೆ

ಸಮಾಜ ಸೇವೆಯು ಯಜ್ಞದಷ್ಟೇ ಶ್ರೇಷ್ಠವಾದದ್ದು, ಈ ಸೇವೆಯು ದೇವರಿಗೆ ಸಲ್ಲುವುದಾಗಿದೆ. ಅದೊಂದು ಸಾಮಾಜಿಕ ಯಜ್ಞ, ಇಂತಹ ಯಜ್ಞ (ಕಾರ್ಯ)ವನ್ನು ಕನ್ನಡನಾಡಿನಲ್ಲಿ ಅನೇಕ ಮಹನೀಯರು ನಡೆಸಿಕೊಂಡು ಬಂದಿದ್ದಾರೆ. ಅಂತಹ ವ್ಯಕ್ತಿಗಳಲ್ಲಿ ಎದ್ದು ಕಾಣುವ ವ್ಯಕ್ತಿತ್ವ ಮಾನ್ಯ ಶ್ರೀ ಎಂ.ವೀರಪ್ಪ ಮೊಯಿಲಿ ಅವರದು.

ವೀರಪ್ಪ ಮೊಯಿಲಿ ಅವರು ಕರ್ನಾಟಕ ರಾಜಕೀಯ ಕ್ಷೇತ್ರದಲ್ಲಿ ಹತ್ತು ಹಲವು ವೈಶಿಷ್ಟ್ಯತೆಯಿಂದ ತಮ್ಮನ್ನು ತಾವು ಗುರುತಿಸಿಕೊಂಡವರು. ಅವರ ಜೀವನ ಯಶೋಗಾದೆ ಕಷ್ಟದ ಪರಿಧಿಯಲ್ಲಿ ಸಾಗಿದ್ದು ಕಂಡಬರುತ್ತದೆ. ಅವೆಲ್ಲವನ್ನು ಮೆಟ್ಟಿ ಅವರು ಮಾಡಿರುವ ಸಾಧನೆಯನ್ನು ಈ ಅಧ್ಯಾಯದಲ್ಲಿ ಚರ್ಚಿಸಲಾಗಿದೆ.

ಕರ್ನಾಟಕ ಇತಿಹಾಸದಲ್ಲಿ ದಕ್ಷಿಣ ಕನ್ನಡ ಜಿಲ್ಲೆಗೆ ಅದರದೇ ಆದ ವಿಶಿಷ್ಟಸ್ಥಾನವಿದೆ. ಈ ಜಿಲ್ಲೆಯ ಮೂಡಬಿದರೆಯು ಭಾರತದ ಜೈನರಕಾಶಿಯಂಬ ಹೆಗ್ಗಳಿಕೆಗೆ ಪಾತ್ರವಾಗಿದೆ. ಸಾವಿರಕಂಬಗಳಿರುವ ಬಸದಿ ಇಲ್ಲಿದೆ. ಇಂತಹ ಐತಿಹಾಸಿಕ ನಾಡಿನಲ್ಲಿ ಎಂ.ವೀರಪ್ಪ ಮೊಯಿಲಿಯವರು ಜನ್ಮಪಡೆದಿದ್ದು ಹೆಮ್ಮೆಯ ಸಂಗತಿಯಾಗಿದೆ. ಈ ಹಿಂದೆ ಮದ್ರಾಸ್ ಪ್ರಾಂತ್ಯಕ್ಕೆ ಸೇರಿದ್ದ ದಕ್ಷಿಣ ಕನ್ನಡ ಜಿಲ್ಲೆಯ ಮೂಡಬಿದರಿಯ ಪಕ್ಕದ ಪುಟ್ಟಹಳ್ಳಿ "ಮಾರ್ಪಡಿ" ಎಂಬಲ್ಲಿ ಎಂ.ವೀರಪ್ಪ ಮೊಯಿಲಿ ಅವರು ೧೯೪೦ ಜನೇವರಿ ೧೨ರಂದು

ತಂದೆ ತಮ್ಮಯ್ಯ ತಾಯಿ ಪೂವಮ್ಮ ಅವರ ಉದರದಲ್ಲಿ ಜನಿಸಿದರು. ವೀರಪ್ಪ ಅವರ ಮೂಲ ಹೆಸರು ಗಿರಿಯಪ್ಪ ಅವರ ತಾಯಿಯು ಶಾಲೆಯ ದಾಖಲಾತಿಯಲ್ಲಿ ವೀರಪ್ಪ ಎಂದು ತಪ್ಪಾಗಿ ನಮೂದಿಸಿದ್ದಾರೆ.

೩.೨ ಮನೆತನದ ಹಿನ್ನೆಲೆ

ಸಾಮಾಜಿಕ ಸಮೂಹ ಶ್ರೇಣಿಯಲ್ಲಿ ಕಳೆದರ್ಜೆಯ ಬಡ ಕುಟುಂಬ ಮೊಯಿಲಿ ಅವರದು. ದೇವಸ್ಥಾನ ಹಾಗೂ ವಿಶೇಷ ಜಾತ್ರೆ ಉತ್ಸವಗಳಲ್ಲಿ ವಾದ್ಯವನ್ನು ನುಡಿಸುವ ಕುಲಕಸುಬಾದ ದೇವಾಡಿಗ ಸಮುದಾಯಕ್ಕೆ ಸೇರಿದ ಕುಟುಂಬ ಇವರದು. ಈ ಮನೆಯ ಹಿರಿಯರಾದ ತಮ್ಮಯ್ಯ ಕಡು ಬಡತನದಲ್ಲಿಯೇ ತಮ್ಮ ಬಾಳು ಬಂಡಿಯನ್ನು ಸಾಗಿಸುತ್ತಾ ಬಂದವರು. ದೇವಸ್ಥಾನದವರು ಕೊಡುವ ಅಲ್ಪಸ್ವಲ್ಪ ಆಹಾರ ಧಾನ್ಯದಲ್ಲಿಯೇ ತನ್ನ ಮಕ್ಕಳನ್ನು ಬೆಳೆಸುತ್ತಾ ಬಂದವರು. ಇವರಿಗೆ ಬಾಳಸಂಗಾತಿಯಾಗಿ ಶ್ರೀಮತಿ ಪೂವಮ್ಮನವರು ಮಕ್ಕಳ ಪಾಲನೆಯನ್ನು ಮಾಡುತ್ತಿದ್ದರು. ತಮ್ಮಯ್ಯ ಮತ್ತು ಪೂವಮ್ಮ ಅವರ ಮಕ್ಕಳು ಎಂ. ನಾರಾಯಣ, ವಾಸು ಮತ್ತು ಗಿರಿಯಪ್ಪ (ವೀರಪ್ಪ) ಇದಕ್ಕಿಂತಲೂ ಮುಂಚೆ ತಮ್ಮಯ್ಯ ಅವರು ಪರಮೇಶ್ವರಿ ಎಂಬುವರನ್ನು ಮದುವೆಯಾಗಿದ್ದರು. ಈ ಪರಮೇಶ್ವರಿ ಅವರಿಗೆ ಚಂದು ಮತ್ತು ಪೂವಪ್ಪ ಎಂಬ ಇಬ್ಬರು ಮಕ್ಕಳಿದ್ದರು. ವಿಧಿಯಾಟ ಯಾರು ಬಲ್ಲರು ಎಂಬಂತೆ ಪರಮೇಶ್ವರಿ ಅವರು ಅಕಾಲಿಕ ಮರಣ ಹೊಂದಿದ್ದರಿಂದ ತಮ್ಮಯ್ಯ ಅವರು ಪೂವಮ್ಮನವರನ್ನು ಮದುವೆಯಾದರು. ನಂತರ ಪರಮೇಶ್ವರಿ ಅವರ ಇಬ್ಬರು ಮಕ್ಕಳ ಜೊತೆ ಪೂವಮ್ಮನವರ ಮಕ್ಕಳ ಸಾಕುವ ಜವಾಬ್ದಾರಿ ತಮ್ಮಯ್ಯನದಾಗಿತ್ತು. ಇಂತಹ ಸ್ಥಿತಿಯಲ್ಲಿ ಕಿತ್ತು ತಿನ್ನುವ ಬಡತನ ಅವರನ್ನು ಸದಾ ಕಾಡುತ್ತಿತ್ತು.

ಭೂಮಾಲಿಕರ ಕೃಪೆಯಿಂದ ಗೇಣಿ ಬೆಳೆಗಾರರಾಗಿ, ಕೃಷಿ ಕಾರ್ಮಿಕರಾಗಿ, ಕುಲಕಸುಬಾದ ದೇವಾಡಿಗ ವೃತ್ತಿಯನ್ನು ಮುಂದುವರೆಸುತ್ತಾ ಬಂದವರು. ಸದಾಸಾಲದ ಮಡಿವಿನಲ್ಲಿ ಇದ್ದು ಕುಟುಂಬ ನಿರ್ವಹಿಸುವ ಜವಾಬ್ದಾರಿಯಿಂದ ಹಗಲಿರುಳು ದುಡಿಯುತ್ತಿದ್ದರು. ಇಂತಹ ಕಠಿಣವಾದ ಪರಿಸ್ಥಿಯಲ್ಲಿ ಒಂದು ಘಟನೆ ಜರುಗಿತು. ಅದು ವೀರಪ್ಪ ಮೊಯಿಲಿ ಅವರ ಮನಸ್ಸಿನ ಮೇಲೆ ತೀವ್ರವಾದ ಪರಿಣಾಮ ಬೀರಿತು. "ಈ ಕುಟುಂಬವನ್ನು ಒಂದು ಮಳೆಗಾಲದ ಮುಂಜಾನೆ ನಿಷ್ಕಾರುಣ್ಯವಾಗಿ ಧಣಿಗಳ ತಂಡವೊಂದು ಮನೆಯಿಂದ ಹೊರದಬ್ಬಿದ್ದು ಗಿರಿಯಪ್ಪನ ಜೀವನ ಮತ್ತು ಚಿಂತನೆಯ ಮೇಲೆ

ಎಂದೆಂದೂ ಅಳಿಯದ ಕಹಿನೆನಪಿನ ದುರ್ಘಟನೆಯಾಗಿ ದಾಖಲುಗೊಂಡಿತು. ಭೂಮಾಲೀಕನ ತಂಡ ಮನೆಗೆ ನುಗ್ಗಿ ಚಾಪೆ ಅಡುಗೆ ಪಾತ್ರೆಗಳು, ಮಡಿಕೆ ಸಹಿತ ಮುಳುಹುಲ್ಲಿನಿಂದ ಮಾಡಿದ ಗುಡಿಸಲಿನ ವಸ್ತುಗಳನ್ನು ಹೊರಕ್ಕೆಸೆಯಿತು. ಧೋ ಎಂದು ಎಡೆಬಿಡದೆ ಸುರಿಯುತ್ತಿದ್ದ ಮಳೆಯ ನಡುವೆಯೇ ಕುಟುಂಬ ಬೀದಿಪಾಲಾಯಿತು. ಬಟ್ಟಲಲ್ಲಿ ಉಣ್ಣುತ್ತಿದ್ದ ಅರ್ಧದಷ್ಟು ಗಂಜಿಯನ್ನು ಅಲ್ಲಿಯೇ ಬಿಟ್ಟ ಗಿರಿಯಪ್ಪ ಮುಷ್ಠಿ ಬಿಗಿಹಿಡಿದ. ಆದರೆ ಪ್ರತೀಕಾರಕ್ಕೆ ಮುನ್ನುಗ್ಗಲು ತಾಯಿ ಬಿಡಲಿಲ್ಲ. ತಾನು ದೊಡ್ಡವನಾಗಿ, ಉತ್ತಮ ಶಿಕ್ಷಣ ಪಡೆದು ಈ ಅವಮಾನಕ್ಕೆ ಪ್ರತೀಕಾರ ನೀಡುವ ಈ ಸಾಮಾಜಿಕ ಅನ್ಯಾಯವನ್ನು ಬುಡಸಹಿತ ಕಿತ್ತೊಗೆಯುವ ಪ್ರತಿಜ್ಞೆಯನ್ನು ಬಾಲಕ ಗಿರಿಯಪ್ಪ ಕೈಗೊಂಡ[೧]". ಆ ನಿಟ್ಟಿನಲ್ಲಿ ಗಿರಿಯಪ್ಪ ತನ್ನ ಕುಟುಂಬ ಅನುಭವಿಸಿದ ನೋವು, ದುಃಖ, ಬಡತನ ಮತ್ತು ಸಾಮಾಜಿಕ ಅನ್ಯಾಯವನ್ನು ಅಲ್ಲಗಳೆಯಲು ಕಷ್ಟಪಟ್ಟು ಓದಿ ಸಾಧನೆಯ ಹಾದಿಯನ್ನು ತುಳಿದರು. ಹೀಗೆ ಒಂದು ಸಾಮಾನ್ಯ ಬಡಕುಟುಂಬದಲ್ಲಿ ಹುಟ್ಟಿ ಬೆಳೆದವರು ವೀರಪ್ಪ ಮೊಯಿಲಿ ಅವರು.

ಬಾಲ್ಯ

ಮೊಯಿಲಿಯವರ ಜನ್ಮಸ್ಥಳ "ಮಾರ್ಪಾಡಿ" ಎಂಬ ಪುಟ್ಟ ಹಳ್ಳಿ, ಮೂಡಬಿದರೆಯ ಪಕ್ಕದ್ದು, ಮಂಗಳೂರಿನಿಂದ ಈಶ್ಯಾನದಲ್ಲಿ ಸುಮಾರು ೨೨ಮೈಲು ಅಂತರದಲ್ಲಿದೆ.

ಮೊಯಿಲಿ ಅವರ ಕುಟುಂಬ ಮೊದಲೆ ಹೇಳಿದ ಹಾಗೇ ಕಡುಬಡತನವನ್ನು ಹೊಂದಿದ ಕುಟುಂಬವಾಗಿತ್ತು. ಇಂತಹ ಸಂದರ್ಭದಲ್ಲಿ ಜಾತಿ ನಿಂದನೆ ಕಾಲದ ಸನ್ನಿವೇಶದಲ್ಲಿ ಸಹಜವೆಂಬಂತೆಯಿತ್ತು. ಇವೆಲ್ಲವು ಬಾಲಕ ವೀರಪ್ಪನ ಮೇಲೆ ಸದಾ ಅಚ್ಚಳಿಯದೆ ಉಳಿದವು. ಬಾಲಕನ ಧೈರ್ಯ ತೀಕ್ಷ್ಮ ಬುದ್ಧಿಯನ್ನು ಅರಿತ ಹೆತ್ತವರು ಎಷ್ಟೇ ಕಷ್ಟ ಬಂದರು ಸರಿ ಆತನಿಗೆ ಶಿಕ್ಷಣವನ್ನು ಕೂಡಿಸಬೇಕೆಂಬ ನಿರ್ಧಾರಕ್ಕೆ ಬಂದರು. ಬಾಲಕ ಗಿರಿಯಪ್ಪನಲ್ಲಿರುವ ಪ್ರತಿಭೆ ಪ್ರಶ್ನಿಸುವ ಮನೋಭಾವನೆ ಹೊಸದನ್ನು ತಿಳಿದುಕೊಳ್ಳಬೇಕೆಂಬ ಹಂಬಲ ಹೆಚ್ಚಾಗಿತ್ತು. ಜ್ಞಾನಕ್ಕಾಗಿ ಬಾಲಕ ಹಪಹಪಿಸುತ್ತಿರುವುದು ತಂದೆ-ತಾಯಿಗೆ ಸಂತಸವನ್ನು ನೀಡುತ್ತಿತ್ತು. ಇದನ್ನರಿತು ಅವರು ಕಲಿತರೆ ಸಾಮಾನ್ಯವಾದ ಒಂದು ನೌಕರಿಯನ್ನಾದರೂ ಮಾಡಬಲ್ಲನು ಎಂಬುದನ್ನು ಅರಿತು ಶಾಲೆಗೆ ಕಳುಹಿಸಲು ಮುಂದಾದರು.

"೧೯೪೭ರ ಶೈಕ್ಷಣಿಕ ವರ್ಷದ ಆರಂಭದಲ್ಲಿ ಒಂದನೆಯ ತರಗತಿಗೆ ಸೇರ್ಪಡೆಗೊಳಿಸಲು ಗಿರಿಯಪ್ಪನನ್ನು ತಾಯಿ ಮೂಡಬಿದರೆಯ ಜೈನ ದಿಗಂಬರ ಪ್ರಾಥಮಿಕ ಶಾಲೆಗೆ ಕರೆದುಕೊಂಡು ಹೋದರು. ಕಚೇರಿ ಸಿಬ್ಬಂದಿ ಮತ್ತು ಶಿಕ್ಷಕರ ಪ್ರಶ್ನಾವಳಿಗೆ ತತ್ತರಿಸಿದ ಆಕೆ ಅಗತ್ಯವಿದ್ದ ಮಾಹಿತಿಗಳನ್ನು ಗಲಿಬಿಲಿಯಿಂದ ಅಸ್ಪಷ್ಟವಾಗಿಯೇ ಒದಗಿಸಿದರು. ಮಗುವಿನ ಹೆಸರಿನ ಉಚ್ಚಾರವನ್ನು ಕೂಡಾ ಶಾಲೆಯ ಶಿಕ್ಷಕರು ಸರಿಯಾಗಿ ಕೇಳಿಸಿಕೊಳ್ಳದ ಕಾರಣ ಅವರು ಆತನ ಹೆಸರನ್ನು ವೀರಪ್ಪ ಎಂದು ದಾಖಲಿಸಿಕೊಂಡರು. ಮತ್ತು ದೇವಾಡಿಗ ಎಂಬುದರ ಸಮನಾರ್ಥಕವಾದ ಮೊಯಿಲಿ ಎಂಬುದನ್ನು ಆತನ ಜಾತಿಯ ಸೂಚಕವಾಗಿ ಸೇರ್ಪಡೆಗೊಳಿಸಿದರು. ತಾಯಿಯ ಮಾತುಗಳಿಂದ ಮಗುವಿನ ಜನ್ಮದಿನಾಂಕ ಸ್ಪಷ್ಟಗೊಳ್ಳದಿದ್ದುದರಿಂದ ಎಳೆಯ ಗಿರಿಯಪ್ಪನಿಗೆ ೧೯೪೦ ಜೂನ್ ೧೨ಎಂಬ ಉಹಾತ್ಮಕ ಜನ್ಮದಿನಾಂಕವನ್ನು ನಿಗದಿಗೊಳಿಸಲಾಯಿತು[೨]". ಗ್ರಾಮ ಚಾವಡಿಯ ದಾಖಲಾತಿಯಲ್ಲಿ ಜನ್ಮದಿನಾಂಕ ೧೯೪೦ ಜನೇವರಿ ೧೨ ಎಂದು ದಾಖಲುಗೊಂಡಿರುವುದು ಸ್ಪಷ್ಟವಾಯಿತು.

ವೀರಪ್ಪ ಮೊಯಿಲಿ ಅವರ ಬಾಲ್ಯಜೀವನದಲ್ಲಿ ತಮ್ಮ ತಂದೆಯ ತೀಕ್ಷಣವಾದ ವ್ಯಕ್ತಿತ್ವದ ಪ್ರಭಾವ ಅವರ ಮೇಲಾಯಿತು. ಅವರ ತಂದೆಯು ನಿರ್ವಹಿಸುತ್ತಿದ್ದ ಕಠಿಣ ಕೆಲಸ, ಪಡುತ್ತಿದ್ದ ಶ್ರಮ, ಅವರ ಸರಳ ಸ್ವಭಾವ ಸೌಜನ್ಯ ಮುಂತಾದವು ಇವರನ್ನು ಆಕರ್ಷಿಸಿದವು. ತಮ್ಮ ತಂದೆಯ ಜೊತೆ ದೇವಸ್ಥಾನ, ಉತ್ಸವ ಜಾತ್ರೆಗಳಲ್ಲಿ ಭಾಗಿಯಾಗಿ ವಾದ್ಯ-ಮದ್ದಳೆ ನುಡಿಸುತ್ತಿದ್ದರು. ಹೀಗೆ ಹೊಟ್ಟೆ ಪಾಡಿಗಾಗಿ ಅಲೆಯುತ್ತಾ ತಮ್ಮ ಬಾಲ್ಯಜೀವನವನ್ನು ಸುಂದರಗೊಳಿಸಿಕೊಂಡರು. ವೀರಪ್ಪನವರು ತಂದೆ-ತಾಯಿಯ ಅಕ್ಕರೆಯ ಮಗನಾಗಿ ಆರಂಭಿಕ ಹಂತದ ಶಿಕ್ಷಣದಲ್ಲಿ ಕಠಿಣವಾದ ಪರಿಶ್ರಮದಿಂದ ಓದಲು ಪ್ರಾರಂಭಿಸಿದರು. ತನ್ನ ಓರಿಗೆಯ ಸ್ನೇಹಿತರು ವೀರಪ್ಪನನ್ನು ನಡಿಸಿಕೊಳ್ಳುವ ರೀತಿ ಅಸಹಕಾರ, ಸಾಮಾಜಿಕ ಕೆಳಸ್ತರ ಸಮುದಾಯ ಇವೆಲ್ಲವು ಇವರನ್ನು ಕಾಡುತ್ತಿದ್ದವು. ಆದರೂ ಅವೆಲ್ಲವುಗಳನ್ನು ಅಲ್ಲಗಳೆದು ಸಾಧನೆಯು ಒಂದೇ ಇವರ ಮುಂದಿರುವ ಗುರಿಯಾಗಿತ್ತು. ಆ ಕಾರಣದಿಂದ ಇವರು ವಿದ್ಯಾಭ್ಯಾಸದಲ್ಲಿ ತಲ್ಲೀನರಾದರು.

೨.೨ ಶಿಕ್ಷಣ

ಮಾನವನ ಸಂಪೂರ್ಣ ವ್ಯಕ್ತಿತ್ವದ ಬೆಳವಣಿಗೆಗೆ ಶಿಕ್ಷಣವೇ ಮೂಲವಾಗಿದೆ. ಶಿಕ್ಷಣವು ಮಾನವನ ಜೀವನ ತರಬೇತಿ ಕ್ರಿಯೆ, ಜ್ಞಾನ, ಕೌಶಲ್ಯಗಳು, ಅಭಿವೃದ್ಧಿ ಉತ್ತಮ ನೀತಿ

ನಿಯಮ, ವಿನಯ, ಶಿಸ್ತು ಸಂಯಮ, ವಿವೇಕ ಮುಂತಾದ ಸಂಸ್ಕಾರವು ಶಿಕ್ಷಣದಿಂದ ದೊರೆಯುತ್ತವೆ. ಅಂತಹ ಸಂಸ್ಕಾರವನ್ನು ಶ್ರೀಯುತ ಎಂ.ವೀರಪ್ಪ ಮೊಯಿಲಿ ಅವರು ಪಡೆದವರು. ಮೊಯಿಲಿ ಅವರ ಶಿಕ್ಷಣದ ಮೊದಲ ಹೆಜ್ಜೆಗಳು ಕಠಿಣವಾಗಿದ್ದವು. ೧೯೪೦-೫೦ರ ದಶಕಗಳಲ್ಲಿ ಇನ್ನೂ ಗಟ್ಟಿಯಾದ ಅಸ್ಪೃಶ್ಯತೆಯಿತ್ತು. ಹಿಂದುಳಿದ ವರ್ಗ ಹಾಗೂ ಅಲ್ಪಸಂಖ್ಯಾತರಿಗೆ ಅಷ್ಟಾಗಿ ಶಿಕ್ಷಣದಲ್ಲಿ ಸವಲತ್ತುಗಳಿರಲಿಲ್ಲ. ಆದರೂ ಬಾಲಕ ಗಿರಿಯಪ್ಪನನ್ನು ಸಂಕಷ್ಟದ ನಡುವೆ ಶಾಲೆಗೆ ಕಳುಹಿಸಿದರು. ಪ್ರಾಥಮಿಕ ಶಾಲೆಯಲ್ಲಿ ಗಿರಿಯಪ್ಪ ಓದು, ಆಟ ಮತ್ತು ಪಾಠ ಯಾವುದರಲ್ಲಿಯೂ ಕಡಿಮೆ ಇರಲಿಲ್ಲ. ಆದರೂ ಸಹ ತನ್ನ ಸ್ನೇಹಿತರು ಈತನನ್ನು ತುಚ್ಛವಾಗಿ ನೋಡುತ್ತಿದ್ದಾಗ ಗಿರಿಯಪ್ಪನಲ್ಲಿ ಒಂದು ನಿರ್ವಾತ ಮನೋಭಾವನೆ ಎದ್ದು ಕಾಣುತ್ತಿತ್ತು. 'ನಾನು ಮಾತನಾಡುವ ಭಾಷೆ ಅವರು ಮಾತನಾಡುತ್ತಾರೆ. ನಾನು ತೊಡುವ ಬಟ್ಟೆ ಅವರು ತೊಡುತ್ತಾರೆ, ಆದರೆ ಯಾಕೆ ಅವರು ನನ್ನನ್ನು ಕೀಳು ಮನೋಭಾವನೆಯಿಂದ ನೋಡುತ್ತಾರೆ' ಎಂಬ ಭಾವನೆ ಸದಾ ಇವರನ್ನು ಕಾಡುತಿತ್ತು.

ಆದರೆ ಗ್ರಾಮದ ಜನರು ಆತನ ಜೀವನೋತ್ಸಾಹಕ್ಕೆ ಬೆರಗಾಗಿದ್ದರು. ಕಠಿಣ ಪರಿಶ್ರಮ ಗ್ರಾಮದ ಜನರೊಂದಿಗೆ ಬಾಲಕನಿಗೆ ವಿಚಿತ್ರವಾದ ನಂಟು ಬೆಳೆಸಿತ್ತು ಅವರು ಆತನ ಮಾತುಗಳನ್ನು ಆಲಿಸುತ್ತಿದ್ದರು. ಆತನ ಅಪೇಕ್ಷೆಯಂತೆ ವರ್ತಿಸುತ್ತಿದ್ದರು. ಬಾಲಕ ಗಿರಿಯಪ್ಪನ ಬುದ್ಧಿಶಕ್ತಿಯು ಹೆತ್ತವರಿಗೆ ಹೆಮ್ಮೆಯ ವಿಷಯವಾಗಿತ್ತು. ಆ ಸಮಯದಲ್ಲಿ ಆ ಪ್ರದೇಶದಲ್ಲಿ ನಡೆಯುತ್ತಿರುವ ಜನಪದ ಕಲಾ ಪ್ರದರ್ಶನಗಳು ಬಾಲಕ ಗಿರಿಯಪ್ಪನ ಮೇಲೆ ಪ್ರಭಾವ ಬೀರಿದವು. ಇವು ಮುಂದೆ ಆತನನ್ನು ಒಬ್ಬ ಯಕ್ಷಗಾನ ಕಲಾವಿದನಾಗಲಿಕ್ಕೆ ಸಹಾಯಕವಾದವುಗಳು. ಜೊತೆಗೆ ಆತನಲ್ಲಿ ವಯಸ್ಸಿನಿಗಿಂತ ಹೆಚ್ಚಿನ ಪ್ರಬುದ್ಧತೆಯನ್ನು ಆ ಪರಿಸರದ ಜನಪದ ಕಲೆಗಳು ನೀಡಿದವು.

ಬಾಲಕ ಗಿರಿಯಪ್ಪ ತನ್ನ ಪ್ರಾಥಮಿಕ ಶಾಲೆಯನ್ನು ಮೂಡಬಿದರೆಯ ಜೈನದಿಗಂಬರ ಪ್ರಾಥಮಿಕ ಶಾಲೆಗೆ ಸೇರುವ ಮೂಲಕ ತನ್ನ ಓದಿನ ಪರಿಸರವಾಗಿ ಪ್ರವೇಶಿಸಿಕೊಂಡರು. ಪ್ರಾಥಮಿಕ ಶಾಲೆಯಲ್ಲಿ ಶಿಕ್ಷಕರು ಮೊಯಿಲಿಯವರನ್ನು ಕುತೂಹಲದಿಂದ ನೋಡುತ್ತಿದ್ದರು. ಆದರೆ ತನ್ನ ಸುತ್ತಮುತ್ತಲಿನ ಜನರ ಭೇದಭಾವದ ಸಾಮಾಜಿಕ ನಿಲುವನ್ನು ಕ್ರೂರವಾದ ಜಾತಿ ವ್ಯವಸ್ಥೆಯ ಬಗೆಯನ್ನು ಆ ಸಮಯದಲ್ಲಿಯೇ ಮನವರಿಕೆಮಾಡಿಕೊಂಡರು. ಸರಳ

ಸೂಕ್ಷ್ಮ ಸ್ವಭಾವದ ವ್ಯಕ್ತಿಯಾದ ಗಿರಿಯಪ್ಪ ಆತನ ಸ್ನೇಹಿತರ ಸಿಡುಕುತನದಿಂದ ಬೇಸತ್ತಿದ್ದನು. ಅವುಗಳನ್ನು ಈ ಪ್ರಾಥಮಿಕ ಹಂತದ ಶಿಕ್ಷಣದಲ್ಲಿ ಪ್ರಶ್ನಿಸುವ ಮನೋಬಲವಿಲ್ಲದೇ ಸುಮ್ಮನೆ ಕಾಲದಲ್ಲಿ ನೂಕಬೇಕಾಗಿತ್ತು. ಒಬ್ಬ ವ್ಯಕ್ತಿಯ ಸಾಮಾಜಿಕ ಸ್ಥಾನಮಾನ ಮತ್ತು ಗೌರವಗಳು ಹುಟ್ಟಿನಿಂದ ಬಂದು ಮರಣದವರೆಗೆ ಉಳಿಯುತ್ತವೆ ಎಂಬ ಮನೋಭಾವನೆಯ ಕಾಲ ಅದಾಗಿತ್ತು. ಹೀಗೆ ಮುಂದುವರೆಯುವ ಸಾಮಾಜಿಕ ಗೌರವ ಪರಮಾಧಿಕಾರದಿಂದ ಕೂಡಿದ್ದು ಎಂಬುದನ್ನು ಅಂದು ಅಲ್ಲಗೆಳೆಯುವಂತಿರಲಿಲ್ಲ. ಹೀಗಾಗಿ ಬಾಲಕ ಗಿರಿಯಪ್ಪನಿಗೆ ತನ್ನ ತಂದೆಯ ದುಡಿಮೆಯೇ ಸ್ಫೂರ್ತಿಯಾಯಿತು. ಸದಾ ಅನ್ವೇಷಣೆಯ ದಾರಿಯನ್ನು ಶಿಕ್ಷಣದಲ್ಲಿ ಕಂಡುಕೊಂಡು ಈ ಮೂಲಕ ಮೊಯಿಲಿ ಅವರು ಪುಸ್ತಕಗಳನ್ನು ಓದುವ ಹವ್ಯಾಸ ಬೆಳಸಿಕೊಂಡರು.

ಮುಂದೆ ಆರನೇ ತರಗತಿಯಿಂದ ಏಳನೇ ತರಗತಿಯವರೆಗೆ ಮೂಡಬಿದರೆಯ ಸರಕಾರಿ ಶಾಲೆಗೆ ಹೋಗಬೇಕಾಗಿ ಬಂತು. ಜೈನದಿಗಂಬರ ಶಾಲೆಯಲ್ಲಿ ದುಬಾರಿ ಶುಲ್ಕವನ್ನು ಪಾವತಿಸಲು ಸಾಧ್ಯವಿಲ್ಲದ ಕಾರಣ ಅನಿವಾರ್ಯವಾಗಿ ಸರಕಾರಿ ಶಾಲೆಗೆ ಹೋಗಬೇಕಾಯಿತು. ಆ ಸಂದರ್ಭದಲ್ಲಿ ಮೊಯಿಲಿ ಆ ಶಾಲೆಯ ಶಿಕ್ಷಕರಾದ ಬಸಪ್ಪ ಶೆಟ್ಟಿ, ಹೂವಯ್ಯ ಶೆಟ್ಟಿ, ಸೀತಾರಾಮ್ ಶೆಟ್ಟಿ, ರುಕ್ಮಯ್ಯ ಶೆಟ್ಟಿಗಾರ್, ರಾಮರಾವ್ ಹಾಗೂ ವೆಂಕಟರಮನ ಭಟ್ ಮುಂತಾದ ಶಿಕ್ಷಕರಿಂದ ಮಾರ್ಗದರ್ಶನ ಪಡೆದುಕೊಂಡರು. ಇದು ಮೊಯಿಲಿ ಅವರ ಜೀವನದಲ್ಲಿ ಆತ್ಮವಿಶ್ವಾಸ ಮೂಡಿಸಿತು. ಶಿಕ್ಷಕರು ಹೇಳುತ್ತಿದ್ದ ಪಾಠವನ್ನು ಚನ್ನಾಗಿ ಅಭ್ಯಸಿಸಿ ಉತ್ತಮ ಅಂಕವನ್ನು ಪಡೆದುಕೊಂಡರು. ಜೊತೆಗೆ ಹಲವಾರು ವಿಷಯಗಳಿಗೆ ಸಂಬಂಧಿಸಿದಂತೆ ಪಠ್ಯೇತರ ಪುಸ್ತಕಗಳನ್ನು ಓದಲು ಪ್ರಾರಂಭಿಸಿದರು. ಜೀವನ ಚರಿತ್ರೆ, ಸಾಹಿತ್ಯ, ಇತಿಹಾಸ, ತತ್ವಶಾಸ್ತ್ರ, ರಾಜ್ಯಶಾಸ್ತ್ರ ಮುಂತಾದ ವಿವಿಧ ವಿಷಯಗಳನ್ನು ಅಧ್ಯಯನ ಮಾಡಿದರು. ಈ ಅಪಾರವಾದ ಜ್ಞಾನ ರಾಶಿಯಿಂದ ಮೊಯಿಲಿ ಅವರ ಜ್ಞಾನ ವಿಸ್ತರಣೆಗೊಳ್ಳುತ್ತಾ ಹೋಯಿತು. ಶಾಲಾದಿನಗಳಲ್ಲಿ ಮೊಯಿಲಿ ಅವರು ಕನ್ನಡ ಮತ್ತು ಇತಿಹಾಸ ವಿಷಯಗಳ ಬಗ್ಗೆ ಹೆಚ್ಚು ಆಸಕ್ತಿ ಹೊಂದಿದ್ದರು. ಗಣಿತ ವಿಷಯದಲ್ಲಿ ಮಾತ್ರ ಹಿಂದಿದ್ದರು. ಬಾಲಕ ಗಿರಿಯಪ್ಪ ಏಳನೆಯ ತರಗತಿಯಲ್ಲಿರುವಾಗಲೇ ಸಾಹಿತ್ಯ ಕ್ಷೇತ್ರದಲ್ಲಿ ಮೊದಲ ಹೆಜ್ಜೆಯ ಗುರುತನ್ನು ಮೂಡಿಸಿದರು. ಆ ಸಮಯದಲ್ಲಿ ಆತನ ಸೃಷ್ಟಿಶೀಲ ಸಾಹಿತ್ಯಕೃಷಿ ಹೊರಜಗತ್ತಿಗೆ ಪರಿಚಯವಾಯಿತು. ಅಸ್ಪಷ್ಟವಾಗಿ ಒಂದು ವಸ್ತುವನ್ನು ಆಯ್ಕೆ ಮಾಡಿಕೊಂಡು ಬರೆದಿಟ್ಟ ಕಥೆ ಮುಂದೆ “ಸುಳಿಗಾಳಿ” ಎಂಬ ಕಾದಂಬರಿಯಾಗಿ ನಂತರ

೧೯೯೯ರಲ್ಲಿ ಪ್ರಕಟಗೊಂಡಿತು. ಜೊತೆಗೆ ಚಲನಚಿತ್ರವಾಗಿಯೂ ಪ್ರದರ್ಶನವನ್ನು ಕಂಡಿತು. ಹೀಗೆ ಸಾಹಿತ್ಯ ಕ್ಷೇತ್ರದಲ್ಲಿ ತನ್ನ ಸ್ನೇಹಿತರೊಂದಿಗೆ ಯಕ್ಷಗಾನ 'ದೇವಿ ಮಹಾತ್ಮೆ'ಯನ್ನು ಪ್ರದರ್ಶಿಸಿ ಜನರ ಮನ್ನಣೆ ಪಡೆದುಕೊಂಡರು.

ಪ್ರಾಥಮಿಕ ಶಿಕ್ಷಣ ಪೂರೈಸಿ ಪ್ರೌಢಶಾಲಾ ಶಿಕ್ಷಣವನ್ನು ಮೂಡಬಿದರೆಯಲ್ಲಿಯ ಜೈನ ಹೈಸ್ಕೂಲಿಗೆ ಸೇರಿದರು. ಆ ಸಮಯದಲ್ಲಿ ಮೊಯಿಲಿ ಅವರ ಕಾರ್ಯಕ್ಷೇತ್ರ ವಿಸ್ತರಣೆಯನ್ನು ಪಡೆಯುತ್ತಿತ್ತು. ಆ ಶಾಲೆಯ ಶಿಕ್ಷಕರ ಮಾರ್ಗದರ್ಶನ ಮೊಯಿಲಿ ಅವರ ಮೇಲೆ ಗಾಢವಾದ ಪರಿಣಾಮವ ಬೀರಿತು. ಆ ಶಾಲೆಯಲ್ಲಿರುವಾಗಲೇ ಭಗವಾನ ಮಹಾವೀರನ ಕುರಿತು ಮೊಯಿಲಿ ಅವರು ಪ್ರಥಮವಾಗಿ ಒಂದು ಕವನವನ್ನು ರಚಿಸಿದರು. ಮುಂದೆ ಅದು 'ಗುರುದೇವ' ಎಂಬ ಮಾಸಪತ್ರಿಕೆಯಲ್ಲಿ ಪ್ರಕಟವಾಯಿತು. ಹೀಗೆ ತನ್ನ ಶಾಲಾ ದಿನಗಳಲ್ಲಿ ಆ ಊರಿನಲ್ಲಿ ನಡೆಯುತ್ತಿರುವ ಯಾವುದೇ ಸಾಹಿತ್ಯ ಮತ್ತು ಸಾಹಿತ್ಯೇತರ ಸಭೆ ಸಮಾರಂಭದಲ್ಲಿ ಭಾಗಿಯಾಗಿ ತಮ್ಮ ಸಾಂಸ್ಕೃತಿಕ ಮನಸ್ಸನ್ನು ವಿಸ್ತರಿಸಿಕೊಂಡರು. ಆ ಪರಿಸರದ ಸಾಹಿತ್ಯಿಕ ಕಾರ್ಯಕ್ರಮಗಳು ಒಬ್ಬ ಸಾಹಿತಿ ಚಿಂತಕನಾಗಲಿಕ್ಕೆ ಪ್ರೇರಣೆಯನ್ನು ನೀಡಿದವು.

ಮೊಯಿಲಿ ಅವರು ಹೈಸ್ಕೂಲಿನಲ್ಲಿ ಪಾಠದ ಜೊತೆಗೆ ಕ್ರೀಡೆಯಲ್ಲಿಯೂ ಹೆಚ್ಚಿನ ಆಸಕ್ತಿಯನ್ನು ಹೊಂದಿದ್ದರು. ಪ್ರಬಂಧ ಸ್ಪರ್ಧೆ, ಭಾಷಣಸ್ಪರ್ಧೆ, ಹಾಗೂ ಶಾಲಾ ಸಂಸತ್ತಿನಲ್ಲಿ ನೀಡಿದ ಜವಾಬ್ದಾರಿಯನ್ನು ಅಚ್ಚುಕಟ್ಟಾಗಿ ನಿಭಾಯಿಸುತ್ತಿದ್ದರು.

ಹೈಸ್ಕೂಲ್ ವಿದ್ಯಾಭ್ಯಾಸದಲ್ಲಿ ತಮ್ಮ ಗುರುಗಳಾದ ಎಂ.ಕೆ. ಅಯಂತರಾಜ್, ರಘುಚಂದ್ರ ಶೆಟ್ಟಿ, ಕೆ. ಕಾಂತರೈ ಮುಂತಾದ ಶಿಕ್ಷಕರ ಸಲಹೆ ಮಾರ್ಗದರ್ಶನವನ್ನು ಪಡೆದುಕೊಂಡು ಮುನ್ನಡೆದರು. "ಅವರ ಹೊಸ ಸಹಪಾಠಿಗಳು ಅವರತ್ತ ದೂರಿನಿಂದ ನೋಡುತ್ತಿದ್ದರು. ಆದರೆ ಅವರು ಮೊಯಿಲಿಯನ್ನು ಅಪಾರ್ಥ ಮಾಡಿಕೊಂಡಿದ್ದರು. ಮೊಯಿಲಿಯವರು ಅವರನ್ನು ಎದುರಿಸಲು ಮತ್ತು ಅವರ ನಿರ್ಲಜ್ಜತೆಗೆ ಉತ್ತರಿಸಲು ಸಮರ್ಥರಾಗಿದ್ದರು. ನಿಧಾನವಾಗಿ ಮತ್ತು ವ್ಯವಸ್ಥಿತವಾಗಿ ಅವರು ತಮ್ಮ ವ್ಯಕ್ತಿತ್ವವನ್ನು ವಿಸ್ತರಿಸಕೊಂಡರು. ನಾಯಕತ್ವದ ಹಾಗೂ ಸಾಮರ್ಥ್ಯದ ಸ್ಥಾನವನ್ನು ಪ್ರಾಪ್ತಿಸಿಕೊಂಡರು." ಎಸ್.ಎಸ್.ಎಲ್.ಸಿ. ಪೂರ್ಣಗೊಳ್ಳಲು ಮೊಯಿಲಿಯರವಲ್ಲಿ ವಿಶೇಷವಾಗಿ ಜ್ಞಾನ ವೃದ್ಧಿಯಾಯಿತು. ಆ ಸಮಯದಲ್ಲಿ ದಿನದ ಬಹುಕಾಲವನ್ನು ಶಾಲಾ ಗ್ರಂಥಾಲಯದಲ್ಲಿಯೇ ಕಳೆಯುತ್ತಿದ್ದರು. ಸಾಹಿತ್ಯ ಮತ್ತು ಇತಿಹಾಸದ ವಿಷಯಗಳು ಇವರಿಗೆ ಅಚ್ಚುಮೆಚ್ಚು.

ದುರ್ಗಸಿಂಹನ ಪಂಚತಂತ್ರ, ಅರೆಬಿಯನ್ ನೈಟ್ಸ್ ನಂತಹ ಕೃತಿಗಳು ಅವರಿಗೆ ಇಷ್ಟವಾದವು. ಜೊತೆಗೆ ಪಂಜೆಮಂಗೇಶರಾಯರ ಕಥೆಗಳು ಮೊಯಿಲಿಯವರಿಗೆ ಸ್ಫೂರ್ತಿದಾಯಕವಾದವು. ಇವುಗಳ ಜೊತೆಗೆ ತನ್ನ ಪರಿಸರದ ಮಹಾಭಾರತ ಮತ್ತು ಭಾಗವತ ಗೀತೆಗಳು ಮುಂತಾದವುಗಳು ಮೊಯಿಲಿಯವರಿಗೆ ಜ್ಞಾನದ ಹಸಿವನ್ನು ಇಂಗಿಸಿದವು. ಇವುಗಳೊಂದಿಗೆ ಇಂಗ್ಲೀಷ ಭಾಷೆಯ ಮೇಲೆ ಪ್ರಭುತ್ವವನ್ನು ಸಾಧಿಸಿದರು.

ಮೂಡಬಿದರೆಯಲ್ಲಿ ಹೈಸ್ಕೂಲ್ ವಿದ್ಯಾಭ್ಯಾಸವನ್ನು ಪೂರೈಸಿ ೧೯೫೮ರಲ್ಲಿ ಮೊಯಿಲಿಯವರು ಪದವಿ ಪೂರ್ವ ಅಧ್ಯಯನಕ್ಕಾಗಿ ಮಂಗಳೂರಿನ ಸರಕಾರಿ ಕಾಲೇಜನ್ನು ಸೇರಿದರು. ಆ ಕಾಲೇಜಿನಲ್ಲಿ ಇತಿಹಾಸ, ಅರ್ಥಶಾಸ್ತ್ರ ಮತ್ತು ತರ್ಕಶಾಸ್ತ್ರವನ್ನು ವಿಶೇಷವಾಗಿ ಅಧ್ಯಯನ ಮಾಡಿದರು.

ಮೊಯಿಲಿಯವರು ಪದವಿ ಪೂರ್ವ ಶಿಕ್ಷಣವನ್ನು ಮುಗಿಸಿ ಬಿ.ಎ.ವ್ಯಾಸಂಗವನ್ನು ಕೈಗೊಂಡರು. ಈ ಪದವಿ ಅಧ್ಯಯನದ ನಾಲ್ಕು ವರ್ಷದ ಅವಧಿಯಲ್ಲಿ ತಮ್ಮ ಸಂಬಂಧಿಕರ ಆಸರೆಯಲ್ಲಿಯೇ ಬೆಳೆದವರು. ಕೌಟುಂಬಿಕ ಜವಾಬ್ದಾರಿಗಳು ಬಾಲಕ ಮೊಯಿಲಿ ಅದರ ಮೇಲೆ ಬೀಳಬಾರದೆಂಬ ಉದ್ದೇಶದಿಂದ ಆ ಮನೆಯಲ್ಲಿಯೇ ಒಂದು ಕೋಣೆಯನ್ನು ನೀಡುವುದರ ಮೂಲಕ ಮೊಯಿಲಿ ಅವರ ವಿದ್ಯಾಭ್ಯಾಸಕ್ಕೆ ಆಶ್ರಯದಾತರಾದರು. ಬಿ.ಎ. ಓದುತ್ತಿರುವಾಗಲೇ ಮೊಯಿಲಿ ಅವರು ಸಾಮಾಜಿಕ ಸಮಸ್ಯೆಗಳಾದ ಬಡತನ, ಆಹಾರಕ್ಕಾಗಿ ಅಲೆದಾಡುವ ವ್ಯಕ್ತಿಗಳ ಬದುಕನ್ನು ಸಮೀಪದಿಂದ ನೋಡಿ ಆ ಬಡವರ ಕುರಿತು ಚಿಂತನೆಗಳನ್ನು ಮಾಡಲು ಪ್ರಾರಂಭಿಸಿದರು. ಜೊತೆಗೆ ಸಾಮಾಜಿಕ ಶೋಷಣೆ ಎಂಬುದನ್ನು ಮೊಯಿಲಿಯವರು ಆ ಸಮಯದಲ್ಲಿಯೇ ಅನುಭವಿಸಿದರು. ಮೊಯಿಲಿ ಅವರ ಕಾಲೇಜಿನ ದಿನಮಾನದಲ್ಲಿ ಮುಂದಾಳತ್ವವನ್ನು ವಹಿಸುತ್ತಿದ್ದರು. ಬೆಳೆಯುವ ಸಿರಿ ಮೊಳಕೆಯಲ್ಲಿ ಎಂಬಂತೆ ಕಾಲೇಜಿನ ಜೀವನದಲ್ಲಿ ಮೊಯಿಲಿಯವರು ವ್ಯಾಪಕ ಓದಿನ ಜೊತೆಗೆ ಕ್ರೀಯಾ ಶೀಲ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುತ್ತಿದ್ದರು. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಭೂಮಾಲಿಕರು ಹಿಂದುಳಿದವರನ್ನು ಮತ್ತು ಬಡವರನ್ನು ಶೋಷಣೆ ಮಾಡುತ್ತಿರುವುದು ತೀವ್ರವಾಗಿ ಮೊಯಿಲಿಯವರ ಮನ ಕಲಕಿತು. ಈ ಸಾಮಾಜಿಕ ಶೋಷಣೆಯೂ ಕೇವಲ ದಕ್ಷಿಣ ಕನ್ನಡ ಜಿಲ್ಲೆಗೆ ಮಾತ್ರ ಸೀಮಿತವಾಗಿರದೆ ಇಡೀ ವಿಶ್ವವನ್ನೇ ವ್ಯಾಪಿಸಿಕೊಂಡಿರುವುದು ಮೊಯಿಲಿಯವರ ಗಮನಕ್ಕೆ ಬಂದಿತು. ಆ ಸಮಯದಲ್ಲಿ ಮೊಯಿಲಿಯವರು ಸ್ವಾಮಿ

ವಿವೇಕಾನಂದರ ಕೃತಿಗಳನ್ನು ಸಂಗ್ರಹಿಸುವುದರ ಜೊತೆಗೆ ವಿವೇಕಾನಂದರ ಕೃತಿ ಓದನ್ನು ಮುಂದುವರೆಸಿದರು. ವಿವೇಕಾನಂದರು ತಮ್ಮ ವಿಚಾರವನ್ನು ಇಂತಹ ಕೃತಿಗಳ ಮೂಲಕವಾಗಿ ಜನರಿಗೆ ತಲುಪಿಸಿದ್ದನ್ನು ಮೊಯಿಲಿ ಅವರು ಗಮನಿಸಿದರು. ಇವುಗಳೆಲ್ಲದರಿಂದ ಪ್ರಭಾವಿತರಾದ ಮೊಯಿಲಿಯವರು ವಿವೇಕಾನಂದರು ಹೇಳಿದ ಮಾತುಗಳಿಂದ ಸಂಪೂರ್ಣವಾಗಿ ಚಿಂತನ ಶೀಲ ಹೋರಾಟಗಾರರಾಗಿ ಹೊರಹೊಮ್ಮಿದರು.

"ಅಸ್ತಿತ್ವಕ್ಕಾಗಿ ಹೋರಾಡುವ ಅಸಹಾಯಕ ಪರಿಸ್ಥಿತಿಯಲ್ಲಿ ಸಿಲುಕಿರುವ ಭಾರತೀಯರು ಜ್ಞಾನದ ಉತ್ಸಾಹದ ಅವಕಾಶಗಳಿಂದ ವಂಚಿತರಾಗಿದ್ದರೆ. ದೀರ್ಘಕಾಲ ಬುದ್ಧಿವಂತ ಸುರಕ್ಷಿತ ವರ್ಗದವರ ಉನ್ನತಿಯಂತೆ, ಯಂತ್ರಗಳ ಹಾಗೆ ಅವರೆಲ್ಲರೂ ದುಡಿಯುತ್ತಿದ್ದಾರೆ. ಮತ್ತು ದುಡಿಮೆಯ ಫಲದ ಬಹುತೇಕ ಭಾಗವನ್ನು ಅವರಿಂದ ಕಸಿದುಕೊಳ್ಳಲಾಗಿದೆ. ಎಲ್ಲ ದೇಶಗಳಲ್ಲೂ ಇದೇ ಪರಿಸ್ಥಿತಿ ಇದೆ. ಆದರೆ ಕಾಲ ಬದಲಾಗಿ ಕೆಳವರ್ಗದ ಜನತೆ ನಿಧಾನವಾಗಿ ಜಾಗೃತರಾಗುತ್ತಿದ್ದಾರೆ ಮತ್ತು ನ್ಯಾಯಯುತ ಹಕ್ಕುಗಳ ಹೋರಾಟಕ್ಕಾಗಿ ಸಂಘಟಿತರಾಗುತ್ತಿದ್ದಾರೆ. ಯುರೋಪ್ ಮತ್ತು ಅಮೇರಿಕಾದ ಸಮುದಾಯ ಮೊದಲಿಗರಾಗಿ ಇಂತಹ ಜಾಗೃತಿಯನ್ನು ಸಾಧಿಸಿದ್ದಾರೆ. ಕೆಳವರ್ಗದವರು ನಡೆಸುತ್ತಿರುವ ಕೆಲವು ಹೋರಾಟಗಳು ಭಾರತದಲ್ಲಿಯೇ ಈ ರೀತಿ ಜಾಗೃತಿ ಉಂಟಾಗಿರುವುದಕ್ಕೆ ನಿದರ್ಶನವಾಗಿದೆ. ಇದರಿಂದ ಕೆಳವರ್ಗದವರನ್ನು ಹತ್ತಿಕ್ಕಲು ಸಾಧ್ಯವಿಲ್ಲ. ಕೆಳವರ್ಗದವರ ನ್ಯಾಯ ಬದ್ಧ ಹಕ್ಕುಗಳನ್ನು ಒದಗಿಸಲು ಸಹಕರಿಸುವದರಲ್ಲಿಯೇ ಮೇಲ್ವರ್ಗದ ಹಿತಾಸಕ್ತಿ ಇನ್ನು ಮುಂದೆ ಉಳಿದುಕೊಂಡಿರುತ್ತದೆ".

ವಿವೇಕಾನಂದರ ಈ ಮೇಲಿನ ಮಾತುಗಳು ಮೊಯಿಲಿ ಅವರ ಸೂಕ್ಷ್ಮ ಮನಸ್ಸಿನ ಬಾಗಿಲವನ್ನು ತೆರೆದು ಚಿಂತನೆಯ ದಾರಿಯನ್ನು ತೋರಿಸಿದವು. ಹೀಗಾಗಿ ಮೊಯಿಲಿ ಅವರು ಮೂಢನಂಬಿಕೆಯನ್ನು ಅಲ್ಲಗೆಳೆಯುತ್ತಾರೆ. ಜಾತಿ, ಸಮುದಾಯ, ಪೊಳ್ಳ ಮಂತ್ರವಾದಿಗಳು ಇವರೆಲ್ಲರನ್ನೂ ಕಾಲೇಜಿನ ದಿನಮಾನಗಳಲ್ಲಿಯೇ ವಿರೋಧಿಸುತ್ತಿದ್ದರು. ಮಂಗಳೂರು ಕಾಲೇಜು ದಿನಮಾನದಲ್ಲಿ ಮೊಯಿಲಿ ಅವರ ಜೀವನ ಶೈಲಿ ಹೊಸ ತಿರುವನ್ನು ಪಡೆಯಿತು.

ಬಿ.ಎ. ಪದವಿಯ ನಂತರ ಮೊಯಿಲಿ ಅವರಿಗೆ ೧೯೬೨ರಲ್ಲಿ ಲಂಡನ್ ಸ್ಕೂಲ್ ಆಫ್ ಏಕನಾಮಿಕ್ಸ್ ಸೇರಬೇಕೆಂಬ ಆಸಕ್ತಿ ಇತ್ತು ಆದರೆ ಕುಟುಂಬದ ಬಡತನದಿಂದ ಸಾಧ್ಯವಾಗಲಿಲ್ಲ ಮುಂದೆ ಸಮಾಜದಲ್ಲಿರುವ ಅನ್ಯಾಯ, ಬಡವರ ಮೇಲೆ ಆಗುವ ದಬ್ಬಾಳಿಕೆ

ಗೇಣಿದಾರರ ಅಟ್ಟಹಾಸ ಇವೆಲ್ಲದರ ವಿರುದ್ದ ಹೋರಾಡುವ ಛಲದಿಂದ ಮೊಯಿಲಿ ಅವರು ಬೆಂಗಳೂರಿನ ಸರಕಾರಿ ಕಾನೂನು ಕಾಲೇಜಿನಲ್ಲಿ ಪ್ರವೇಶ ಪಡೆದರು. ಅಲ್ಲಿ ಕಾನೂನಿನ ಕುರಿತು ಅಪಾರವಾದ ಜ್ಞಾನವನ್ನು ಪಡೆದುಕೊಳ್ಳುವದರ ಮೂಲಕ ಖ್ಯಾತ ನ್ಯಾಯವಾದಿಗಳಾಗಿ ಜನರ ಮನಸ್ಸನ್ನು ಗೆದ್ದುಕೊಂಡರು. ಆ ಅಧ್ಯಯನದ ಫಲವೇ ಇಂದು ಮೊಯಿಲಿ ಅವರನ್ನು ರಾಷ್ಟ್ರದ ಕಾನೂನು ಸಚಿವರಾಗಿ ಕಾರ್ಯನಿರ್ವಹಿಸಿ, ನಂತರ ಕಾರ್ಪೋರೇಟ್ ಸಚಿವರನ್ನಾಗಿ ಮಾಡಿಸಿದೆ.

ಕಾನೂನು ಅಧ್ಯಯನ ಮಾಡುತ್ತಿರುವಾಗಲೇ ಮೊಯಿಲಿ ಅವರು ಪ್ರೇಮ ಸುಳಿಗಾಳಿಗೆ ಸಿಲುಕಿದರು. ೧೯೬೫ರಲ್ಲಿ ಮಾಲತಿಯವರನ್ನು ಬಾಳ ಸಂಗಾತಿಯಾಗಿಸಿಕೊಂಡರು.

೩.೪ ಸಾರ್ವಜನಿಕ ಬದುಕು

ವೀರಪ್ಪ ಮೊಯಿಲಿ ಅವರದು ದೃಢ ನಿರ್ಧಾರದ ಎತ್ತರದ ನಿಲುವು. ಸ್ವಂತಿಕೆಯಿಂದ ಏನಾದರೂ ಸಾಧಿಸಬೇಕೆಂಬ ಛಲ ಅವರಲ್ಲಿತ್ತು. ದೀನ–ದಲಿತರ ಉದ್ಧಾರಕ್ಕಾಗಿ ಶ್ರಮಿಸಬೇಕೆಂಬುದು ಯೋಚನೆ. ಶೋಷಿತರಿಗೆ ನ್ಯಾಯವನ್ನು ದೊರಕಿಸಿ ಕೊಡುವ ಒಂದು ಖಚಿತವಾದ ನಿರ್ಧಾರಕ್ಕೆ ಬಂದು ವಕೀಲಿ ವೃತ್ತಿಯನ್ನು ಪ್ರಾರಂಭಿಸಿದರು. ಆರಂಭದಲ್ಲಿ ಮೊಯಿಲಿ ಅವರು ಮಂಗಳೂರಿನ ನ್ಯಾಯವಾದಿಗಳಾದ ವಾಯ್.ಕೆ. ಪೂಜಾರಿ ಅವರ ಸಹಾಯಕರಾಗಿ ಒಂದು ವರ್ಷಕಾಲ ಸೇವೆ ಸಲ್ಲಿಸಿದರು. ಅನಂತರ ಕಾರ್ಕಳದಲ್ಲಿ ಸ್ವತಂತ್ರ ನ್ಯಾಯವಾದಿಗಳಾಗಿ ತಮ್ಮ ವೃತ್ತಿ ಜೀವನವನ್ನು ಆರಂಭಿಸಿದರು.

ಹೊಸ ನ್ಯಾಯವಾದಿಗಳು ಕಾರ್ಕಳದಲ್ಲಿ ಸೇವೆಯನ್ನು ಸಲ್ಲಿಸುತ್ತಿರುವಾಗ ಆರಂಭಿಕ ಕಷ್ಟದ ದಿನಗಳು ಎದುರಾದವು. ಸದಾ ಕಷ್ಟಗಳಲ್ಲಿಯೇ ಬೆಳೆದ ಮೊಯಿಲಿ ಅವರಿಗೆ ಇದು ಹೊಸದೆನಿಸಲಿಲ್ಲ. ಅವೆಲ್ಲವುಗಳನ್ನು ಲಘುವಾಗಿ ನಿಭಾಯಿಸಿ ಯಶಸ್ಸಿನ ಏಣಿಯನ್ನು ಏರಲು ಪ್ರಯತ್ನಿಸಿದರು. ಆ ಸಮಯದಲ್ಲಿಯೇ ಭೂಸುಧಾರಣೆಗೆ ಸಂಬಂಧ ಪಟ್ಟ ಅನೇಕ ದೂರುಗಳನ್ನು ಬಗೆಹರಿಸಿದರು. ಆರಂಭಿಕವಾಗಿ ಜನರ ಗಮನವನ್ನು ಇಂತಹ ಕಷ್ಟವಾದ ದೂರುಗಳನ್ನು ಗೆಲ್ಲುವುದರ ಮೂಲಕ ಸೆಳೆದುಕೊಂಡರು. ಮೊಯಿಲಿ ಅವರಲ್ಲಿ ತಮ್ಮ ವೃತ್ತಿಯ ಕುರಿತು ಅಪಾರವಾದ ಅಭಿಮಾನವಿತ್ತು. ಇಂದು ಅವರು ಶ್ರೇಷ್ಠ ರಾಜಕಾರಣಿ ಆಗಿರಬಹುದು. ಆದರೆ ಮೊಯಿಲಿ ಅವರು ತಮಗೆ ಬಿಡುವು ದೊರೆತಾಗ ಅಧಿಕಾರ

ಇಲ್ಲಿದಿರುವಾಗ ಕಪ್ಪು ಬಟ್ಟೆಯನ್ನು ಧರಿಸಿ ಹೈಕೋರ್ಟಿಗೆ ಹಾಜರಾಗುತ್ತಾರೆ. ಅಂದರೆ ಮೊಯಿಲಿ ಅವರು ತಮ್ಮ ವೃತ್ತಿಯ ಮೇಲೆ ಇಟ್ಟಿರುವ ಗೌರವಕ್ಕೆ ನಿದರ್ಶನ.

ಕಾರ್ಕಳದಲ್ಲಿ ಮೊಯಿಲಿ ಅವರು ನ್ಯಾಯವಾದಿಗಳಾಗಿ ಪ್ರವೇಶ ಪಡೆದಾಗ ಭೂಮಿಗೆ ಸಂಬಂಧಿಸಿದ, ಕಾರ್ಮಿಕರಿಗೆ, ಗೇಣಿದಾರರಿಗೆ ಸಂಬಂಧಿಸಿದಂತೆ ಎಷ್ಟೋ ದೂರುಗಳನ್ನು ಬಗೆಹರಿಸುವುದರ ಮೂಲಕ ತಮ್ಮ ಆತ್ಮ ವಿಶ್ವಾಸ ಹಾಗೂ ಕಾನೂನು ಪರಿಣಿತಿ ಸಾಕ್ಷಿಕರಿಸಿದರು. ತರುಣ ನ್ಯಾಯವಾದಿಯಾದ ಮೊಯ್ಲಿ ಅವರು ಗುಲಾಮಗಿರಿಯನ್ನು ವಿರೋಧಿಸಿದವರು. ಗೇಣಿದಾರರ ಮತ್ತು ಬಡಕಾರ್ಮಿಕರ ಮೇಲೆ ಭೂ ಒಡೆಯರು ಮಾಡುವ ದಬ್ಬಾಳಿಕೆಯನ್ನು ತಡೆಯಲು ಸದಾ ಶ್ರಮಿಸುತ್ತಿದ್ದರು. ಭೂ ಮಾಲಿಕರ ಪರವಾಗಿ ವಕಾಲತ್ತನ್ನು ವಹಿಸದೆ, ಅವರು ಒಡ್ಡುವ ಆಮೀಷಗಳಿಗೆ ಒಳಗಾಗದೆ, ಹಣವನ್ನು ಸಂಪಾದಿಸದೆ ತನ್ನನ್ನು ನಂಬಿದ ಬಡವರ ಜೊತೆ ಭೂಮಾಲಿಕರ ವಿರುದ್ಧ ಉತ್ಸಾಹಿಯಾಗಿ ಹೋರಾಟವನ್ನು ನಡೆಸಿದರು. ಆ ಮೂಲಕವಾಗಿ ಭೂ ಸುಧಾರಣೆ ಮಸೂದೆಯನ್ನು ನಂಬಿಕೊಂಡವರು.

"ಶ್ರೀಮಂತರಿಗೆ ಅಗತ್ಯಕ್ಕಿಂತ ಹಣ ಹೆಚ್ಚು ಲಭ್ಯವಿದೆ, ಆದರೆ ಬಡಪಾಯಿಗಳು ಬದುಕಿನಾದ್ಯಂತ ಹಸಿದಿರುತ್ತಾರೆ. ಆಹಾರಕ್ಕಾಗಿ ಅರಸುತ್ತಿರುತ್ತಾರೆ. ಅಸ್ತಿತ್ವಕ್ಕಾಗಿ ಹೋರಾಡುತ್ತಿರುತ್ತಾನೆ ಎಂಬ ವಾಸ್ತವ ಅವರಿಗೆ ಮನವರಿಕೆಯಾಗಿತ್ತು. ಯಾವುದು ಇಲ್ಲದ ವ್ಯಕ್ತಿಯು ತನ್ನ ಜೀವನವನ್ನು ಶ್ರೀಮಂತ ಮತ್ತು ಸೃಷ್ಟಿಶೀಲಗೊಳಿಸಬಹುದು. ಇದೇ ವೇಳೆ ಜಗತ್ತಿನ ಎಲ್ಲಾ ವಸ್ತುಗಳನ್ನು ಹೊಂದಿರುವ ವ್ಯಕ್ತಿ ಅದನ್ನು ಕಳೆದುಕೊಳ್ಳಬಹುದು ಮತ್ತು ನಷ್ಟಮಾಡಿಕೊಳ್ಳಬಹುದು. ಓರ್ವ ವ್ಯಕ್ತಿಗೆ ತುಂಡುಭೂಮಿಯನ್ನು ನೀಡಿ ಆತ ಅದನ್ನು ಉತ್ಪಾದಕ ಮತ್ತು ಸುಂದರಗೊಳಿಸಬಹುದು. ಮತ್ತು ಇನ್ನೋರ್ವ ಅದನ್ನು ಅಪೇಕ್ಷಿಸಿ ತಾನು ಸಾಯುವಂತೆ ಮಾಡಬಹುದು. ಈ ಭೂಮಿಯಲ್ಲಿ ಸ್ವರ್ಗ ಅಥವಾ ನರಕವನ್ನು ಬದುಕಿನ ಪ್ರತಿಯೊಂದು ಹಂತದಲ್ಲಿಯೂ ರೂಪಿಸುವ ಅನಂತ ಸಾಮರ್ಥ್ಯವು ನಮ್ಮಲ್ಲಿದೆ. ಆದರೆ ಮಾನವನು ದ್ವೇಷ ಹಾಗೆ ಅಸೂಹೆಯನ್ನು ಬಿತ್ತಲು ಕೆಲವೊಮ್ಮೆ ಆದ್ಯತೆ ನೀಡುತ್ತಾನೆ. ದ್ವೇಷಅಸೂಯೆಗಳ ಪ್ರತಿಯೊಂದು ಸ್ವರೂಪಕ್ಕೆ ಸುಲಭವಾಗಿ ಮಾನವರೆಲ್ಲ ಹೆಚ್ಚು-ಹೆಚ್ಚಾಗಿ ಜಾರಿ ಬಿಳುತ್ತಿರುವಾಗ, ಇನ್ನೊಮ್ಮೆ ಮತ್ತಷ್ಟು ಬೇಕೆಂಬ ವಾಂಚೆ ವೃದ್ಧಿಸಿದಾಗ ಮಾನವ ದ್ವೇಷಸೊಯೆಗಳಿಗೆ ಬಲಿಯಾಗುತ್ತಾನೆ. ಇದು ಅಂತ್ಯವಿಲ್ಲದ ಹೋರಾಟಗಳಿಗೆ

ಕಾರಣವಾಗುತ್ತದೆ. ಇಂತಹ ಅನೇಕಾನೇಕ ಸಂಗತಿಗಳು ಮೊಯಿಲಿಯವರಲ್ಲಿದ್ದ ಸುಧಾರಕರನನ್ನು ಬಡಿದೆಬ್ಬಿಸಿದವು”.[೧]

ಮೊಯಿಲಿ ಅವರು ನ್ಯಾಯಾಲಯದ ಒಳಗೆ ಮತ್ತು ಹೊರಗೆ ಸದಾ ಬಡವರ ಪರವಾಗಿ ಅವರ ಧ್ವನಿಯಾಗಿ ಇದ್ದವರು. ಅಪ್ಪು ಪಟ್ಟಣಶೆಟ್ಟಿಯವರ ಮೇಲೆ ಆಗಿರುವ ಭೂಮಾಲೀಕನ ಹಲ್ಲೆಯ ಹಿನ್ನೆಲೆಯಲ್ಲಿ ಪೋಲೀಸರು ದೂರನ್ನು ದಾಖಲಿಕೊಳ್ಳಲು ನಿರಾಕರಿಸಿದರು, ವೈದ್ಯರು ಚಿಕಿತ್ಸೆ ನೀಡಲು ನಿರಾಕರಿಸಿದರು. ಇದರಲ್ಲಿ ಮೊಯಿಲಿ ಅವರು ಕಂಡುಕೊಂಡ ಕಾನೂನಿನ ನೆರವನ್ನು ಇವತ್ತಿಗೂ ಸಹ ಅಲ್ಲಗಳೆಯುವಂತಿಲ್ಲ. ಇದರ ಜೊತೆಗೆ ಕೆಂಬ್ರಾಲ್ ಗ್ರಾಮದ ಕೊಕ್ರಮೂಲ್ಯ ಎಂಬ ಒಕ್ಕಲಿಗನ ಮೇಲೆ ಭೂಮಾಲೀಕನ ಹಲ್ಲೆ ಪ್ರಕರಣವು ಮಹತ್ವದ್ದು. ಮೊಯಿಲಿ ಅವರು ತನ್ನನ್ನು ನಂಬಿ ಬಂದ ಗೇಣಿದಾರರಿಗೆ ನ್ಯಾಯ ಒದಗಿಸುವುದರ ಜೊತೆಗೆ ಅವರ ಜೀವನವನ್ನು ಸರಿದಾರಿಗೆ ತರುವುದರಲ್ಲಿ ಸಿದ್ಧ ಹಸ್ತರು. ಆ ಮೂಲಕವಾಗಿಯೇ ಗೇಣಿದಾರರ ಹಕ್ಕಿನ ಸಂರಕ್ಷಣೆಯ ಕಿರಿಟಾದ ‘ಕಿಸಾನ ಸಭಾ’ ಸ್ಥಾಪಿಸುವ ಮೂಲಕ ಗೇಣಿದಾರರ ಮತ್ತು ಭೂ ರಹಿತ ನಾಯಕರ ಶೋಷಿತರ ಪರವಾಗಿ ನಿಂತರು. ಕಿಸಾನ ಸಭಾದ ಮೂಲಕ ಸಾವಿರಾರು ಗೇಣಿದಾರರಿಗೆ ಮತ್ತು ಕೃಷಿಕರಿಗೆ ನ್ಯಾಯಸಿಗುವ ಹಾಗೆ ಮಾಡಿದರು. ಉದಾತ್ತ ನಾಯಕರ ಚಿಂತನೆಗಳನ್ನು ನಂಬಿಕೊಂಡ ಮೊಯಿಲಿ ಅವರು ಕಿಸಾನ್ ಟ್ರಸ್ಟ್ ವತಿಯಿಂದ ಬಡಮಕ್ಕಳಿಗೆ ಶಿಕ್ಷಣವನ್ನು ನೀಡುವುದರ ಮೂಲಕ ಅವರ ಸರ್ವಾಂಗಿಣ ಅಭಿವೃದ್ಧಿಗಾಗಿ ಶ್ರಮಿಸಿದರು. ಅದರ ಪ್ರತಿ ಫಲವಾಗಿಯೇ ಮೊಯಿಲಿಯವರ ಕಿಸಾನ ಟ್ರಸ್ಟ್ ಇವತ್ತು ಆ ಭಾಗದ ಶಿಕ್ಷಣ ಪ್ರಸಾರ, ಸಾಮಾಜಿಕ ನ್ಯಾಯ, ಸಮುದಾಯಿಕ ಜಾಗೃತಿ ಮೂಲಕ ಗ್ರಾಮೀಣ ಮತ್ತು ನಗರ ಅಭಿವೃದ್ಧಿಗಾಗಿ ಆ ಭಾಗದಲ್ಲಿ ಹತ್ತು ಗ್ರಾಮ ಪಂಚಾಯತಿಗಳನ್ನು ದತ್ತು ಸ್ವೀಕರಿಸಿದೆ. ಜೊತೆಗೆ ನೂರಾರು ಕಾರ್ಯಕ್ರಮಗಳನ್ನು ಹಾಕಿಕೊಳ್ಳುವುದರ ಮೂಲಕ ಅವುಗಳನ್ನು ಅನುಷ್ಠಾನಗೊಳಿಸಲು ಶ್ರಮಿಸುತ್ತಿದೆ. ಹೀಗೆ ಮೊಯಿಲಿಯವರು ತಮ್ಮ ವೃತ್ತಿ ಜೀವನದ ಜೊತೆಗೆ ಸಾಮಾಜಿಕ ಚಟುವಟಿಕೆಗಳಲ್ಲಿ ತೊಡಗಿಕೊಂಡಿದ್ದಾರೆ.

೩.೫ ರಾಜಕೀಯ

ವೀರಪ್ಪ ಮೊಯಿಲಿಯವರು ವಕೀಲಿ ವೃತ್ತಿಯಲ್ಲಿ ಪಡೆದುಕೊಂಡ ಅಪಾರ ಅನುಭವಗಳು ಅವರ ರಾಜಕೀಯ ನೆಲೆಗೆ ಭದ್ರ ಬುನಾದಿಯನ್ನು ಒದಗಿಸಿದವು.

ಗೇಣಿದಾರರಿಗೆ ಮತ್ತು ಭೂ ಕಾರ್ಮಿಕರಿಗೆ ನ್ಯಾಯ ಒದಗಿಸುವ ನಿಟ್ಟಿನಲ್ಲಿ ಶೋಷಣೆಯ ವಿರುದ್ಧ ಅವರು ಮಾಡಿದ ಪ್ರತಿಭಟನೆ ಹೋರಾಟ ಅವರನ್ನು ಎತ್ತರದ ಸ್ಥಾನಕ್ಕೆ ಒಯ್ದು ನಿಲ್ಲಿಸಿದವು. ಕಿಸಾನ ಸಭಾ ಸ್ಥಾಪನೆಯ ಮೂಲಕ ಶೋಷಿತರ ಕಣ್ಣೀರು ಒರೆಸಿದರು. ಉತ್ತಮ ವಾಗ್ಮಿಗಳಾಗಿ ಹಲವು ಕಠಿಣ ಜವಾಬ್ದಾರಿಯನ್ನು ನಿಭಾಯಿಸುವದರ ಮೂಲಕ ಜನನಾಯಕನಾಗಿ ಬೆಳೆಯ ತೊಡಗಿದರು. “ಜನತೆ ನಾಳೆ ಇಂದಿಗಿಂತ ಸುಖಮಯವಾಗಿರಬೇಕು. ನಾಡಿದ್ದು ನಾಳೆಗಿಂತ ಆನಂದದಾಯಕವಾಗಿರಬೇಕು ಎಂದು ದುಡಿಯುವ ಈ ಆದರ್ಶನಿಷ್ಠರು ಕರ್ಮ ಮಾಡುವುದು ಮಾತ್ರ ನನ್ನ ಧರ್ಮ ಎಂದು ನಂಬಿದ್ದಾರೆ[೨]” ಎಂಬುದು ವೀರಪ್ಪ ಮೊಯಿಲಿಯವರ ಮನದ ಮಾತು. ಮೊಯಿಲಿಯವರು ಜನರ ಒತ್ತಾಸೆಗೆ ಹಾಗೂ ಡಿ. ದೇವರಾಜ ಅರಸರಂಥ ಮುತ್ಸದ್ಧಿಗಳ ಮಾತಿಗೆ ಬೆಲೆ ಕೊಟ್ಟು ದೇಶ ಸೇವೆಯನ್ನು ಬಯಸಿ ೧೯೭೨ರಲ್ಲಿ ರಾಷ್ಟ್ರೀಯ ಕಾಂಗ್ರೆಸ್ ಪಕ್ಷದ ಅಧಿಕೃತ ಅಭ್ಯರ್ಥಿಯಾಗಿ ಕಾರ್ಕಳ ಮತಕ್ಷೇತ್ರದಿಂದ ಪ್ರಥಮ ಭಾರಿಗೆ ಸ್ಪರ್ಧಿಸಿ ವಿಧಾನಸಭೆಗೆ ಆಯ್ಕೆಗೊಂಡರು. ಅವರು ಸತತ ೬ ಬಾರಿ ಶಾಸನ ಸಭೆಯಗೆ ಕಾರ್ಕಳ ಮತಕ್ಷೇತ್ರದಿಂದ ಆಯ್ಕೆಗೊಂಡು ಮೂರು ಬಾರಿ ಸಚಿವರಾಗಿ ಒಂದು ಬಾರಿ ವಿರೋಧ ಪಕ್ಷದ ನಾಯಕರಾಗಿ ಅಪಾರ ಅನುಭವವನ್ನು ಪಡೆದುಕೊಂಡರು. ಶ್ರೀಯುತರ ನಿಸ್ವಾರ್ಥ ಸೇವೆ, ಪಕ್ಷನಿಷ್ಠೆ ಗಮನಿಸಿ ಕಾಂಗ್ರೆಸ್ ಪಕ್ಷ ಇವರನ್ನು ೧೯೯೨ರಲ್ಲಿ ಮುಖ್ಯ ಮಂತ್ರಿಯನ್ನಾಗಿ ಮಾಡಿತು.

“ರಾಜಕೀಯ ಕ್ಷೇತ್ರದಲ್ಲಿ ಯಾವುದೇ ಹುದ್ದೆ ಗಳಿಸುವುದು ಮಹತ್ಸಾಧನೆಯಲ್ಲ; ಹೋರಾಡುವ ಕೆಚ್ಚೆದೆ ಮೋಡಿ ಮಾತಿನ ಬ್ರಹ್ಮಾಸ್ತ್ರವಿದ್ದರೆ ಅಧಿಕಾರಗಳಿಸುವುದು ಕಷ್ಟವೇನಲ್ಲ. ಆದರೆ ಅದನ್ನು ಉಳಿಸಿಕೊಂಡು ರೂಢಿಸಿಕೊಂಡು ರಾಜಕೀಯದಲ್ಲಿ ದೀರ್ಘಕಾಲ ನೆಲೆ ನಿಲ್ಲುವುದು ನಿಜಕ್ಕೂ ಕಷ್ಟದ ಕೆಲಸ. ಇದಕ್ಕೆ ಕೆಚ್ಚೆದೆ ನಿಷ್ಠುರತೆಯ ವ್ಯಕ್ತಿತ್ವ ಮಾತ್ರ ಇದ್ದರೆ ಸಾಲದು, ಚಾಣಾಕ್ಷತೆ ಸಾಧ್ಯವಿದ್ದದ್ದನ್ನು ಸಾಧಿಸುವ ಕಲೆ ಎಂದು ರಾಜಕೀಯವನ್ನು ಬಣ್ಣಿಸುವುದುಂಟು ಇದನ್ನು ಸಾಧಿಸಿ ತೋರಿಸುವಲ್ಲಿ ಸಫಲರಾಗಿರುವ ಶ್ರೀ ಮೊಯಿಲಿಯವರ ಛಲ ಮೆಚ್ಚತಕ್ಕದ್ದೆ[೩]”.

ಪ್ರಸ್ತುತ ಮೊಯಿಲಿಯವರು ಲೋಕಸಭಾ ಸದಸ್ಯರಾಗಿ ಆಯ್ಕೆಯಾಗಿ ಕೇಂದ್ರ ಕಾನೂನು ಸಚಿವರಾಗಿ ಆನಂತರ ಕೇಂದ್ರ ಕಾರ್ಪೊರೇಟರ್ ವ್ಯವಹಾರಗಳ ಸಚಿವರಾಗಿ ಕಾರ್ಯ ನಿರ್ವಹಸುತ್ತಿದ್ದು, ಕೇಂದ್ರ ಸರ್ಕಾರದಲ್ಲಿ ಅತ್ಯಂತ ಕ್ರೀಯಾಶೀಲರಾಗಿ ಹಾಗೂ ಜನ

ಮೆಚ್ಚುವ ಕ್ರಿಯಾ ಯೋಜನೆ ಹಾಕಿಕೊಳ್ಳುವದರ ಮೂಲಕ ಅವುಗಳನ್ನು ಕಾರ್ಯರೂಪಕ್ಕೆ ತರಲು ಅವಿರತವಾಗಿ ಶ್ರಮಿಸುತ್ತಿದ್ದಾರೆ. ಮೊಯಿಲಿಯವರು ಸದಾ ಸರಕಾರದ ಬಗ್ಗೆ ಹಾಗೂ ಸಹದ್ಯೋಗಿ ಸಚಿವರ ಬಗ್ಗೆ ಜನರ ಮೇಲಿಟ್ಟಿರುವ ನಂಬಿಕೆ ಬಗೆಗೆ ಚಿಂತಿಸುವವರು. "ನನ್ನ ಸರ್ಕಾರ ಮತ್ತು ಸಚಿವರ ತಂಡ ಒಗ್ಗಟ್ಟಿನಿಂದ ದಕ್ಷತೆಯಿಂದ ಮತ್ತು ಸಮರ್ಪಣಾ ಭಾವದಿಂದ ಕೆಲಸ ಮಾಡುತ್ತದೆ. ಜನರ ಸೇವೆಗಾಗಿ ದಿನದ ೨೦ ಗಂಟೆಗಿಂತ ಹೆಚ್ಚು ಕಾಲ ದುಡಿಯುವೆ[೪೪]" ಎಂಬುದು ಮೊಯಿಲಿಯವರ ಮನದ ಮಾತು. ಜನರ ಸುಖ ದುಃಖಗಳನ್ನು ಬಲ್ಲ ಮೊಯಿಲಿಯವರು ಅವರ ಆಸೆ ಆಕಾಂಕ್ಷೆಗಳಿಗೆ ಸ್ಪಂದಿಸುತ್ತಾ ನಾಲ್ಕು ದಶಕಕ್ಕೂ ಹೆಚ್ಚು ಕಾಲ ರಾಜಕೀಯದಲ್ಲಿ ಕಳಂಕ ರಹಿತವಾಗಿ ಉಳಿದಿರುವುದು ಅವರ ವ್ಯಕ್ತಿತ್ವಕ್ಕೆ ಸಂದ ಮನ್ನಣೆಯಾಗಿದೆ. ಮೊಯಿಲಿಯವರಿಗೆ ರಾಜಕೀಯ ಅಧಿಕಾರವು ಎಚ್ಚರಿಕೆಯ ಹೆಜ್ಜೆ ಇಡುವಂತೆ ಪ್ರಭಾವಿತಗೊಳಿಸಿದೆ. ಶುದ್ಧ ಸಚ್ಚಾರಿತ್ರ್ಯದಿಂದ ಮುನ್ನುಗ್ಗಿದ ಮೊಯಿಲಿಯವರು ರಾಜಕೀಯ ರಂಗದಲ್ಲಿ ಪರಿಶುದ್ಧ ವ್ಯಕ್ತಿತ್ವವನ್ನು ಉಳಿಸಿಕೊಂಡು ಸಾಮಾಜಿಕ ಕಳಕಳಿಗೆ ಸ್ಪಂದಿಸುತ್ತಾ ಈ ಕ್ಷೇತ್ರದ ಅಪರೂಪದ ವ್ಯಕ್ತಿ ಎನಿಸಿಕೊಂಡಿದ್ದಾರೆ.

೩.೬ ಆಡಳಿತ

ವೀರಪ್ಪ ಮೊಯಿಲಿಯವರು ಹುಟ್ಟು ಹೋರಾಟಗಾರರಾಗಿದ್ದು ರಾಜಕೀಯ ನೆಲೆಯಲ್ಲಿ ಅನೇಕ ಸವಾಲುಗಳನ್ನು ಎದುರಿಸಿದವರು ತಮ್ಮ ಅಪಾರ ರಾಜಕೀಯ ಅನುಭವದ ಜೊತೆಗೆ ಆಡಳಿತ ರಂಗಕ್ಕೆ ಶಸ್ತ್ರ ಚಿಕಿತ್ಸೆಯನ್ನು ಮಾಡಿದವರು. ೨೦೦೬ರಿಂದ ೨೦೦೯ರವರೆಗೆ ಕೇಂದ್ರ ಆಡಳಿತ ಸುಧಾರಣಾ ಸಮಿತಿಯ ಅಧ್ಯಕ್ಷರಾಗುವ ಮೂಲಕ ಮಾದರಿಯ ಆಡಳಿತ ನಿರ್ವಹಣೆಯ ಬಗೆಗೆ ಸರಕಾರಕ್ಕೆ ವರದಿ ನೀಡಿದ್ದಾರೆ. ಕಾನೂನು ಸಚಿವರಾಗಿದ್ದಾಗ ಮೊಯಿಲಿಯವರು ಶೀಘ್ರ ನ್ಯಾಯನಿರ್ಣಯಗಳಿಗೆ ಲೋಕ ಅದಾಲತ್ ಎಂಬ ವಿಭಾಗವನ್ನು ಸ್ಥಾಪಿಸಿ ಎರಡು ತಿಂಗಳಲ್ಲಿ ಒಂದು ಲಕ್ಷ ಎಂಬತ್ನಾಲ್ಕು ಸಾವಿರ ಪ್ರಕರಣಗಳನ್ನು ಇತ್ಯಾರ್ಥವಾಗುವಂತೆ ಮಾಡಿರುವುದು ಇವರ ಕಾರ್ಯ ವೈಖರಿಗೆ ಹಿಡಿದ ಕೈಗನ್ನಡಿಯಾಗಿದೆ.

ಭ್ರಷ್ಟಾಚಾರ ರಹಿತ ಸಮಾಜ ಇರಬೇಕೆಂಬ ಕನಸು ಕಂಡವರು ಮೊಯಿಲಿಯವರು. ದೀನ ದಲಿತರು ಹಾಗೂ ಹಿಂದುಳಿದ ವರ್ಗಗಳ ಶ್ರೇಯೋಭಿವೃದ್ಧಿಗಾಗಿ ಆಡಳಿತದಲ್ಲಿ ಸುಧಾರಣೆಯನ್ನು ತಂದವರು "ಸರ್ಕಾರದ ಕರ್ತವ್ಯಗಳ ವ್ಯವಸ್ಥಿತ ಕಾರ್ಯ ನಿರ್ವಹಣೆಗಾಗಿ

ಹಾಗೂ ಸರ್ಕಾರದ ಘನತೆ ಗೌರವಗಳನ್ನು ಕಾಪಾಡುವುದಕ್ಕಾಗಿ ಮಂತ್ರಿಗಳಿಗೆ ಇಂದಿರಾ ಗಾಂಧಿಯವರ ಮಾದರಿಯಲ್ಲಿ ೨೦ ಅಂಶಗಳ ಕಾರ್ಯಕ್ರಮ ರೂಪಿಸಿ ಅವುಗಳ ನೀತಿ ಸಂಹಿತೆ ಸಿದ್ಧಪಡಿಸಿ ಜಾರಿಗೆ ತಂದರು. ಭ್ರಷ್ಟ ಅಧಿಕಾರಿಗಳನ್ನು ತೆಗೆದು ಹಾಕಿ ಸಚ್ಚಾರಿತ್ರ್ಯವಿದ್ದ ಹಿರಿಯ ಅಧಿಕಾರಿಗಳಿಗೆ ಮುಖ್ಯ ಕಾರ್ಯನಿರ್ವಹಣೆಯ ಹುದ್ದೆ ಹೊಣೆ ವಹಿಸಿದರು. ಮಟಕಾದಂತಹುದೇ ಜೂಜು ಆಗಿದ್ದ ಒಂದಂಕಿ ಲಾಟರಿಯನ್ನು ಅಧಿಕಾರಕ್ಕೆ ಬಂದ ಒಂದೇ ವಾರದಲ್ಲಿ ನಿಷೇದಿಸಿದರು[೫೨] ಹೀಗೆ ತಮ್ಮ ಅಧಿಕಾರ ಅವಧಿಯಲ್ಲಿ ಆಡಳಿತದ ಕಾರ್ಯ ವೈಖರಿಯನ್ನು ಜಾಗೃತಿಯಿಂದ ನಿರ್ವಹಿಸುತ್ತಿದ್ದರು.

ತಿಪ್ಪೆಗೊಂಡನಹಳ್ಳಿ ಜಲಾಶಯದ ಬಳಿ ವಸತಿ ಸಮುಚ್ಛಯ ನಿರ್ಮಿಸಲು ಸರ್ಕಾರ ದೆಹಲಿಯ ಒಂದು ಸಂಸ್ಥೆಗೆ ಅನುಮತಿಯನ್ನು ನೀಡಿತ್ತು. ಆದರೆ ಜನ ಪ್ರತಿಭಟನೆ ಮಾಡಿದರು. ಈ ವಿವಾದ ಉಚ್ಛ ನ್ಯಾಯಾಲಯದ ಹತ್ತಿರ ಹೋದಾಗ ಅದನ್ನು ರದ್ದು ಪಡಿಸಿತು. ಮುಂದೆ ರಾಜ್ಯ ಸರ್ಕಾರ ಈ ವಿವಾದದ ಕುರಿತು ಸರ್ವೋಚ್ಛನ್ಯಾಯಾಲಯಕ್ಕೆ ಮೆಲ್ಮನವಿಯನ್ನು ಸಲ್ಲಿಸಿತ್ತು. ಆದರೆ ಜನಾಭಿಪ್ರಾಯಕ್ಕೆ ಮನ್ನಣೆ ನೀಡಿ ಮೊಯಿಲಿಯವರು ಆ ಮೇಲ್ಮನವಿಯನ್ನು ವಾಪಸ್ಸು ಪಡೆದುಕೊಂಡರು. ಇದು ಮೊಯಿಲಿಯವರು ಜನರ ಮೇಲೆ ಇಟ್ಟಿರುವ ನಂಬಿಕೆಗೆ ಸಾಕ್ಷಿಯಾಗಿದೆ.

ಮೊಯಿಲಿಯವರು ಮುಖ್ಯಮಂತ್ರಿಯಾಗಿ ಅಧಿಕಾರಕ್ಕೆ ಬಂದಾಗ ಅಬಕಾರಿ ಕಾಳಸಂತೆ ಹೆಚ್ಚಾಗಿತ್ತು. ಅದನ್ನು ಸೂಕ್ಷ್ಮವಾಗಿ ಗಮನಿಸಿದ ಮೊಯಿಲಿಯವರು ಇನ್ನು ಮುಂದೆ ಹೊಸದಾಗಿ ಮದ್ಯದ ಅಂಗಡಿಗಳಿಗೆ ಪರವಾನಿಗೆ ನೀಡದ ಹಾಗೆ ನೋಡಿಕೊಂಡರು. ಜೊತೆಗೆ ರಾತ್ರಿ ೯-೦೦ಗಂಟೆಗೆ ಸರಾಯಿ ಅಂಗಡಿಗಳನ್ನು ಮುಚ್ಚಿಸುವ ಬಗ್ಗೆ ಕಠಿಣ ಕ್ರಮವನ್ನು ಜಾರಿಗೊಳಿಸಿದರು. ಮೊಯಿಲಿಯವರ ಈ ಆಡಳಿತದ ಕಾರ್ಯ ಬಹುಜನ ಗ್ರಾಮೀಣ ಮಹಿಳೆಯರಿಗೆ ಮೆಚ್ಚುಗೆಯಾಗಿತ್ತು. ಹಾಗೂ ೨೧ ವರ್ಷಕ್ಕಿಂತ ಕಡಿಮೆ ವಯಸ್ಸಿನ ವಯೋಮಿತಿಯನ್ನು ಹೊಂದಿರುವ ಯುವಕ ಮತ್ತು ಯುವತಿಯರಿಗೆ ಸರಾಯಿ ಅಂಗಡಿಗಳಲ್ಲಿ ಪ್ರವೇಶ ಪಡೆಯುವದನ್ನು ನಿಷೇಧಿಸುವ ಕಾನೂನನ್ನು ಜಾರಿಗೊಳಿಸಿದರು. ಇದು ಮೊಯಿಲಿಯವರು ಯುವ ಜನತೆಯ ಮೇಲಿಟ್ಟಿರುವ ಕಾಳಜಿಯನ್ನು ತಿಳಿಸುತ್ತದೆ.

ಮೊಯಿಲಿಯವರು ಶಿಕ್ಷಣ ಸಚಿವರಾಗಿದ್ದಾಗ ಶೈಕ್ಷಣಿಕವಾಗಿ ಅನೇಕ ಸುಧಾರಣೆಗಳನ್ನು ತಂದರು. ಅವುಗಳಲ್ಲಿ ಮುಖ್ಯವಾಗಿ ಬಹುಕಾಲದವರೆಗೆ ಉಳಿದಿರುವ

ಶಿಕ್ಷಕರ ನೇಮಕಾತಿಗೆ ಸೂಕ್ತವಾದ ಯೋಜನೆಯನ್ನು ಹಾಕಿಕೊಂಡು ಕ್ರಮಬದ್ಧವಾದ ಹಾಗೂ ಕಾರ್ಯನೀತಿ ರೂಪಿಸಿ ನಲವತ್ತು ಸಾವಿರಕ್ಕೂ ಹೆಚ್ಚು ಶಿಕ್ಷಕರನ್ನು ನೇಮಿಸಿಕೊಳ್ಳಲು ಕ್ರಮ ಕೈಗೊಂಡರು. ಇದು ಆಡಳಿತಕ್ಕೆ ಹೊಸವರಸೆಯಾಗಿದೆ. ಬಡವರಿಗೆ ಆಶ್ರಯ ಯೋಜನೆ ತಲುಪದಿರುವದನ್ನು ಮನಗಂಡು ಹೊಸ ನೀತಿ ಮೂಲಕ ಸುಧಾರಣೆ ಕೈಗೊಂಡು ಬಡವರಿಗೆ ಆಶ್ರಯ ಮನೆ ದೊರಕಲು ಪ್ರಯತ್ನವನ್ನು ಮಾಡಿದರು. ಜೊತೆಗೆ ಕರ್ನಾಟಕಕ್ಕೆ ಸಂಬಂಧಿಸಿದಂತೆ ಹಾಗೂ ಯಾವುದೇ ವಿಷಯಕ್ಕೆ ಸಂಬಂದಿಸಿದಂತೆ ಸಿ.ಬಿ.ಐ.ಗೆ ತನಿಖೆಯನ್ನು ಮಾಡಲು ಮುಕ್ತವಾಗಿ ಅವಕಾಶ ಮಾಡಿದ್ದು ಇವರ ಆಡಳಿತದ ಕಾರ್ಯ ವೈಖರಿಗೆ ಕೆಲವು ಉದಾಹರಣೆಗಳು.

ಮೊಯಿಲಿಯವರು ಆಡಳಿತದ ನೂರಾರು ಸುಧಾರಣೆಯನ್ನು ತಮ್ಮ ಅಧಿಕಾರದ ಅವಧಿಯಲ್ಲಿ ಜಾರಿಗೆ ತಂದರು. ಇವರ ಸಾಧನೆಯನ್ನು ಗಮನಿಸಿದ ಎಮ್.ಸಿ.ಎ. ಮಾರ್ಕೆಟಿಂಗ್ ರಿಸರ್ಚ ಖಾಸಗೀ ಸಂಸ್ಥೆ ನಡೆಸಿದ ಸಮೀಕ್ಷೆ ಈ ರೀತಿಯಲ್ಲಿದೆ. "ಕರ್ನಾಟಕದಲ್ಲಿ ವೀರಪ್ಪ ಮೊಯಿಲಿಯವರ ಸರಕಾರದ ಒಟ್ಟಾರೆ ಸಾಧನೆ ಹಿಂದಿನ ಸರಕಾರಗಳ ಸಾಧನೆಗಿಂತ ಉತ್ತಮವಾಗಿದೆ[೬]" ಎಂದು ಉಲ್ಲೇಖಿಸಿದೆ.

೩.೭ ಸಾಂಸ್ಕೃತಿಕ ಬದುಕು

ವೀರಪ್ಪ ಮೊಯಿಲಿಯವರು ತಮ್ಮ ಬಿಡುವಿಲ್ಲದ ರಾಜಕಾರಣದ ನಡುವೆಯೂ ಅಂತರಂಗದಲ್ಲಿ ಕನ್ನಡ ಸಂಸ್ಕೃತಿಯೊಡನೆ ನೇರ ಸಂಬಂಧ ಇಟ್ಟುಕೊಂಡಿರುವರು. ತಮ್ಮ ಅನುಭವದ ಮೂಲಕ ಸಾಂಸ್ಕೃತಿಕ ರಂಗ ಬೆಳೆಸುವ ಹೊಂಗನಸನ್ನು ಕಟ್ಟಿಕೊಂಡವರು. ಸಾಮಾಜಿಕ ಚಲನೆಯಲ್ಲಿ ಪ್ರಧಾನ ಧಾರೆಗಿಂತ ವಿಭಿನ್ನವಾದ ವಸ್ತು ವಿಷಯಗಳನ್ನು ತಮ್ಮ ಕೃತಿಗಳಲ್ಲಿ ಹಾಗೂ ಬದುಕಿನಲ್ಲಿ ರೂಢಿಸಿಕೊಂಡರು. ಮೊಯಿಲಿಯವರ ಮಾತು ಸರಳ, ನೇರ, ಸುಲಲಿತವಾದದ್ದು. ಸಹೃದಯರ ಮನಸ್ಸನ್ನು ಸೆಳೆಯುವಂತಹದ್ದು. ಗಹನ ವಿಷಯದ ಕಡೆಗೆ ಚಿಂತನೆಗೆ ವಾಲಿಸುವಂತಹದ್ದು, ತರ್ಕಬದ್ಧ ವಿಚಾರ ಮಾಡಲು ಅವಕಾಶ ಕಲ್ಪಿಸುವಂತಹದ್ದಾಗಿದೆ. ಹಾಗಾಗಿಯೇ ಅವರಲ್ಲಿ ಸೃಜನಶೀಲ ಸಾಹಿತ್ಯ ಸೃಷ್ಟಿಯಾಗಿರುವುದು ಕಂಡು ಬರುತ್ತದೆ. ಜನಪರ ಮೌಲ್ಯಗಳ ಪ್ರತಿಪಾದನೆ ಅವರ ಕೃತಿಗಳ ಹಿನ್ನೆಲೆ. ರಾಜಕಾರಣಿಯಾಗಿ ಕ್ರೀಯಾಶೀಲ ಸಾಹಿತಿಯಾಗಿ ಅವರು ಪಡೆದುಕೊಂಡಿರುವ ಜ್ಞಾನ ಅಪಾರ.

ಮೊಯಿಲಿಯವರಲ್ಲಿ ಸೃಜನಶೀಲತೆ ಎನ್ನುವುದು ಹಲವು ವಿಧದಲ್ಲಿ ಅರಳಿ ನಿಂತಿರುವುದು. ಮೊಯಿಲಿಯವರು ಹರೆಯದ ವಯಸ್ಸಿನಲ್ಲಿ ಪ್ರೇಮ ಗೀತೆಗಳಿಗೆ ಮನಸೋತು ರಚನೆಗೆ ಗಂಟು ಬಿದ್ದವರು. ವ್ಯಕ್ತಿ ಪ್ರೇಮದ ಜೊತೆಗೆ ವಿಶ್ವ ಪ್ರೇಮವನ್ನು ಮೆರೆದವರು. ಸುಂದರ ಸ್ವಪ್ನ ಕಟು ಸತ್ಯದ ಆಶಯವನ್ನು ಅವರ ಕಾವ್ಯಗಳಲ್ಲಿ ಗುರುತಿಸಬಹುದು. ಇವರ ಕವನದಲ್ಲಿರುವ ಅಂತರ್‌ಶಕ್ತಿಯನ್ನು ಗುರುತಿಸಿ ಶ್ರೇಷ್ಠ ನೃತ್ಯ ಕಲಾವಿದರಾದ ಶ್ರೀಮತಿ ಮತ್ತು ಶ್ರೀ ಯು.ಎಸ್. ಕೃಷ್ಣರಾವ್ ದಂಪತಿಗಳು ನೃತ್ಯ ಮಾಧ್ಯಮಕ್ಕೆ ಅಳವಡಿಸಿರುವುದು ಇವರ ಕವನಗಳ ಮಾಧುರ್ಯತೆಯ ಭಾವಗೀತೆಯ ಅಂಶಕ್ಕೆ ಹೆಚ್ಚಿನ ಮನ್ನಣೆ ಸಿಕ್ಕಿದೆ. ಇವರ ಹಲವು ಕವನಗಳು ಧ್ವನಿ ಸುರುಳಿಗಳ ರೂಪದಲ್ಲಿ ಬಿಡುಗಡೆಗೊಂಡು ಸಹೃದಯರ ಮನಸ್ಸನ್ನು ಅರಳಿಸಿವೆ.

"ಶ್ರೀ ಮೊಯಿಲಿಯವರು ಕವಿಗಳು, ಕಥೆಗಾರರು, ನಾಟಕಕಾರರು ಹಾಗೂ ಕಾದಂಬರಿಕಾರರು. ಇವರು ಆಡಿ ನಲಿದ ಪರಿಸರದಲ್ಲಿಯೇ ಕಂಡು ಕೇಳಿದ ಸನ್ನಿವೇಶಗಳಿಗೆ ಕಾಯಕಲ್ಪ ನೀಡಿದ ಅನುಭವದ ಹಿನ್ನೆಲೆಯಲ್ಲಿ ಸೃಜನ ಶೀಲ ಕೃತಿಗಳಾಗಿ ಪಡಿ ಮೂಡಿಸಿದ್ದಾರೆ. ಇವು ಜನತೆಯ ಬದುಕಿಗೆ ಸ್ಪಂದಿಸುತ್ತವೆ. ಶೋಷಣೆ ಅನ್ಯಾಯಗಳ ವಿರುದ್ಧ ಸಾತ್ವಿಕ ಆಕ್ರೋಶ ತೋರುತ್ತವೆ. ಬದುಕನ್ನು ಹಸನುಗೊಳಿಸುವ ಸುಂದರಗೊಳಿಸುವ ಸಂಕಲ್ಪವನ್ನು ಸಾರುತ್ತದೆ[೭]"

ರಾಜಕಾರಣಿಗಳು ಸಾಹಿತ್ಯದ ಗೀಳನ್ನು ಸಾಮಾನ್ಯವಾಗಿ ಹೊಂದಿರುವುದಿಲ್ಲ. ಅದಕ್ಕೆ ವ್ಯತಿರಿಕ್ತವೆಂಬಂತೆ ಮೊಯಿಲಿಯವರಲ್ಲಿ ಸೃಷ್ಟಿಶೀಲ ಸಾಹಿತ್ಯಿಕ ಮನಸ್ಸಿನ ಚಿಂತನೆಗಳು ಹುದುಗಿಕೊಂಡಿವೆ. ಮೊಯಿಲಿಯವರಲ್ಲಿ ಸಮೃದ್ಧವಾದ ಸೂಕ್ಷ್ಮ ಸಂವೇದನೆಯ ಸಂಶೋಧನಾ ಗುಣವಿದೆ. ಉದಾತ್ತ ವಿಚಾರಣೆಯ ಚಾಣಾಕ್ಷತೆಯ ವಿಮರ್ಶಕ ಶಕ್ತಿಯಿದೆ. ಅವರ ಕೃತಿಗಳಲ್ಲಿ ದಕ್ಷಿಣ ಕನ್ನಡ ಪ್ರಾದೇಶಿಕತೆ ಸೊಗಡು, ಭಾಷೆ ಮತ್ತು ಜನಾಂಗದ ಸಮಸ್ಯೆ ಎದ್ದು ಕಾಣುತ್ತವೆ. ಅವರ ಕೃತಿಗಳ ವಸ್ತು ವೈವಿಧ್ಯತೆಯಿಂದ ಕೂಡಿವೆ.

ಮೊಯಿಲಿಯವರ ಕೃತಿಗಳು

ಸುಳಿಗಾಳಿ

ಇದು ಮೊಯಿಲಿಯವರ ಪ್ರಥಮ ಕಾದಂಬರಿಯಾಗಿದೆ. ಸುಳಿಗಾಳಿಯ ಕಥಾವಸ್ತು ಬಡಗೇಣಿದಾರರ ಶೋಷಣೆ ಹಾಗೂ ಭೂಮಾಲಿಕನ ದೌರ್ಜನ್ಯದ ಸಾಮಾಜಿಕ ಚಿತ್ರಣ. ತನ್ನ ಪರಿಸರದಲ್ಲಿ ಜನರು ಅನುಭವಿಸುತ್ತಿರುವ ನೋವಿನ ಗಾದೆಯನ್ನು ಮೊಯಿಲಿಯವರು ಈ ಕಾದಂಬರಿ ಮೂಲಕ ಕಟ್ಟಿಕೊಟ್ಟಿದ್ದಾರೆ. ಕಾದಂಬರಿ ಕೊನೆಯಲ್ಲಿ ಬಡ ಗೇಣಿದಾರನಾದ ಮಾಧವ ನಿರ್ದಯಿ ಭೂಮಾಲಿಕನ ವಿರುದ್ಧ ಶೆಡ್ಡು ಹೊಡೆದು ಸಿಡಿದೆದ್ದು ನಿಲ್ಲುತ್ತಾನೆ. ಇದು ಆ ಪ್ರದೇಶದ ವಾಸ್ತವ ಸಮಸ್ಯೆಯನ್ನು ನೈಜವಾದ ತಳಹದಿಯ ಮೇಲೆ ಬಿಡಿಸುತ್ತಾರೆ. ಭೂಮಾಲಿಕರ ವಿರುದ್ಧ ಬಡಗೇಣಿದಾರರು ಕ್ರಾಂತಿಯ ಕಹಳೆಯನ್ನು ಊದಿದ್ದು ಈ ಕೃತಿಯ ಮುಖ್ಯ ಆಶಯ ವಿನ್ಯಾಸವಾಗಿದೆ. ಈ ಕೃತಿ ಕುರಿತು ಪ್ರೊ. ಎಲ್ ಶೇಷಗಿರಿರಾಯರು ಒಂದೆಡೆ ಹೀಗೆ ಅಭಿಪ್ರಾಯ ಪಟ್ಟಿದ್ದಾರೆ. ೭"ಕಾದಂಬರಿಕಾರರಿಗೆ ಮನುಷ್ಯ ಸ್ವಭಾವದಲ್ಲಿರುವ ನೈಜ ಆಸಕ್ತಿಯಿಂದ ವಿವಿಧ ಸ್ವಭಾವಗಳ ಪಾತ್ರಗಳು ರೂಪಗೊಳ್ಳುತ್ತವೆ. ಒಟ್ಟಿನಲ್ಲಿ ವಾಸ್ತವಿಕತೆಯ ನೆಲೆಯಲ್ಲಿ ಆಳವಾಗಿ ಬೇರು ಬಿಟ್ಟು ಕ್ರೀಯಾಶೀಲ ಕ್ರಾಂತಿ ಮನೋಧರ್ಮವು ಶಕ್ತವಾದ ಭಾಷೆಯಲ್ಲಿ ಅರಳಿದೆ[೮]"

ಮೊಯಿಲಿಯವರ ಈ ಕಾದಂಬರಿಯು ವಾಸ್ತವ ಬದುಕಿನ ವಿಷಾದ ಛಾಯೆಯನ್ನು ಬಿತ್ತರಿಸುವ ನಿಟ್ಟಿನಲ್ಲಿ ಶ್ರೀಮಂತ ಮತ್ತು ಬಡವರ ನಡುವಿನ ಮಾನಸಿಕ ವೈಮನಸ್ಸುಗಳ ಚಿತ್ರಣವನ್ನು ಈ ಕೃತಿಯು ಸಾದರ ಪಡಿಸುತ್ತದೆ. ಮೊಯಿಲಿಯವರ ಈ ಕೃತಿಯ ಬರವಣಿಗೆ ಹಿಂದೆ ತಾವು ಕಂಡುಂಡ ಸಾಮಾಜಿಕ ಚಿತ್ರಣದ ಚಿತ್ರಾವಳಿಗಳನ್ನು ತಮ್ಮ ಬದುಕಿನ ಮಜಲಿನ ವಾಸ್ತವಿಕ ಅಂಶವನ್ನು ಪರಿಸರದ ಹಿನ್ನೆಲೆಯಲ್ಲಿ ಈ ಕೃತಿ ರಚಿಸಿದ್ದಾರೆ.

ಸಾಗರದೀಪ

ಈ ಕಾದಂಬರಿಯು ಕರಾವಳಿ ಕರ್ನಾಟಕ ಮೀನುಗಾರರ ಜೀವನಕ್ಕೆ ಸಂಬಂಧಿಸಿದ ಕಥಾವಸ್ತುವನ್ನು ಒಳಗೊಂಡಿದೆ. ಮೀನುಗಾರರ ದುರಾಸೆ, ವ್ಯಾಪಾರಗಳ ಬದುಕಿನ ಚಿತ್ರಣ, ಶೋಷಣೆಗೆ ಒಳಗಾಗುವ ಜನರ ಸ್ಥಿತಿ ಹೋರಾಟದ ಹಾದಿಯನ್ನು ಹಿಡಿಯುವ ಪ್ರತಿಭಟನೆ ಇವೆಲ್ಲ ವಸ್ತು ವೈವಿದ್ಯತೆಯಿಂದ ಈ ಕೃತಿ ಮಹತ್ವನ್ನು ಪಡೆದುಕೊಂಡಿದೆ. ಶೋಷಿತ ಜನರ

ಬದುಕಿನಲ್ಲಿ ಹುದುಗಿರುವ ಆದರ್ಶ ಹಾಗೂ ವಾಸ್ತವ್ಯಗಳ ಅಂತರ ಸಂಬಂಧ ಮಾಡುವ ವಿಷಾದ ಛಾಯೆ ಈ ಕಾದಂಬರಿ ಉದ್ದಕ್ಕೂ ಎದ್ದು ಕಾಣುತ್ತದೆ. ಈ ಕೃತಿಯನ್ನು ಕುರಿತು ಮೊಯಿಲಿಯವರು ಈ ರೀತಿಯಲ್ಲಿ ಹೇಳಿಕೊಂಡಿದ್ದಾರೆ. "ಕೆಲಮೊಮ್ಮೆ ನನ್ನ ಜೀವನ–ಪರಿಸರದಲ್ಲಿ ಹಾದುಹೋದ ಘಟನೆಗಳು ಅದಕ್ಕೆ ಸ್ಪಂದಿಸಿದ ಹೃದಯದ ನೋವು ಕಠಿಣತೆ ಈ ಕಾದಂಬರಿಯಲ್ಲಿ ಮೂಡಿ ಬಂದಿದೆ. ಮೀನುಗಾರರ ಜೀವನವನ್ನು ನಾನು ಕಂಡಂತೆ ಚಿತ್ರಿಸಲು ಪ್ರಯತ್ನಿಸಿದ್ದೇನೆ" ಎಂಬ ಮೊಯಿಲಿಯವರ ಮಾತುಗಳು ಈ ಕೃತಿಯ ಆಶಯ ವಿನ್ಯಾಸದ ಹಿನ್ನೆಲೆಯಲ್ಲಿ ತೆರೆದಿಡುತ್ತದೆ. ಹೀಗಾಗಿಯೇ ಈ ಕೃತಿ ಚಲನಚಿತ್ರವಾಗಿ ಯಶಸ್ವಿ ಪಡೆದಿದೆ.

ಕೊಟ್ಟ

ಪ್ರಸ್ತುತ ಕೊಟ್ಟ ಕಾದಂಬರಿಯು ಅತ್ಯಂತ ಜನಪ್ರೀಯ ಕಾದಂಬರಿಯಾಗಿದೆ. ಮೊಯಿಲಿಯವರು ೧೯೯೩ರಲ್ಲಿ ಮುಖ್ಯಮಂತ್ರಿಯಾಗಿದ್ದಾಗ ಈ ಕೃತಿಯನ್ನು ಪ್ರಕಟಿಸಿದ್ದಾರೆ. ಈ ಕಾದಂಬರಿಯು ಬಿಡುಗಡೆಗೊಂಡ ಕೆಲವೇ ದಿನಗಳಲ್ಲಿ ನಾಲ್ಕು ಸಾವಿರಕ್ಕೂ ಅಧಿಕ ಪ್ರತಿಗಳು ಮಾರಾಟಗೊಂಡು ಇದರ ಜನಪ್ರೀಯತೆಯನ್ನು ಹೆಚ್ಚಿಸಿದವು. ಈ ಕೃತಿಯು ಮೂರು ಭಾಷೆಗಳಿಗೆ ಅನುವಾದಗೊಂಡು ತನ್ನ ಮಹತ್ವವನ್ನು ವಿವಿಧ ಭಾಷಿಕರಿಗೂ ತೋರಿಸಿದೆ. ಕೊರಗ ಜನಾಂಗದ ಜೀವನ ಶೈಲಿಯನ್ನು ಕೇಂದ್ರವಾಗಿಟ್ಟುಕೊಂಡು ರಚಿತವಾಗಿದೆ. ಸೂಕ್ಷ್ಮವಾಗಿ ಬದಲಾಗುತ್ತಿರುವ ಬುಡಕಟ್ಟು ಜನಾಂಗದ ಸಂಸ್ಕೃತಿಯ ಚಿತ್ರಣವನ್ನು ಇಲ್ಲಿ ಕಾಣಬಹುದು. ಕೊರಗ ಜನಾಂಗ ಅರಣ್ಯ ವಾಸಿಗಳಾಗಿದ್ದು ಆ ಬುಡಕಟ್ಟು ಜನಾಂಗದ ಸಾಮಾಜಿಕ ನೈಜ ಚಿತ್ರಣವನ್ನು ಅತ್ಯಂತ ಸ್ಪಂದನಾ ಶೀಲವಾಗಿ ಸಹೃದಯರಿಗೆ ಈ ಕೃತಿ ತೋರಿಸಿಕೊಡುತ್ತದೆ.

ಕೊರಗು ಬುಡಕಟ್ಟು ಜನಾಂಗದ ವ್ಯಕ್ತಿಗಳ ವೇಷ ಭೂಷಣ ದೈಹಿಕ ಸೌಂದರ್ಯತೆಯನ್ನು ಕುರಿತು ಮೊಯಿಲಿಯವರು ಸೊಗಸಾಗಿ ಬಣ್ಣಿಸುತ್ತಾರೆ. ಕೊರಗ ಜನಾಂಗದ ಬಡುಕಟ್ಟಿನವರು "ತಮ್ಮ ದೇಹದ ಕೆಳಭಾಗವನ್ನು ಕಪ್ಪುಬಟ್ಟೆಯಿಂದ ಮತ್ತು ಮೇಲ್ಭಾಗವನ್ನು ಬಳಿಯ ಬಟ್ಟೆಯಿಂದ ಟೊಪ್ಪಿಗೆಯನ್ನು ತಲೆಗೆ ಧರಿಸಿಕೊಳ್ಳುತ್ತಾರೆ. ಹಿತ್ತಳೆಯ ಕಿವಿಯೋಲೆಗಳು ಕಬ್ಬಿಣದ ಮುಗ್ಗಟ್ಟು ದಾರದಲ್ಲಿ ಪೋಣಿಸಿ ಸೊಂಟದ ಸುತ್ತ ಕಟ್ಟಿಕೊಂಡ ಮೂಳೆಯ ಶಿರಭಾಗ ಅವರ ಆಭರಣಗಳಾಗಿವೆ. ಎಲೆಯ ನಡುಕಟ್ಟಿನ ಹೊರತು ಸುತ್ತಲೂ

ಕಪ್ಪು ಬಟ್ಟೆ ಕಟ್ಟಿಕೊಳ್ಳುತ್ತಾರೆ. ದನ, ಕಾಡು ಪ್ರಾಣಿಗಳ ಮಾಂಸ ಭಕ್ಷಿಸುವ ಅವರು ಅತೀಯಾಗಿ ಮದ್ಯ ಸೇವಿಸುತ್ತಾರೆ[೧೦]" ಹೀಗೆ ಮೊಯಿಲಿಯವರು ಆ ಜನಾಂಗದ ವೈಶಿಷ್ಟ್ಯತೆಯನ್ನು ಕೃತಿಯಲ್ಲಿ ಓದುಗರಿಗೆ ಕಟ್ಟಿಕೊಡುತ್ತಾರೆ.

ಕೊರಗರು ಗುಲಾಮಗಿರಿ ಪದ್ಧತಿಯನ್ನು ಅನುಸರಿಸಿಕೊಂಡು ಬಂದವರು ಸಮಾಜ ಬದಲಾವಣೆಗೊಂಡಂತೆ ಚಾಕರಿ ಕೆಲಸವನ್ನು ಬಿಟ್ಟು ಗುಡಿ ಕೈಗಾರಿಕೆಯಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡವರು. ಕೊರಗರಲ್ಲಿ ಭೂತಾರಾಧನೆಯ ಚಾಲ್ತಿಯಲ್ಲಿದೆ. ತೀರಾ ಹಿಂದುಳಿದ ಕೆಳಸ್ತರವಾದ ಕೊರಗರು ಬಡತನ ಹಾಗೂ ಅವಿದ್ಯಾವಂತರಾಗಿ ಜೀವಿಸುತ್ತಿದ್ದಾರೆ. ಅವರ ಅವಿದ್ಯೆಯನ್ನು ಬಳಸಿಕೊಂಡು ಪೋಲೀಸರು, ಅಧಿಕಾರಿಗಳು ರಾಜಕಾರಣಿಗಳು ಅವರನ್ನು ದುರ್ಬಳಕೆಗೆ ಬಳಸಿಕೊಳ್ಳುತ್ತಿದ್ದಾರೆ. ಹೀಗೆ ಕೊರಗ ದೈಹಿಕ ಸಾಮಾರ್ಥ್ಯ ಅವರ ನಂಬಿಕೆ, ಆಚಾರ ವಿಚಾರ ಅವರ ಬದುಕಿನ ಚಿತ್ರಣವನ್ನು ಮೊಯಿಲಿಯವರು ಈ ಕಾದಂಬರಿಯ ಮೂಲಕ ತೋರಿಸಿಕೊಟ್ಟಿದ್ದಾರೆ.

ದಕ್ಷಿಣ ಕರ್ನಾಟಕದಲ್ಲಿ ಕೊರಗ ಜನಾಂಗದವರು ಹೀನ ಸ್ಥಿತಿಯಲ್ಲಿದ್ದನ್ನು ಕಣ್ಣಾರೆ ಕಂಡ ಮೊಯಿಲಿಯವರು ಅವರ ಅರೆಹೊಟ್ಟೆಯ ಪರಿಸ್ಥಿತಿ ಅವರಲ್ಲಿರುವ ಜಾನಪದ ಸಮೃದ್ಧಿ ಹಾಗೂ ಸಾಂಸ್ಕೃತಿಕ ಆಚರಣೆಯನ್ನು ಹಲವು ವಿಧದಲ್ಲಿ ಕಾದಂಬರಿಯಲ್ಲಿ ತೋರಿಸಿಕೊಟ್ಟಿದ್ದಾರೆ. ಜೊತೆಗೆ ಈ ಜನಾಂಗದ ಆರ್ಥಿಕ, ಸಾಮಾಜಿಕ ಹಾಗೂ ವಾಸ್ತವ ಸಂಗಾತಿಯನ್ನು ಗುರುತಿಸಿ ಕಾದಂಬರಿಯ ಮೂಲಕ ವಸ್ತುವಾಗಿ ಬಳಸಿಕೊಂಡಿರುವುದು ಮೊಯಿಲಿಯವರ ಸೂಕ್ಷ್ಮ ಗ್ರಹಿಕೆಗೆ ಹಿಡಿದ ಕನ್ನಡಿಯಾಗಿದೆ. ಕೊಟ್ಟ ಕಾದಂಬರಿಯಲ್ಲಿ ಹಲವು ಪಾತ್ರಗಳು ಕೊರಗ ಜನಾಂಗದ ನೈಜ ವ್ಯಕ್ತಿಗಳ ಹೆಸರುಗಳಾಗಿ ಗುರುತಿಸಿದ್ದಾರೆ. ಜೊತೆಗೆ ಕೊರಗ ಜನಾಂಗದ ಕುರಿತು ಸಂಪೂರ್ಣ ಅಧ್ಯಯನವನ್ನು ಮಾಡಿಕೊಂಡಿದ್ದಾರೆ. ಕೊರಗರ ವಾಸಸ್ಥಾನವಾದ ಕೊಟ್ಟಕ್ಕೆ ಮೊಯಿಲಿಯವರು ಅನೇಕ ಭಾರಿ ಬೇಟಿ ನೀಡಿದ್ದಾರೆ. ಹೀಗಾಗಿ ಮೊಯಿಲಿಯವರಲ್ಲಿ ಕೊರಗರ ನೈಜ ಚಿತ್ರಣವನ್ನು ಸೆರೆಹಿಡಿಯಲು ಈ ಕಾದಂಬರಿಯಲ್ಲಿ ಸಾಧ್ಯವಾಗಿದೆ. ಈ ಕಾದಂಬರಿಯ ಕುರಿತು ಪ್ರೊ. ಸಿ.ಎನ್. ರಾಮಚಂದ್ರ ರಾವ ಅವರು ಒಂದೆಡೆ ಹೀಗೆ ಹೇಳಿದ್ದಾರೆ. "ಕೃತಿಯ ಪ್ರಮುಖ ಕಾಳಜಿಗಳಲ್ಲಿ ಒಂದನ್ನು 'ಶೋಷಣೆ'ಯ ಅಧ್ಯಯನವೆಂದು ಗುರುತಿಸಬಹುದು, ಒಂದು ಶೋಷಿತ ಜನಾಂಗದ ಹಿನ್ನೆಲೆಯಲ್ಲಿ 'ಕೊಟ್ಟ' ಕಾದಂಬರಿ ಶೋಷಣೆಯ ಸ್ವರೂಪವನ್ನು ಅದರ ವಿವಿಧ

ಮುಖಗಳನ್ನು ಮತ್ತು ಅದರಿಂದ ಹೊರಬರುವ ಸಾಧ್ಯತೆಗಳನ್ನು ಖಚಿತವಾಗಿ ಆಳವಾಗಿ ಪರೀಕ್ಷಿಸುತ್ತದೆ[೧೧]" ಎಂಬುದು ಕೃತಿಯ ಒಟ್ಟು ಆಶಯವನ್ನು ವ್ಯಕ್ತಪಡಿಸುತ್ತದೆ. ಕೊಟ್ಟ ಕಾದಂಬರಿ ಒಂದು ಜನಸಮುದಾಯದ ಕಾದಂಬರಿಯಾಗದೆ ಸ್ವತಂತ್ರ್ಯ ನಂತರದ ಭಾರತೀಯ ಸಮಾಜದಲ್ಲಾಗುತ್ತಿರುವ ಬದಲಾವಣೆಯ ಪ್ರತೀಕವಾಗಿ ಈ ಕೃತಿ ಹೊರ ಬಂದಿದೆ. ಕಾದಂಬರಿಯ ಆರಂಭ ಹಾಗೂ ಅಂತ್ಯ ವಿಶೇಷತೆಯಿಂದ ಕೂಡಿದೆ. ಅಮವಾಸ್ಯೆಯ ಕಾರ್ಗತ್ತಲೆಯ ರಾತ್ರಿಯಿಂದ ಆರಂಭಗೊಂಡು ದಟ್ಟ ಅರಣ್ಯದ ಸುತ್ತಲೂ ತಿರುಗಿ ಕೊಲ್ಮಿಂಚಿನ ಸಂಕೇತವಾಗಿ ಅಂತ್ಯವನ್ನು ಕಾಣುತ್ತದೆ. ಹೀಗಾಗಿ ಶೋಷಿತ ಜನಾಂಗವಾದ ಕೊರಗರ ಉನ್ನತಿಯನ್ನು ಎತ್ತಿ, ಸಾಮಾಜಿಕ ಸ್ಥಿತಿಗತಿಯನ್ನು ತೋರ್ಪಡಿಸುವ ಪ್ರಯತ್ನ ಈ ಕಾದಂಬರಿಯದ್ದಾಗಿದೆ.

ತೆಂಬರೆ

ಇದು ವೀರಪ್ಪ ಮೊಯಿಲಿಯವರ ಮತ್ತೊಂದು ಕಾದಂಬರಿ. ತೆಂಬರೆ ಕಾದಂಬರಿ ಕುರಿತು ಮೊಯಿಲಿಯವರು ಲೇಖಕರ ನುಡಿಯಲ್ಲಿ ಈ ರೀತಿಯಾಗಿ ಹೇಳಿದ್ದಾರೆ. "ನಾನು ಹುಟ್ಟಿದ, ನಡೆದಾಡಿದ, ಉಸಿರಾಡಿದ ಮತ್ತು ಬೆಳೆದ ಅರವತ್ತು ವರ್ಷಗಳ ನಿಸರ್ಗದ ಮತ್ತು ಪರಿಸರದ ಒಂದು ಬಿಂದುಗಳ ಶಕ್ತಿಯನ್ನು ಆಸ್ವಾದಿಸಿದ ಸಂತೃಪಿಯ್ತು ಹೆಮ್ಮೆ ನನ್ನಲ್ಲಿದೆ. ನನ್ನ ಹೃದಯದಲ್ಲಿ ತದಾತ್ಮವನ್ನು ಪಡೆದ ಈ ನೆಲದ ಮಣ್ಣಿನ ಸಾರವನ್ನು ಕಾದಂಬರಿ ಹೀರಿಕೊಂಡಿದೆ[೧೨]" ಮೊಯಿಲಿಯವರ ತಮ್ಮ ಪರಿಸರದ ಜನಾಂಗದ ಜನ ಜೀವನದ ಅಂತಸತ್ವ ಒಳನೋಟದ ದರ್ಶನವನ್ನು ಈ ಕಾದಂಬರಿ ಸಹೃದಯನಿಗೆ ಉಣ ಬಡಿಸುತ್ತದೆ. ತೆಂಬರೆ ಕಾದಂಬರಿ ತುಳುನಾಡಿನ ಭೂತ ಕಟ್ಟುವ ಪಂಬದರ ಬದುಕಿನ ಮಜಲನ್ನು ಗರ್ಭದಲ್ಲಿ ಧರಿಸಿಕೊಂಡು ರೂಪತಾಳಿರುವ ಹೊಸ ಕನಸುಗಳಿಗೆ ಹೊಸ ಸಹಸ್ರಮಾನಕ್ಕೆ ಆ ಸಮುದಾಯದ ಸಂಸ್ಕೃತಿಯನ್ನು ದರ್ಶಿಸುವ ಚಿಂತನೆಯ ವಿಶಿಷ್ಟ ಕಾದಂಬರಿಯಾಗಿದೆ. ಒಂದು ಜನಾಂಗ ಮತ್ತು ಆ ಪ್ರದೇಶ ಅಲ್ಲಿಯ ಪರಂಪರೆ ಹಾಗೂ ಆಧುನಿಕತೆಗಳ ಆದರ್ಶ ಮತ್ತು ವಾಸ್ತವಗಳ ಸತ್ಯ ಮತ್ತು ನ್ಯಾಯ ಪರಿಕಲ್ಪನೆಯ ಪರದೆಯ ಮುಖಾಂತರ ಈ ಕೃತಿಯಲ್ಲಿ ಒಂದಕ್ಕೊಂದು ಸಾಂಸ್ಕೃತಿಕ ಮುಖಾಮುಖಿಯಾಗುತ್ತವೆ.

ಒಂದು ಜನಾಂಗದ ಅಧ್ಯಯನ ಇಲ್ಲಿಯವರೆಗೆ ಸಿದ್ದ ಮಾದರಿಯಲ್ಲಿ ನಡೆದುಕೊಂಡು ಬಂದಿದ್ದು ಅದನ್ನು ಹೊರತುಪಡಿಸಿ ಅಂತರ್ ಶಿಸ್ತೀಯ ಸಂಬಂಧಗಳ

ಮೂಲಕ ಹೆಣೆದಿರುವ ಇಲ್ಲಿಯ ಬೆಸುಗೆ ಮಹತ್ವ ಪೂರ್ಣವಾದದ್ದು, ತೆಂಬರೆ ಮೂಲಕ ಮೊಯಿಲಿಯವರು ಎಷ್ಟೋ ಜನರಿಗೆ ಪರಿಚಯವಿರದ ಜನಾಂಗದ ಸಂಸ್ಕೃತಿಯನ್ನು ಜನಪದ ಕಲೆಯನ್ನು ದಲಿತ ಸಂವೇದನೆಯನ್ನು ಹಾಗೂ ಸ್ತ್ರೀವಾದದ ದೃಷ್ಟಿಕೋನವನ್ನು ಶಾಸ್ತ್ರಬದ್ದ ಮತ್ತು ಸಿದ್ದಾಂತಕ್ಕೆ ಕಟ್ಟು ಬೀಳದೆ ಹೊಸ ಸೃಷ್ಟಿಯ ಮೂಲಕ ಜನ ಜೀವನದ ಅನುಭವವನ್ನು ಲೋಕ ಗೃಹಿಕೆಯ ದೃಷ್ಟಿಕೋನದಿಂದ ಸಂಸ್ಕೃತಿಯ ಪ್ರಭಾವವನ್ನು ಆ ಪ್ರದೇಶ ಅಲ್ಲಿಯ ವ್ಯಕ್ತಿಗಳು ಸಮುದಾಯದ ಹಿನ್ನೆಲೆಯಲ್ಲಿ ಈ ಕೃತಿ ಮಾರ್ದನಿಸುತ್ತದೆ. ತೆಂಬರ ಕಾದಂಬರಿ ಕುರಿತು ಡಾ.ಸಿ.ಎನ್. ರಾಮಚಂದ್ರ ರಾವ ಈ ರೀತಿಯಲ್ಲಿ ಅಭಿವ್ಯಕ್ತಿಸಿದ್ದಾರೆ.

"ದಕ್ಷಿಣ ಕನ್ನಡ ಜಿಲ್ಲೆಯ ಎರಡು ಸಾಂಸ್ಕೃತಿಕ ವಿಶಿಷ್ಟ ಸಂಗತಿಗಳೆಂದರೆ ಯಕ್ಷಗಾನ ಮತ್ತು ಭೂತಾರಾಧನೆ ದಕ್ಷಿಣ ಕನ್ನಡದ ಜನತೆಯ ಅಭಿಬಾಜ್ಯ ಅಂಗವಾಗಿರುವ ಭೂತಾರಾಧನೆ ಅನೇಕ ಅಂತರ ವೈರುದ್ಯಗಳಿಂದ ಕೂಡಿದ ಒಂದು ಪರಂಪರಾಗತ ಧಾರ್ಮಿಕ ಸಾಂಸ್ಕೃತಿಕ ಆಚರಣೆ ತಮ್ಮ ಜನಾಂಗದ ಸಮುದಾಯದ ಒಳಿತಿಗಾಗಿ ಯಾವುದಾದರೂ ಒಂದು ಬಗೆಯಲ್ಲಿ ಶ್ರಮಿಸಿ ಆ ಕಾರಣದಿಂದಾಗಿಯೇ ಜೀವ ತೆತ್ತ ಜನಾಂಗಿಕ ನಾಯಕರನ್ನು ನಾಯಕಿಯರನ್ನು ಮರಣಾಂತರವು ಪೂಜಿಸಿ ಇಷ್ಟಾರ್ಥ ಸಿದ್ದಿಯನ್ನು ಪಡೆಯುವ ವಿದ್ಯುಕ್ತ ಕ್ರಿಯೆ, ಇಲ್ಲಿ ಗಮನಿಸಿಬೇಕಾದ ಕುತುಹಲ ಸಂಗತಿ ಎಂದರೆ, ಈ ರೀತಿ ಮೃತ ಭೂತಗಳ ಆರಾಧನೆ ನಡೆಸುವವರು ಸಮಾಜದ ಮೇಲ್ವರ್ಗದ ಜನರು ಎಂದರೆ ಆ ಭೂತಗಳ ಸಾವಿಗೆ ಶೋಷಣೆಗೆ ಈ ಲೋಕದಲ್ಲಿ ಕಾರಣರಾದವರೇ ವಿದ್ಯುಕ್ತವಾಗಿ ಭೂತಾರಾಧನೆ ಮಾಡುವವರು (ಕೋಲು ಕಟ್ಟುವರು) ಸಮಾಜದಲ್ಲಿ ಅತ್ಯಂತ ಕೆಳಗಿರುವ ತೊಂಬದ, ಪರವ, ನೆಲಿಕೆ ಇತ್ಯಾದಿ ಪಂಚಮ ವರ್ಗದವರು ಎಂದರೆ ಶೋಷಕರ ಇಷ್ಟಾರ್ಥ ಸಿದ್ದಿಗಾಗಿ ಶೋಷಿತರೇ ಶೋಷಣೆಯಿಂದ ಮೃತರಾದವರನ್ನು ಆರಾಧಿಸುವ ಒಂದು ಸಂಕೀರ್ಣ ಸಂದಿಗ್ದಪೂರ್ಣ ಆಚರಣೆ ಭೂತಾರಾಧನೆ. ತೆಂಬರೆ ಕಾದಂಬರಿ ಈ ರೀತಿ ಪಂಜುರ್ಲಿ ಭೂತವನ್ನು ಕಟ್ಟುವ (ಆ ಭೂತವನ್ನು ತಮ್ಮಲ್ಲಿ ಆಹ್ವಾನಿಸಿಕೊಳ್ಳವ) ಪೊಂಬದ ಜನಾಂಗದ ಬದುಕನ್ನು ಚಿತ್ರಿಸುತ್ತದೆ[೧೩]"

ಮೊಯಿಲಿಯವರು ತೆಂಬರೆ ಕಾದಂಬರಿಯನ್ನು ತುಳು ಸಂಸ್ಕೃತಿಯ ಶ್ರೀಮಂತಿಕೆಯನ್ನು ವಿಶ್ವಾಸನೀಯವಾಗಿ ಒಂದು ಹರಿದಾದ ಚೌಕಟ್ಟಿನಲ್ಲಿ ದಾಖಲಿಸುವ

ಮೂಲಕ ಕೃತಿಗೆ ಹೆಚ್ಚಿನ ಮನ್ನಣೆಯನ್ನು ನೀಡಿದ್ದಾರೆ. ಮತ್ತೊಂದು ಪ್ರಮುಖ ಸಂಗತಿಯೆಂದರೆ ಸಮಾಜದ ಏಣಿ ಶ್ರೇಣಿ ವ್ಯವಸ್ಥೆಯ ಕ್ರೌರ್ಯ ಶೋಷಣೆ ಅಟ್ಟಹಾಸವನ್ನು ವಿಶಿಷ್ಟ ರೀತಿಯಲ್ಲಿ ಚಿತ್ರಿಸುವ ಕೃತಿ. ತೆಂಬರೆ ಕಾದಂಬರಿಯು ವೀರಪ್ಪ ಮೊಯಿಲಿಯವರ ವೈಶಿಷ್ಟ ಪೂರ್ಣವಾದ ಬರವಣಿಗೆ ಮೂಲಕ ಸಾಂಪ್ರದಾಯಿಕವಾಗಿ ಆ ಕೃತಿಯಲ್ಲಿ ಅರಳದೆ ಮಾನವಶಾಸ್ತ್ರ, ಜಾನಪದ ಹಿನ್ನೆಲೆ, ಹಾಗೂ ರಾಜಕೀಯ ಚಿಂತನೆಯ ಹಿನ್ನೆಲೆಯಲ್ಲಿ ವ್ಯಾಪಕವಾದ ಗಾಢಾನುಭವದ ಮೂಲಕ ಕ್ಷೇತ್ರ ಕಾರ್ಯ ಸಂಶೋಧನೆಯ ಲಹರಿಯ ಮೂಲಕ ಪೂರ್ವ ಬಾವಿಯಾದ ಅಧ್ಯಯನವನ್ನು ಮಾಡಿ ಕೃತಿಗೆ ಜೀವಕಳೆಯನ್ನು ನೀಡಿದ್ದಾರೆ. ತೆಂಬರೆ ಕೃತಿಯು ೧೩"ಪ್ರಾಸಂಗಿಕವಾಗಿ ದಕ್ಷಯಜ್ಞ ಎಂಬ ಯಕ್ಷಗಾನ ಪ್ರಸಂಗ ಸಿರಿ ಕಲ್ಕಡ ಕಲ್ಲುರ್ಟಿ, ಮುಂತಾದ ಪಾಡ್ದನಗಳ ಕಥೆಯಾಗಿದೆ. ಪಂಬರದ ಮೂಲವನ್ನು ದಾಖಲಿಸುವ ದೇವಾನ್ ಪೊಂಬೆದೆಯ ಪುರಾಣ, ಭೂತಾರಾಣದೆಯ ಸೂಕ್ಷ್ಮಾನು ಸೂಕ್ಷ್ಮತೀ ವಿವರಗಳು ಇವೆಲ್ಲವು ತೆಂಬರೆಗೆ ನೂತನ ಆಯಾಮ ನೀಡುತ್ತದೆ"೧೩ ಎಂದು ಡಾ.ಸಿ.ಎನ್.ರಾಮಚಂದ್ರನ್ ಅವರು ಕೃತಿ ಕುರಿತು ಅಭಿಮತ ವ್ಯಕ್ತ ಪಡಿಸಿದ್ದಾರೆ. ಒಟ್ಟಾರೆಯಾಗಿ ತೆಂಬರೆ ಕಾದಂಬರಿಯು ಕಾಲ್ಪನಿಕ ಕೃತಿಯಾಗಿದರದೇ ಭೂತದ ಆರಾಧನೆಯ ಜನಾಂಗದ ವಾಸ್ತವದ ಚಿತ್ರಣವಾಗಿದೆ. ಈ ಜನಾಂಗದ ಐತಿಹಾಸಿಕ ಹಿನ್ನೆಲೆ ಪೌರಾಣಿಕ ಪರಿಕಲ್ಪನೆ, ಸಾಮಾಜಿಕ ವಿಧಿ ವಿಧಾನ ಬದುಕಿನ ಜೀವನ ಕ್ರಮ ಮುಂತಾದವುಗಳ ಮೂಲಕ ವಾಸ್ತವ ಕತೆಯನ್ನು ಮೊಯಿಲಿಯವರು ಚಿತ್ರಿಸಿದ್ದಾರೆ. ಇವರ ಕಾದಂಬರಿಗಳಲ್ಲಿ ಬಹು ನಾಯಕರ ಪಾತ್ರಗಳು ಕಂಡು ಬಂದಿದ್ದು ಅಂದರೆ ಸಮುದಾಯದ ಹಲವು ವ್ಯಕ್ತಿಗಳ ಚಿತ್ರಣದಿಂದ ಒಡಗೂಡಿದ ಕಾದಂಬರಿಯಾಗಿರುವುದರಿಂದ ಕಥಾನಾಯಕನನ್ನು ಕೇಂದ್ರಿಕೃತವಾದ ಸಿದ್ದ ಮಾದರಿ ಕೃತಿಯನ್ನು ಮೊಯಿಲಿಯವರು ರಚಿಸಿಲ್ಲ. ಬದಲಾಗಿ ಅಲ್ಲಿಯ ಪರಿಸರದ ಜನಜೀವನದ ಸಮುದಾಯದ ಹೊಳ ಹೊರಣಗಳನ್ನು ರಚಿಸುವ ಮೂಲಕ ಕಥಾ ವಸ್ತುವಿನಲ್ಲಿ ವಿಭಿನ್ನತೆಯನ್ನು ತಂದಿದ್ದಾರೆ. ಪಾತ್ರ ಚಿತ್ರಣದ ಹಿನ್ನೆಲೆಯಲ್ಲಿ ಕರಾವಳಿಯ ಪ್ರಾದೇಶಿಕ ಜನರ ಹೆಸರುಗಳು ಎದ್ದು ಕಾಣುತ್ತವೆ. ಪರಿಸರ, ನಾಗರಿಕತೆ, ಬುಡಕಟ್ಟು ಜನಾಂಗ ಇವು ಇವರ ಕಾದಂಬರಿಯ ಪ್ರಮುಖ ವಿಷಯಗಳಾಗಿವೆ.

ನಾಟಕಗಳು

ಮೊಯಿಲಿಯವರು ಕಾದಂಬರಿಗಳಷ್ಟೇ ಅಲ್ಲದೇ ನಾಟಕಗಳನ್ನು ಸಹಿತ ರಚಿಸಿದ್ದಾರೆ. ಹಾಗೂ ಮೊಯಿಲಿಯವರು ಸ್ವತಃ ಕಲಾವಿದರಾಗಿದ್ದು ಕೆಲವೊಂದು ಸಂದರ್ಭದಲ್ಲಿ ಪಾತ್ರಧಾರಿಯಾಗಿದ್ದು ಉಂಟು ಹೀಗಾಗಿ ಇವರು ಸುಮಾರು ೨೦ ವರ್ಷಗಳ ಹಿಂದೆ ಮೂರು ನಾಟಕಗಳನ್ನು ರಚಿಸಿದ್ದಾರೆ. ೧) ಅಪರಾಜಿತ ೨) ಪ್ರೇಮವೆಂದರೆ ೩) ಮಿಲನ ಈ ಮೂರು ನಾಟಕಗಳು ೧೯೯೪ರಲ್ಲಿ ಮರುಮುದ್ರಣಗೊಂಡಿವೆ. ಮೊಯಿಲಿಯವರು ತಮ್ಮ ನಾಟಕದಲ್ಲಿ ಬಾಲ್ಯದ ಅನುಭವ ಹಾಗೂ ಕಾಡಿದ ಸಾಮಾಜಿಕ ರೋಕ್ಷತೆ, ಹಾಗೂ ಪ್ರೀತಿಗೆ ಸಂಬಂಧಿಸಿದ ಘಟನೆಯನ್ನು ತರುಣರಾಗಿದ್ದಾಗ ಅವುಗಳನ್ನು ಬರೆದಿದ್ದಾರೆ. ಹೆಚ್ಚಾಗಿ ಈ ನಾಟಕಗಳಲ್ಲಿ ಪ್ರೀತಿಯ ವಿಷಯವೇ ಪ್ರಧಾನವಾಗಿದ್ದು, ನಾಟಕ ದೃಷ್ಟಿಯಿಂದ ಅಷ್ಟೊಂದು ಶಕ್ತಿಯುತವಾದ ನಾಟಕವಲ್ಲ ನಾಟಕದ ಪರಿಕಲ್ಪನಾ ಚೌಕಟ್ಟು ತೀರಾ ಹಳೆಯದು. ಸಂಭಾಷಣೆ ಶೈಲಿಯಲ್ಲಿ ಹೊಳಪಿಲ್ಲ ಆದರೂ ಸಹ ಅವರ ನಾಟಕ ಕಲಾವಿದರಾಗಿ ನಾಟಕ ಸಾಹಿತ್ಯ ಪ್ರಕಾರದಲ್ಲಿ ಅಲ್ಪ ಸ್ವಲ್ಪ ಸೇವೆಯನ್ನು ಮಾಡಿರುವುದು ಅಲ್ಲಗಳೆಯುಂವತಿಲ್ಲ.

ಕಾವ್ಯ

ಐತಿಹಾಸಿಕ ಪ್ರಸಿದ್ಧ ಪರಿಸರದ ಸುಂದರ ನಿಸರ್ಗದ ಮಡಿಲಿನ ನೆಲದಲ್ಲಿ ಹುಟ್ಟಿ ಬೆಳೆದ ಮೊಯಿಲಿಯವರು ಕವಿತ್ವ ಹೃದಯವನ್ನು ಪಡೆದುಕೊಂಡು ಬೆಳೆದವರು. ಹಾಗಾಗಿ ಕವಿತೆ ಎನ್ನುವುದು ಮೊಯಿಲಿಯವರ ಸಾಹಿತ್ಯಿಕ ಬಿಂಬ ಮಾಧ್ಯಮವಾಗಿ ಸಾಹಿತ್ಯ ಸೆಲೆಯ ಬೀಜವಾಗಿ ಅವರಲ್ಲಿ ಹೊರ ಹೊಮ್ಮಿದೆ. ಮೊಯಿಲಿಯವರು ಇಲ್ಲಿಯವರೆಗೆ ಎರಡು ಕವನ ಸಂಕಲನವನ್ನು ಹಾಗೂ ಒಂದು ಸಂಪಾದಿತ ಸಂಕಲನವನ್ನು ಹೊರತಂದಿದ್ದಾರೆ. ಅವು ಈ ರೀತಿಯಾಗಿವೆ.

ಮತ್ತೆ ನೆಡೆಯಲಿ ಸಮರ

ಇದು ಮೊಯಿಲಿಯವರ ಪ್ರಥಮ ಕವನ ಸಂಕಲನವಾಗಿದ್ದು ೧೯೮೨ರಲ್ಲಿ ಇದನ್ನು ಪ್ರಕಟಿಸಿದ್ದಾರೆ. ಇಲ್ಲಿ ಮೊಯಿಲಿಯವರು ಕವಿಯಾಗಿ ತಮ್ಮ ಕವಿತ್ವದ ಕೆಲವು ಚಿಂತನೆಯ ಮಾತುಗಳನ್ನು, ದೇಶ ಎದುರಿಸುತ್ತಿರುವ ಸಾಮಾಜಿಕ ಸವಾಲುಗಳನ್ನು, ಕುಸಿಯುತ್ತಿರುವ ಮಾನವೀಯ ಮೌಲ್ಯಗಳನ್ನು ಪರಿಚಯಿಸುವ ನಿಟ್ಟಿನಲ್ಲಿ ಹಾಗೂ ಕವಿಯ ಭಾವನೆಯ

ಮೂಲಕ ಕಳವಳ ವ್ಯಕ್ತ ಪಡಿಸುವ ಕೆಲಸವನ್ನು ಮಾಡಿದ್ದಾರೆ. ಈ ಕೃತಿಯನ್ನು ಕುರಿತು ಎಲ್.ಎಸ್.ಶೇಷಗಿರಿರಾಯರು ಒಂದೆಡೆ ಹೀಗೆ ಹೇಳುತ್ತಾರೆ "ಎಳೆಯ ಪ್ರಣಯಿ ಮತ್ತು ಉದ್ದೀಪಿತ ಕ್ರಾಂತಿಕಾರನ ಭಾವನೆಗಳು ಅವರ ಕವಿತೆಗಳಲ್ಲಿ ದೃಢ ನಿಲುವುಗಳೊಂದಿಗೆ ಸರಳ ಶಬ್ದಗಳಲ್ಲಿ ಅಭಿವ್ಯಕ್ತಗೊಂಡಿವೆ. ವಿಶೇಷವಾಗಿ ರಾಜಕಾರಣಿಗಳಿಗೆ ಬದುಕಿನ ಬಗ್ಗೆ ಇಂತಹ ನಿಲುವು ಅಮೋಘವಾಗಿದೆ[೧೫]" ಮೊಯಿಲಿಯವರು ೧೯೯೭ರಲ್ಲಿ ಹಾಲುಜೇನು, ಹೀಗೊಂದು ಯಕ್ಷಪ್ರಶ್ನೆ ಮುಂತಾದ ಕವನ ಸಂಕಲನಗಳು ಪ್ರಕಟವಾಗಿವೆ. ಈ ಕವನ ಸಂಕಲನಗಳ ಪ್ರಮುಖ ಕವನಗಳೆಂದರೆ, 'ವಿಷಕನ್ಯೆ' ಜ್ವಾಲೆ, ಗಾಂಧಿ ರೇಖೆ, ರಣಹದ್ದು, ಹಸಿವು 'ತಸ್ಲಿಮಾ ನಸ್ರೀನ್ ನೀನಲ್ಲ ಅನಾಥೆ' ಇವು ವಾಸ್ತವಿಕ ಅಂಶಗಳನ್ನಿಟ್ಟುಕೊಂಡು ರಚಿತವಾದ ಕವನಗಳಾಗಿವೆ. ಅವರ ಹಸಿವು ರಣಹದ್ದು ಕವಿತೆಯ ಸಾಲುಗಳು ಈ ರೀತಿಯಾಗಿವೆ.

"ರಣಹದ್ದು ಹಸಿದಿತ್ತು ಮೆತ್ತನೆಯ ಕಾದಿತ್ತು
ಹತ್ತಡೀ ದೂರದಲ್ಲಿ ರೆಕ್ಕೆಯನ್ನು ರೂಡಿಸುತ್ತಾ
ಕತ್ತನು ಒಳಗೆಳೆದು ಹೊಂಚನು ಹಾಕುತಲಿ.....[೧೪]"

ಹೀಗೆ ಅತ್ಯಂತ ಸುಂದರವಾಗಿ ದೀರ್ಘ ಕವನವನ್ನು ಮೊಯಿಲಿಯವರು ತಮ್ಮ ಸುತ್ತಲಿನ ವಾಸ್ತವಿಕ ಚಿತ್ರಣವನ್ನು ಇಟ್ಟುಕೊಂಡು ಕವಿತೆಯನ್ನು ರಚಿಸಿದ್ದಾರೆ.

ಎಂ. ವೀರಪ್ಪ ಮೊಯಿಲಿಯವರ ಮಹಾಕಾವ್ಯ

ಶ್ರೀ ರಾಮಾಯಣ ಮಹಾನ್ವೇಷಣಂ

ಮೊಯಿಲಿಯವರಲ್ಲಿರುವ ಕಾವ್ಯ ಗುಣ ಅವರನ್ನು ಮಹಾ ಕವಿಯಾಗಿ ರೂಪಿಸಿದೆ. ಕನ್ನಡ ಸಾರಸ್ವತ ಲೋಕದಲ್ಲಿ ಇಂತಹ ಮಹಾಕಾವ್ಯದ ಪ್ರಯತ್ನವನ್ನು ಬೆರಳೆಣಿಕೆಯ ಕವಿಗಳಷ್ಟೇ ಮಾಡಿದ್ದಾರೆ. ಆಧುನಿಕ ಮಹಾಕಾವ್ಯಗಳನ್ನೇ ಬರೆದ ಕವಿಗಳು ವೃತ್ತಿಯಿಂದ ಶೈಕ್ಷಣಿಕ ಧಾರೆಯಲ್ಲೆ ಸಾಧಿಸಿದ್ದಾರೆ. ಇವುಗಳಿಗೆ ಭಿನ್ನವಾಗಿ ಮೊಯಿಲಿಯವರು ರಾಜಕೀಯ ರಂಗದಲ್ಲಿ ಇಂತಹ ಅಪೂರ್ವ ಮಹಾಕಾವ್ಯವನ್ನು ಕಟ್ಟಿಕೊಟ್ಟಿರುವುದು ಸಾಹಿತ್ಯಾಸಕ್ತರು ಮೆಚ್ಚಲೇ ಬೇಕಾದ ಸಂಗತಿಯಾಗಿದೆ. ಶ್ರೀ ರಾಮಾಯಣ ಮಹಾನ್ವೇಷಣಂ ಮಹಾಕಾವ್ಯ ಕೃತಿಯು ಐದು ಸಂಪುಟದಲ್ಲಿ ಪ್ರಕಟಗೊಂಡಿವೆ. ೨೦೦೧ರಲ್ಲಿ ಮೊದಲ ಸಂಪುಟ ೨೦೦೨ರಲ್ಲಿ ಎರಡನೇ ಸಂಪುಟ, ೨೦೦೩ರಲ್ಲಿ ಮೂರನೇ ಸಂಪುಟ ೨೦೦೪ರಲ್ಲಿ ೪ನೇ

ಸಂಪುಟ ೨೦೦೫ರಲ್ಲಿ ಐದನೇ ಸಂಪುಟ ಪ್ರಕಟಗೊಂಡಿದ್ದು ಅವುಗಳನ್ನು ಒಟ್ಟಾರೆಯಾಗಿ ಮಹಾಸಂಪುಟವನ್ನಾಗಿ ೨೦೦೭ರಲ್ಲಿ ಪ್ರಕಟಗೊಳಿಸಿರುತ್ತಾರೆ. ಈ ಐದು ಸಂಪುಟಗಳು ಹಿಂದಿ ಭಾಷೆಯಲ್ಲಿ ಪ್ರಕಟಗೊಂಡಿವೆ. ಪ್ರೊ.ಪ್ರಧಾನ ಗುರುದತ್ತ ಅವರು ಮೊದಲ ಸಂಪುಟವನ್ನು ಅನುವಾದಿಸಿದ್ದು, ಹಿಂದಿ ಭಾಷೆಯ ಜ್ಞಾನ ಪೀಠ ಪ್ರಶಸ್ತಿ ಪುರಸ್ಕೃತರಾದ ಪ್ರೊ.ಇಂದಿರಾ ಗೋ ಸ್ವಾಮಿಯವರು ಅನುವಾದಿತ ಸಂಪುಟಕ್ಕೆ ಮುನ್ನುಡಿಯನ್ನು ಬರೆದಿದ್ದಾರೆ. ಗೋ ಸ್ವಾಮಿಯವರು ಮುನ್ನುಡಿಯಲ್ಲಿ ಕೃತಿ ಕುರಿತು ಈ ರೀತಿಯಲ್ಲಿ ಹೇಳಿದ್ದಾರೆ. “ವೀರಪ್ಪ ಮೊಯಿಲಿಯವರ ಕೃತಿ ಮುಖ್ಯವಾಗಿ ಶ್ರೀ ರಾಮಾಯಣ ಮಹಾನ್ವೇಷಣಂ ನೂತನ ಸಹಸ್ರ ಮಾನದ ಪ್ರಥಮ ಮಹಾಕಾವ್ಯ ಮಾತ್ರವಲ್ಲದೆ ಅದರ ಸ್ವಂತ ನೆಲೆಯಲ್ಲಿಯೂ ಮಹಾಸಾಧನೆಯಾಗಿದೆ. ನಿಜಕ್ಕಾದರೆ, ಅದು ಲಕ್ಷ್ಮಣಾಯನ ಕವಿಯು ಲಕ್ಷ್ಮಣನ ಮಹಾನ್ ಗುಣ ವಿಶೇಷಗಳಲ್ಲಿ ಸಂಪೂರ್ಣವಾಗಿ ತನ್ಮಯವಾಗಿರುವುದನ್ನು ಗಮನಿಸಬಹುದು[೧೬]”

೨೧ನೇ ಶತಮಾನದ ಕನ್ನಡದ ಮೊದಲ ಕಾವ್ಯವಾದ ಶ್ರೀ ರಾಮಾಯಣ ಮಹಾನ್ವೇಷಣಾ ಕೃತಿಯು ಪ್ರಾಚೀನ ಅತೀ ಪ್ರಾಚೀನ ಸಮಕಾಲೀನ ಪ್ರಜ್ಞೆಯ ಅಭಿವ್ಯಕ್ತಿಯ ಒಳನೋಟದಿಂದ ಎದ್ದು ಬಂದದ್ದು. ರಾಮಾಯಣ ಮಹಾಭಾರತ ಮಹಾಕಾವ್ಯಗಳು ಪ್ರತಿಯೊಬ್ಬ ಭಾರತೀಯನಿಗೆ ಚಿರಪರಿಚಿತವಾದ ಕಾವ್ಯಗಳಾಗಿವೆ.

ವೀರಪ್ಪ ಮೊಯಿಲಿಯವರು ತಮ್ಮ ಕೃತಿಯ ಮೊದಲ ಸೋಪಾನದಲ್ಲಿ ಮೂಲ ರಾಮಾಯಣದ ಕಥೆಯನ್ನು ವಸ್ತುವಾಗಿಟ್ಟುಕೊಂಡಿದ್ದಾರೆ. ಈ ಮೂಲ ರಾಮಾಯಣದ ಕಥೆಯ ವಸ್ತುವನ್ನು ಸಮಕಾಲೀನ ಪ್ರಜ್ಞೆಯ ಮೂಲಕ ವಿಭಿನ್ನವಾಗಿ ಚಿತ್ರಿಸಿದ್ದಾರೆ. ಇದು ಅವರ ಸೃಜನಶೀಲತೆ ಮತ್ತು ಜನಪರ ಕಾಳಜಿಗೆ ಹಿಡಿದ ಕೈಗನ್ನಡಿಯಾಗಿದೆ. ಕಾವ್ಯದ ಆರಂಭದಲ್ಲಿ ಕವಿ ಕಾವ್ಯದ ಉದ್ದೇಶವನ್ನು ಸ್ಪಷ್ಟ ಪಡಿಸಿದ್ದಾರೆ.

ವೀರಪ್ಪ ಮೊಯಿಲಿ ಎಂಬ ಪ್ರಜಾ ಭಕ್ತ ನೋರ್ವನು....

“ಬರೆದಿಹನು ನವಯುಗದ ಸಹೃದಯ ವೃಂದಕ್ಕೆ
ನವ ಚಿಂತನೆಯ ಮಹಾನ್ವೇಷಣೆಯೆಂಬೀ ಮಹಾ
ಕಾವ್ಯವನು ಸೌಮಿತ್ರಿಯಾ ಚರಣಕ್ಕೆರಗಿ
ಲಕ್ಷ್ಮಣ ನಾಯಣಯಾಗಿಸುವ ಹಂಬಲದಿ ಕೂಡಿ.........[೧೭]”

ಹೀಗೆ ಕಾವ್ಯಾರಂಭದಲ್ಲಿ ಆಧುನಿಕರಣದಲ್ಲಿ ಜಾಗತೀಕರಣ ಖಾಸಗೀಕರಣ ಉದಾರೀಕರಣ ಎಂಬಿತ್ಯಾಧಿ ಸಂಕೀರ್ಣ ಸಮಯದ ನಡುವೆ ಹೊಸ ಚಿಂತನೆಯ ಸೆಲೆಯಾಗಿ ಕವಿ ಮೊಯಿಲಿ ಕಾವ್ಯಾರಂಭದಲ್ಲಿ ಹೇಳಿಕೊಂಡಿದ್ದಾರೆ. ಮುಂದುವರೆದ ಕಾವ್ಯ ಬರೆಯುವ ಆಶಯವನ್ನು ಕವಿ ಹೀಗೆ ತೊಡಿಕೊಂಡಿದ್ದಾನೆ.

"ಪ್ರಳಯವೇ ಭೋರ್ಗರೆದು ಬದುಕ ನುಂಗಿತ್ತಲ್ಲಿ
ಕೋಮು ದ್ವೇಷದ ಅಗ್ನಿ, ವಿಕೃತ ನೋಡಿನ ಲಾವಾ
ರಸವೆ ಉರುಳಿಸಿತು ಮೂರು ಗುಮ್ಮಟವ
ಪ್ರೇತೆಯಾ ದ್ವಪರದ ಕಲಿಯುಗದ ಸಂಸ್ಕಾರ
ಏನಾಯ್ತು ಸಾಂಸ್ಕೃತಿಕ ದಿಗ್ವಿಜಯ ಪುಣ್ಯಗಾನ
ರಾಷ್ಟ್ರಗರ್ಭವೇ ಸಿಡಿದುದಾವಾನಲವೆ ಉರಿದು
ಭೂಮಾತೆ ಸಂಕಟದಿ ಕಣ್ಣೀರ ಮಿಡಿಯುತಿದೆ
ಸಿತ್ತರಿನ ಬಗ್ಗೆಗಳು ರಕ್ತದೋಕಳಿ ನಡೆದು
ಉತ್ಕ್ರಾಂತಿ ಸ್ಫೋಟಿಸಿತು ಗಗನವೇ ಬೇದಿಸುತ
ಶಾಂತಿ ಸ್ಥಾಪನೆಗೆಂದು ಆದಿಶೇಷನೆ ಮರಳಿ
ನವಯುಗ ದಿಗಂತದ ಮೂಡ ಕಡಲಿಲಿ ಮೂಡಿ[೧೮]"

ಇಲ್ಲಿ ಮೊಯಿಲಿಯವರ ಕಾವ್ಯ ಧೋರಣೆಯ ಸೆಲೆಯ ಅನಾವರಣಗೊಳ್ಳುತ್ತದೆ. ರಾಷ್ಟ್ರ ಪ್ರಜ್ಞೆ ಮನುಕುಲದ ಚಿಂತನೆ ಹಾಗೂ ಸಮಕಾಲೀನ ಸ್ಪಂದನೆ ಒಡಮೂಡಿ ಬಂದಿದೆ. ಪ್ರಸ್ತುತ ಸೋಪಾನದಲ್ಲಿ ದಶರಥ ಮಹಾರಾಜರು ಪುತ್ರ ಕಾಮೇಷ್ಠಿ ಯುಗವನ್ನು ಅಹಿಂಸೆಯ ಮೂಲಕ ಮಾಡುತ್ತಾ ಸಾವಿರಾರು ಮನಸ್ಸುಗಳನ್ನು ಊಟದ ಮೂಲಕ ಸಂತೃಪ್ತಿಗೊಳಿಸುತ್ತಾರೆ. ನಾಲ್ಕು ಮಕ್ಕಳನ್ನು ಪಡೆದುಕೊಂಡ ದಶರಥ ಸುಖದಿಂದ ಕಾಲ ಕಳೆಯುವ ದೃಶ್ಯವನ್ನು ಮೊದಲ ಸೋಪಾನದಲ್ಲಿ ಕವಿ ಮೊಯಿಲಿಯವರು ಸೆರೆ ಹಿಡಿದಿದ್ದಾರೆ.

ಯುಗದ ಸಂದರ್ಭದಲ್ಲಿ ಕೆಳವರ್ಗದ ಹಸಿದ ಒಬ್ಬ ಮುದುಕ ಊಟಕ್ಕೆ ಬಂದಾಗ ರಾಜಭಟರು ತಡೆದು ನಿಲ್ಲಿಸುತ್ತಾರೆ. ಇದನ್ನು ಗಮನಿಸಿದ ದಶರಥ ಆ ಕೆಳವರ್ಗದ ವೃದ್ದನಿಗೆ ಊಟಕ್ಕೆ ಅವಕಾಶ ಕಲ್ಪಿಸದಿರುವುದನ್ನು ಮೊಯಿಲಿಯವರು ಶೋಷಣಾ ರಹಿತವಾದ

ಸಮಾಜ ಕಟ್ಟುವ ಚಿಂತನೆಯನ್ನು ಹೊಂದಿ ಸಮಾನತೆಯನ್ನು ತರುವಲ್ಲಿ ಯಶಸ್ವಿಯಾಗಿದ್ದಾರೆ. ಈ ಸಂದರ್ಭವನ್ನು ಕವಿ ಹೀಗೆ ವರ್ಣಿಸಿದ್ದಾರೆ.

ವರ್ಣಜಾತಿಯ ಭೇದ ಅಳಿದು ಬಾಳ್ವದು ಜಗವು
ಒಂದೇ ಕುಲ ಒಂದೇ ನೆಲ ಒಂದೇ ಜಲವೆಂದನವ
ದಿವ್ಯಭಾವವ ತಾನೆ ತಳೆಯಲಿಹದು

ಎನ್ನುವ ಸಾಲುಗಳು ಮೊಯಿಲಿಯವರ ಸವನ್ವಯ ದೃಷ್ಟಿಯನ್ನು ಎತ್ತಿ ತೋರಿಸಿದೆ.

ಒಂದನೇ ಸೋಪಾನದ ಕೊನೆಯಲ್ಲಿ ಶ್ರೀ ರಾಮನಿಗೆ ಪಟ್ಟಾಭಿಷೇಕವೇ ನನ್ನ ಮಹಾನ್‌ಗುರಿ ಎಂದು ಹೇಳಿ ೪೫ ಪ್ರಸ್ತಾನ ಮೊದಲ ಸೋಪಾನ ರಚಿಸಿದ್ದೇನೆ ಎಂದು ಹೇಳುತ್ತಾರೆ.

ಎರಡನೇ ಸೋಪಾನವು ಶ್ರೀ ರಾಮನ ಪಟ್ಟಾಭಿಷೇಕದ ಕಥೆಯ ನಂತರದ ಭಾಗವನ್ನು ಒಳಗೊಂಡಿದೆ. ಕವಿ ಮೊಯಿಲಿಯವರು ಎರಡನೇ ಸೋಪಾನದಲ್ಲಿ ದಶರಥನ ಅಶ್ವಮೇದ ಯಾಗವನ್ನು ನೆರವೇರಿಸಿದ ಸಂದರ್ಭವನ್ನು ತುಂಬಾ ಮಾರ್ಮಿಕವಾಗಿ ಚಿತ್ರಿಸಿದ್ದಾನೆ. ಅಲ್ಲಿ ದಶರಥನ ಮುಖಾಂತರ ಅಸ್ಪೃಶ್ಯತೆಯನ್ನು ಹೋಗಲಾಡಿಸಲು ಮನೋಭಾವವನ್ನು ಮೊಯಿಲಿಯವರು ಚೆನ್ನಾಗಿ ಚಿತ್ರಿಸಿದ್ದಾರೆ. ಜೊತೆಗೆ ಲಕ್ಷ್ಮಣನಿಗೆ ಕೃತಿಯಲ್ಲಿ ಹೆಚ್ಚಿನ ಪ್ರಾಧಾನ್ಯತೆಯನ್ನು ನೀಡಿರುವುದು ಪ್ರತಿಭೆಯನ್ನು ತೋರಿಸುತ್ತದೆ. ಅಹಲ್ಯಯ ಪ್ರಸಂಗವಂತು ಕೃತಿಯ ಒಟ್ಟು ಆಯಾಮಕ್ಕೆ ಒಂದು ಚೌಕಟ್ಟನ್ನು ನೀಡಿದೆ. ಮೊಯಿಲಿಯವರು ಸೀತಾ ಸ್ವಯಂವರದಲ್ಲಿ ಹೊಸ ಅಂಶಗಳನ್ನು ಸೇರಿಸಿದ್ದಾರೆ. ಸೀತೆಯ ಸ್ವಯಂವರದ ಬಳಿಕ ರಾಮ ಲಕ್ಷ್ಮಣರು ಅಯೋದ್ಯಕ್ಕೆ ಮರಳುವುದು ಪಟ್ಟಾಭಿಷೇಕ ಮುಂತಾದವುಗಳು ಕವಿ ಪ್ರಕೃತಿ ವರ್ಣನೆ. ಕಣ್ಣುತುಂಬಿ, ಮನ ತುಂಬಿ ವರ್ಣಿಸಿದ್ದಾರೆ. ಜೊತೆಗೆ ರಾಮನ ವಿಲಾಪ, ಲಕ್ಷ್ಮಣನನ ಸಾಂತ್ವನ, ಜಟಾಯುವಿನ ಪ್ರಸಂಗ, ಶಬರಿಯಭಕ್ತಿ ಮುಂತಾದವುಗಳು ಕವಿ ಮೊಯಿಲಿಯವರು ವರ್ಣಿಸಿದ ಪ್ರಮುಖ ಭಾಗಗಳಾಗಿವೆ. ಈ ಎರಡನೇ ಸೋಪಾನದ ಮುಕ್ತಾಯವು ಕೊನೆಯಲ್ಲಿ ಋಷ್ಯಮೂಖ ಪರ್ವತ ಪ್ರಾಂತ್ಯದಲ್ಲಿ ಹನುಮಂತ, ರಾಮ, ಲಕ್ಷ್ಮಣರನ್ನು ಸುಗ್ರೀವರ ಕಡೆಗೆ ಕರೆದುಕೊಂಡು ಹೋಗುವ ಪ್ರಸಂಗದಲ್ಲಿ ಎರಡನೇ ಸೋಪಾನ ಮುಕ್ತಾಯವಾಗುತ್ತದೆ.

ಹೀಗೆ ಮಹಾನ್ವೇಷಣೆಯ ಕವಿ ಮೊಯಿಲಿಯವರು ವ್ಯಾಪಕ ಅಧ್ಯಯನ ಗಾಢವಾದ ವಿವಿಧ ಕಾವ್ಯ ಪರಿಚಯದ ಮೂಲಕ ಆಧುನಿಕತೆಯ ಆಶಯವನ್ನು ಪ್ರಾಚೀನ ಕಾವ್ಯದ ವಸ್ತು ವಿಷಯದ ಮೂಲಕ ಸಹೃದಯರಿಗೆ ತೆರೆದಿಟ್ಟಿದ್ದಾರೆ.

ಮೂರನೇ ಸೋಪಾನವು ಹನುಮಂತ ರಾಮ ಲಕ್ಷ್ಮಣರೇ ಸುಗ್ರೀವರೆಡೆಗೆ ಕರೆದುಕೊಂಡು ಹೋಗಿ ಸ್ನೇಹವನ್ನು ಬೆಸಯುವದರ ಮೂಲಕ ಮೂರನೇ ಸೋಪಾನ ಪ್ರಾರಂಭಗೊಳ್ಳುತ್ತದೆ. ಈ ಸೋಪಾನದಲ್ಲಿ ಪ್ರಮುಖವಾಗಿ ರಾಮ ವನವಾಸಕ್ಕೆ ರಾವಣ ಸೀತೆಯನ್ನು ಅಪಹರಿಸುವಾಗ ಸೀತೆಯ ಒಂದೊಂದು ಆಭರಣವು ಚಲ್ಲಾಪಿಲ್ಲಿಯಾಗಿ ಬಿದ್ದಿರುವ ಆಭರಣವನ್ನು ನೋಡಿ ರಾಮ ದುಃಖಿತನಾಗುವ ಸಂದರ್ಭ ಕವಿ ಮೊಯಿಲಿಯವರ ಸಾಹಿತ್ಯಕ್ಕೆ ಹಿಡಿದ ಕೈಗನ್ನಡಿಯಾಗಿದೆ. ಒಟ್ಟಿಗೆ ಮೂರನೇ ಸೋಪಾನವು ೪೪ ಪ್ರಸಂಗಗಳನ್ನು ಹೊಂದಿದೆ. ಇದರಲ್ಲಿ ವಾಲಿ ಮತ್ತು ಸುಗ್ರೀವರ ಕತೆಯನ್ನು ನೈಜವಾಗಿ ಚಿತ್ರಿಸಿದ್ದಾರೆ. ಮೊಯಿಲಿಯವರು ಸುಗ್ರೀವನ ಪಾತ್ರದ ಮೂಲಕ ಒಳ್ಳೆಯ ರಾಜಾಡಳಿತದ ತತ್ವವನ್ನು ಸಂದರ್ಭೋಚಿತವಾಗಿ ಹೆಣದಿದ್ದಾರೆ. ಅಪಹರಣಕ್ಕೊಳಗಾದ ಸೀತೆಯನ್ನು ಹುಡುಕಲು ಸುಗ್ರೀವನ ಮೂಲಕ ಭಾರತದ ಹಲವು ಪ್ರದೇಶವನ್ನು ಕವಿ ಮೊಯಿಲಿ ಪರಿಚಯಿಸಿ ಕೊಟ್ಟಿದ್ದಾರೆ. ಮೊಯಿಲಿಯವರು ಈ ಸೋಪಾನದಲ್ಲಿ ಲಕ್ಷ್ಮಣನ ಪಾತ್ರಕ್ಕೆ ಹೆಚ್ಚಿನ ಪ್ರಾತಿನಿಧ್ಯವನ್ನು ನೀಡಿದ್ದಾರೆ. ಈ ಸೋಪಾನವನ್ನು ಮೊಯಿಲಿಯವರು ಅರ್ಥಪೂರ್ಣವಾಗಿ ಈ ಪದ್ಯದ ಮೂಲಕ ಮುಕ್ತಾಯಗೊಳಿಸಿದ್ದಾರೆ.

---------ನೂರಮೂವತ್ತೈದು

ಪ್ರಸ್ಥಾನಕೇರಿಹದು ಮೂರನೇಯ ಸೋಪಾನ
ಸೀತಾ ಮಾತೆಯನರಿಸಿ ಲಂಕೆಯೊಳಡಿಯಿಡಲು
ಹನುಮ ಬೆಳೆ ಬೆಳೆದೀಗ ಸಿಂದಿಹನು ಸಂದಿಹನು
ಮುಂದೇನು ಮಂಗಳವ ಕಂಗಳಲಿ ಕಾಂಬೆವೋ
ಎನ್ನುವ ಸಂಭ್ರಮದೊಳಗೆ ವಾನರರು ನಿಂದಿಹರು
ಇದುವೆ ವಾರ್ತೆಯೊಳಿಗ ಮೂರನೇಯ ಸೋಪಾನ
ಶುಭಕೆ ಸಂದಿಹುದಿಲ್ಲಿ !

ಎಂದು ಮೂರನೇ ಸೋಪಾನವನ್ನು ಮುಕ್ತಾಯಗೊಳಿಸಿದ್ದಾರೆ.

ಶ್ರೀ ರಾಮಾಯಣ ಮಹಾನ್ವೇಷಣೆಯ ಚತುರ್ಥ ಸೋಪಾನವು ಸುಂದರ ಕಾಂಡದ ಪ್ರಮುಖ ಭಾಗವಾಗಿದೆ. ಹನುಮಂತನು ಈ ಭಾಗದ ಕೇಂದ್ರ ವ್ಯಕ್ತಿ. ಹನುಮಂತನನ್ನು ಮೊಯಿಲಿಯವರು ಮಾನವ ಕುಲದ ಇಚ್ಛಾಶಕ್ತಿಗೆ ಪೂರಕವಾಗಿ ಹೆಚ್ಚಿನ ಆದ್ಯತೆಯನ್ನು ಕೊಟ್ಟು ಈ ಭಾಗದಲ್ಲಿ ಚಿತ್ರಿಸಿದ್ದಾರೆ. ಆಂಜನೇಯನ ಮೂಲಕ ಪ್ರಯಾಣದ ಅನುಭವಕ್ಕೆ ಕರೆದುಕೊಂಡು ಹೋದರೆ, ಲಂಕೆಯನ್ನು ದಹಿಸುವುದು ಆ ಮೂಲಕ ಸೀತೆಯನ್ನು ಮರಳಿ ಪಡೆಯುವ ಕಥಾ ಹಂದರ ರಸವತ್ತಾಗಿದೆ. ಸೀತೆಯ ವ್ಯಕ್ತಿತ್ವಕ್ಕೆ ಮಹಿಳಾ ಸಂವಾದ ಹನುಮಂತ ಮತ್ತು ಸೀತೆಯ ಸಂವಾದ ಇವೆರಡರಲ್ಲಿ ಸೀತೆಯ ದೃಢ ನಿರ್ಧಾರ ಆತ್ಮ ವಿಶ್ವಾಸ ನಿಷ್ಠೆ ಎದ್ದು ಕಾಣುತ್ತದೆ. ಈ ಸೋಪಾನದಲ್ಲಿ ಕವಿ ಮೊಯಿಲಿಯವರು ಸಂವಾದ ಮತ್ತು ಚರ್ಚೆಯನ್ನು ಪಾತ್ರ-ಪಾತ್ರಗಳ ನಡುವೆ ಹೆಣೆದಿರುವುದು ಈ ಕೃತಿಯ ಸೊಗಸನ್ನು ಹೆಚ್ಚಿಸಿದೆ. ಜೊತೆಗೆ ರಾವಣ ಮಂಡೋದರಿಯ ಸನ್ನಿವೇಶ ಅರ್ಥಪೂರ್ಣ ಅನನ್ಯತೆಯಿಂದ ಕೂಡಿದೆ. ಜೊತೆಗೆ ರಾವಣ-ವಿಭೂಷಣರ ಸಂವಾದ ಕೈಕೆ-ರಾವಣರ ಸಂವಾದ ಈ ಎಲ್ಲಾ ಸಂವಾದ ಸನ್ನಿವೇಶಗಳು ಧರ್ಮ ಅಧರ್ಮ ಸತ್ಯ-ಅಸತ್ಯ ನೀತಿ-ಅನೀತಿ ಸೂಕ್ಷ್ಮ ಜಿಜ್ಞಾಸೆ ಮುಂತಾದವುಗಳನ್ನು ಕವಿ ಮೊಯಿಲಿ ಸುಂದರವಾಗಿ ಕಟ್ಟಿಕೊಟ್ಟಿದ್ದಾರೆ. ಈ ಸೋಪಾನದ ಕೊನೆಯಲ್ಲಿ ಮಹಾಕಾವ್ಯದ ಆಳವಿನ್ಯಾಸವನ್ನು ಸಂದೇಶವನ್ನು ಅರ್ಥಪೂರ್ಣವಾಗಿ ಈ ಕೆಳಗಿನ ಪದ್ಯದ ಮೂಲಕ ಕಟ್ಟಿಕೊಟ್ಟಿದ್ದಾರೆ.

----------ಶ್ರೀ ರಾಮ ಸೌಮಿತ್ರಿ
ವಾನರರ ಜೊತೆಗೂಡಿ ಅನ್ವೇಷಣಾಪಥದೊಳಗೆ
ಪೊಸತು ಅಧ್ಯಾಯವನೆ ತೆರದಿಹರು ಸೋತು ಕಲಿಹರು
ದೀಪವಿಲ್ಲದ ದ್ವೀಪ ಲಂಕೆ ಸೆರೆಮನೆಯೊಳಗೆ
ಮುಕ್ತಿ ದ್ವೀಪವ ಹಚ್ಚಿ ತಮವ ಸವರುವ ಕೆಚ್ಚು
ಹೊಗೆ ಕವಿದು ಪಥವೆಲ್ಲ ಮಬ್ಬಾಗಿಂದಿರಲು
ಮೈವೆತ್ತ ಲಾಲಿತ್ಯ ಸಂಸ್ಕಾರ ಸಂದೇಶ
ದೀಪ್ತಿಯನ್ನೇ ಐಯ್ಯುತ್ತ ಮುಂದೆ ಸಾಗುತಿಹಲಿಹರು (೧೧೦/೧೮೦ಪ್ರಸ್ಥಾನ)
ಎಂದು ಲಂಕೆಯನ್ನು ಮೊಯಿಲಿಯವರು ವರ್ಣಿಸಿದ್ದಾರೆ.

ಐದನೇ ಸೋಪಾನವು ರಾಮಾಯಣದ ಯುದ್ಧಕಾಂಡದ ಪ್ರಮುಖ ಕಥೆ ಇಲ್ಲಿ ರಾಮತ್ವ ಮತ್ತು ರಾವಣತ್ವದ ಸಂಘರ್ಷ ಮೂಡಿದೆ. ಶುದ್ಧ ಚಾರಿತ್ರ್ಯ ಸಾತ್ವಿಕ ಉದ್ದೇಶಗಳಿಗೆ ವಿಜಯವು ತಾನಾಗಿಯೇ ಒಲಿಯುವುದು ಎಂದು ಮೊಯಿಲಿಯವರು ಒತ್ತಿ ಹೇಳುತ್ತಾರೆ. ಸ್ವಾಭಿಮಾನ ನೈತಿಕಥೆ ಮುಂತಾದವು ಕೊನೆಯ ಸೋಪಾನದ ಪ್ರಮುಖ ವಸ್ತುಗಳಾಗಿವೆ. ಸಾಂಸ್ಕೃತಿಕ ಸಂಘರ್ಷ ಮತ್ತು ಸಾಮರಸ್ಯ ಇವುಗಳನ್ನು ಬಿಂಬಿಸುವ ನಿಟ್ಟಿನಲ್ಲಿ ವಾಸ್ತವತೆಯನ್ನು ಆದರ್ಶಾನು ಸಂಧಾನದ ಮೂಲಕ ಅನುಗುಣವಾಗಿ ಅವುಗಳಿಗೆ ಪಾತ್ರದ ಲೇಪನವನ್ನು ಸನ್ನಿವೇಶದ ಕಲ್ಪನೆಯನ್ನು ಕವಿ ಮೊಯಿಲಿಯವರು ನೀಡಿದ್ದಾರೆ. ಪ್ರತಿಯೊಂದು ಸೋಪಾನದಲ್ಲಿ ನೋಡಲಾದ ಕವಿ ಮೊಯಿಲಿಯವರಿಗೆ ಯುದ್ಧದ ಮೇಲೆ ನಂಬಿಕೆಯನ್ನು ಇಟ್ಟುಕೊಂಡಿಲ್ಲ ಸಾಮಾಜಿಕ ಸ್ಥರದ ತಳಹದಿಯ ಮೇಲೆ ಸಮರಕ್ಕಿಂತಲೂ ಶಾಂತಿಬೇಕು ಕೆಟ್ಟದ್ದನ್ನು ಬಿಟ್ಟು ಒಳ್ಳೆಯದನ್ನು ಮಾಡಬೇಕು ಮುಂತಾದ ಭಾವಗಳು ಕಾವ್ಯದ ಅಂತರ್‌ಶಕ್ತಿಯನ್ನು ವಿಸ್ತರಿಸುತ್ತವೆ. ಹೀಗಾಗಿಯೇ ಈ ಐದನೇ ಸೋಪಾನವನ್ನು ಕುರಿತು ಟಿ.ವಿ. ವೆಂಕಟಾಚಲ ಶಾಸ್ತ್ರೀಗಳು ಮುನ್ನುಡಿಯಲ್ಲಿ ಈ ರೀತಿಯಲ್ಲಿ ಅಭಿಪ್ರಾಯ ವ್ಯಕ್ತಪಟ್ಟಿದ್ದಾರೆ.

"ಶ್ರೀ ರಾಮಾಯಣ ಮಹಾನ್ವೇಷಣಾ ಮಹಾಕಾವ್ಯದಲ್ಲಿ ಭಾವೋನ್ನತಿಯ ಸೊಂಪು ಪಕೃತಿಯ ಸೊಬಗು ತುಂಬಿ ಸೊಸುವ ಚಲುವಿನ ಕೊಳ್ಳಗಳು ಅಲ್ಲಲ್ಲಿ ದ್ವೀಪ ಖಂಡಗಳಂತೆ ರಚಿತವಾಗಿವೆ. ಗೌತಮಾಶ್ರಮದ ಅಹಲ್ಯೆಯ ವೃತ್ತಾಂತ ದಶರಥ ವಿಲಾಪ ಪಂಚವಟಿಯಲ್ಲಿ ಚಂದ್ರನಖಿ ವಿರಸ–ವೃತ್ತಾಂತ, ಕಾಂಚನ–ಮೃಗರ್ಷನೆಯ ಸನ್ನಿವೇಶ ಇತ್ಯಾದಿಯಾದವು ತೇಜೋಹಾರಿಯಾದ ಛಂದೋಗತಿಯಲ್ಲಿ ಸಾಗುತ್ತವೆ. ಸಸ್ಯಲೋಕ ಪ್ರಾಣಿ ಪ್ರಪಂಚದ ಪರಿಚಯದ ಹೃದಯಂಗಮವಾಗಿ ಮಾಡಿಕೊಡುವ ಸಂದರ್ಭ ವಿಶೇಷತೆಗಳು ಮೊಯಿಲಿಯವರಿಗೆ ಆ ವಿಷಯಗಳಲ್ಲಿರುವ ಪ್ರಜ್ಞತೆಗೆ ಸಾಕ್ಷಿಗಳಾಗಿವೆ[೯೯]" ಎನ್ನುವಲ್ಲಿ ಮೊಯಿಲಿಯವರ ಶ್ರೀ ರಾಮಾಯಣ ಮಹಾನ್ವೇಷಣೆಯ ಕೃತಿಯ ಅಂತಸತ್ವ ತಿಳಿದು ಬರುತ್ತದೆ. ಪಂಚ ಸೋಪನವು ಕೊನೆಯಲ್ಲಿ ಹೀಗೆ ಹೇಳುತ್ತಾರೆ.

----------ರಾವಣಗೆ ಇದಿರಾಗಿ
ಲಂಕೆಯಾಳು ಶ್ರೀರಾಮ ಸಮರದಲ್ಲಿ ನಿಂದಿರಲು
ವೀರಾಧಿವೀರರನು ಕೊಲ್ಲುತ್ತಾ ಅಂತ್ಯದಲ್ಲಿ

ಸಂಹರಿಸಿ ರಾವಣನ ಜಯವಧುವ ವರಿಸಿದನು
ಸೀತೆಯನು ಸ್ವೀಕರಿಸಿ ಸಾಕೇತಕೈದಿದನು
ರಾಮರಾಜ್ಯದ ಪರಿಯು ಜಗಕೆ ಮಾದರಿಯಾಯಿತು
ಐದನೇಯ ಸೋಪಾನವು ಇಲ್ಲಿಗಾಯಿತು ಪೂರ್ಣ ೨೨೫ಪ್ರ/೫೮೦ ಪದ್ಯ

ಎಂದು ಶ್ರೀ ರಾಮಾಯಣ ಮಹಾನ್ವೇಷಣಕೆ ಮಂಗಳವನ್ನು ಹಾಡುತ್ತಾರೆ.

ಮೊಯಿಲಿಯವರ ಚಿಂತನಾ ಲೇಖನ ಕೃತಿಗಳು

ಮೊಯಿಲಿಯವರು ೧೯೯೨-೯೪ರ ಅವಧಿಯಲ್ಲಿ ರಾಜ್ಯದ ಮುಖ್ಯಮಂತ್ರಿಯಾಗಿದ್ದಾಗ ತಾವು ಮಾಡಿದ ಭಾಷಣಗಳ ಸಂಕಲನವನ್ನು ೧೯೯೮ರಲ್ಲಿ ಪ್ರಕಟಿಸಿದ್ದಾರೆ. ಈ ಭಾಷಣ ಸಂಕಲನಕ್ಕೆ ನುಡಿಕಾಣಿಕೆ ಎಂಬ ಹೆಸರನ್ನು ಇಟ್ಟು ಪ್ರಕಟಿಸಿರುವ ಮೊಯಿಲಿಯವರ ಕೃತಿಯಲ್ಲಿ ಒಟ್ಟು ೩೧ ಭಾಷಣ ಲೇಖನಗಳು ಒಡಮೂಡಿ ಬಂದಿದ್ದು ಅವೆಲ್ಲವುಗಳು ನಾಡಿನ ಸಾಮಾಜಿಕ ಆರ್ಥಿಕ, ಸಾಹಿತ್ತಿಕ, ಧಾರ್ಮಿಕ ಹಾಗೂ ಔದ್ಯೋಗಿಕ ಕ್ಷೇತ್ರಗಳಿಗೆ ಸಂಬಂಧಪಟ್ಟ ಲೇಖನಗಳಾಗಿವೆ. ಸ್ವತಂತ್ರ್ಯ ದಿನಾಚರಣೆಯ ಭಾಷಣ, ಕನ್ನಡ ಜಾಗೃತಿ ವರ್ಷದ ಉದ್ಘಾಟನಾ ಭಾಷಣ ಹಲವು ಸಾಹಿತಿಗಳ ಪ್ರತಿಮೆ ಜನ್ಮದಿನಾಚರಣೆ ಮುಂತಾದ ಸಂದರ್ಭಗಳಲ್ಲಿ ಮಾಡಿದ ಭಾಷಣಗಳು ಕೇವಲ ಅವರೊಬ್ಬರ ಅನಿಸಿಕೆಯಾಗಿರದೇ ಸಾಮಾಜಿಕ ಸಂದರ್ಭದ ಭಾಷಣಗಳಾಗಿ ಕಂಡು ಬರುತ್ತದೆ. ಹೀಗೆ ಆಯಾ ಸಂದರ್ಭ ಉತ್ಸವ ಮುಂತಾದ ಕಾರ್ಯಕ್ರಮಗಳಲ್ಲಿ ಮಾಡಿದ ಭಾಷಣಗಳ ಒಟ್ಟು ಸಾರ ನುಡಿ ಕಾಣಿಕೆ ಕೃತಿಗಳಲ್ಲಿ ಎದ್ದು ಕಾಣುತ್ತದೆ.

ರಾಷ್ಟ್ರೀಯ ಚಿಂತನ ದರ್ಶನ : ೨೦೦೩ರಲ್ಲಿ ಈ ಸಂಕಲನವನ್ನು ಪ್ರಕಟಗೊಳಿಸಲಾಯಿತು. ಕೃತಿಯು ಒಟ್ಟು ೩೬ ಲೇಖನಗಳನ್ನು ಒಳಗೊಂಡಿದ್ದು ಪ್ರಮುಖವಾಗಿ ನಾಲ್ಕು ಭಾಗವಾಗಿ ವಿಂಗಡಿಸಿದ್ದಾರೆ. ಸಾಮಾಜಿಕ ಭಾಗದಲ್ಲಿ ಬುಡಕಟ್ಟು ಜನಾಂಗ ಜಾತಿ ಒಕ್ಕೂಟ ಮುಂತಾದ ಲೇಖನಗಳು ಸಾಮಾಜಿಕ ಸ್ಥಿತಿಗತಿಗಳನ್ನು ಪರಿಚಯಿಸುವ ಕಾರ್ಯ ಮಾಡಿವೆ. ರಾಜಕೀಯ ಭಾಗದಲ್ಲಿ ೧೧ ಲೇಖನಗಳಿದ್ದು ಭಾರತದ ರಾಜಕೀಯ ಕರ್ನಾಟಕದ ರಾಜಕೀಯ ವ್ಯವಸ್ಥೆ ಹಾಗೂ ಸಮಸ್ಯೆಗಳು ಮುಂತಾದವುಗಳನ್ನು ಪರಿಚಯಿಸುವ ಲೇಖನಗಳು ಇಲ್ಲಿವೆ. ಪುನರಾವಲೋಕನ ಎಂಬ ಲೇಖನ ಈ ಭಾಗದ

ಮಹತ್ವದ ಲೇಖನವಾಗಿದೆ. ಆರ್ಥಿಕ ಸ್ಥಿತಿಗತಿಯ ಭಾಗದಲ್ಲಿ ೧೫ ಲೇಖನಗಳನ್ನು ಒಳಗೊಂಡಿದ್ದು ತೆರಿಗೆ ಸುಧಾರಣೆ ವಾಣಿಜ್ಯ ವ್ಯವಹಾರ ಜಾಗತಿಕ ಸವಾಲು ರಾಷ್ಟ್ರೀಯ ಜಲವಿತರಣೆ ನೀತಿ, ಅರಣ್ಯ ಮತ್ತು ಮಾನವನ ಧಾರುಣ ಶಕ್ತಿಯ ಕಾರಂಜಿ ಮುಂತಾದ ಲೇಖನಗಳು ಆರ್ಥಿಕ ಅಭಿವೃದ್ಧಿ ಮತ್ತು ವಿಶ್ವಧೀಕರಣ ಸುತ್ತ ಹೆಣೆಯಲ್ಪಟ್ಟಿವೆ. ಮೊಯಿಲಿಯವರು ಕರ್ನಾಟಕ ಸರ್ಕಾರದ ಆರ್ಥಿಕ ಮಂತ್ರಿಯಾಗಿ, ಯೋಜನಾ ಮಂತ್ರಿಯಾಗಿ ಚಿಕ್ಕ ಕೈಗಾರಿಕೆಗಳ ಸಚಿವರಾಗಿ ಸೇವೆ ಸಲ್ಲಿಸಿದ ಅನುಭವಗಳು ರಸ ಪಾಕವಾಗಿ ಒಡಮೂಡಿ ಬಂದಿದೆ. ಮುಕ್ತಾಯದ ಭಾಗದಲ್ಲಿ ಗಾಂಧೀಜಿ, ಕಾರಂತರ ಕುರಿತು ಚಿಂತನೆಯನ್ನು ಹೆಚ್ಚಿಸುವಂತಹ ಲೇಖನಗಳ ಈ ಕೃತಿ ಮಹತ್ವದ್ದಾಗಿದೆ.

ಚಿಂತನದರ್ಶನ : ಈ ಲೇಖನ ಕೃತಿಯನ್ನು ಮೊಯಿಲಿಯವರು ೨೦೦೭ರಲ್ಲಿ ಪ್ರಕಟಿಸಿದ್ದಾರೆ. ಈ ಕೃತಿಯಲ್ಲಿ ಒಟ್ಟು ೨೭ ಲೇಖನಗಳಿವೆ. ಈ ಲೇಖನಗಳಲ್ಲಿ ಭಾರತ ಕರ್ನಾಟಕತ್ವ, ಕನ್ನಡ, ಧರ್ಮ, ಸಾಹಿತ್ಯ, ಕವಿ ಮುಂತಾದ ವಿಚಾರಗಳನ್ನು ಹದುಳವಾಗಿ ಮೊಯಿಲಿಯವರು ಈ ಕೃತಿಯ ಮೂಲಕ ಕಟ್ಟಿಕೊಟ್ಟಿದ್ದಾರೆ. ಬಸವಣ್ಣ, ಕುವೆಂಪು, ಮಧ್ವಾಚಾರ್ಯ, ಗೋವಿಂದಪೈ ಮುಂತಾದವರ ಸಾಹಿತ್ಯವನ್ನು ವೈಚಾರಿಕತೆಯ ನೆಲೆಗಟ್ಟಿನ ಮೇಲೆ ಈ ಕೃತಿಯ ಲೇಖನಗಳು ಚರ್ಚೆಯನ್ನು ಬೆಳೆಸುತ್ತವೆ.

ಕಿರುದಾರಿ ಹೆದ್ದಾರಿ : ಈ ಕೃತಿಯನ್ನು ೨೦೦೭ರಲ್ಲಿ ಪ್ರಕಟಿಸಿದ್ದಾರೆ. ಕೃತಿಯಲ್ಲಿ ಪ್ರಮುಖವಾಗಿ ಐದು ಭಾಗಗಳಿದ್ದು ಅರವತ್ತೈದು ಲೇಖನಗಳಿಂದ ಒಡಗೂಡಿದೆ. ಇವು ಮಹತ್ವದ ಲೇಖನಗಳಾಗಿವೆ **ಭಾಗ-೧** ಭಾಷೆ, ಸಾಹಿತ್ಯ ಕಲೆ ಭಾಗವು ಮಾತೃ ಭಾಷೆ, ದಾಸ, ವಚನ, ಆಂದೋಲನ ಸಂಗೀತದ ಬಗ್ಗೆ ಪರಿಚಯ ಹೀಗೆ ೧೭ ಲೇಖನಗಳ ಮೂಲಕ ನಾಡಿನ ಕಲೆಯನ್ನು ನಿರೂಪಿಸಿದ್ದಾರೆ. **ಭಾಗ-೨** ಶಿಕ್ಷಣ ಭಾಗದಲ್ಲಿ-ಸಾಮಾನ್ಯ ಪ್ರವೇಶ ಪರೀಕ್ಷೆ ಕುರಿತು, ವೃತ್ತಿಪರ ಶಿಕ್ಷಣ ಕುರಿತು ಉನ್ನತ ಶಿಕ್ಷಣ ಹಾಗೂ ಮೀಸಲಾತಿ ಸಾಮಾಜಿಕ ನ್ಯಾಯ ಲೇಖನಗಳು ಮಹತ್ವವಾಗಿವೆ. **ಭಾಗ-೩** ಇತಿಹಾಸ-ರಾಜಕೀಯ ಭಾಗವು ಐತಿಹಾಸಿಕ ವ್ಯಕ್ತಿಗಳ ಚಿತ್ರಣವನ್ನು ಒಳಗೊಂಡಿದೆ. ಮುಂತಾದ ಲೇಖನಗಳು ಕಂಡು ಬರುತ್ತವೆ. ಆರ್ಥಿಕ ವ್ಯವಸ್ಥೆ, ನ್ಯಾಯಾಂಗ, **ಭಾಗ-೪** ಗ್ರಾಮೀಣಾಭಿವೃದ್ಧಿ ಈ ಭಾಗವು ಆರ್ಥಿಕ ವ್ಯವಸ್ಥೆ ಆಡಳಿತ ಸುಧಾರಣೆಗೆ ಕಾನೂನಿನ ಅರಿವನ್ನು ಹಳ್ಳಿಗಳ ಅಭಿವೃದ್ಧಿಯನ್ನು ಬಿಂಬಿಸುವ ಲೇಖನಗಳನ್ನು ಒಳಗೊಂಡಿದೆ. **ಭಾಗ-೫**ರಲ್ಲಿ ಧರ್ಮ ತತ್ವ ಶಾಸ್ತ್ರವನ್ನು

ಒಳಗೊಂಡಿದೆ. ಹಾಗೂ ಸಮಕಾಲೀನ ಚಿಂತನೆಯ ಹಿನ್ನಲೆಯಲ್ಲಿ ಮತ್ತು ವಿವಿಧ ಧರ್ಮಗಳ ಆಶಯ ಲೇಖನಗಳು ಇದರಲ್ಲಿವೆ. ಇಷ್ಟೆಲ್ಲ ಕೃತಿಗಳನ್ನು ಒಬ್ಬ ಸಾಹಿತಿಯಾಗಿ ರಾಜಕಾರಣಿಯಾಗಿ ಬರೆದಿರುವ ಮೊಯಿಲಿಯವರು ಅವರ ಸಾಹಿತ್ಯ ಮತ್ತು ಜೀವನ ಸಾಧನೆಯನ್ನು ಬಿಂಬಿಸುವ ಕೃತಿಗಳ ಹೊರ ತಂದಿದ್ದಾರೆ. ಶ್ರೀ ರಾಮಾಯಣ ಮಹಾನ್ವೇಷಣ ದರ್ಶನ ಕೃತಿ ಕುರಿತು ವಿಮರ್ಶಾತ್ಮಕ ಲೇಖನಗಳ ಸಂಪಾದನೆಯನ್ನು ಡಾ.ಎಚ್.ಟಿ. ಪೋತೆ ಅವರು ಪ್ರಕಟಿಸಿದ್ದಾರೆ. ಹಾಗೂ ೨೦೦೩ರಲ್ಲಿ ಅನ್ವೇಷಣೆ ಎಂಬ ಕೃತಿಯನ್ನು ಡಾ.ಎಚ್.ಟಿ. ಪೋತೆಯವರೇ ಸಂಪಾದಿಸಿದ್ದಾರೆ. ಈ ಕೃತಿಗಳು ಅವರ ಸಾಹಿತ್ಯಕ್ಕೆ ಸಂದ ಮನ್ನಣೆಯಾಗಿರುವ ಕೃತಿಯಾಗಿದೆ. ಹಾಗೂ ವೀರಪ್ಪ ಮೊಯಿಲಿಯವರ ಜೀವನ ಕಥನವನ್ನು ಒಳಗೊಂಡಿರುವ "ಎಲ್ಲಿ ಮನ ಕಳುಕಿರದೂ ಎಲ್ಲಿ ತಲೆ ಬಾಗಿರದೋ" ಎಂಬ ಅನುವಾದ ಕೃತಿಯನ್ನು ೨೦೦೫ರಲ್ಲಿ ಮನೋಹರ ಪ್ರಸಾದ ಅವರು ಪ್ರಕಟಿಸಿದ್ದಾರೆ. ಈ ಕೃತಿಯ ಮೂಲ ಇಂಗ್ಲೀಷನಲ್ಲಿ "ವ್ಹೇರ್ ದ ಮೈಂಡ್ ಈಸ್ ವಿದೌಟ್ ಫಿಯರ್" ಕೃತಿ ಪ್ರಕಟಗೊಂಡಿತ್ತು. ಇದನ್ನು ಡಾ॥ಎಚ್.ಪಿ. ಶಶಿಧರಮೂರ್ತಿ, ಸಿ.ಪೌಲ್ ವರ್ಗೀಸ್ ಅವರು ಪ್ರಕಟಿಸಿದ್ದರು. ಇವೆಲ್ಲ ಮೊಯಿಲಿ ಜೀವನ ಸಾಧನೆ ಹಾಗೂ ಸಾಹಿತ್ಯವನ್ನು ತಿಳಿಸುವ ಕೃತಿಯಾಗಿದೆ.

: ಅಡಿ ಟಿಪ್ಪಣಿ :

೧. "ಎಲ್ಲಿ ಮನ ಕಳುಕಿರದು ಎಲ್ಲಿ ತಲೆ ಬಾಗಿರದೊ" ಪುಟ–೨

೨. "ಕರ್ನಾಟಕದ ಮುಖ್ಯಮಂತ್ರಿಗಳು" ಸಂ.ಎಸ್.ವಿ. ಶ್ರೀನಿವಾಸರಾವ್ ಡಾ.ಅರಳುಮಲ್ಲಿಗೆ ಪಾರ್ಥಸಾರಥಿ, ಸಾಧನ ಪ್ರಕಾಶನ ಬೆಂ. ೨೦೦೧ ಪುಟ–೨೨೧

೩. "ಕರ್ನಾಟಕದ ಮುಖ್ಯಮಂತ್ರಿಗಳು" ಸಂ.ಎಸ್.ವಿ. ಶ್ರೀನಿವಾಸರಾವ್ ಡಾ.ಅರಳುಮಲ್ಲಿಗೆ ಪಾರ್ಥಸಾರಥಿ, ಸಾಧನ ಪ್ರಕಾಶನ ಬೆಂ. ೨೦೦೧ ಪುಟ–೨೨೨

೪. "ಕರ್ನಾಟಕದ ಮುಖ್ಯಮಂತ್ರಿಗಳು" ಸಂ.ಎಸ್.ವಿ. ಶ್ರೀನಿವಾಸರಾವ್ ಡಾ.ಅರಳುಮಲ್ಲಿಗೆ ಪಾರ್ಥಸಾರಥಿ, ಸಾಧನ ಪ್ರಕಾಶನ ಬೆಂ. ೨೦೦೧ ಪುಟ–೨೩೦

೫. "ಕರ್ನಾಟಕದ ಮುಖ್ಯಮಂತ್ರಿಗಳು" ಸಂ.ಎಸ್.ವಿ. ಶ್ರೀನಿವಾಸರಾವ್

ಡಾ.ಅರಳುಮಲ್ಲಿಗೆ ಪಾರ್ಥಸಾರಥಿ, ಸಾಧನ ಪ್ರಕಾಶನ ಬೆಂ. ೨೦೦೧ ಪುಟ–೨೩೨

೬. 'ಎಂ.ಸಿ.ಎ.' ಮಾರ್ಕೆಟಿಂಗ್ ರಿಸರ್ಚ ಖಾಸಗಿ ಸಂಸ್ಥೆ ನಡೆಸಿದ ಸಮೀಕ್ಷೆ"

೭. 'ಸುಳಿಗಾಳಿ' ಕಾದಂಬರಿಯ ಮುನ್ನುಡಿಯಲ್ಲಿ ಪ್ರೊ. ಎಲ್. ಶೇಷಗಿರಿ ರಾವ

೮. 'ಸಾಗರದೀಪ' ಕಾದಂಬರಿ ಕುರಿತು ಮೊಯಿಲಿಯವರ ಮಾತು

೯. 'ಕೊಟ್ಟ' ಕಾದಂಬರಿ ಎಂ. ವೀರಪ್ಪ ಮೊಯಿಲಿ ಪುಟ ಸಂಖ್ಯೆ–೧೫

೧೦. 'ಎಲ್ಲಿ ಮನ ಕಳುಕಿರದೋ ಎಲ್ಲಿ ತಲೆಭಾಗಿರದೋ' ಪುಟ ಸಂಖ್ಯೆ–೨೮೩

೧೧. 'ತೆಂಬರೆ' ಎಂ.ವೀರಪ್ಪ ಮೊಯಿಲಿ ಪುಟ ಸಂಖ್ಯೆ ೮

೧೨. 'ತೆಂಬರೆ' ಎಂ.ವೀರಪ್ಪ ಮೊಯಿಲಿ ಪುಟ ಸಂಖ್ಯೆ ೧೫

೧೩. 'ತೆಂಬರೆ' ಎಂ.ವೀರಪ್ಪ ಮೊಯಿಲಿ ಪುಟ ಸಂಖ್ಯೆ ೧೮

೧೪. 'ಎಲ್ಲಿ ಮನ ಕಳುಕಿರದೋ ಎಲ್ಲಿ ತಲೆ ಭಾಗಿರದೋ' ಪುಟ ಸಂಖ್ಯೆ–೨೯೪/೨೯೫

೧೫. 'ಎಲ್ಲಿ ಮನ ಕಳುಕಿರದೋ ಎಲ್ಲಿ ತಲೆ ಭಾಗಿರದೋ' ಪುಟ ಸಂಖ್ಯೆ–೨೯೫

೧೬. ಶ್ರೀ ರಾಮಾಯಣ ಮಹಾನ್ವೇಷಣಂ ಪದ್ಯ ೧೮೦ ಪುಟ ಸಂಖ್ಯೆ–೦೩

೧೭. ಶ್ರೀ ರಾಮಾಯಣ ಮಹಾನ್ವೇಷಣಂ ಪದ್ಯ ೧೨೦ ಪುಟ ಸಂಖ್ಯೆ–೦೨

೧೮. ಶ್ರೀ ರಾಮಾಯಣ ಮಹಾನ್ವೇಷಣ ಪಂಚಮಸೋಪಾನ ಪುಟ ಸಂಖ್ಯೆ–೩೯

ಅಧ್ಯಾಯ–೪ ಎಂ. ವೀರಪ್ಪ ಮೊಯಿಲಿಯವರ ರಾಜಕೀಯ ಚಿಂತನೆಗಳು

೪.೧ ಪ್ರಸ್ತಾವನೆ

೪.೨ ಮೊಯಿಲಿಯವರ ರಾಜಕೀಯ ಚಿತ್ರಣ

೪.೩ ರಾಜಕೀಯ ಚಿಂತನೆ ಸ್ವರೂಪ

೪.೩.೧ ಸಾಮಾಜಿಕ ಧೋರಣೆಗಳು

೪.೩.೨ ಆರ್ಥಿಕ ಸಬಲೀಕರಣ

೪.೩.೩ ಶೈಕ್ಷಣಿಕ ವಿಚಾರಗಳು

೪.೩.೪ ಆಡಳಿತದ ಸುಧಾರಣೆಗಳು

೪.೩.೫ ಕಾನೂನು ಸುಧಾರಣೆಗಳು

೪.೩.೬ ಸಾಂಸ್ಕೃತಿಕ ಸಂಕಥನಗಳು

ಅಧ್ಯಾಯ ೪

ಎಂ. ವೀರಪ್ಪ ಮೊಯಿಲಿ ಅವರ ರಾಜಕೀಯ ಚಿಂತನೆಗಳು

೪.೧ ಪ್ರಸ್ತಾವನೆ

ರಾಜಕೀಯ ಚಿಂತನೆಯ ಮನೋಭಾವವುಳ್ಳವರು ಸಹಜವಾಗಿ ಪ್ರಜ್ಞಾವಂತರು, ಪ್ರತಿಭೆಯುಳ್ಳವರು, ಅಗಾಧವಾದ ಜ್ಞಾನವನ್ನು ಹೊಂದಿದವರಾಗಿರುತ್ತಾರೆ. ಇಂತಹ ಗುಣವುಳ್ಳವರು ರಾಜಕೀಯ ಅಧಿಕಾರ ಹೊಂದಿದಾಗ ರಾಜ್ಯ ಮತ್ತು ರಾಷ್ಟ್ರದ ಆಡಳಿತವು ಸಮರ್ಪಕವಾಗಿ ಸಾಗುವುದು ಜೊತೆಗೆ ಅಭಿವೃದ್ಧಿಯನ್ನು ಸಹ ಹೊಂದುತ್ತದೆ. ಈ ನಿಟ್ಟಿನಲ್ಲಿ ಜಗತ್ತಿನ ಅನೇಕ ರಾಜಕೀಯ ಚಿಂತಕರು ತಮ್ಮ ಕೃತಿಗಳಲ್ಲಿ ಈ ವಿಚಾರವನ್ನು ಪ್ರಸ್ತುತ ಪಡಿಸಿದ್ದಾರೆ. ಅವರುಗಳಲ್ಲಿ ಪ್ರಮುಖರಾದವರು ಸಾಕ್ರೇಟಿಸ್, ಪ್ರೇಟೋ, ಅರಿಸ್ಟಾಟಲ್, ಅಬ್ರಾಹಂ ಲಿಂಕನ್, ರುಸೊ, ಕಾರ್ಲ್‌ಮಾರ್ಕ್ಸ್ ಮುಂತಾದ ಪಾಶ್ಚಿಮಾತ್ಯ ಚಿಂತನಾಶೀಲ ವ್ಯಕ್ತಿಗಳು ಉದಾತ್ತ ರಾಜಕೀಯ ಚಿಂತನೆಯ ಮೂಲಕ ತಮ್ಮ ನಿಲುವನ್ನು ಸ್ಪಷ್ಟಪಡಿಸಿದ್ದಾರೆ. ಇವರಂತೆಯೇ ಭಾರತೀಯ ರಾಜಕೀಯ ಚಿಂತಕರಾದ ಕೌಟಿಲ್ಯ, ಬಸವೇಶ್ವರ ಹಾಗೂ ಆಧುನಿಕ ಚಿಂತಕರಾದ ಗಾಂಧೀ, ಅಂಬೇಡ್ಕರ, ರಾಮಮನೋಹರ ಲೋಹಿಯಾ, ಪೆರಿಯಾರ್, ಜವಾಹರಲಾಲ ನೆಹರು ಮುಂತಾದವರು ತಮ್ಮ ರಾಜಕೀಯ ಚಿಂತನೆಯ ಮೂಲಕ ಗಮನ ಸೆಳೆದಿದ್ದಾರೆ.

ಆ ನಿಟ್ಟಿನಲ್ಲಿ ಈ ಪರಂಪರೆಯ ಸಮರ್ಥ ಮುಂದುವರಿಕೆಗಾಗಿ ರಾಜ್ಯ ಮತ್ತು ರಾಷ್ಟ್ರ ರಾಜಕಾರಣದಲ್ಲಿ ಎಂ. ವೀರಪ್ಪ ಮೊಯಿಲಿಯವರು ತಮ್ಮನ್ನು ತಾವು ಗುರುತಿಸಿಕೊಂಡಿದ್ದಾರೆ. ಸ್ವಾತಂತ್ರ್ಯದ ನಂತರ ಒಂದೆರಡು ದಶಕಗಳವರೆಗೆ ರಾಜಕೀಯದಲ್ಲಿ ಮೌಲ್ಯಗಳಿದ್ದವು. ಈ ಸಂದರ್ಭದಲ್ಲಿ ಯಾವುದೇ ಲಾಭಕ್ಕೆ ಯಾರೂ ರಾಜಕೀಯ ಪ್ರವೇಶಿಸುತ್ತಿರಲಿಲ್ಲ. ವಿಶೇಷವಾಗಿ ಕೆಲ ತರುಣರು ಅನೇಕ ಕನಸುಗಳನ್ನು ಹೊತ್ತು ರಾಜಕೀಯಕ್ಕೆ ಬರುತ್ತಿದ್ದರು. ಇಂತಹವರಲ್ಲಿ ಕೆ.ಸಿ. ರೆಡ್ಡಿ, ಕೆಂಗಲ್ ಹನುಮಂತಯ್ಯ, ಎಸ್. ನಿಜಲಿಂಗಪ್ಪನಂತಹ ಪ್ರಾಮಾಣಿಕ ರಾಜಕಾರಣಿಗಳು ನಿರ್ಮಿಸಿದ ಕರ್ನಾಟಕದ ರಾಜಕೀಯ ಪರಂಪರೆಗೆ ಸಾಮಾಜಿಕ ಕಳಕಳಿಯ ಹಿನ್ನೆಲೆ ಇತ್ತು. ಆದ್ದರಿಂದಲೇ ಜನ, ಹಣ, ಜಾತಿ ಬೆಂಬಲವಿಲ್ಲದ ಸಾಮಾಜಿಕ ಕಳಕಳಿಯ ಕನಸುಗಳನ್ನು ಹೊತ್ತುಕೊಂಡ ತೀರ ಕೆಳಸಮುದಾಯದ ಕೆ.ಎಚ್. ರಂಗನಾಥ, ಎಸ್. ಬಂಗಾರಪ್ಪ, ಎಂ. ವೀರಪ್ಪ ಮೊಯಿಲಿ, ಬಸವಲಿಂಗಪ್ಪನಂತಹ ಯುವಕರು ಕರ್ನಾಟಕದ ರಾಜಕೀಯಕ್ಕೆ ಬರವುದು ಸಾಧ್ಯವಾಯಿತು.

೪..೨ ಮೊಯಿಲಿಯವರ ರಾಜಕೀಯ ಚಿತ್ರಣ

ಸಮಾಜದ ಕೆಳಸಮೂದಾಯದಲ್ಲಿ ಜನಿಸಿದ ಮೊಯಿಲಿಯವರು ಇಂದು ರಾಷ್ಟ್ರ ರಾಜಕಾರಣದವರೆಗೂ ಕಾರ್ಯನಿರ್ವಹಿಸುತ್ತಿರುವುದು ಅವರ ಪ್ರಾಮಾಣಿಕತೆ, ನಿಷ್ಠೆ, ಜನಪರ ಚಿಂತನೆಗಳೇ ಕಾರಣ. ತರುಣ ನ್ಯಾಯವಾದಿಯಾಗಿದ್ದ ವೀರಪ್ಪ ಮೊಯಿಲಿಯವರು ೧೯೬೯ರ ಬೆಂಗಳೂರು ಕಾಂಗ್ರೆಸ್ ಅಧಿವೇಶನದಲ್ಲಿ ಪ್ರಸ್ತುತಪಡಿಸಿದ ಹತ್ತು ಅಂಶಗಳ ಕಾರ್ಯಕ್ರಮಗಳಿಂದ ಪ್ರಭಾವಿತರಾಗಿ ಕಾಂಗ್ರೆಸ್ ಪಕ್ಷದ ಸಕ್ರಿಯ ಕಾರ್ಯಕರ್ತರಾಗಿ ರಾಜಕಿಯ ಜೀವನ ಪ್ರಾರಂಭಿಸಿದರು. ಕಾರ್ಕಳ ತಾಲೂಕಿನ ಕಾಂಗ್ರೆಸ್ ಸಮಿತಿಯ ಪ್ರಧಾನ ಕಾರ್ಯದರ್ಶಿಯಾಗಿ, ಮೂಡಬಿದರಿಯ ಬ್ಲಾಕ್ ಕಾಂಗ್ರೆಸ್ ಸಮಿತಿ ಅಧ್ಯಕ್ಷರಾಗಿ, ೧೯೭೨ರ ಮಾರ್ಚ್ ೧೯ರಂದು ಜರುಗಿದ ವಿಧಾನ ಸಭಾ ಚುನಾವಣೆಯಲ್ಲಿ ಕಾರ್ಕಳ ಕ್ಷೇತ್ರದಿಂದ ಸ್ಪರ್ಧಿಸಿ ಪ್ರಥಮ ಬಾರಿಗೆ ವಿಧಾನ ಸಭೆ ಪ್ರವೇಶಿಸಿ ಡಿ. ದೇವರಾಜ ಅರಸು ಮಂತ್ರಿ ಮಂಡಳದಲ್ಲಿ ಸಣ್ಣ ಕೈಗಾರಿಕಾ ಸಚಿವರಾಗಿ ಸೇವೆ ಸಲ್ಲಿಸಿದರು. ೧೯೭೮ರಲ್ಲಿ ಅದೇ ಕ್ಷೇತ್ರದಿಂದ ಎರಡನೇ ಬಾರಿ ವಿಧಾನ ಸಭೆ ಪ್ರವೇಶಿಸಿದರು. ೧೯೮೦ ರಿಂದ ೧೯೮೩ರ ವರೆಗೆ ಗುಂಡುರಾವ ಮಂತ್ರಿ ಮಂಡಳದಲ್ಲಿ ಅರ್ಥ ಮತ್ತು ಯೋಜನಾ ಸಚಿವರಾಗಿ ನೇಮಕವಾದರು. ೧೯೮೩ರಲ್ಲಿ ಮೂರನೇ ಬಾರಿಗೆ ಆಯ್ಕೆಯಾಗಿ ೧೯೮೫ರ ವರೆಗೆ ವಿಧಾನ

ಸಭೆಯ ವಿರೋಧ ಪಕ್ಷದ ನಾಯಕರಾಗಿ ಕಾರ್ಯನಿರ್ವಹಿಸಿದರು. ೧೯೮೫ ರಿಂದ ೧೯೮೯ರ ವರೆಗೆ ನಾಲ್ಕನೆಯ ಬಾರಿಗೆ ವಿಧಾನ ಸಭೆಯ ಸದಸ್ಯರಾಗಿ ಕಾರ್ಯನಿರ್ವಹಿಸಿದರು. ೧೯೮೯ರಲ್ಲಿ ಐದನೆಯ ಬಾರಿಗೆ ವಿಧಾನ ಸಭೆಗೆ ಆಯ್ಕೆಯಾಗಿ ಶಾಸಕರಾಗಿ ಕಾರ್ಯನಿರ್ವಹಿಸಿದರು. ಬದಲಾದ ರಾಜಕೀಯ ಪರಿಸ್ಥಿತಿಯಲ್ಲಿ ೧೯೯೦ ರಿಂದ ೧೯೯೨ರ ವರೆಗೆ ಎಸ್. ಬಂಗಾರಪ್ಪ ಮಂತ್ರಿ ಮಂಡಳದಲ್ಲಿ ಶಿಕ್ಷಣ ಮತ್ತು ಸಂಸದೀಯ ಸಚಿವರಾಗಿ ಕಾರ್ಯನಿರ್ವಹಿಸಿದರು. ೧೯೯೨ ರಿಂದ ೧೯೯೪ರ ವರೆಗೆ ರಾಜ್ಯದ ಹದಿಮೂರನೇ ಮುಖ್ಯಮಂತ್ರಿಯಾಗಿ ಸೇವೆ ಸಲ್ಲಿಸಿದರು.

೧೯೯೯ರಲ್ಲಿ ಚಿಕ್ಕಮಂಗಳೂರು ಕ್ಷೇತ್ರದಿಂದ ಲೋಕಸಭೆಗೆ ಸ್ಪರ್ಧಿಸಿ ಸೋಲುಂಡರು. ೨೦೦೦ ರಿಂದ ೨೦೦೨ರ ವರೆಗೆ ರಾಜ್ಯ ತೆರಿಗೆ ಸುಧಾರಣಾ ಆಯೋಗದ ಅಧ್ಯಕ್ಷರಾಗಿ ಸೇವೆ ಸಲ್ಲಿಸಿ ೨೦೦೨ ರಿಂದ ೨೦೦೪ರ ವರೆಗೆ ರಾಜ್ಯ ಕಂದಾಯ ಸುಧಾರಣಾ ಆಯೋಗದ ಅಧ್ಯಕ್ಷರಾಗಿ ಕಾರ್ಯನಿರ್ವಹಿಸಿ ಸರ್ಕಾರಕ್ಕೆ ಸುಧಾರಣೆಗಳ ಕುರಿತು ಉಪಯುಕ್ತ ವರದಿ ಸಲ್ಲಿಸಿದರು. ೨೦೦೪ರಲ್ಲಿ ಮಂಗಳೂರು ಲೋಕಸಭಾ ಕ್ಷೇತ್ರದಿಂದ ಸ್ಪರ್ಧಿಸಿ ಪರಾಬವಗೊಂಡರು. ೨೦೦೬ ರಿಂದ ೨೦೦೯ರ ವರೆಗೆ ಕೇಂದ್ರ ಆಡಳಿತ ಸುಧಾರಣಾ ಸಮಿತಿಯ ಅದ್ಯಕ್ಷರಾಗಿ ಕಾರ್ಯನಿರ್ವಹಿಸಿ ಆಡಳಿತ ಸುಧಾರಣೆಗಾಗಿ ಮೌಲ್ಯಯುತ ವರದಿ ನೀಡಿದ್ದಾರೆ. ೨೦೦೯ರಲ್ಲಿ ಚಿಕ್ಕಬಳ್ಳಾಪೂರ ಕ್ಷೇತ್ರದಿಂದ ಲೋಕಸಭೆಗೆ ಸ್ಪರ್ಧಿಸಿ ಆಯ್ಕೆಯಾಗಿ ಡಾ.ಮನಮೋಹನಸಿಂಗ ಅವರ ಮಂತ್ರಿಮಂಡಳದಲ್ಲಿ ಕಾನೂನು ಸಚಿವರಾಗಿ ನೇಮಕವಾದರು. ೨೦೧೧ರಲ್ಲಿ ನಡೆದ ಮಂತ್ರಿಮಂಡಳದ ಪುನರ್‌ರಚನೆಯಲ್ಲಿ ಕಾರ್ಪೊರೇಟ್ ಸಚಿವರಾಗಿ ನೇಮಕಾತಿ ಹೊಂದಿದರು. ೨೦೧೧ರಲ್ಲಿ ಲೋಕಪಾಲ್ ಕರಡು ಸಮೀತಿಯ ಸದಸ್ಯರಾಗಿ ನೇಮಕಾತಿ ಹೊಂದಿದ್ದಾರೆ.

೪.೩ ಎಂ. ವೀರಪ್ಪ ಮೊಯಿಲಿಯವರ ರಾಜಕೀಯ ಚಿಂತನೆಗಳ ಸ್ವರೂಪ

೪.೩.೧ ಸಾಮಾಜಿಕ ಧೋರಣೆಗಳು

೪.೩.೨ ಆರ್ಥಿಕ ಸಬಲೀಕರಣ

೪.೩.೩ ಶೈಕ್ಷಣಿಕ ವಿಚಾರಗಳು

೪.೩.೪ ಆಡಳಿತ ಸುಧಾರಣೆಗಳು

೪.೩.೫ ಕಾನೂನು ಸುಧಾರಣೆಗಳು

೪.೩.೬ ಸಂಸ್ಕೃತಿಕ ಸಂಕಲನಗಳು

ಚಿಂತನೆ ಮನುಷ್ಯನ ವ್ಯಕ್ತಿತ್ವದ ಅನಾವರಣವಾಗಿದೆ. ಒಬ್ಬ ಶ್ರೇಷ್ಠ ಮಟ್ಟದ ಪ್ರಭುದ್ಧ ರಾಜಕೀಯ ವ್ಯಕ್ತಿಯು ತನ್ನ ರಾಜಕೀಯ ಜೀವನದ ನೆಲೆಯನ್ನು ಭದ್ರಪಡಿಸಿಕೊಳ್ಳಲು ಹತ್ತು ಹಲವು ಚಿಂತನೆಗಳನ್ನು ಇಟ್ಟುಕೊಂಡಿರುತ್ತಾನೆ. ಅವೆಲ್ಲ ಚಿಂತನೆಗಳು ಆತನ ರಾಜಕೀಯ ಸುಭದ್ರತೆಯನ್ನು ಬಲಪಡಿಸುವಲ್ಲಿ ಸಹಾಯಕವಾಗಿ ನಿಲ್ಲುತ್ತವೆ. ಆ ಮೂಲಕವಾಗಿ ವ್ಯಕ್ತಿ ಸಂಘಟನಾ ಸಾಮರ್ಥ್ಯದ ಜೊತೆಗೆ ಸಾರ್ವಜನಿಕವಾಗಿ ಅವೆಲ್ಲವುಗಳನ್ನು ಹಂಚಿಕೊಳ್ಳುವುದರ ಮೂಲಕ ತಾನು ಕ್ರಮಿಸುವ ರಾಜಕೀಯ ಮಾರ್ಗವನ್ನು ದೃಢಪಡಿಸಿಕೊಳ್ಳುತ್ತಾನೆ. ಇಂದಿನ ದಿನಮಾನದಲ್ಲಿ ರಾಜಕೀಯವೆಂಬುದು ಚದುರಂಗದಾಟವಾಗಿದೆ. ಯಾವ ವ್ಯಕ್ತಿ ಯಾವ ಪಕ್ಷದಲ್ಲಿ ಯಾವ ತತ್ವ ಅನುಸರಿಸುತ್ತಾನೆಂಬುದು ಹೇಳಲಿಕ್ಕಾಗದ ಸಂಧಿಗ್ದ ಪರಿಸ್ಥಿತಿ ಉಂಟಾಗಿದೆ. ರಾಜಕೀಯವೆಂಬ ಸರ್ಕಸ್‌ನ್ನು ಯಶಸ್ವಿಪಡಿಸಲು ಆತನಲ್ಲಿ ಇಂತಹ ಚಿಂತನೆಗಳು ಅವಶ್ಯಕವಾಗಿವೆ. ಈ ನಿಟ್ಟಿನಲ್ಲಿ ರಾಜಕಾರಣವೆಂಬುದು ಪಂದ್ಯವಿದ್ದ ಹಾಗೆ, ಉತ್ತಮ ಆಟಗಾರನಾದವನು ಆ ಪಂದ್ಯವನ್ನು ಗೆಲುವಿನ ಕಡೆಗೆ ಕೊಂಡೊಯುವುದು ಮುಖ್ಯವಾಗಿರುತ್ತದೆ. ದೂರದೃಷ್ಟಿಕೋನ, ನೈತಿಕ ಸ್ಥೈರ್ಯ, ಅಚಲ ನಿರ್ಧಾರ ಸತತ ಪರಿಶ್ರಮ ಅವಶ್ಯಕವಾಗಿರುತ್ತದೆ. ಎಲ್ಲಾ ಬಗೆಯ ನೋವುನುಂಗುವ ಸಹನಾ ಶಕ್ತಿಯನ್ನು ಬೆಳಸಿಕೊಳ್ಳಬೇಕಾಗಿರುತ್ತದೆ. ಇಂತಹ ಚಿಂತನೆಗಳನ್ನು ನಮ್ಮ ನಾಡಿನಲ್ಲಿ ಹಲವು ರಾಜಕೀಯ ವ್ಯಕ್ತಿಗಳು ಅಳವಡಿಸಿಕೊಂಡಿದ್ದಾರೆ. ಅವರಲ್ಲಿ ಎದ್ದು ಕಾಣುವ ಹೆಸರು ಎಂ.ವೀರಪ್ಪ ಮೊಯಿಲಿಯವರದು.

ಚಿಂತನೆಗಳು ಬದುಕಿನ ಜೊತೆಗೆ ಅವಿನಾಭಾವ ಸಂಬಂಧ ಇರಿಸಿಕೊಂಡಿರುತ್ತವೆ. ವ್ಯಕ್ತಿ ತಾನು ಬಾಳಿ ಬದುಕಿದ ಪರಿಸರದ ಪ್ರಭಾವಗಳು ಆತನ ಚಿಂತನೆಗಳು ರೂಪಗೊಳ್ಳಲು ಕಾರಣವಾಗಿರುತ್ತವೆ. "ವ್ಯಕ್ತಿತ್ವಕ್ಕೆ ಚಿಂತನೆಗಳು ಅಡಿಗಲ್ಲು" ಹೀಗಾಗಿ ಮೊಯಿಲಿಯವರ ರಾಜಕೀಯ ಚಿಂತನೆಗಳ ಅವಲೋಕನ ಮಾಡುವುದು ಯೋಚಿತವಾಗಿದೆ. ಮೊಯಿಲಿಯವರು ರಾಜಕೀಯದಲ್ಲಿ ಹಲವು ಹುದ್ದೆಗಳನ್ನು ಏರಿದವರು ಆ ಎಲ್ಲಾ ಅಧಿಕಾರವಧಿಯಲ್ಲಿ ರೂಪಿಸಿಕೊಂಡಿರುವ ಯೋಜನೆ, ಅನುಷ್ಠಾನಗೊಳಿಸಲು ಮಾಡಿದ ತಂತ್ರ ಅವರ ಅನ್ವೇಷಣೆಯ ಚಿಂತನೆಯಾಗಿವೆ. ಹಲವು ರಾಜಕೀಯ ಧುರೀಣರ ಪ್ರಭಾವ ಮತ್ತು

ಪ್ರೇರಣೆ ಅವರ ಮೇಲಿದೆ. ಈ ಎಲ್ಲಾ ರಾಜಕೀಯ ಜ್ಞಾನದಿಂದ ಮೊಯಿಲಿಯವರು ತಮ್ಮದೇ ಆದ ರಾಜಕೀಯ ಚಿಂತನೆಗಳ ಮೂಲಕ ಹೆಸರು ಮಾಡಿದವರಾಗಿದ್ದಾರೆ.

ಮೊಯಿಲಿಯವರಿಗೆ ಕೌಟುಂಬಿಕವಾದ ರಾಜಕೀಯ ಹಿನ್ನಲೆ ಇರಲಿಲ್ಲ ಅವರ ಜೀವನದ ಆರಂಭಿಕ ಅನುಭವಗಳು, ಸಾಮಾಜಿಕ ಸ್ಥಾನಮಾನದ ದೃಷ್ಠಿ ತಮ್ಮ ಬದುಕನ್ನು ಕುರಿತಾದ ನಿಲುವಿನ ಮೇಲಿರುವ ಅಂಶಗಳು ಅವರನ್ನು ಚಿಂತನೆಯ ಕಡೆಗೆ ವಾಲಿಸಿದವು. ಮೊಯಿಲಿಯವರು ಕೆಳವರ್ಗದಿಂದ ಬಂದವರು ಇದು ಅವರ ಸಾಮಾಜಿಕ ಆರ್ಥಿಕ ಮತ್ತು ರಾಜಕೀಯ ಚಿಂತನೆಯ ಮೇಲೆ ಗಾಢವಾದ ಪರಿಣಾಮವನ್ನು ಬೀರಿತು. ಸಾಮಾಜಿಕ ಸಂಕೋಲೆಯಿಂದ ಎದ್ದು ಬಂದ ಮೊಯಿಲಿಯವರಲ್ಲಿ ವ್ಯಾಪಕವಾದ ಅಧ್ಯಯನ ಇರುವುದರಿಂದ ಅವರು ಬರೆದಿರುವ ಲೇಖನಗಳಲ್ಲಿ, ಮಾಡಿರುವ ಭಾಷಣಗಳಲ್ಲಿ, ವಿನೂತನವಾದ ಚಿಂತನೆಗಳನ್ನು ಪರಿಣಾಮಕಾರಿಯಾಗಿ ವ್ಯಕ್ತಪಡಿಸುತ್ತಾ ಬಂದವರು.

ದೇಶದ ಹಿಂದುಳಿದ ವರ್ಗದವರ ಮೇಲೆ ನಡೆಯುತ್ತಿರುವ ಶೋಷಣೆ, ಅಟ್ಟಹಾಸ, ಕ್ರೌರ್ಯ, ಮುಂತಾದ ಅನೀತಿಯನ್ನು ತಡೆಗಟ್ಟಲು ಅಂತಹ ಚಿಂತನೆಗಳ ಮೂಲಕ ಪ್ರಯತ್ನಿಸಿದವರು. ಮಹಾತ್ಮಗಾಂಧೀಜಿ, ಜವಹಾರಲಾಲ ನೆಹರು, ಮುಂತಾದ ರಾಷ್ಟ್ರ ನಾಯಕರ ಮಾತುಗಳಿಂದ ಪ್ರಭಾವಿತರಾಗಿ ಶೋಷಿತ ಜನಾಂಗಗಳ ಕುರಿತು ಆಳವಾದ ಅಧ್ಯಯನ ಮಾಡಿ ಆ ಜನರ ಆರ್ಥಿಕ, ಸಾಮಾಜಿಕ ಮತ್ತು ರಾಜಕೀಯ ಹಕ್ಕುಗಳನ್ನು ಕೊಡಿಸುವ ವಿನೂತನವಾದ ಆಕಾಂಕ್ಷೆಯನ್ನು ಇಟ್ಟುಕೊಂಡವರು. ತಮ್ಮ ಬಾಲ್ಯದಲ್ಲಿ ಅನುಭವಿಸಿದ ಜನಾಂಗೀಯ ಶೋಷಣೆಯನ್ನು ತನ್ನ ಹಿಂದುಳಿದ ವರ್ಗದವರು ಅನುಭವಿಸುತ್ತಿರುವರೆಂದು ಮನಗಂಡು ತಮ್ಮ ಸಾತ್ವಿಕ ಹೋರಾಟದ ಮೂಲಕ ಸುದೀರ್ಘ ನ್ಯಾಯ ಪರವಾದ ವೈಯಕ್ತಿಕ ನೆಲೆಯಲ್ಲಿ ಹೋರಾಡಿ ಪ್ರಾಯೋಗಿಕವಾಗಿ ಆ ವಾಸ್ತವವನ್ನು ಅರ್ಥಮಾಡಿಕೊಂಡು ಜನರಿಗೆ ನ್ಯಾಯವನ್ನು ದೊರಕಿಸಿಕೊಡುವಲ್ಲಿ ಹೊರಾಟ ಮಾಡಿದವರು. ನ್ಯಾಯವಾದಿಗಳಾಗಿ ಕೂಲಿಕಾರ್ಮಿಕರಿಗೆ, ಬಡಜನರಿಗೆ ಉಚಿತವಾಗಿ ನ್ಯಾಯವನ್ನು ಒದಗಿಸಿಕೊಡುವುದರ ಮೂಲಕ ಆರಂಭಿಕ ಚಿಂತನೆಯ ಗಟ್ಟಿ ನೆಲೆಯನ್ನು ಕಂಡುಕೊಂಡವರು, ಹೀಗಾಗಿ ಅವರು ನ್ಯಾಯವಾದಿ ವೃತ್ತಿಯ ಪ್ರಭುದ್ಧ ಮಟ್ಟವನ್ನು ವಿಶಾಲವಾದ ದೃಷ್ಟಿಕೋನವನ್ನು ತರುಣ ನ್ಯಾಯವಾದಿಯಾದಾಗ ಕಂಡುಕೊಂಡರು. ಹೊಸ ಹುಮ್ಮಸ್ಸಿನಿಂದ ಹಾಗೂ ಆತ್ಮ ಸಂತೃಪ್ತಿಯಿಂದ ನ್ಯಾಯವನ್ನು ಕೊಡಿಸುವುದರ ಮೂಲಕ

ಕರಾವಳಿಯ ಎಲ್ಲ ಸಮುದಾಯಗಳ ದೀನದುರ್ಬಲರ ಬಡವರ ಬೆಂಬಲದಿಂದ ಬೆಳೆದವರು. ಈ ಎಲ್ಲಾ ಸಮೂದಾಯಗಳು ಅವರ ಬೆಂಬಲಕ್ಕೆ ನಿಂತವರು.

"ಅವರ ಚಿಂತನೆ ಮತ್ತು ಸಂಚಾಲನೋಪಾಯಗಳನ್ನು ಸ್ನೇಹಿತರು ಮತ್ತು ಹಿತೈಷಿಗಳು ಹಂಚಿಕೊಂಡರು. ಭಾರತದಲ್ಲಿ ಹೆಚ್ಚಿನ ಅವಕಾಶಗಳು ಮತ್ತು ಸಂಪನ್ಮೂಲಗಳ ಹಿಡಿತ ಇರುವುದರಿಂದ ಜನತೆಯ ಸೇವೆಯನ್ನು ವಿಸ್ತೃತವಾಗಿ ನಡೆಸಲು ರಾಜಕಾರಣಿಗಳಾಗಿ ಉತ್ತಮವಾದ ಸ್ಥಾನದಲ್ಲಿರುತ್ತಾರೆ. ಆದರೆ, ಒಂದು ವರ್ಗವಾಗಿ ಅವರಿಗೆ ಪ್ರಮಾಣಿಕತೆ ಮತ್ತು ಕಠಿಣ ಪರಿಶ್ರಮ ಅಗತ್ಯವಾಗಿರುತ್ತದೆ. ಆದ್ದರಿಂದ ರಾಜಕೀಯದಲ್ಲಿ ಒಂದು ಪ್ರಯತ್ನ ನೋಡಲು ಅವರು ತೀರ್ಮಾನ ಕೈಗೊಂಡರು. ಸಮಾಜದ ಬಡಜನತೆಯ ಮತ್ತು ದುರ್ಬಲ ವರ್ಗದವರ ಉದ್ಧಾರಕ್ಕೆ ಅವರ ಬದ್ಧತೆ, ಅಹಿಂಸಾತ್ಮಕ ಮನೋಭಾವದ ನಿರ್ಧಾರವನ್ನು ಕಾರ್ಯರೂಪಕ್ಕೆ ತರುವ ಸಾಮಾರ್ಥ್ಯಗಳನ್ನು ಗಮನಿಸಿದ ಸ್ನೇಹಿತರು ಹಿತೈಷಿಗಳು ಬೆಂಬಲ ನೀಡಲು ಭಾರೀ ಸಂಖ್ಯೆಯಲ್ಲಿ ಮುಂದೆ ಬಂದರು[೧]". ಮೊಯಿಲಿಯವರು ನಂತರ ಜನರ ಬೆಂಬಲದಿಂದ ಕಾಂಗ್ರೇಸ್ ಪಕ್ಷದ ಸಕ್ರೀಯ ಕಾರ್ಯಕರ್ತರಾಗಿ ಪಕ್ಷದ ಹುರಿಯಾಳಾಗಿ ಹಲವು ವಿಧದಲ್ಲಿ ತಮ್ಮ ರಾಜಕೀಯ ನೆಲೆಯನ್ನು ಕಂಡುಕೊಂಡು ತಮ್ಮ ರಾಜಕೀಯ ಚಿಂತನೆಯನ್ನು ಕಾರ್ಯರೂಪಕ್ಕೆ ತಂದರು. ಪ್ರಮುಖವಾಗಿ ಅವರ ರಾಜಕೀಯ ಚಿಂತನೆಯನ್ನು ಆರು ವಿಭಾಗಗಳಲ್ಲಿ ವಿಭಾಗಿಸಿಕೊಂಡಿದ್ದು ಅವುಗಳನ್ನು ಈ ರೀತಿಯಲ್ಲಿ ಕಲೆ ಹಾಕಲಾಗಿದೆ.

೪.೩.೧ ಸಾಮಾಜಿಕ ಧೋರಣೆಗಳು

ವೀರಪ್ಪ ಮೊಯಿಲಿಯವರಿಗೆ ಸಂಘಟನಾ ಸಾಮಾರ್ಥ್ಯ ಸಾರ್ವಜನಿಕ ಸ್ಥಿತಿಗತಿಗಳ ಗೊಂದಲಗಳನ್ನು ಸರಿಪಡಿಸುವ ಉಧಾತ್ತವಾದ ಬದ್ಧತೆ ಅವರಲ್ಲಿದೆ. ಶತ-ಶತಮಾನಗಳಿಂದ ತುಳಿತಕ್ಕೊಳ್ಳಗಾಧ ಹಿಂದುಳಿದ ವರ್ಗದ ಸಮುದಾಯಗಳು ತಮ್ಮ ಹಕ್ಕು ಬಾಧ್ಯತೆಯನ್ನು ಪಡೆಯುವರದಲ್ಲಿ ಈ ಹಿಂದಿನ ಮುಖ್ಯ ಮಂತ್ರಿಗಳಾಗಿದ್ದ ಡಿ.ದೇವರಾಜ ಅರಸರು ಕೆಲವು ಮಾರ್ಗಗಳನ್ನು ಹಾಕಿಕೊಟ್ಟಿದ್ದರು. ಅವರ ಪ್ರಭಾವ ಮೊಯಿಲಿಯವರ ಮೇಲೆ ತೀವ್ರವಾದ ಪರಿಣಾಮ ಉಂಟಾಯಿತು. ಶತಮಾನಗಳಿಂದ ಕಂಗೆಟ್ಟ ಆ ಸಮುದಾಯದ ಮನುಕುಲದ ಕಥೆಗಳನ್ನು ಕಣ್ಣಾರೆ ಕಂಡು ಕಿವಿಯಾರೆ ಕೇಳಿ ಆ ನೋವಿನ ಶೋಷಣೆಗೆ ಕೊನೆಯನ್ನು ಹಾಡಬೇಕೆಂಬುದು ಅಚಲ ನಿರ್ಧಾರ ಮೊಯಿಲಿಯವರದ್ದಾಗಿತ್ತು. ಆ ಸಮುದಾಯದ ಎಲ್ಲಾ

ವರ್ಗದ ಜನರ ನೋವಿನ ಕಥೆಗಳು, ಅವರ ಕಾದಂಬರಿ, ಕವಿತೆ, ಮಹಾಕಾವ್ಯ, ಮುಂತಾದವುಗಳಲ್ಲಿ ಪುನರ್–ಸೃಷ್ಟಿಗೊಂಡಿವೆ. ಹಾಗಾಗಿ ಮೊಯಿಲಿಯವರು ಪರಿಸರದ ಇಂತಹ ಘಟನೆಗಳನ್ನು ಅವರು ತಮ್ಮ ವಾಸ್ತವ ಬದುಕಿನ ಭಾಷಣಗಳಲ್ಲಿ ಕಾವ್ಯಕೃತಿಗೆ ಅನಾವರಣಗೊಳಿಸುತ್ತಾ ಚಿಂತನೆಗಳನ್ನು ಮೂಡಿಸಿದ್ದಾರೆ. ಮೊಯಿಲಿಯವರು ತಮ್ಮ ಲೇಖನಗಳಲ್ಲಿ ಸಾಮಾಜಿಕ ಪರವಾದ ಅನೇಕ ಚಿಂತನೆಗಳನ್ನು ಮುಂದಿಟ್ಟಿದ್ದಾರೆ. ಸಂಸ್ಕೃತಿ ಮತ್ತು ಸೌಜನ್ಯದ ಮೂಲಕ ಸೌಲಭ್ಯವು ಉತ್ಸಾಹ ತುಂಬಿ ನಡೆಯಲು ಲೇಖನಗಳು ಪ್ರೇರಣೆ ನೀಡುತ್ತವೆ. ಶೋಷಿತ ವರ್ಗ ಮತ್ತು ಆದಿವಾಸಿ ಜನರಲ್ಲಿ ತಮ್ಮದೇ ಆದ ಸಾಂಸ್ಕೃತಿಕ ಕೊಡುಗೆಗಳಿದ್ದು ಅವುಗಳಲ್ಲಿ ಆ ಜನಾಂಗದವರ ಸಮೃದ್ಧಿ ಪುನರ್ ನಿರ್ಮಿಸಬೇಕಾಗಿರುವುದು ಅವಶ್ಯವೆಂದು ಒತ್ತಿ ಹೇಳುತ್ತಾರೆ.

ಮೊಯಿಲಿಯವರು ಜರ್ಮನ್ ಚಿಂತಕರಾದ ನಿಝೆ ಅವರ ಹೇಳಿಕೆಯನ್ನು ಉದಾಹರಿಸಿ "ಬಣ್ಣದ ಹೊಂಗೂದಲಿನ ಪಶುಗಳ ಒಂದು ಹಿಂಡು ವಿಜಯಿ ಪ್ರಭುಗಳಾದ ಒಂದು ಮನುಷ್ಯ ವರ್ಗದವರು ಮತ್ತು ಅವರ ಸಮರೋಪಾದಿ ಸಂಘಟನೆ ಅದು ತನ್ನ ಸಂಯುಕ್ತ ಶಕ್ತಿಯೊಡನೆ, ಇನ್ನೊಂದು ಜನಾಂಗದ ಮೇಲೆ ಪರಚುವಂತೆ ನೆಗೆಯುವುದು ಸಂಖ್ಯೆಗಳಲ್ಲಿ ಎಷ್ಟೇ ಪ್ರಭಲರಾಗಿದ್ದರೂ, ನಿರ್ದಿಷ್ಟ ರೂಪವಿಲ್ಲದ ಒಂದು ಸೇನಾ ಸ್ಥಿತಿಯಲ್ಲಿರುವುದು ಹೀಗಿದೆ ರಾಜ್ಯದ ಹುಟ್ಟು[3]" ಎಂಬ ಮಾತನ್ನು ಮೊಯಿಲಿಯವರು ನೆನಪಿಸಿಕೊಳ್ಳುತ್ತಾರೆ.

ಸಾಂಸ್ಕೃತಿಕ ಕಲಾ ಸೃಷ್ಟಿಗೆ ಮರುಹುಟ್ಟು ಬುಡಕಟ್ಟು ಜನಾಂಗದಿಂದ ಬರುವಂತಹದ್ದು, ಇಂತಹ ಕಲಾ ಸೃಷ್ಟಿಯ ಅವಕಾಶವನ್ನು ಮಾಡುವ ಸಾಮಾಜಿಕ ವ್ಯವಸ್ಥೆಯನ್ನು ನಾಗರೀಕತೆ ಎಂದು ಕರೆಯುತ್ತಾರೆ. ಈ ಸಾಂಸ್ಕೃತಿಕ ಕಲಾಸೃಷ್ಟಿಯಲ್ಲಿ ಆರ್ಥಿಕ ನೆಲೆ ರಾಜಕೀಯ ಒಕ್ಕೂಟ, ನೈತಿಕ ಸಂಪ್ರದಾಯಗಳು ಜೊತೆಗೆ ಜ್ಞಾನ ಕಲಾ ಶೋಧಗಳು ಒಳಗೊಂಡಿರುತ್ತವೆ. ಸಾಮಾಜಿಕ ವ್ಯವಸ್ಥೆಯಲ್ಲಿ ಆಂತರಿಕವಾದ ಗೊಂದಲಗಳು ಹಾಗೂ ಆತಂಕಗಳು ಯಾವ ಕಡೆಯಲ್ಲಿ ಕೊನೆಗೊಳ್ಳುತ್ತವೆಯೋ ಅಲ್ಲಲ್ಲಿ ನಾಗರಿಕತೆ ನುಸುಳುತ್ತದೆ. ಹೀಗಾಗಿ ಭಯ ಮತ್ತು ಭೀತಿ ಇವುಗಳನ್ನು ಹೋಗಲಾಡಿಸಿದಾಗ ಆ ಸಮುದಾಯಗಳ ಕುತೂಹಲ ಹಾಗೂ ರಚನಾತ್ಮಕ ಕ್ರಿಯೆಗಳು ಅನಾರವರಣಗೊಳ್ಳುತ್ತವೆ. ಆ ಮೂಲಕವಾಗಿ ಮನುಷ್ಯನ ಸಹಜ ಪ್ರವೃತ್ತಿ, ಸ್ವಭಾವ, ಲೋಕವನ್ನು ನೋಡುವ ದೃಷ್ಟಿ, ತಿಳುವಳಿಕೆಯ ಮಟ್ಟ

ಸಮೃದ್ಧ ಜೀವನದ ಮಹತ್ವಾಕಾಂಕ್ಷೆಗಳು ತೆರೆದುಕೊಳ್ಳುತ್ತವೆ. ಅದಕ್ಕಾಗಿ ಮೊಯಿಲಿಯವರು ನಾಗರಿಕತೆ ಎಂಬುದು "ಒಂದು ಯುಗದ ಕಲೆಗಳಿಂದ ತಾತ್ವಿಕ ವಿವೇಚನೆಯಿಂದ ನಡತೆ ಕ್ರಮಗಳಿಂದ ನೀತಿ ಪಾಠಗಳ ಸಮೃದ್ಧ ಬಂಡಾರವಾಗಿರುತ್ತದೆ" ಎಂಬುದನ್ನು ನಂಬಿದವರು. ಇವೆಲ್ಲವುಗಳು ಸಾಮಾಜಿಕ ಏಕತಾನತೆಯನ್ನು ಹೋಗಲಾಡಿಸಿ ಮಾನವನ ಬದುಕಿನ ಮಾನಸಿಕ ಬೆಳವಣಿಗೆಗೆ ಆಹಾರವಾಗಿ ನಿಲ್ಲುತ್ತವೆ. ನಾಗರಿಕತೆ ವಿಕಾಸವಾಗಬೇಕಾದರೆ, ಆಯಾ ಸಮುದಾಯದ ಜನರಿಗೆ ವಿದ್ಯಾಭ್ಯಾಸ ಕಡ್ಡಾಯವಾಗಿರುವಂತಹದ್ದು, ವಿದ್ಯೆ ಎನ್ನುವುದು ಪ್ರತಿಯೊಬ್ಬರನ್ನು ಜಾಗೃತಗೊಳಿಸಲು ವ್ಯವಸ್ಥಿತವಾದ ಮಾರ್ಗ ಎಂಬುದನ್ನು ಮೊಯಿಲಿಯವರು ಒತ್ತಿ ಹೇಳುತ್ತಾರೆ.

ಕಾಡು ಮತ್ತು ನಾಡಿನ ನಡುವೆ ಇರುವ ವ್ಯತ್ಯಾಸಗಳನ್ನು ಮೊಯಿಲಿಯವರು ಸೂಕ್ಷ್ಮವಾಗಿ ಗುರುತಿಸುತ್ತಾರೆ. ನಗರ ಪ್ರದೇಶದಲ್ಲಿರುವ ನಾಗರಿಕರು ಸುಖೀ ಸಂಸ್ಕೃತಿಯಲ್ಲಿ ನೆಲೆ ನಿಂತಿರುತ್ತಾರೆ. ಆದರೆ ಬುಡಕಟ್ಟು ಅಥವಾ ಆದಿವಾಸಿಗಳು ಶ್ರಮಿಕ ಸಂಸ್ಕೃತಿಯಿಂದ ನಗರವಾಸಿಗಳಿಗೆ ಎದುರು ನಿಲ್ಲುತ್ತಾರೆ. ಇವೆಲ್ಲವುಗಳು ಆಯಾ ಸಮುದಾಯಗಳ ಬದುಕಿನ ರೀತಿ–ನೀತಿಯನ್ನು ವಿಭಿನ್ನವಾಗಿ ತಿಳಿಯಪಡಿಸುತ್ತಾರೆ. ಆದಿವಾಸಿಗಳ ಸಂಸ್ಕೃತಿಯನ್ನು ಸರಿಯಾದ ರೀತಿಯಲ್ಲಿ ಅಧ್ಯಯನ ಮಾಡದೇ ಹೋದರೆ, ಮನುಕುಲದ ಜಗತ್ತಿನ ನೈಜ ಅಧ್ಯಯನ ಆಗಲಾರದು. ಆದಿವಾಸಿಗಳ ಬದುಕಿನಲ್ಲಿ ಅನೇಕ ದೋಷಗಳಿರಬಹುದು, ಸರಿಯಾದ ಸಂಪರ್ಕ ಇಲ್ಲದಿರಬಹುದು, ಬಾಳುವಿಗೆ ಬೇಕಾದ ವಸ್ತುಗಳು ಇಲ್ಲದೇ ಇರಬಹುದು. ಆ ಸಮೂದಾಯದ ಜನರಿಗೆ ಹೊರ ಜಗತ್ತಿನ ಎಷ್ಟೋ ವಿಷಯಗಳು ಗೊತ್ತಿಲ್ಲದಿರಬಹುದು. ಅವುಗಳನ್ನು ಆಧುನಿಕ ಸಮೂಹ ಸಂಪರ್ಕದ ಮೂಲಕ ಗುರುತಿಸುವ ಪ್ರಯತ್ನವಾಗಬೇಕು. ಅರಣ್ಯವಾಸಿಗಳ ಬದುಕಿಗೆ ಹೊಸ ಚೈತನ್ಯ ತುಂಬುವಂಥ ಕಾರ್ಯಗಳು ಜರುಗಬೇಕೆಂಬುದನ್ನು ಸಾಮಾಜಿಕ ಚಿಂತನೆಯ ಅಡಿಯಲ್ಲಿ ಮೊಯಿಲಿಯವರು ಕಂಡುಕೊಂಡಿದ್ದಾರೆ.

ಭಾರತದೇಶ ನೂರಾರು ಜಾತಿಗಳನ್ನು ತನ್ನಲ್ಲಿ ಹುದುಗಿಸಿಕೊಂಡಿದೆ. ಜಾತಿ ಗಣತಿಯಂತಹ ಕಾರ್ಯಗಳು ಇಂದು ಭರದಿಂದ ಸಾಗಿವೆ. ಇವುಗಳನ್ನು ನೋಡಿದರೆ, ಭಾರತ ಎಂಬುದು ಜಾತಿ ಒಕ್ಕೂಟವೇ ಅಥವಾ ರಾಜ್ಯಗಳ ಒಕ್ಕೂಟವೇ ? ಎಂಬ ಪ್ರಶ್ನೆ ಮೊಯಿಲಿಯವರದು. ಜಾತಿ ಎಂಬ ಪದ ಎರಡು ಸ್ಥರದಲ್ಲಿ ಬಳಕೆಯಾಗುತ್ತಿಲಿದ್ದು,

ಸ್ಥೂಲಾರ್ಥದಲ್ಲಿ ಹಲವು ಜನರ ಪರಿವಾರದ ಗುಂಪು ಸೂಕ್ಷ್ಮಾರ್ಥದಲ್ಲಿ ಹೇಳಬೇಕೆಂದರೆ, ಅದು ಸಮಾಜದ ಏಣಿ-ಶ್ರೇಣಿ ವ್ಯವಸ್ಥೆ. ಇಂದಿನ ಜನಗಣತಿಗೆ ಬೇಕಾಗಿರುವುದು ಜಾತಿ ಗಣತಿಯಲ್ಲ. ಹೀಗಾಗಿ ಭಾರತ ದೇಶ ರಾಜ್ಯಗಳ ಒಕ್ಕೂಟದಿಂದ ಕೂಡಿರಬೇಕು, ಜಾತಿಗಳ ಒಕ್ಕೂಟದಿಂದ ಕೂಡಬಾರದೆಂದು ಮೊಯಿಲಿಯವರ ನಿಲುವು. ಭಾರತ ಸಂವಿಧಾನ ಎಲ್ಲ ಜಾತಿ, ಜನಾಂಗದವರಿಗೆ ತನ್ನದೇ ಆದ ಕಾಯ್ದೆ ರೂಪಿಸಿದೆ. ಈ ವಿಷಯವನ್ನು ಗಮನಿಸಿದಾಗ ಭಾರತ ಸಂವಿಧಾನ ರಚನೆಯಾಗುವ ಕಾಲಘಟ್ಟದಲ್ಲಿ ಜಾತಿ ಪದ್ಧತಿಯ ಪೆಡಂಭೂತ ಸಮಾಜವನ್ನು ಆಳುತ್ತಿತ್ತು. ಆನಂತರದಲ್ಲಿ ಸಂವಿಧಾನ ರಚನೆಯಾದ ನಂತರ ಅದರ ಮಹತ್ವ, ಇನ್ನೂ ಮುಂದುವರೆದುಕೊಂಡು ಬಂದಿರುವುದು ವಿಷಾದನೀಯ. ಸರ್ಕಾರವು ಸಹ ಇಲ್ಲಿಯವರೆಗೆ ಜಾತಿಯನ್ನೇ ಮುಂದಿಟ್ಟುಕೊಂಡು ಆಡಳಿತ ನಡೆಸುತ್ತಿರುವುದು ಎಷ್ಟರ ಮಟ್ಟಿಗೆ ಸರಿ? ರಾಷ್ಟ್ರೀಯ ಆಯೋಗದಿಂದ ಹಿಡಿದು ಹಿಂದುಳಿದ ವರ್ಗಗಳನ್ನು ಗುರುತಿಸುವ ಸಲುವಾಗಿ ರಚನೆಗೊಂಡ ಎಲ್ಲಿ ಆಯೋಗಗಳು ಜನಸಂಖ್ಯೆಯ ಜೊತೆಗೆ ಜಾತಿಗೆ ಸಂಬಂಧಿಸಿದ ವಿವರಗಳಿಲ್ಲದೆ, ಪರಿಪೂರ್ಣವಾಗಿ ಅವುಗಳು ವರದಿ ಒಪ್ಪಿಸಲಿಕ್ಕೆ ಸಾಧ್ಯವಾಗಿಲ್ಲ.

ಸಂವಿಧಾನ ದಲಿತ ವರ್ಗಗಳ ಸಾಮಾಜಿಕ ಮತ್ತು ಶೈಕ್ಷಣಿಕ ವಿಷಯಗಳಿಗೆ ಹೆಚ್ಚಿನ ಅವಕಾಶ ಮಾಡಿಕೊಟ್ಟಿದ್ದು, ಅವರಲ್ಲಿರುವ ಅರಿಕೆಯನ್ನು ಸರಿಪಡಿಸುವ ಉದ್ದೇಶದಿಂದಾಗಿ ಹಲವು ಮೀಸಲಾತಿಗಳನ್ನು ಕೊಡುವುದರ ಮೂಲಕ ಮೇಲ್ವರ್ಗದ ಜನ ಸಮುದಾಯದ ಜೊತೆ ಸಮಾನವಾಗಿ ಗುರುತಿಸಿಕೊಳ್ಳಬೇಕೆಂಬ ಉದ್ದೇಶವಾಗಿದೆ. ಆಯೋಗಗಳು ಸಿಫಾರಸ್ಸು ಮಾಡುವ ವರದಿಗಳಲ್ಲಿ ಕ್ರಮಬದ್ಧವಾದ ಜಾತಿ ಕುರಿತು ವಿವರಣೆ ಇಲ್ಲದೆ ಅವಸರದ ಅಂಕಿಸಂಖ್ಯೆಗಳನ್ನು ಕೊಡುವುದರ ಮೂಲಕ ಆಯೋಗಗಳು ತಮ್ಮ ವರದಿಯ ಸತ್ವವನ್ನು ಕಳೆದುಕೊಳ್ಳುತ್ತವೆ. ಹಾಗಾಗದೇ ಮುಂಬರುವ ಜನಗಣತಿಯಲ್ಲಿ ಜಾತಿ ಮತ್ತು ಸಮಾಜವಾರು ಮಾಹಿತಿ ಸಂಗ್ರಹಣೆ ಮುಖ್ಯವಾದದು. ಏಕೆಂದರೆ, ಆಯಾ ಸಮುದಾಯಗಳ ಚಾರಿತ್ರಿಕ ಮತ್ತು ಸಾಮಾಜಿಕ ಮುನ್ನೋಟವನ್ನು ಬಿಂಬಿಸುವ ಕಾರ್ಯ ನಡೆಯಬೇಕು. ಅಂದಾಗ ಮಾತ್ರ ಸಾಮಾಜಿಕ ಬದಲಾವಣೆಯ ಪ್ರಕ್ರಿಯೆಯು ಪೂರ್ಣಗೊಳ್ಳುತ್ತದೆ. ಸರಕಾರ ಜಾತಿ ಸಮೀಕ್ಷೆ ಮಾಡುವಾಗ ಅಸಡ್ಡೆ ತೋರದೆ ಮೂಲ ಮಾಹಿತಿಯನ್ನು ಸಾಧ್ಯವಾದಷ್ಟು ಮಟ್ಟಿಗೆ ವಿಸ್ತರಿಸಿ ಮುಂಬರುವ ಜನಾಂಗಕ್ಕೆ ಮಾದರಿಯಾಗಿ ಕಟ್ಟಿಕೊಡಬೇಕೆಂಬುದು ಮೊಯಿಲಿಯವರ ಚಿಂತನೆಯಾಗಿದೆ.

ಭಾರತ ಎದುರಿಸುತ್ತಿರುವ ಜಾತಿ ಪದ್ಧತಿಯಲ್ಲಿ ಹಿಂದೂ, ಮುಸ್ಲಿಂ, ಕ್ರಿಶ್ಚಿಯನ್, ಮುಂತಾದ ಸಮುದಾಯಗಳ ಒಳಜಗಳಗಳು ಪ್ರಮುಖವಾಗಿವೆ. ಧಾರ್ಮಿಕ ಮೂಲಭೂತವಾದಗಳು ಭಾರತೀಯ ಸಮಾಜವನ್ನು ಇಂದು ತಲ್ಲಣಗೊಳಿಸಿವೆ. ಇವುಗಳ ಜೊತೆಗೆ ಮತಾಂತರ ಎಂಬ ಪೆಡಂಭೂತ ರಾಷ್ಟ್ರದ ತುಂಬ ಹರಡಿವೆ. ಹಿಂದೂತ್ವವಾದವನ್ನು ಮುಂದಿಟ್ಟುಕೊಂಡು ಅದರ ನೆಪದಲ್ಲಿ ಕೆಲವು ಹಿಂದೂ ಧರ್ಮದ ಮುಖಂಡರು ನಂಜಿನ ವಾತಾವರಣವನ್ನುಂಟು ಮಾಡಿದರೆ, ಇನ್ನು ಕೆಲವರು ಜಿಹಾದ್ ಎಂಬ ಧರ್ಮಯುದ್ಧದ ಹೆಸರಿನಲ್ಲಿ ಕೆಲವು ಮುಸ್ಲಿಂ ಮುಖಂಡರು ಹಗೆತನ ಬೆಳೆಸುತ್ತಿದ್ದಾರೆ. ಇಂತಹ ಕಾರಣಗಳಿಂದ ಜಾತಿ ವ್ಯವಸ್ಥೆ ಕುಸಿದು ಹೋಗುವುದಕ್ಕೆ ಪ್ರಮುಖ ಕಾರಣವಾಗಿವೆ. ಬಹು ಸಂಖ್ಯಾತರು ಯಾವುದೇ ಪ್ರದೇಶದಲ್ಲಿ ಅಲ್ಪಸಂಖ್ಯಾತರ ಮೇಲೆ ದಬ್ಬಾಳಿಕೆಯನ್ನು ಮಾಡುತ್ತಿರುವುದು ಸಾಮಾನ್ಯ. ಆ ನಿಟ್ಟಿನಲ್ಲಿ ಅಲ್ಪಸಂಖ್ಯಾತರ ಮೇಲಾಗುತ್ತಿರುವ ದೌರ್ಜನ್ಯವನ್ನು ತಡೆಯಬೇಕಾಗಿರುವುದು ಅವಶ್ಯ. ಇದಕ್ಕೆ ಮೊಯಿಲಿಯವರು ಅನೇಕ ಉದಾಹರಣೆಗಳನ್ನು ನೀಡಿದ್ದಾರೆ.

"ವ್ಯಾಟಿಕನ್ ಪಟ್ಟಣದ ರಾಜಕೀಯ ಪ್ರತಿನಿಧಿ ಸಭೆಯಲ್ಲಿ ಮಾತನಾಡಿದ ಧರ್ಮಗುರು ಪೋಪ್‌ಜಾನ್ ಪಾಲ್ ದುಃಖಿತರಾಗಿ ತಿಳಿಸಿರುವಂತೆ 'ಏಷ್ಯಾ ಖಂಡದಲ್ಲಿ ಹಿಂಸಾಚಾರ ಪ್ರಕರಣಗಳು ಕ್ರೈಸ್ತ ಬಾಂಧವರಿಗೆ ಕಷ್ಟನಷ್ಟಗಳನ್ನು ತಂದಿವೆ. ಈಗರ್ಜಿಗಳನ್ನು ನಾಶಪಡಿಸಲಾಗಿದೆ. ಧಾರ್ಮಿಕ ಸೇವಕರಿಗೆ ಅಪಚಾರವಾಗಿದೆ. ಕೆಲವರು ಕೊಲ್ಲಲ್ಪಟ್ಟಿದ್ದಾರೆ. ಅಂತೂ ಭಾರತದ ಕೀರ್ತಿ ಕಳಶ ಡೋಲಾಯಮಾನ್‌ವಾಗಿದೆ ಎಂದರೆ ತಪ್ಪಾಗದು[೩]" ಎಂದು ಮೊಯಿಲಿಯವರು ಪೊಪ್ ಜಾನಪಾಲ್ ಅವರ ಮಾತು ನೆನಪಿಸಿಕೊಳ್ಳುವುದರ ಜೊತೆಗೆ ಭಾರತದಲ್ಲಿ ಧರ್ಮದ ಹೆಸರಿನಲ್ಲಿ ನಡೆಯುತ್ತಿರುವ ಅಧರ್ಮವನ್ನು ಖಂಡಿಸಿದ್ದಾರೆ.

ಈ ಮೇಲ್ಕಾಣಿಸಿದ ಸಂಗತಿಗೆ ಪ್ರಮುಖ ಕಾರಣವನ್ನು ಅವರು ತಮ್ಮ ಚಿಂತನೆಯಲ್ಲಿ ಉಲ್ಲೇಖಿಸಿದ್ದಾರೆ. ರಾಜಕೀಯ ಪಕ್ಷಗಳು ತಮ್ಮ ಬೇಳೆ ಬೇಯಿಸಿಕೊಳ್ಳುವದಕ್ಕಾಗಿ ಚುನಾವಣೆಯ ವೇಳೆಯಲ್ಲಿ ಅನೀತಿಯಿಂದ ಮತ, ಜನಾಂಗ, ಜಾತಿ, ಭಾಷೆ ಮುಂತಾದವುಗಳನ್ನು ಉಲ್ಲೇಖಿಸುವುದರ ಮೂಲಕ ಸಭ್ಯತೆಯ ಭಾರತದಲ್ಲಿ ಒಡಕನ್ನು ಹುಟ್ಟಿಸುವ ಕಾರ್ಯ ಮಾಡುತ್ತಿರುವ ಬಗ್ಗೆ ಮೊಯಿಲಿಯವರು ಪ್ರಶ್ನಿಸುತ್ತಾರೆ. ಕೆಲವು ಪಕ್ಷದ ಧುರೀಣರು ಚುನಾವಣೆಯ ನಿಯಮವನ್ನು ಪಾಲಿಸದೆ ಇಂತಹ ಹಗೆತನವನ್ನು ಹುಟ್ಟಿಸಿ

ತಮ್ಮ ಮತವನ್ನು ಬಾಚಿಕೊಳ್ಳಲು ಹವಣಿಸುತ್ತಿರುವುದು ದುರದೃಷ್ಟಕರ ಚುನಾವಣೆಯ ನೀತಿ-ಸಂಹಿತೆಯಲ್ಲಿ ಸೂಚಿಸಿರುವಂತೆ ಅಭ್ಯರ್ಥಿಯು ಯಾವುದೇ ಜಾತಿ ಜನಾಂಗ ಸಮುದಾಯವನ್ನು ಕೂಗಿ ಕರೆಯುವಂತಿಲ್ಲ. ಚುನಾವಣೆಯ ಪ್ರಚಾರವನ್ನು ದೇವಸ್ಥಾನ ಮಸೀದಿ, ಚರ್ಚ್ ಮುಂತಾದ ಧಾರ್ಮಿಕ ಸ್ಥಳಗಳಲ್ಲಿ ನಡೆಸುವಂತಿಲ್ಲ. ಆದಾಗ್ಯೂ ಸಹ ಅನೇಕ ಕಡೆ ಇಂತಹ ತಪ್ಪುಗಳು ನಡೆಯುತ್ತವೆ. ಇವೆಲ್ಲವನ್ನೂ ತಡೆದು ಹಾಕಬೇಕಾದರೆ, ಸಂವಿಧಾನದ ಧರ್ಮಾತೀತ ತತ್ವಗಳನ್ನು ಎತ್ತಿ ಹಿಡಿಯುವುದು ಮುಖ್ಯವಾಗಿದೆ. ಧಾರ್ಮಿಕ ನಂಬಿಕೆಯನ್ನು ಮುಂದಿಟ್ಟುಕೊಂಡು ಇಂತಹ ಹಗೆತನಕ್ಕೆ ಆಸ್ಪದ ಕೊಡದೇ 'ಸರ್ವರಿಗೂ ಸಮಪಾಲು, ಸರ್ವರಿಗೂ ಸಮಬಾಳು' ಸಿಗಬೇಕೆಂಬ ಚಿಂತನೆ ಎಂ.ವೀರಪ್ಪ ಮೊಯಿಲಿಯವರದು.

"ನಮ್ಮ ಜೀವಿತದ ಕಿರು ಅವಧಿಯಲ್ಲಿ ನಾವು ಒಂದೆಡೆ ರಚನಾತ್ಮಕ ಮತ್ತು ಸೃಷ್ಟಿಶೀಲ ಪ್ರಯತ್ನಗಳನ್ನು ಇನ್ನೊಂದೆಡೆ ವಿನಾಶಕಾರಿ ಬಲಗಳೆಂಬ ಎರಡು ಶಕ್ತಿಗಳು ಭಾರತದಲ್ಲಿ ಮತ್ತು ಜಗತ್ತಿನಲ್ಲಿ ಅಸ್ತಿತ್ವದಲ್ಲಿರುವುದನ್ನು ಗಮನಿಸಿದ್ದೇವೆ. ಕೊನೆಯಲ್ಲಿ ಯಾವುದು ಗೆಲುವು ಸಾಧಿಸುತ್ತದೆ. ಮತ್ತು ನಾವು ಯಾವೆಡೆ ನಿಂತಿದ್ದೇವೆ? ನಮ್ಮೆಲ್ಲರಿಗೂ ಮತ್ತು ರಾಷ್ಟ್ರದ ನಾಯಕರಾಗಿ ಆಯ್ಕೆಯಾಗುವ ಭವಿಷ್ಯದ ದೊರೆಗಳನ್ನು ನಿರ್ಮಿಸುವವರಿಗೆ ವಿಶೇಷವಾಗಿ ಇದು ಪ್ರಬಲ ಪ್ರಶ್ನೆಯಾಗಿದೆ ಎಂದು ತಮ್ಮ ಚಿಂತನೆಯಲ್ಲಿ ಹೇಳಿಕೊಂಡಿದ್ದಾರೆ. ೬ ವರ್ಷದ ಒಳಗಿನ ಮಕ್ಕಳಿಗೆ ಉಚಿತ ಆರೋಗ್ಯ ರಕ್ಷಣೆ ಮತ್ತು ಪೋಷಣೆಯನ್ನು ಮಾಡುವುದು ಅನಾಥ ಶಿಶುಗಳ ಪಾಲನೆ ಹಾಗೂ ಅಂಗವಿಕಲ, ಬುದ್ಧಿ ಮಾಂಧ್ಯ ದುರ್ಬಲ ಮಕ್ಕಳ, ಪುನರ್‌ವಸತಿ ಮುಂತಾದವುಗಳನ್ನು ಹೆಚ್ಚಿನ ಪ್ರಮಾಣದಲ್ಲಿ ಸರಕಾರ ನಿರ್ವಹಿಸಬೇಕೆಂಬುದು ಮೊಯಿಲಿಯವರ ಚಿಂತನೆಯಾಗಿದೆ. ಬಾಲ್ಯವಿವಾಹ ಪದ್ಧತಿ ನಿಷೇಧಿಸುವ ಪ್ರಚಾರ ಇನ್ನಷ್ಟು ತೀವ್ರಗೊಳ್ಳಬೇಕು. ಅನಾಥ ಮಕ್ಕಳನ್ನು ದತ್ತು ತೆಗೆದುಕೊಳ್ಳುವ ದಂಪತಿಗಳಿಗೆ ಹೆಚ್ಚಿನ ಉತ್ತೇಜನ ನೀಡಬೇಕು. ಮಕ್ಕಳಿಗೆ ಉಚಿತ ಮತ್ತು ಕಡ್ಡಾಯ ಶಿಕ್ಷಣ ಸಾರ್ವತ್ರಿಕವಾಗಿ ನಡೆಯಬೇಕಾಗಿದೆ. ಹೀಗೆ ಹತ್ತು ಹಲವು ಚಿಂತನೆಗಳನ್ನು ಮೊಯಿಲಿಯವರು ಅಭಿವ್ಯಕ್ತಪಡಿಸಿದ್ದಾರೆ.

ಒಟ್ಟಾರೆಯಾಗಿ ಮೊಯಿಲಿಯವರ ಅನೇಕ ಲೇಖನಗಳಲ್ಲಿ "ಸಾಮಾಜಿಕ ಪ್ರಬಂಧಗಳಲ್ಲಿ ನಿರಂತರ ಬದಲಾಗುವ ಸಂಸ್ಕೃತಿ ಮತ್ತು ಸೌಜನ್ಯ ಸೌಲಭ್ಯವು ಉತ್ಸಾಹ

ತುಂಬಿ ಮುಂದೆ ಮುಂದೆ ನುಗ್ಗುವ ಪ್ರೇರಣೆ ನೀಡುತ್ತದೆ. ಆದಿವಾಸಿ ಜನರ ಮತ್ತು ತುಳಿಯಲ್ಪಟ್ಟ ಹಾಗೂ ಶೋಷಣೆಗೆ ಒಳಗಾದ ಜನರಲ್ಲಿ ಅವರದೇ ಆದ ಸಾಂಸ್ಕೃತಿಕ ಕೊಡುಗೆ ಇದೆ. ಆದ್ದರಿಂದ ಈ ಜನಾಂಗ ಸಮೃದ್ಧ ಪರಂಪರೆಯನ್ನು ಪುನರ್ ನಿರ್ಮಿಸಬೇಕು. ರಾಜ್ಯಗಳ ಒಕ್ಕೂಟದ ಬಗ್ಗೆ ಬಹಳ ವಿವರಗಳಿದ್ದು, ಜಾತಿ ಮತಗಳ ತಿಕ್ಕಾಟ ಎಂದಿಗಿಂತಲೂ ಇಂದು ಹೆಚ್ಚಿದ್ದು ಅಮೂಲಾಗ್ರ ಸಮೀಕ್ಷೆಯ ಅವಶ್ಯಕತೆ ಇದೆ. ಈ ಸಂದರ್ಭದಲ್ಲಿ ಜನಗಣತಿ ಆಯೋಗವು ಜಾತಿಗಳ ಬಗ್ಗೆ ವಿವರಣೆಯ ಅವಶ್ಯಕತೆಗಳನ್ನು ಇತ್ತೀಚಿಗೆ ಕಡೆಗಣಿಸಿರುವುದು ಸೂಕ್ತವಲ್ಲ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಮತ್ತು ಹಿಂದುಳಿದ ವರ್ಗಗಳ ಬಗ್ಗೆ ಸಂವಿಧಾನದಲ್ಲಿ ಮೀಸಲಾತಿಯನ್ನು ಯಾವುದೇ ಅಸಡ್ಡೆ ಮಾಡದೇ ಅದನ್ನು ವಿಸ್ತರಿಸುವ ಅವಶ್ಯಕತೆ ಇದೆ. ಸ್ಪಷ್ಟವಾದ ಚಿಂತನೆ ಮತ್ತು ಪರಿಣಾಮಕಾರಿಯಾದ ಕ್ರಿಯೆಯು ಅಗತ್ಯವಾಗಿರುವಾಗ ನಮ್ಮ ಮನಸ್ಸು ಸಿನಿಕತನ ಹಾಗೂ ದ್ವೇಷದಿಂದ ಕಲುಷಿತಗೊಳ್ಳದಂತೆ ನಾವು ಜಾಗೃತರಾಗಬೇಕು[೪]" ಎಂಬ ನೆಹರೂರವರ ಮಾತನ್ನು ಮೊಯಿಲಿಯವರು ಚಾಚು ತಪ್ಪದೇ ಪಾಲಿಸಿಕೊಂಡು ಬಂದವರು.

ಭಾರತದ ಸಾಮಾಜಿಕ ಸಮಸ್ಯೆಯಲ್ಲಿ ಒಂದಾದ ಹೆಣ್ಣುಶಿಶು ಹತ್ಯೆ, ಹಾಗೂ ಹೆಣ್ಣು ಮಕ್ಕಳಿಗೆ ಶಿಕ್ಷಣ ಕೊಡಿಸದೇ ಇರುವುದು ಬಹುದೊಡ್ಡ ಸವಾಲಾಗಿ ನಿಂತಿದೆ. ಮಕ್ಕಳಿಗೆ ಸರಿಯಾದ ಆರೋಗ್ಯ ಪಾಲನೆ, ಸುರಕ್ಷೆ ಇವು ಯಾವುದರ ಪರಿವೆ ಇಲ್ಲದೆ ಭಾವಿ ಸಂಪನ್ಮೂಲ ವ್ಯಕ್ತಿಗಳನ್ನು ಅನಾಥ ಪ್ರಜ್ಞೆಯಂತೆ ಕಾಣುವ ಸಾಮಾಜಿಕ ಸಮುದಾಯವನ್ನು ಮೊಯಿಲಿಯವರು ತಮ್ಮ ಚಿಂತನೆಯಲ್ಲಿ ಎತ್ತಿ ಹೇಳಿದ್ದಾರೆ. ಸಂವಿಧಾನ ಮಕ್ಕಳಗಾಗಿ ೩೯ ಇ ಮತ್ತು ಎಫ್ ವಿಧಿಯ ಅನ್ವಯ ಮಕ್ಕಳನ್ನು ಕೂಲಿ ಕೆಲಸ ಹಾಗೂ ದುರ್ಬಳಕೆಗೆ ಉಪಯೋಗಿಸದೇ ಅವರನ್ನು ಯೋಗ್ಯರನ್ನಾಗಿ ಮಾಡುವಂತೆ ಸೂಚಿಸಿದೆ. ಆದರೆ, ಬಾಲಾಪರಾಧ, ಶಿಕ್ಷಣದಿಂದ ವಂಚಿತರಾದ ಮಕ್ಕಳು ಬಾಲಕಾರ್ಮಿಕತೆ, ಇವೆಲ್ಲ ಮಕ್ಕಳ ಹಕ್ಕು ಮತ್ತು ಅರ್ಹತೆಗಳನ್ನು ಕಸಿದುಕೊಂಡಿದೆ. ಕಾನೂನಿನಲ್ಲಿ ಮಕ್ಕಳಿಗೆ ಸುರಕ್ಷತೆ ಇದೆ. ವಾಣಿಜ್ಯ ವ್ಯವಹಾರಗಳಲ್ಲಿ ಮಕ್ಕಳಿಗೆ ಅನ್ಯಾಯವಾಗದಂತೆ ೧೯೭೪ರಲ್ಲಿ ಮಕ್ಕಳ ರಾಷ್ಟ್ರೀಯ ಧೋರಣೆಯನ್ನು ಅಂಗೀಕರಿಸಿದೆ. ಮಗು ಹುಟ್ಟುವ ಮುನ್ನ ಹಾಗೂ ಜನಿಸಿದ ನಂತರ ಮಗುವಿಗೆ ಬೇಕಾದ ಸವಲತ್ತುಗಳನ್ನು ಸರ್ಕಾರ ನೀಡಿದರೂ ಸಹ ಮಗುವಿನ ಬೆಳವಣಿಗೆ ಕುಂಠಿತಗೊಳ್ಳುತ್ತಿರುವುದು ವಿಷಾದನೀಯ, ಕೆಲವು ತಾಯಂದಿರು ತಮ್ಮ ಮಕ್ಕಳಿಗೆ ದೈಹಿಕವಾಗಿ ಮತ್ತು ಮಾನಸಿಕವಾಗಿ ಬೆಳವಣಿಗೆ ಹೊಂದಲು ಸಂಪೂರ್ಣ ಬೆಂಬಲ

ಕೂಡದೇ ಕುಂಠಿತಗೊಳಿಸುತ್ತಿರುವುದು ರಾಷ್ಟ್ರಕ್ಕೆ ಮಾರಕವಾಗಿದೆ ಎನ್ನುವುದು ಮೊಯಿಲಿಯವರ ಅಭಿಮತ.

"ಇಂದಿನ ಮಕ್ಕಳು ನಾಳೆಯ ರಾಷ್ಟ್ರದ ನಾಗರೀಕರು. ಆ ನಿಟ್ಟಿನಲ್ಲಿ ಮಕ್ಕಳಿಗೆ ಬೇಕಾಗಿರುವ ಕೆಲವು ಯೋಜನೆಗಳನ್ನು ಮೊಯಿಲಿಯವರು ರೂಪಿಸಿದ್ದಾರೆ. ದೇಶ ಸಭ್ಯತೆಯ ದಾಳಿಯ ಸುಳಿಯಲ್ಲಿ ಸಿಕ್ಕು ಧಾರ್ಮಿಕ ಸಮನ್ವಯತೆಗೆ ಅವಶ್ಯಕವಾದ ಉತ್ತೇಜನವಿಲ್ಲ. ಈ ದೃಷ್ಟಿಯಲ್ಲಿ ಧಾರ್ಮಿಕ ಚಿಂತನೆಯನ್ನು ಉಳಿಸಿಕೊಳ್ಳುವಲ್ಲಿ ಈಗಿನ ಸರ್ಕಾರ ವಿಫಲಗೊಂಡಿದೆ. ಮಾನವ ಸಂಪನ್ಮೂಲ ಅಭಿವೃದ್ಧಿ ದಿಕ್ಕಿನಲ್ಲಿ ಮಕ್ಕಳ ಪಾತ್ರವನ್ನು ವಿವರಿಸುತ್ತಾ ಮಕ್ಕಳ ಪೋಷಣೆಯ ನ್ಯೂನ್ಯತೆಯನ್ನು ಎತ್ತಿ ತೋರಿಸಿದ್ದಾರೆ. ಮೂಲಭೂತ ಸೌಕರ್ಯಗಳನ್ನು ಗ್ರಾಮೀಣ ಮತ್ತು ಅರೆನಗರ ಪ್ರದೇಶದಲ್ಲಿ ಎಲ್ಲರಿಗೂ ಲಭ್ಯವಾಗುವ ರೀತಿಯಲ್ಲಿ ಒದಗಿಸಬೇಕೆಂದು ಒತ್ತಿ ಹೇಳುತ್ತಾರೆ[೫೨]". ಈ ಎಲ್ಲಾ ಮಾತುಗಳು ಮೊಯಿಲಿ ಒಬ್ಬ ಸಾಮಾಜಿಕ ಚಿಂತಕ ಎಂಬುದನ್ನು ಎತ್ತಿ ತೋರಿಸುತ್ತದೆ.

ಸಾಮಾಜಿಕ ಕ್ಷೇತ್ರದಲ್ಲಿ ಮೊಯಿಲಿಯವರು ಮಾಡಿರುವ ಚಿಂತನೆಯ ಫಲವಾಗಿ ಅನೇಕ ಯೋಜನೆಗಳು ಅವರ ಆಡಳಿತದ ಅವಧಿಯಲ್ಲಿ ಕಂಡಿವೆ. ಮುಖ್ಯವಾಗಿ ಆಶ್ರಯ ಮತ್ತು ಅಂಬೇಡ್ಕರ ವಸತಿ ಯೋಜನೆಗಳು ಉದ್ಯೋಗ ಖಾತ್ರಿ ಯೋಜನೆ, ಗ್ರಾಮೀಣ ಹಾಗೂ ನಗರಾಭಿವೃದ್ಧಿ ಯೋಜನೆಗಳು ಪ್ರಾಂತೀಯ ವಕ್ತ ಮಂಡಳಿಯ ರಚನೆ, ಹಿಂದುಳಿದ ವರ್ಗಗಳ ಆಯೋಗ ಸ್ಥಾಪನೆ ಅಲ್ಪಸಂಖ್ಯಾತರರಿಗಾಗಿ ಅಲ್ಪಸಂಖ್ಯಾತ ಅಭಿವೃದ್ಧಿ ನಿಗಮ ಸ್ಥಾಪನೆ ಹೀಗೆ ಮುಂತಾದವುಗಳು ಅವರ ಸಾಮಾಜಿಕ ಚಿಂತನೆಯ ಫಲಪ್ರದಾಯಕ ಯೋಜನೆಗಳಾಗಿವೆ.

೪. ೩. ೨ ಆರ್ಥಿಕ ಸಬಲೀಕರಣ

ಮೊಯಿಲಿಯವರು ಅನೇಕ ವರ್ಷಗಳ ಕಾಲ ಕರ್ನಾಟಕ ಸರ್ಕಾರದ ಆರ್ಥಿಕ ಮಂತ್ರಿಯಾಗಿ, ಯೋಜನಾ ಮಂತ್ರಿಯಾಗಿ ಚಿಕ್ಕ ಕೈಗಾರಿಕೆಗಳ ಮಂತ್ರಿಯಾಗಿ, ಸಾಮಾಜಿಕ ಸೇವೆ ಸಲ್ಲಿಸಿದ್ದಾರೆ. ಈ ಅಧಿಕಾರದ ಜೊತೆಗೆ ಮೊಯಿಲಿಯವರು ಆರ್ಥಿಕ ಅಭಿವೃದ್ಧಿ ಮತ್ತು ವಿಶ್ವಧೀಕರಣದ ಬಗ್ಗೆ ಅವರಿಗಿರುವ ಚಿಂತನೆ ಅಪಾರ. ವ್ಯಾಪಕವಾದ ಓದು ಆಳವಾದ ಅಧ್ಯಯನದಿಂದ ತಮ್ಮ ಚಿಂತನೆಯ ಸಿದ್ದಾಂತವನ್ನು ಕಾರ್ಯ ರೂಪಕ್ಕೆ ತರುವ ಮೂಲಕ ಯಶಸ್ಸನ್ನು ಪಡೆದುಕೊಂಡವರು. ತೆರಿಗೆ ಸುಧಾರಣೆಗಳಂತಹ ಬಹುದೊಡ್ಡ ಯೋಜನೆಗಳಲ್ಲಿ

ತೆರಿಗೆ ವೆಚ್ಚ ಸಾಲದ ಚಿತ್ರ ಚಕ್ರವ್ಯೂಹ ಇದ್ದ ಹಾಗೆ. ಅವುಗಳಲ್ಲಿ ಯಶಸ್ಸನ್ನೂ ಸಂಪಾದಿಸಿದ ಮೊಯಿಲಿಯವರು ತೆರಿಗೆ ಸುಧಾರಣೆಯಲ್ಲಿ ಅಪ್ರತ್ಯಕ್ಷ ತೆರಿಗೆಗಳಲ್ಲಿ ಸುಧಾರಣೆಯಾಗಬೇಕೆಂದು ಮನಗಂಡು ಮಾರಾಟ ತೆರಿಗೆ ಬದಲಾಗಿ ಮೌಲ್ಯಾಧಾರಿತ ತೆರಿಗೆಗಳನ್ನು ಜಾರಿಗೆ ತರಬೇಕೆಂದು ಒತ್ತಿ ಹೇಳಿದರು. ಈ ತೆರಿಗೆ ಪದ್ಧತಿ ಸುಧಾರಣೆಗೆ ಬೇಕಾಗಿರುವ ಅತ್ಯವಶ್ಯಕತೆಗಳಾದ ಸರಳೀಕರಣಕ್ಕೆ ಹೊಂದಿಕೊಳ್ಳುವ ಮಾರ್ಪಾಡುಗಳು ಮತ್ತು ಅವುಗಳ ಪ್ರತಿಕೂಲಗಳನ್ನು ಒಪ್ಪಿಕೊಳ್ಳುವ ಚಿಂತನೆಯನ್ನು ಮಾಡಿದ್ದಾರೆ. ಅವರ ಲೇಖನ ಮತ್ತು ಕೃತಿಗಳಲ್ಲಿ ಅಪಾರವಾದ ಆರ್ಥಿಕ ಚಿಂತನೆ ಮತ್ತು ಅನುಭವಗಳು ಒಟ್ಟಿಗೆ ಬಂದು ನಿಲ್ಲುತ್ತವೆ. ಈ ಹಿಂದೆ ಅವರ ಅಧ್ಯಕ್ಷತೆಯಲ್ಲಿ ಕರ್ನಾಟಕ ಸರ್ಕಾರ ರಚಿಸಿದ ತೆರಿಗೆ ಸುಧಾರಣಾ ಆಯೋಗ ಎರಡು ಬೃಹತ್ ಸಂಪುಟಗಳನ್ನು ಸರ್ಕಾರಕ್ಕೆ ನೀಡಿದ್ದು ಸ್ಮರಿಸಬಹುದು.

ಇವೆಲ್ಲವುಗಳನ್ನು ನೋಡಿದಾಗ ಮೊಯಿಲಿಯವರಲ್ಲಿರುವ ಆರ್ಥಿಕ ಶಿಸ್ತಿನ ಪರಿಣಿತಿ ಜ್ಞಾನ ರಾಷ್ಟ್ರದ ಆರ್ಥಿಕಾಭಿವೃದ್ಧಿಯ ಆದರ್ಶದಿಂದ ತತ್ವ ಮತ್ತು ಗುರಿಸಿದ್ಧಾಂತ ಇವುಗಳನ್ನು ಇಟ್ಟುಕೊಂಡು ತಮ್ಮ ಕಾರ್ಯವನ್ನು ನಿರ್ವಹಿಸಿದ್ದಾರೆ. ಮೊಯಿಲಿಯವರ ಆರ್ಥಿಕ ಅಭಿವೃದ್ಧಿಯ ಚಿಂತನೆಯ ಫಲ ಇಂದು ರಾಜ್ಯ ಹಾಗೂ ರಾಷ್ಟ್ರ ಸರ್ಕಾರಗಳು ಅನುಸರಿಸಿಕೊಂಡಿರುವುದು ಉಲ್ಲೇಖನೀಯ. ಅವರ ಆರ್ಥಿಕ ಚಿಂತನೆಯಲ್ಲಿ ಎದ್ದು ಕಾಣುವ ಅಂಶಗಳು ಅಭಿವೃದ್ಧಿ ನೀತಿ, ವಿತ್ ಪದ್ಧತಿಯ ನೀತಿ ಸಮಕಾಲೀನ ಕಾರ್ಯ ವಾಸ್ತವದಿಂದ ಅವರ ಚಿಂತನೆಗಳು ಕೂಡಿವೆ.

ಕೇಂದ್ರ ಮತ್ತು ರಾಜ್ಯಸರ್ಕಾರಗಳ ನಡುವೆ ಹಲವು ವರ್ಷಗಳಿಂದ ಹಣಕಾಸಿನ ತೊಂದರೆ ಇರುವುದು ಕಂಡು ಬರುತ್ತದೆ. ಸರ್ಕಾರ ತೆರಿಗೆ ಆದಾಯಗಳನ್ನು ಹೆಚ್ಚಿಸದೇ ಖರ್ಚನ್ನೇ ಹೆಚ್ಚಾಗಿ ಮಾಡಿ ದುಬಾರಿ ಕೊರತೆ ಅನುಭವಿಸುತ್ತಿರುವುದು ಬಹುದೊಡ್ಡ ಸಮಸ್ಯೆಯಾಗಿದೆ. ತೆರಿಗೆ ವಸೂಲ ಹಾಗೇಯೇ ಉಳಿದುಕೊಂಡರೆ, ಆಡಳಿತ ನೆಡೆಸುವುದು ಕಷ್ಟವಾಗುತ್ತದೆ. ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಗೆ ಎಷ್ಟೋ ವರ್ಷಗಳಿಂದ ಇಂತಹಸ್ಥಿತಿ ಉದ್ಭವವಾದಾಗ ಬೆಳವಣಿಗೆ ಹೊಂದುತ್ತಿರುವ ರಾಜ್ಯ ಅಥವಾ ರಾಷ್ಟ್ರಕುಂಠಿತಗೊಳ್ಳುತ್ತದೆ. ಅದಕ್ಕಾಗಿ ಮೊಯಿಲಿಯವರು ತೆರಿಗೆಯನ್ನು ಕುರಿತು ವಿಶೇಷ ಚಿಂತನೆಯನ್ನು ಮಾಡಿದ್ದಾರೆ. ೧೯೯೩ರಲ್ಲಿ ಮನಮೋಹನ್‌ಸಿಂಗ್‌ರವರು ಮೊದಲ ಬಾರಿಗೆ ತೆರಿಗೆ ಪದ್ಧತಿಯಲ್ಲಿ

ಮೌಲ್ಯಾಧಾರಿತ ತೆರಿಗೆ ತರುವದರ ಮೂಲಕ ಅದು ಇಂದು ಸಫಲವಾಗಿರುವುದು ಅದರ ಮಹತ್ವವನ್ನು ತಿಳಿಸುತ್ತದೆ. ಸಾಂಪ್ರದಾಯಕವಾದ ಹಳೆಯ ಮಾರಾಟ ಕರ ಸಂಗ್ರಹ ಪದ್ಧತಿ ಬಿಟ್ಟು ಹೊಸದಾದ ವ್ಯಾಟ್ ಮಾದರಿಯ ಪದ್ಧತಿಯನ್ನು ಮಾಡಿದುದರಿಂದ ಈ ಮೌಲ್ಯವರ್ಧಿತ ತೆರಿಗೆ ಯಶಸ್ಸನ್ನು ಪಡೆದುಕೊಂಡಿದೆ.

೧೯೯೦-೯೧ರ ದಶಕದಲ್ಲಿ ಸಮಸ್ತ ಉತ್ಪನ್ನ ಸಮಸ್ತ ಸಂಗ್ರಹಿತ ತೆರಿಗೆ ಅನುಪಾತ ಶೇಕಡಾ ೧೫% ಇದ್ದು, ಈ ಅನುಪಾತವನ್ನು ಗರಿಷ್ಠ ಮಟ್ಟ ೧೭ಕ್ಕೆ ಏರಿಸಲು ಚಿಂತನೆ ಮಾಡಿದ್ದರು. ಅಂದರೆ ಭಾರತದಲ್ಲಿ ಪರೋಕ್ಷ ತೆರಿಗೆ ಪದ್ಧತಿ ಪ್ರಾಮಾಣಿಕತೆಯಿಂದ ಬೆಳೆಯಲು ಈ ವ್ಯಾಟ ಪದ್ಧತಿಯು ಉತ್ತಮವಾದ ಪದ್ಧತಿಯಾಗಿದೆ. ಆರ್ಥಿಕ ಸುಧಾರಣೆ ತರಬಯಸುವುದಾದರೆ ಬಾಕಿ ಇರುವ ಎಲ್ಲಾ ಕರವಸೂಲಾತಿಗಳನ್ನು ಮಾಡಬೇಕು. ಮೂಲಭೂತ ಅನುಕೂಲ ವಲಯವನ್ನು ರೂಪಿಸಿ ಸುಧಾರಣೆ ಮಾಡುವುದು ಅಗತ್ಯವಾಗಿದೆ. ಅಂದರೆ ಆಡಳಿತ ವ್ಯವಸ್ಥೆ ಹಾಗೂ ಬೆಲೆಗಳ ದರವನ್ನು ರಚಿಸಲು ಸಂಬಂಧಿಸಿದುದ್ದಾಗಿದೆ. ಮುಂದುವರೆದು ವಲಯ ಸುಧಾರಣೆಯ ಮೂಲಕ ಸಂಪನ್ಮೂಲಗಳನ್ನು ಸಂಗ್ರಹಿಸುವುದು, ವೃದ್ಧಿಸುವದರಿಂದ ಖಾಸಗೀ, ಸರ್ಕಾರಿ, ಕೈಗಾರಿಕಾ ವಲಯಗಳ ಕಾರ್ಯಗಳು ಇದರಿಂದ ವಿಸ್ತೃತಗೊಳ್ಳುತ್ತವೆ. ಹಾಗೇನೇ ಸಾಮಾಜಿಕ ಮೂಲಭೂತ ಸೌಕರ್ಯಗಳು ಅದರ ರಚನೆ ಸ್ವರೂಪ, ಕ್ಷೇತ್ರ ಬೆಳವಣಿಗೆಯಾಗುತ್ತಾ ಮುನ್ನಡೆಯುತ್ತಾ ಸಾಗುತ್ತವೆ. ತೆರಿಗೆ ಸುಧಾರಣೆ ಬಗ್ಗೆ ಸ್ಪಷ್ಟವಾದ ಮತ್ತು ನಿಖರವಾದ ತಂತ್ರವು ಅತ್ಯವಶ್ಯಕವಾಗಿದೆ. ತೆರಿಗೆ ಸುಧಾರಣೆ ಕೈಗೊಳ್ಳುವುದಕ್ಕಿಂತಲೂ ಮೊದಲಿಗೆ ತೆರಿಗೆ ಇಲಾಖೆಯ ಆಡಳಿತ ವರ್ಗದವರು ಯಾವ ಯಾವ ರಾಷ್ಟ್ರದಲ್ಲಿ ತೆರಿಗೆ ಪದ್ಧತಿ ಯಶಸ್ವಿಯಾಗಿದೆ. ಇದರ ಸ್ವರೂಪ ಹಾಗೂ ಅದರ ವೈಫಲ್ಯಗಳನ್ನು ಕಂಡು ಅದಕ್ಕೆ ಮೂಲ ಕಾರಣ ಹುಡುಕಿ ಸಮಸ್ಯೆಯ ಪರಿಹಾರ ಗುರುತಿಸುವ ಪೂರ್ವ ಅಧ್ಯಯನ ಅವಶ್ಯಕವಾಗಿದೆ ಎಂಬುದನ್ನು ತಮ್ಮ ಚಿಂತನೆಯಲ್ಲಿ ಹೇಳಿದ್ದಾರೆ. ಮೊಯಿಲಿಯವರು ಸಂಪ್ರದಾಯಿಕ ಕರ ವಸೂಲಾತಿ ಪದ್ಧತಿ ಬದಲಾಗಬೇಕು. ಕರದಾತರ ಕುರಿತು ಮಾಹಿತಿ ಸೂಕ್ತವಾಗಿರಬೇಕು. ಬೇರೆ ದೇಶಗಳಲ್ಲಿರುವ ಕರ ಸಂಗ್ರಹ ವ್ಯವಸ್ಥೆ ಸುಧಾರಣೆಯಾದ ಬಗೆಯನ್ನು ಅನುಸರಿಸಿಕೊಂಡು ಆರ್ಥಿಕ ಸಮೃದ್ಧಿಯನ್ನು ಸಾಧಿಸಬೇಕು. ಕರ ಸಂಗ್ರಹ ಬಾಕಿ ಒಟ್ಟಾರೆ ಶೇ. ೧೦% ಕ್ಕಿಂತ ಹೆಚ್ಚಾಗಬಾರದು. ಒಂದು ವೇಳೆ ಅದನ್ನು ಹೆಚ್ಚಿಸಲಿಕ್ಕೆ ಪ್ರಯತ್ನಿಸಿದರೆ, ಮತ್ತೇ ಆತಂಕಕ್ಕೆ ಒಳಗಾಗುವ ಲಕ್ಷಣವುಂಟು ಆಶೆ ಆಮಿಷಗಳಿಗೆ

ಬಲಿಯಾಗದೇ ವಸೂಲಿ ಮಾಡುವ ಕುರಿತು ತಮ್ಮ ಚಿಂತನೆಯ ಮಾತುಗಳನ್ನು ಹೇಳಿಕೊಂಡಿದ್ದಾರೆ.

ಭಾರತ ಕೃಷಿ ಪದ್ಧತಿ ದೇಶವಾದ್ದರಿಂದ ಕೃಷಿ ವಲಯಕ್ಕೆ ಹೆಚ್ಚಿನ ಆದ್ಯತೆ ಇರಬೇಕಾಗಿರುವುದು ಮುಖ್ಯವಾಗಿದೆ. ಕೃಷಿಗೆ ಪೂರಕವಾಗಿ ಪಶುಸಂಗೋಪನೆ ಮತ್ತು ಹಾಲು ಉತ್ಪನ್ನ ಪ್ರೋತ್ಸಾಹ ಭೂ ರಹಿತ ಕಾರ್ಮಿಕರಿಗೆ ಆರ್ಥಿಕ ನೆರವು ರೈತರಿಗೆ ಆರ್ಥಿಕ ಸಬಲತೆ ಇವೆಲ್ಲವು ಹೆಚ್ಚಾದಾಗ ದೇಶ ಸಮೃದ್ಧಿಹೊಂದಲು ಸಾಧ್ಯ. ಸಾಂಪ್ರದಾಯಿಕ ಕೃಷಿ ಪದ್ಧತಿಯನ್ನು ತೊಡೆದು ಹಾಕಿ ವೈಜ್ಞಾನಿಕ ತಳಹದಿಯ ಮೇಲೆ ಕೃಷಿ ನವೀಕರಣಗೊಳಿಸಬೇಕು. ವಿಶ್ವ ವ್ಯಾಪಾರ ಕೇಂದ್ರದ ನಿಯಮದಡಿ ರೈತರ ಏಳಿಗೆಗೆ ಕೇಂದ್ರ ಸರ್ಕಾರವು ಕಾಳಜಿ ವಹಿಸಬೇಕು. ರಾಷ್ಟ್ರೀಯ ಕೃಷಿ ನೀತಿ ರೈತರಿಗೆ ನೆರವಾಗಬೇಕು. ಕೃಷಿ ಬೆಳೆಗೆ ಮಾರುಕಟ್ಟೆಯಲ್ಲಿ ನಿಗದಿತ ಬೆಲೆ ದೊರೆಯುವ ಹಾಗೆ ಮಾಡಬೇಕು. ಜೊತೆಗೆ ಕೃಷಿ ಬೆಳೆಗೆ ವಿಮೆಯನ್ನು ಜಾರಿಗೊಳಿಸಬೇಕು. ಕೃಷಿ ಉತ್ಪನ್ನಗಳಿಗೆ ರಫ್ತು ಕ್ಷೇತ್ರವನ್ನು ನಿರ್ಮಿಸಿ, ಕೈಗಾರಿಕಾ ನೀತಿಯನ್ನು ಕೃಷಿ ಆಧಾರಿತವಾದ ಕೈಗಾರಿಕೆಗಳಿಗೆ ಪ್ರೋತ್ಸಾಹ ನೀಡಬೇಕಾಗುತ್ತದೆ. ವಿಶ್ವ ವ್ಯಾಪಾರ ಮಟ್ಟದಲ್ಲಿ ವ್ಯವಸ್ಥಿತವಾಗಿ ರೈತರನ್ನು ಸಜ್ಜುಗೊಳಸಿ ಸ್ವಾವಲಂಬನೆ ಗುರಿಯತ್ತ ಅವರನ್ನು ಸಾಗಿಸುವ ಜವಾಬ್ದಾರಿ ಸರ್ಕಾರದ ಮೇಲಿದೆ ಎಂದು ಮೊಯಿಲಿಯವರು ಹೇಳಿದ್ದಾರೆ.

ಭಾರತದಲ್ಲಿ ಕೆಲ ಖಾಸಗೀ ಉದ್ಯಮಿಗಳು ರೈತರ ಕೃಷಿ ಪದ್ಧತಿಗಳನ್ನು ಕೆಡಿಸಿದ್ದಾರೆ. ಕೇವಲ ರಾಸಾಯನಿಕ ಗೊಬ್ಬರದಿಂದಲೇ ಬೆಳೆಗಳನ್ನು ಬೆಳೆಯುವ ಸ್ಥಿತಿಯನ್ನು ನಿರ್ಮಾಣ ಮಾಡಿದ್ದಾರೆ. ಜೈವಿಕ ಗೊಬ್ಬರಗಳಿಲ್ಲದೇ ಕೃಷಿ ಭೂಮಿಗಳು ಸೊರಗಿವೆ. ಇವೆಲ್ಲವುಗಳಿಂದ ಭೂಮಿಯ ಮೇಲೆ ರಾಸಾಯನಿಕ ಗೊಬ್ಬರಗಳ ಅತಿಯಾದ ಬಳಕೆ ಮಾಡುವುದರಿಂದ ಭೂಮಿಯ ಶಕ್ತಿ ಕಡಿಮೆಯಾಗಿ ಬೆಳೆಗಳಿಗೆ ರೋಗ, ಹೆಚ್ಚಾಗುವುದು ಅವುಗಳನ್ನು ಅಲ್ಲಗಳೆದು ಸಾವಯುವ ಕೃಷಿಯನ್ನು ಹೆಚ್ಚಿಸಬೇಕಾದ ಅನಿವಾರ್ಯತೆ ಇದೆ. ರೈತರ ಕುರಿತು ಸಮಗ್ರ, ಅಧ್ಯಯನ ತೀವ್ರವಾಗಿ ಆಗಬೇಕಾಗಿರುವುದು ಅನಿವಾರ್ಯವಾಗಿದೆ. ಎಂದು ಮೊಯಿಲಿಯವರು ಅಭಿಪ್ರಾಯ ಪಡುತ್ತಾರೆ.

ಜೈವಿಕ ತಂತ್ರಜ್ಞಾನ ಕುರಿತು ವೀರಪ್ಪ ಮೊಯಿಲಿಯವರು "ವೈಜ್ಞಾನಿಕ ಸಂಶೋಧನೆ ನಡೆಯಬೇಕಾಗಿದೆ. ಅದಕ್ಕೆ ಪ್ರತಿಯಾಗಿ ಆಧುನಿಕ ಯುಗದಲ್ಲಿ ರೈತರು ಸ್ವಾವಲಂಬನೆ ಜೀವನ

ನೆಡಸುವುದು ಬಹುದೊಡ್ಡ ಸವಾಲಾಗಿದೆ. ವೈದ್ಯಕೀಯ ಮತ್ತು ವ್ಯವಸಾಯಗಳು ಇವೆರಡು ಜೈವಿಕ ತಂತ್ರಗಳು. ಈ ಪರಸ್ಪರ ಮಿಲನದಿಂದ ಹೊಸ ಹೊಸ ವಲಯಗಳು ಅನಾವರಣಗೊಂಡು ಜನರ ಆರೋಗ್ಯ ಸುಧಾರಿಸುವುದು ಸಸ್ಯಗಳ ಹುಡುಕಾಟದ ಜೊತೆಗೆ ಆ ಸಸ್ಯಗಳ ಲಕ್ಷಣಗಳನ್ನು ಗುರುತಿಸುವ ಅವುಗಳ ವಿಶೇಷತೆಯನ್ನು ಹಾಗೂ ಉತ್ಪಾದನೆಯನ್ನು ಮಾಡುವುದು ಅವಶ್ಯಕವಾಗಿದೆ. ನಮ್ಮ ಹುಡುಕಾಟವು ಆಧುನಿಕ ಯುಗದಲ್ಲಿ ಹೊಸ ಅವಕಾಶಗಳನ್ನು ತೆರೆಯುವ ದಾರಿಯಲ್ಲಿ ಸಾಗಿ ಹೆಚ್ಚಿನ ಶ್ರೇಯಸ್ಕರ ಗೆಲುವುಗಳನ್ನು ತರುವಂತಾಗಬೇಕು. ನಮ್ಮ ಈ ಶೋಧ ಸಂಚಾರವು ಜೀವ ಜಗತ್ತಿನ ಮತ್ತು ವಂಶಾನುಗಳ ನಿಗೂಢ ಸಂಪತ್ತಿನ ಭಂಡಾರವನ್ನು ಸುತ್ತುವರೆದು ಜಯಸುವವರೆಗೆ ಮುಗಿಯದು[೬]" ಎಂಬ ಚಿಂತನೆಯ ಮನೋಭಾವನೆಯನ್ನು ಮೊಯಿಲಿಯವರು ಹೊಂದಿದ್ದಾರೆ.

ರಾಜ್ಯದ ಹಣಕಾಸು ಸಚಿವರಾಗಿ ಮೊಯಿಲಿಯವರು ಕೈಗೊಂಡ ಕ್ರಮಗಳು ಅವರ ಚಿಂತನೆಯ ಪ್ರತಿಫಲದ್ದಾಗಿದೆ. ೧೯೯೩-೯೪ನೇ ಸಾಲಿನ ಹಾಗೂ ೧೯೯೪-೯೫ರಲ್ಲಿ ಅವರು ಎರಡು ಸಾರಿ ಮುಂಗಡ ಪತ್ರವನ್ನು ಮಂಡಿಸಿದ್ದಾರೆ. ಈ ಮುಂಗಡ ಪತ್ರಗಳಿಗೆ ಆಗಿನ ವಿರೋಧ ಪಕ್ಷದ ನಾಯಕರಾಗಿದ್ದ ಆರ್.ವ್ಹಿ.ದೇಶಪಾಂಡೆಯವರ ಮೆಚ್ಚುಗೆಗೆ ಪಾತ್ರವಾದವು. ೧೯೯೩-೯೪ರ ವಿಶೇಷತೆ ಏನೆಂದರೆ, ಹಣಕಾಸು ಹೇಗೆ ಸೋರಿಕೆಯಾಗುತ್ತದೆ ಎಂಬುದನ್ನು ಸ್ಪಷ್ಟಪಡಿಸಿ ರಾಜ್ಯದ ಆದಾಯ ಹೇಗೆ ಬಲಪಡಿಸಬಹುದೆಂದು ಅಂಕಿ ಅಂಶಗಳ ಮೂಲಕ ತೋರಿಸಿಕೊಟ್ಟಿದ್ದಾರೆ.

ಮೊಯಿಲಿಯವರು ಮುಖ್ಯಮಂತ್ರಿ ಮತ್ತು ಅರ್ಥ ಸಚಿವರಾದ ಸಮಯದಲ್ಲಿ ವಾಸ್ತವಿಕ ಯೋಜನಾ ವೆಚ್ಚವು ಹೆಚ್ಚಾಯಿತು. ಅದರಲ್ಲಿಯೂ ೧೯೯೩-೯೪ನೇ ಸಾಲಿನಲ್ಲಿ ಶೇ.೩೭%ಕ್ಕೆ ಏರಿಕೆಯನ್ನು ಕಂಡಿತು. ಇದು ಕರ್ನಾಟಕದಲ್ಲಿ ಇಲ್ಲಿಯವರೆಗೆ ದಾಖಲೆಯಾದ ಅಂಶವಾಗಿದೆ. ಕರ್ನಾಟಕ ರಾಜ್ಯದ ಒಟ್ಟು ಅಂದಾಜು ವೆಚ್ಚದಲ್ಲಿ ಶೇ.ಪ್ರಮಾಣವು ೧೯೯೨-೯೩ನೇ ಸಾಲಿನಲ್ಲಿ ೬.೭, ೧೯೯೩-೯೪ನೇ ಸಾಲಿನಲ್ಲಿ ೮.೨ ಹಾಗೂ ೧೯೯೪-೯೫ನೇ ಸಾಲಿನಲ್ಲಿ ೮.೧ಆಗಿತ್ತು. ಇದು ಮೊಯಿಲಿಯವರು ಹಣಕಾಸು ಸಚಿವರಾದ ವೇಳೆಯಲ್ಲಿ ಕಂಡು ಬಂದ ದಾಖಲೆ ಪ್ರಮಾಣವಾಗಿದೆ. ಕರ್ನಾಟಕದ ವಾರ್ಷಿಕ ಯೋಜನೆಯ ಅಂದಾಜು ಮೊತ್ತವು ರಾಷ್ಟ್ರೀಯ ಮಟ್ಟದಲ್ಲಿ ೧೯೯೩ಕ್ಕಿಂತ ಪೂರ್ವದಲ್ಲಿ ೬ನೇ ಸ್ಥಾನದಲ್ಲಿತ್ತು.

ಮೊಯಿಲಿಯವರ ಅಧಿಕಾರದಲ್ಲಿ ಅಂದರೆ, ೧೯೯೩-೯೪ರಲ್ಲಿ ಮೊತ್ತವು ಒಂದನೇ ಸ್ಥಾನಕ್ಕೆ ಬಡ್ತಿಯನ್ನು ಪಡೆದುಕೊಂಡಿತು. ಈ ಪ್ರಥಮ ಸ್ಥಾನವು ೧೯೯೪-೯೫ನೇ ಸಾಲಿನವರೆಗೂ ಮುಂದುವರೆಯಿತು. ಆ ಸಮಯದಲ್ಲಿ ಅನೇಕ ರಾಜ್ಯದ ಆದಾಯ ಕೊರತೆಯಿಂದ ಕೂಡಿತ್ತು. ಆದರೆ ಕರ್ನಾಟಕದ ಹಣಕಾಸು ಸಚಿವರಾಗಿದ್ದ ಮೊಯಿಲಿಯವರು ರಾಜ್ಯಕ್ಕೆ ಅಪಾರ ಪ್ರಮಾಣದ ಆದಾಯವನ್ನು ಹೆಚ್ಚಿಸುವುದರಲ್ಲಿ ಯಶಸ್ವಿಯಾದರು. ಇದು ಅವರ ದೂರದೃಷ್ಟಿಕೋನ ವೈಚಾರಿಕ ಚಿಂತನೆಯ ಫಲ ರಾಜ್ಯ ಪರವಾಗಿ ಕಾಳಜಿಯನ್ನು ಸೂಚಿಸುತ್ತದೆ.

ಮೊಯಿಲಿಯವರ ಮತ್ತು ಜನತಾ ಆಡಳಿತದ ಸಂದರ್ಭದೊಡನೆ ರಾಜ್ಯದ ಆರ್ಥಿಕ ಆರೋಗ್ಯದ ಸ್ಥಿತಿಗತಿ.

ವಾರ್ಷಿಕ	ವಿಧ	ಸಾಲಕ್ಕಿಂತ ಹೆಚ್ಚಿನ ಪ್ರಮಾಣದ ಆಸ್ತಿ	ವಾರ್ಷಿಕ ಆರ್ಥಿಕ ಲೆಕ್ಕಾಚಾರದ ವಿವರ
೧೯೯೪-೯೫	ವಾಸ್ತವಿಕ	೭೧೦೦೩.೭೬	೧೯೯೬-೯೭
೧೯೯೫-೯೬	ವಾಸ್ತವಿಕ	೬೫೪೦೬.೨೯	೧೯೯೭-೯೮
೧೯೯೮-೯೯	ವಾಸ್ತವಿಕ	೭೧೭೦೨.೫೪	೨೦೦೦-೦೧
೧೯೯೯-೨೦೦೦	ವಾಸ್ತವಿಕ	೨೯೩೫೬೦.೮೫	೨೦೦೧-೦೨

೩೧-೩-೧೯೯೯ಕ್ಕೆ ಅಂತ್ಯವಾದ ವರ್ಷಕ್ಕೆ ಸಿಎಜಿ ವರದಿಯ ಉಲ್ಲೇಖಿತ ಭಾಗವು ವಾಸ್ತವ ಸ್ಥಿತಿಯ ಪ್ರತಿಬಿಂಬವಾಗಿರುವುದು. ಈ ಮೇಲಿನ ಕೋಷ್ಟಕವು ಸರಕಾರದ ಸಾಲವನ್ನು ತೀರಿಸುವ ಅನುಪಾತ ಸ್ಥಿತಿಯನ್ನು ತೆರೆದಿಡುತ್ತದೆ. ಇದು ಸಾಧಕ ಮತ್ತು ಬಾಧಕವನ್ನು ಒಂದಕ್ಕಿಂತ ಹೆಚ್ಚಿನ ರಾಜ್ಯಸರ್ಕಾರ ಸಾಲವನ್ನು ತೀರಿಸುವ ಮಹತ್ವಾಕಾಂಕ್ಷಿಯ ಶಕ್ತಿಯನ್ನು ತೋರಿಸಿಕೊಡುತ್ತದೆ. ಒಟ್ಟಾರೆಯಾಗಿ ಕಡಿಮೆ ಬಂಡವಾಳ ವೆಚ್ಚವನ್ನು ಮಾಡಿ ಆದಾಯವನ್ನು ವೃದ್ಧಿಸುವ ಆರೋಗ್ಯಕರವಾದ ಕೋಷ್ಟಕ ಇದಾಗಿದೆ. ೧೯೯೦-೯೧ರ ಸಾಲಿನಲ್ಲಿ ೧೩೦೦ಕೋಟಿ ಮೀರಿದೆ. ರಾಜ್ಯ ಯೋಜನಾ ಅಂದಾಜು ವೆಚ್ಚ ೧೯೯೧-೯೨

೧೭೭೪ಕೋಟಿಗೆ ಹೆಚ್ಚಾಯಿತು. ಅಂದರೆ ೧೯೯೦-೯೧ನೇ ಸಾಲಿಗಿಂತ ೪೪೭೪ಕೋಟಿ ಹೆಚ್ಚು ವೆಚ್ಚ ತಗುಲಿತು. ೧೯೯೪-೯೫ರ ಸಾಲಿನಲ್ಲಿ ೨೯೭೪ಕೋಟಿ ಹೆಚ್ಚಾಯಿತು ಇಲ್ಲಿ ೧೯೯೧-೯೨ನೇ ಸಾಲಿಗಿಂತ ೧೭೦೦ಕೋಟಿ ವೆಚ್ಚ ಹೆಚ್ಚಾಯಿತು ಇವೆಲ್ಲವುಗಳನ್ನು ನೋಡಿದಾಗ ವರ್ಷದಿಂದ ವರ್ಷಕ್ಕೆ ಪ್ರಗತಿಯ ವೆಚ್ಚವನ್ನು ಸರ್ಕಾರ ಉಳಿಸಿಕೊಂಡಿರಲಿಲ್ಲ.

ಈ ಮೇಲಿನ ಅಂಶಗಳನ್ನು ಗಮಿಸಿದಾಗ ೧೯೯೩-೯೪ನೇ ಸಾಲಿನಲ್ಲಿ ರಾಷ್ಟ್ರೀಯ ಯೋಜನಾ ಆಯೋಗವು ವಾಸ್ತವಿಕ ಯೋಜನೆಯನ್ನು ೩೦೨೫ಕೋಟಿಗೆ ನಿಗದಿ ಪಡಿಸಿದ್ದು ಎಂ.ವೀರಪ್ಪ ಮೊಯಿಲಿಯವರ ಮುಂದಾಳತ್ವದ ರಾಜ್ಯ ಸರ್ಕಾರದ ಕಾರ್ಯ ವೈಖರಿಯಿಂದಲೇ ವೀರಪ್ಪ ಮೊಯಿಲಿಯವರ ಆರ್ಥಿಕ ಚಿಂತನೆಯ ಫಲವಾಗಿ ಶೇ.೧೫೮ರಷ್ಟು ಅಧಿಕವಾದ ೪೯೪೦ಕೋಟಿ. ರೂ. ಮೊತ್ತವನ್ನು ವೆಚ್ಚ ಮಾಡಿ ಕರ್ನಾಟಕದ ಆರ್ಥಿಕ ಇತಿಹಾಸದಲ್ಲಿ ಮಾತ್ರವಲ್ಲದೆ ದೇಶದ ಯಾವುದೇ ರಾಜ್ಯವು ಈ ಪ್ರಮಾಣದ ದಾಖಲೆ ಮಾಡಿಲ್ಲ.

ಹೀಗೆ ವೀರಪ್ಪ ಮೊಯಿಲಿಯವರು ತಮ್ಮ ರಾಜಕೀಯ ಚಿಂತನೆಗಳನ್ನು ಮೂಡಿಸಿ, ರಾಜ್ಯದ ಆರ್ಥಿಕ ಸ್ಥಿತಿಯನ್ನು ಸುಧಾರಿಸಿ ಹಿಂದೆಂದೂ ಮಾಡದ ಹಣಕಾಸಿನ ನಿರ್ವಹಣೆಯನ್ನು ಮಾಡಿದ್ದಾರೆ. ಕೃಷಿ, ಔದ್ಯಮಿಕ, ಹಾಗೂ ಮುಂತಾದ ಆರ್ಥಿಕ ವಲಯಗಳಲ್ಲಿ ಗಣನೀಯ ಪ್ರಗತಿಯನ್ನು ತಂದು ಆರ್ಥಿಕ ನೀತಿಗೆ ಹೊಸ ಬುನಾದಿಯನ್ನು ಹಾಕಿಕೊಟ್ಟಿದ್ದಾರೆ.

೪. ೩. ೩ ಶೈಕ್ಷಣಿಕ ವಿಚಾರಗಳು

ಶಿಕ್ಷಣ ಮನುಷ್ಯನ ವ್ಯಕ್ತಿತ್ವದ ವಿಕಸನದ ಅನಾವರಣವಾಗಿದೆ. ಹೀಗಾಗಿ ಶಿಕ್ಷಣದಿಂದ ವೃತ್ತಿಪರಿಪೂರ್ಣತೆಗೆ ಹೋಗಲು ಸದಾಕಾಲ ಹಾತೊರೆಯುತ್ತಾನೆ. ಶಿಕ್ಷಣ ಮಾನವನನ್ನು ವಿದ್ಯಾವಂತನನ್ನಾಗಿ, ವಿಚಾರವಂತನನ್ನಾಗಿ, ಸನ್ಮಾರ್ಗದತ್ತ ನಡೆದುಕೊಳ್ಳಲು ಸಹಾಯಕವಾಗುತ್ತದೆ. ಎಂ. ವೀರಪ್ಪ ಮೊಯಿಲಿಯವರು ಕಡು ಬಡತನದಲ್ಲಿ ಹುಟ್ಟಿ, ಗ್ರಾಮೀಣ ಪ್ರದೇಶದಲ್ಲಿ ಶಿಕ್ಷಣವನ್ನು ಪಡೆದು ರಾಜ್ಯ ಮತ್ತು ರಾಷ್ಟ್ರ ರಾಜಕಾರಣದಲ್ಲಿ ಹೆಸರು ಮಾಡಿದವರು. ಬಂಗಾರಪ್ಪ ಸಂಪುಟದಲ್ಲಿ ಶಿಕ್ಷಣ ಸಚಿವರಾಗಿ ಮತ್ತು ಸಂಸದೀಯ ವ್ಯವಹಾರಗಳ ಸಚಿವರಾಗಿದ್ದರು. ಈ ಸಂದರ್ಭದಲ್ಲಿ ಶೈಕ್ಷಣಿಕ ಗುಣ ಮಟ್ಟವನ್ನು ಸುಧಾರಿಸುವ ನಿಟ್ಟಿನಲ್ಲಿ ಹತ್ತು ಹಲವು ಚಿಂತನೆಗಳನ್ನು ಹಾಕಿಕೊಳ್ಳುವುದರ ಮೂಲಕ

ಮೊಯಿಲಿಯವರು ಶಿಕ್ಷಣಕ್ಕೆ ಪ್ರಥಮ ಆದ್ಯತೆ ನೀಡಿರುವುದು ಕಂಡು ಬರುತ್ತದೆ. ಪ್ರತಿಯೊಬ್ಬರು ತನ್ನ ವ್ಯಕ್ತಿತ್ವದ ಆದ್ಯತೆ ಹಾಗೂ ಗುಣ ವಿಶೇಷತೆ ಹೊಂದಿರುತ್ತಾರೆ. ಮತ್ತು ಶಿಕ್ಷಣ ಎನ್ನುವುದು ಒಂದು ಸಂಸ್ಕಾರವಾಗಿದ್ದು ಅದು ಪರಿಪೂರ್ಣತೆಯ ಸಂಸ್ಕೃತಿಯನ್ನು ನೀಡುತ್ತದೆ ಎಂದು ಮೊಯಿಲಿಯವರು ನಂಬಿಕೊಂಡವರು. ಹಾಗಾಗಿ ತಾವು ಬಾಲ್ಯದಲ್ಲಿ ಶೈಕ್ಷಣಿಕವಾಗಿ ಹಲವು ಸಮಸ್ಯೆಗಳನ್ನು ಎದುರಿಸಿಕೊಂಡು, ಶಿಕ್ಷಣದ ಮೂಲಕ ಉತ್ತುಂಗದ ಶಿಖರವನ್ನೇರಿದರು. ಯುವಕರಾಗಿದ್ದ ಸಮಯದಲ್ಲಿ ಮೊಯಿಲಿಯವರು ಸ್ವಾಮಿವಿವೇಕಾನಂದರ ಕೃತಿಗಳನ್ನು ಅಭ್ಯಸಿಸಿದರು. ಅವುಗಳಿಂದ ಪ್ರಭಾವಿತರಾಗಿ ರಾಷ್ಟ್ರಕಟ್ಟುವ ಮಹದಾಸೆಯನ್ನು ಹೊಂದಿದರು. ಯುರೋಪಿನ ಅನೇಕ ನಗರಗಳಲ್ಲಿ ಸಂಚರಿಸಿ ಪ್ರವಾಸ ಮಾಡುವ ಸಂದರ್ಭದಲ್ಲಿ ಅಲ್ಲಿಯ ಜನರ ಸೌಲಭ್ಯಗಳನ್ನು ಗಮನಿಸಿದರು. ಶಿಕ್ಷಣದಿಂದ ವಂಚಿತರಾದ ಕಡುಬಡವರ ಕುರಿತು ವಿಶೇಷ ಚಿಂತನೆಯಲ್ಲಿ ತೊಡಗಿದರು.

ಮೊಯಿಲಿಯವರು ತಮ್ಮದೇ ಆದ ವಿಶಿಷ್ಟ ತಾರ್ಕಿಕತೆಯಿಂದ ಶಿಕ್ಷಣಕ್ಕೆ ಆದ್ಯತೆ ನೀಡಿದರು. ತಮ್ಮ ತತ್ವ ಸಿದ್ಧಾಂತಗಳನ್ನು ಚಿಂತನೆಗಳ ಮೂಲಕ ಉನ್ನತ ಶಿಕ್ಷಣ ಸಚಿವರಾಗಿದ್ದಾಗ ಅವರು ಶೈಕ್ಷಣಿಕ ಆಯೋಗವನ್ನು ಆರಂಭಿಸಿದರು. ಶೋಷಿತರ ಮತ್ತು ದುರ್ಬಲ ವರ್ಗದವರಿಗಾಗಿ ವಿಶೇಷ ಸಾಕ್ಷರತಾ ಅಭಿಯಾನದ ಅಗತ್ಯ ಇದೆ ಎಂದು ಮನಗಂಡು ಆ ನಿಟ್ಟಿನಲ್ಲಿ ಕಾರ್ಯಪ್ರವೃತ್ತರಾದರು. ವಿದ್ಯಾವಂತ ಯುವಕರು ಅತೀ ವೇಗವಾಗಿ ಬೆಳೆಯುತ್ತಿರುವ ಜಾಗತಿಕ ಸಂದರ್ಭದಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನ ಕ್ಷೇತ್ರದ ಜ್ಞಾನವನ್ನು ಪಡೆಯಬೇಕು. ಹಾಗೂ ಸ್ಪರ್ಧಾತ್ಮಕ ಯುಗದಲ್ಲಿ ಉನ್ನತ ಮಟ್ಟದ ಶಿಕ್ಷಣದ ಮೂಲಕ ಬದುಕಿನ ಅಗತ್ಯತೆಗಳನ್ನು ಪೂರೈಸಿಕೊಳ್ಳಬೇಕೆಂಬ ಅಚಲವಾದ ನಿರ್ಧಾರವನ್ನು ಮೊಯಿಲಿಯವರು ಮಾಡಿಕೊಂಡರು.

ಭಾರತ ಸಂವಿಧಾನದಲ್ಲಿ ಅನೇಕ ನಿಯಮವಳಿಗಳಿವೆ. ಅವುಗಳಲ್ಲಿ ದೇಶದ ಶೈಕ್ಷಣಿಕ ಅಭಿವೃದ್ಧಿಯ ನಿರ್ವಹಣೆಗೆ ಸಂಬಂಧಿಸಿದ ಅನೇಕ ಸೂತ್ರಗಳ ಬಗ್ಗೆ ಅಲ್ಲಿ ಚರ್ಚಿಸಲಾಗಿದೆ. ಸಂವಿಧಾನದಲ್ಲಿ ಉಲ್ಲೇಖವಾದಂತೆ ಎಲ್ಲಾ ಮಕ್ಕಳಿಗೂ ಕಡ್ಡಾಯ ಶಿಕ್ಷಣ ಹಾಗೂ ೧೪ವರ್ಷದ ವಯಸ್ಸಿನವರಿಗೆ ಉಚಿತವಾಗಿ ಶಿಕ್ಷಣವನ್ನು ಒದಗಿಸುವ ಅವಶ್ಯಕತೆಯನ್ನು ಕುರಿತು ಚರ್ಚಿಸಲಾಗಿದೆ. ಆ ನಿಟ್ಟಿನಲ್ಲಿ ರಾಜ್ಯ ಹಾಗೂ ಕೇಂದ್ರ ಸರ್ಕಾರ ಶೈಕ್ಷಣಿಕ ಅಭಿವೃದ್ಧಿ ಸಲುವಾಗಿ ಅನೇಕ ಮಾರ್ಗದರ್ಶಿ ಕಾರ್ಯಕ್ರಮ ಅಳವಡಿಸಿಕೊಂಡಿತು. ವೀರಪ್ಪ

ಮೊಯಿಲಿಯವರು ಶಿಕ್ಷಣ ಸಚಿವರಾಗಿದ್ದಾಗ ಅನೇಕ ಹೊಸತು ಪ್ರಯೋಗಗಳನ್ನು, ಶೈಕ್ಷಣಿಕ ಕಾರ್ಯಕ್ರಮಗಳು, ಯೋಜನೆಗಳನ್ನು ಪ್ರಾರಂಭಿಸಿದರು. ೧೯೯೩ರಲ್ಲಿ ರಾಜ್ಯಪಾಲರು ವಿಧಾನ ಸಭೆಯಲ್ಲಿ ರಾಜ್ಯದ ಜನತೆಗೆ ಶಿಕ್ಷಣವು ರಾಜಕೀಯದ ತಳಹದಿಯಾಗಿದೆ. ಈ ಶಿಕ್ಷಣ ಕುರಿತು ರಾಜ್ಯ ಸರ್ಕಾರವು ಮುತುವರ್ಜಿ ವಹಿಸಿ ಕಾರ್ಯಪ್ರವೃತ್ತರಾಗಬೇಕೆಂದು ಕರೆ ನೀಡಿದರು. ಆ ಮೂಲಕವಾಗಿ ಮೊಯಿಲಿಯವರಲ್ಲಿ ವಿವಿಧ ಶೈಕ್ಷಣಿಕ ಕಾರ್ಯಕ್ರಮಗಳು ಚಿಂತನೆಗಳು ಸಾಂಗಯುತವಾಗಿ ಜರುಗಲು ಪ್ರಾರಂಭವಾದವು. ಅವುಗಳಲ್ಲಿ ಪ್ರಮುಖವಾಗಿ ಸಂಪೂರ್ಣ ಸಾಕ್ಷರತಾ ಕಾರ್ಯಕ್ರಮ ಒಂದಾಗಿದೆ. ಮೊಯಿಲಿಯವರು ೧೯೯೧ರಲ್ಲಿ ಗಾಂಧಿಜಯಂತಿಯ ಅಂಗವಾಗಿ ನಡೆದ ಕಾರ್ಯಕ್ರಮದಲ್ಲಿ ತಮ್ಮ ಆಲೋಚನೆಯನ್ನು ಈ ರೀತಿಯಲ್ಲಿ ಸ್ಪಷ್ಟ ಪಡಿಸುತ್ತಾರೆ. "ಪ್ರಾಥಮಿಕ ಶಿಕ್ಷಣದಿಂದ, ಕಾಲೇಜು ಶಿಕ್ಷಣದವರೆಗೆ ನೈತಿಕ ಬೋಧನೆಯು ಪಠ್ಯಕ್ರಮದ ಅಂಗವಾಗಲಿದೆ. ಹೊಸ ಶಿಕ್ಷಣ ನೀತಿಯು ಮಾದಕ ದ್ರವ್ಯವ್ಯಸನ, ಮದ್ಯಪಾನ, ಹೊಗೆಸೊಪ್ಪು ಸೇವನೆ, ಸಮಾಜ ವಿರೋಧಿಯ ಪ್ರವೃತ್ತಿಯ ಹೋರಾಟವನ್ನು ಒಳಗೊಳ್ಳಲಿದೆ[೭]" ಎಂದು ಕರೆಯನ್ನು ನೀಡಿದರು.

ವೀರಪ್ಪ ಮೊಯಿಲಿಯವರು ಸಮಾಜ ಚಿಂತಕರಾಗಿದ್ದುಕೊಂಡು ದೇಶವು ಎದುರಿಸುತ್ತಿರುವ ಸಾಮಾಜಿಕ ಆರ್ಥಿಕ ಸಮಸ್ಯೆಗಳಿಗೆ ಮೂಲಭೂತ ಶಿಕ್ಷಣದ ಬಗ್ಗೆ ಗಾಂಧೀಜಿಯವರ ಚಿಂತನೆಯೊಂದಿಗೆ ಸಮೀಕರಿಸಿಕೊಂಡು ಕಾರ್ಯಪ್ರವೃತ್ತರಾದರು. ಭವಿಷ್ಯದಲ್ಲಿ ಕರ್ನಾಟಕದ ಶೈಕ್ಷಣಿಕ ವಲಯದಲ್ಲಿ ಶಿಕ್ಷಕರ ಕೊರತೆ ಕಾಡುತ್ತಿತ್ತು. ಅರ್ಹತೆ ಮೀಸಲಾತಿ ಸಂದರ್ಶನದ ಮೂಲಕವಾಗಿ ಸಾವಿರಾರು ಶಿಕ್ಷಕರನ್ನು ನೇಮಕಾತಿ ಮಾಡುವುದರೊಂರಿಗೆ ಶಿಕ್ಷಣದ ಗುಣಮಟ್ಟವನ್ನು ಹೆಚ್ಚಿಸಿದರು. ಗ್ರಾಮೀಣ ಪ್ರದೇಶದಲ್ಲಿ ಪ್ರಾಥಮಿಕ, ಪ್ರೌಢಶಾಲೆ ಮತ್ತು ಪದವಿ ಪೂರ್ವ ಕಾಲೇಜುಗಳಿಗೆ ಮಂಜೂರಾತಿಯನ್ನು ಮಾಡಿ, ಗ್ರಾಮೀಣ ಪ್ರದೇಶದ ಮಕ್ಕಳು ಶಿಕ್ಷಣವನ್ನು ಪಡೆದುಕೊಳ್ಳಲು ಶ್ರಮವಹಿಸಿದರು. ಶಿಕ್ಷಕರ ಬೇಡಿಕೆ ಮತ್ತು ಜೇಷ್ಠತಾ ಪಟ್ಟಿಯನ್ನು ಬಿಡುಗಡೆ ಮಾಡುವುದುರ ಮೂಲಕ ಶಿಕ್ಷಕರ ಬಹುದಿನಗಳ ಬೇಡಿಕೆಗೆ ವೇತನ ತಾರತಮ್ಯಕ್ಕೆ ಸ್ಪಂದಿಸಿದರು. ಸ್ವಜನ ಪಕ್ಷಪಾತ ಮತ್ತು ಭ್ರಷ್ಟಾಚಾರ ರಹಿತವಾಗಿ ೮೦೦೦ ಶಿಕ್ಷಕರಿಗೆ ಬಡ್ತಿಯನ್ನು ನೀಡಿದರು.

ಶಿಕ್ಷಣಕ್ಕೆ ಮೂಲಭೂತ ಸೌಲಭ್ಯ ಮತ್ತು ಬೋಧನಾ ಸೌಕರ್ಯಗಳನ್ನು ಹೆಚ್ಚಿಸುತ್ತಾ, ಪ್ರತಿ ವಿಧಾನಸಭಾ ಕ್ಷೇತ್ರದಲ್ಲಿ ಒಂದರಂತೆ ೨೨೪ಮಾದರಿ ಕನ್ನಡ ಮಾಧ್ಯಮ ಶಾಲೆಗಳನ್ನು

ತೆರೆದರು. ಇದು ಆಂಗ್ಲ ಭಾಷಾ ಮಾಧ್ಯಮ ಶಾಲೆಗಳ ಮೇಲೆ ಜನರಿಗಿರುವ ಮೋಹವನ್ನು ಕಡಿಮೆ ಮಾಡಲು ಸಹಾಯಕವಾಯಿತು. ಪ್ರಮುಖವಾಗಿ ಶಾಲಾ ಶಿಕ್ಷಣದ ಉಪಯುಕ್ತತೆಯನ್ನು ಹೆಚ್ಚಿಸಲು ಹಾಗೂ ಗುಣಮಟ್ಟವನ್ನು ಕಾಯ್ದುಕೊಳ್ಳಲು ಅಕ್ಷಯ, ವಿದ್ಯಾವಿಕಾಸ, ಸೇವಾ ಸಹಿತ ತರಬೇತಿ ಹೀಗೆ ಪಠ್ಯ ಮತ್ತು ಪಠ್ಯ ಪೂರಕ ಕಾರ್ಯ ಚಟುವಟಿಕೆಯನ್ನು ಶಿಕ್ಷಣದಲ್ಲಿ ಅಳವಡಿಸಿದರು. ಮೊಯಿಲಿಯವರು ಶಿಕ್ಷಣದ ಸಲುವಾಗಿ ಸಮೀಕ್ಷೆಯನ್ನು ಕೈಗೊಂಡು ಒಂದನೇ ತರಗತಿಯಿಂದ ೫ನೇ ತರಗತಿಯವರೆಗಿನ ವಿದ್ಯಾರ್ಥಿಗಳ ಪೈಕಿ ಶೇ.೬೦%ರಷ್ಟು ವಿದ್ಯಾರ್ಥಿಗಳು ಕಲಿಕಾ ವೈಫಲ್ಯದವರೆಂದು ತಿಳಿದು ಅದರ ನಿವಾರಣೆಗೋಸ್ಕರವಾಗಿ ಪ್ರತಿ ಶಾಲೆಯ ಒಬ್ಬ ಶಿಕ್ಷಕರಿಗೆ ತರಬೇತಿ ನೀಡಲು ನಿರ್ಧರಿಸಿದರು. ಯೋಗಶಿಕ್ಷಣಕ್ಕೆ ಆದ್ಯತೆ ನೀಡಿ "ಶಿಕ್ಷಣ ಸಚಿವರಾಗಿ ಮತ್ತು ಮುಖ್ಯಮಂತ್ರಿಯಾಗಿ ಮೊಯಿಲಿಯವರ ಅಧಿಕಾರ ಅವಧಿಯಲ್ಲಿ ಶಿಕ್ಷಣ ರಂಗಕ್ಕೆ ನೀಡಲಾದ ಕೊಡುಗೆ ಅದ್ಭುತವಾದದ್ದು ಪ್ರಾರಂಭಿಕ ದಿನಗಳಿಂದಲೇ ಅವರು ಶಾಲೆಗಳಿಂದ ಹೊರ ಹೋಗುವ ಪ್ರವೃತ್ತಿಯ ತಡೆಗೆ ಗುಣಮಟ್ಟದ ಶಿಕ್ಷಣ, ವಿದ್ಯಾರ್ಥಿ ವೇತನ ವಿತರಣೆ, ಶಿಕ್ಷಕ ಸಮುದಾಯಕ್ಕೆ ಹೆಚ್ಚಿನ ಸೌಲಭ್ಯ ಅಗತ್ಯವೆಂದು ಭಾವಿಸಿದರು. ಆ ಮೊದಲು ಪಠ್ಯಪುಸ್ತಕಗಳನ್ನು ಸರಕಾರಿ ಮುದ್ರಣಾಲಯದಲ್ಲಿ ಮಾತ್ರ ಮುದ್ರಿಸಲಾಗುತ್ತಿತ್ತು ಮತ್ತು ಸಕಾಲದಲ್ಲಿ ಪಠ್ಯಪುಸ್ತಕಗಳು ಅಲಭ್ಯತೆ ಬಗ್ಗೆ. ಮುದ್ರಣದ ಗುಣಮಟ್ಟದ ಬಗ್ಗೆ ಮುದ್ರಣ ಕಾಗದದ ನಷ್ಟದ ಬಗ್ಗೆ ದೂರುಗಳಿದ್ದವು. ಮೊಯಿಲಿಯವರ ಅವಧಿಯಲ್ಲಿ ಪಠ್ಯಪುಸ್ತಕಗಳ ವಿಕೇಂದ್ರಿಕರಣವಾಯಿತು. ಉತ್ತಮ ಗುಣಮಟ್ಟದ ಪಠ್ಯಪುಸ್ತಕಗಳು, ಉತ್ತಮ ಮುದ್ರಣಗಳು, ಸಕಾಲದಲ್ಲಿ ವಿತರಣೆ ಸಹಿತ ಖಾತ್ರಿಯಾಯಿತು. ಜೊತೆಯಲ್ಲಿ ಮುದ್ರಣ ಕಾಗದದ ನಷ್ಟವನ್ನು ಶೇ.೩೦ರಿಂದ ಶೇ.೩ಕ್ಕೆ ಇಳಿಸಬೇಕೆಂದು ಅವರು ಅಭಿಪ್ರಾಯಪಟ್ಟರು. ಹೀಗೆ ಸರಕಾರಕ್ಕೆ ಕೋಟಿಗಟ್ಟಲೆ ರೂಪಾಯಿಗಳ ಉಳಿತಾಯವಾಯಿತು. ಮೊದಲು ಕರ್ನಾಟಕದಲ್ಲಿ ವಿಶೇಷ ಅರೆಬಿಕ್ ಕೋರ್ಸ್‌ಗೆ ಪುಸ್ತಕಗಳಿರಲಿಲ್ಲ, ಮೊಯಿಲಿಯವರು ಶಿಕ್ಷಣ ಸಚಿವರಾಗಿದ್ದಾಗ ವಿಶೇಷ ಅರೆಬಿಕ್ ಕೋರ್ಸುಗಳಿಗೆ ೧೪ ಪಠ್ಯಗಳನ್ನು ಮುದ್ರಿಸಲಾಯಿತು. ಇದು ವಿದ್ಯಾರ್ಥಿ ಸಮುದಾಯದ ಭವಣೆ ನೀಗಿಸಿದ್ದು ಈ ಪುಸ್ತಕಗಳು ಈಗಲೂ ಬಳಕೆಯಲ್ಲಿವೆ[೮]".

ಸಂಪೂರ್ಣ ಸಾಕ್ಷರತಾ ಕಾರ್ಯಕ್ರಮಗಳು ವೀರಪ್ಪ ಮೊಯಿಲಿಯವರಕ್ಕಿಂತಲೂ ಪೂರ್ವದಿಂದ ಪ್ರಾರಂಭಗೊಂಡಿತು. ಆದರೆ ಮೊಯಿಲಿಯವರ ಉತ್ಸಾಹದಿಂದ ಅದು ತನ್ನ ವೇಗವನ್ನು ಹೆಚ್ಚಿಸಿಕೊಂಡಿತು ಮೊದಲು ಕೆಲವು ಜಿಲ್ಲೆಗಳಿಗೆ ಪ್ರಾಯೋಗಿಕವಾಗಿ ಈ

ಕಾರ್ಯಕ್ರಮವನ್ನು ಪ್ರಾರಂಭಿಸಿದರು. ಆನಂತರ ಸಂಪೂರ್ಣ ಸಾಕ್ಷರತಾ ಕಾರ್ಯಕ್ರಮವನ್ನು ರಾಜ್ಯಾದ್ಯಂತ ವಿಸ್ತರಿಸಿ ಯಶಸ್ವಿಗೊಳಿಸಿದರು.

೪.೩.೪ ಆಡಳಿತ ಸುಧಾರಣೆಗಳು

ಎಂ. ವೀರಪ್ಪ ಮೊಯಿಲಿಯವರು ರಾಜಕೀಯ ಜೀವನದಲ್ಲಿ ರಾಜ್ಯ ಸರ್ಕಾರ ಮತ್ತು ಕೇಂದ್ರ ಸರ್ಕಾರದಲ್ಲಿ ಹಲವು ಹುದ್ದೆಯನ್ನು ಏರಿದವರು. ತಮ್ಮ ಅಧಿಕಾರ ಅವಧಿಯಲ್ಲಿ ಹತ್ತು ಹಲವು ಆಡಳಿತ ಸುಧಾರಣೆ ಕಂಡುಕೊಂಡವರು. ಸಮಾಜಮುಖಿಯಾದ ಚಿಂತನೆಯ ಮೂಲಕ ಆಡಳಿತ ಚುಕ್ಕಾಣಿಯನ್ನು ಸಮರ್ಥವಾಗಿ ನಿಭಾಯಿಸಿದವರು. ಶ್ರೀಯುತರು ಹಣಕಾಸು ಸಚಿವರಾಗಿ, ಶಿಕ್ಷಣ ಸಚಿವರಾಗಿ, ಮುಖ್ಯಮಂತ್ರಿಯಾಗಿ ಕೇಂದ್ರ ಕಾನೂನು ಸಚಿವರಾಗಿ, ಆಡಳಿತ ಸುಧಾರಣೆಗಾಗಿ ತಮ್ಮದೇ ಆದ ಚಿಂತನೆಯನ್ನು ರೂಪಿಸಿಕೊಂಡವರು. ಸದ್ಯ ಕಾರ್ಪೋರೇಟ್ ಸಚಿವರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಆ ಮೂಲಕವಾಗಿ ಮೊಯಿಲಿಯವರು ಚಿಂತನೆಗಳಿಗೆ ವಿಸ್ತೃತ ರೂಪವನ್ನು ನೀಡಿದ್ದಾರೆ. ಅವರ ಆಡಳಿತದ ಪ್ರಮುಖ ಗುರಿಯೆಂದರೆ, ಮೊದಲು ಸಾರ್ವಜನಿಕ ಅಭಿಪ್ರಾಯಗಳಿಗೆ ಆದ್ಯತೆ ನೀಡುವುದು, ಅದರಂತೆ ಆಡಳಿತದ ದಾರಿಯನ್ನು ಕಂಡುಕೊಳ್ಳುವುದು.

ಕೆಲವರಿಗೆ ಅಧಿಕಾರ ಕಳೆದುಕೊಂಡರೆ ಹುಚ್ಚು ಹಿಡಿಯುತ್ತದೆ. ಅಪರೂಪಕ್ಕೆ ಒಂದಿಬ್ಬರು ಅಧಿಕಾರವನ್ನು ಕಳೆದುಕೊಂಡಾಗಲೇ ಹೆಚ್ಚು ಬೆಳೆಯುತ್ತಾರೆ ಅಂಥವರಲ್ಲಿ ಮೊಯಿಲಿಯವರೂ ಒಬ್ಬರು. ಮೊಯಿಲಿಯವರು ರಾಜಕಾರಣಗಳಿಗೆ ಒಂದು ಕಿವಿಮಾತು ಹೇಳಿರುವರು.

> "ರಾಜತ್ವದಧಿಕ ವೈಭೋಗ ಸಂಪದದ
> ಆಚೆಗೂ ಬದುಕಿಹುದು ಎನ್ನುವ ಪ್ರಜ್ಞೆಯು ಬೇಕು
> ಅಲ್ಲದೊಡೆ ಅಧಿಕಾರ ಕಳೆದು ಹೋಗುತಲಾಗ
> ಮಾನಸಿಕ ಕ್ಷೋಭೆಯೊಳು ಬಾಳು ಬರಡಾಗುವುದು"

ಸಮಾಜದ ಹಿಂದುಳಿದವರ ಅಭಿವೃದ್ಧಿಗಾಗಿ ಕೆಲವು ಕಾರ್ಯಯೋಜನೆಗಳನ್ನು ರೂಪಿಸಿ ಪರಿಣಾಮಕಾರಿಯಾಗಿ ಅವುಗಳನ್ನು ಅನುಷ್ಠಾನಕ್ಕೆ ತರಲು ಪ್ರಯತ್ನಿಸಿದವರು. ಬಡಜನತೆಗೆ ಮನೆಗಳ ನಿರ್ಮಾಣ, ನಿವೇಶನ ಹಂಚಿಕೆ ಹಾಗೂ ಕೈಗಾರಿಕಾ, ಕೃಷಿ

ಚಟುವಟಿಕೆಗಳಲ್ಲಿ ಸಹಾಯಕವಾದ ಚಿಂತನೆಯ ಕಾರ್ಯಯೋಜನೆಯನ್ನು ರೂಪಿಸಿಕೊಂಡವರು. ಆಗಿನ ಸಂದರ್ಭದಲ್ಲಿ ಜಲ ವಿವಾದಕ್ಕೆ ತೆರೆ ಎಳೆದು ರೈತರ ಜಮೀನುಗಳಿಗೆ ಅನ್ಯಾಯವಾಗದಂತೆ ನೀರಾವರಿ ಯೋಜನೆಗಳನ್ನು ಪೂರ್ಣಗೊಳಿಸುವುದರ ಮೂಲಕ ಜಲ ಸಮಸ್ಯೆಯಂತಹ ಜಟೀಲವಾದ ವಿವಾದಗಳನ್ನು ಪರಿಹರಿಸಿದರು. ಅವುಗಳಲ್ಲಿ ಕಾವೇರಿ ವಿವಾದ, ಮಂಡ್ಯ ಮತ್ತು ಮೈಸೂರು ಪ್ರದೇಶದ ಜನರ ಆಶೋತ್ತರಗಳನ್ನು ಅನ್ಯಾಯವಾಗದಂತೆ, ನ್ಯಾಯಯುತವಾಗಿ ಪ್ರಾಮಾಣಿಕವಾಗಿ ಪ್ರಯತ್ನ ಮಾಡಿದವರು. ಉತ್ತರ ಕರ್ನಾಟಕದ ಜೀವನದಿಯಾದ ಕೃಷ್ಣಾ ನದಿಯ ನೀರನ್ನು 'ಬಚಾವತ್ ತೀರ್ಪಿನ' ಆಧಾರದಲ್ಲಿ ಆ ಭಾಗದ ಜನತೆಗೆ ಸಮಸ್ಯೆಯಾಗದ ಹಾಗೆ ನೀರಿನ ವಿವಾದವನ್ನು ಬಗೆಹರಿಸುವಲ್ಲಿ ಶ್ರಮಿಸಿದರು. ಮೊಯಿಲಿಯವರು ೧೯೯೨ರಲ್ಲಿ ಮುಖ್ಯಮಂತ್ರಿಯಾಗಿದ್ದಾಗ ಸಾರ್ವಜನಿಕ ಸಮಸ್ಯೆಗಳನ್ನು ಬಗೆಹರಿಸುವುದರ ಮೂಲಕ ಮುಖ್ಯಮಂತ್ರಿ ಹುದ್ದೆಯನ್ನು ಜವಾಬ್ದಾರಿಯುತವಾಗಿ ನಿಭಾಯಿಸಿದರು. ರಾಜ್ಯದ ಆರ್ಥಿಕ ಸ್ಥಿತಿಗತಿಗಳನ್ನು ಸುಧಾರಿಸಬೇಕಾಗಿತ್ತು. ನೂರಾರು ಕೋಟಿ ಅಭಿವೃದ್ಧಿ ಕಾರ್ಯಗಳ ಹಣದ ಬಿಲ್ ಪಾವತಿ ಮಾಡದೇ ಹಾಗೆಯೇ ಉಳಿದುಕೊಂಡಿತ್ತು. ಖಜಾನೆಯಲ್ಲಿ ಹಣ ಇರಲಿಲ್ಲ. ಇಂತಹ ಸಮಯದಲ್ಲಿ ಆ ಎಲ್ಲಾ ಮೊತ್ತದ ಬಿಲ್ ಪಾವತಿಯನ್ನು ಸರಿದೂಗಿಸಿ, ಸಮಸ್ಯೆಗಳನ್ನು ಸವಾಲೆಂದು ಸ್ವೀಕರಿಸಿ ಅದರ ಯಶಸ್ವಿಯನ್ನು ಪಡೆದರು.

ಮೊಯಿಲಿಯವರು ಮುಖ್ಯಮಂತ್ರಿಗಳಾಗಿ, ಜಿಡ್ಡುಗಟ್ಟಿದ ಆಡಳಿತ ಯಂತ್ರ ಸುಧಾರಣೆ ಮಾಡುವುದು ಅವಶ್ಯವೆಂದು ಅರಿತುಕೊಂಡು ಆಡಳಿತ ಯಂತ್ರ ಚುರುಕುಮುಟ್ಟಿಸುವ ನಿಟ್ಟಿನಲ್ಲಿ ಕಡತಗಳ ವಿಲೇವಾರಿ ಕ್ಷಿಪ್ರಗತಿಯಲ್ಲಿ ಮಾಡುತ್ತಿದ್ದರು. ಜನತೆಯ ಆದ್ಯತೆಗೆ ಅನುಗುಣವಾಗಿ ಅವರ ಬೇಡಿಕೆಗಳನ್ನು ಪರಿಹರಿಸುತ್ತಿದ್ದರು. ರಾಜ್ಯದಲ್ಲಿ ಸಿ.ಬಿ.ಐ. ತನಿಖೆಗೆ ರಾಜ್ಯ ಸರ್ಕಾರದ ಪೂರ್ವಾನುಮತಿ ಅಗತ್ಯವಿಲ್ಲವೆಂದು ಅವರು ಮುಖ್ಯಮಂತ್ರಿಯಾದಾಗ ನಿರ್ಣಯ ತೆಗೆದುಕೊಂಡಿದ್ದರು. ಅಂದರೆ ರಾಜ್ಯಸರ್ಕಾರದ ಪೂರ್ವಾನುಮತಿ ಎಂಬುದು ಆಡಳಿತದ ಪಾರದರ್ಶಕಕ್ಕೆ ಮಾರಕವಾಗಿದ್ದಾಗಿದೆ. ಸಿ.ಬಿ.ಐ. ಇಲಾಖೆ ಸ್ವತಂತ್ರವಾಗಿ ಕಾರ್ಯಪ್ರವೃತ್ತರಾಗಿ ಮುನ್ನಡೆಯಬೇಕು ಹಾಗಾಗಿ ಮೊಯಿಲಿಯವರು ಆಡಳಿತದಲ್ಲಿ ಪಾರದರ್ಶಕತೆಯನ್ನು ತರಲು ಈ ಕ್ರಮವನ್ನು ಕೈಗೊಂಡರು.

ಮೊಯಿಲಿಯವರು ಮುಖ್ಯಮಂತ್ರಿಯಾದಾಗ ಅನೇಕ ಪ್ರಾಕೃತಿಕ ವಿಕೋಪಗಳು ಜರುಗಿದವು. ಆ ಸಂದರ್ಭದಲ್ಲಿ ಸಂತ್ರಸ್ತರಿಗೆ ಪರಿಹಾರವನ್ನು ಒದಗಿಸುವುದು ಆದ್ಯಕರ್ತವ್ಯವಾಯಿತು. ಮೃತಪಟ್ಟವರ ವಾರಸುದಾರರಿಗೆ ಈ ಹಿಂದೆ ನೀಡುತ್ತಿದ್ದ ೨೦,೦೦೦ರೂ.ಗಳ ಮೊತ್ತವನ್ನು ೧ಲಕ್ಷದವರೆಗೆ ಏರಿಸಿ ಸಂತ್ರಸ್ತರಿಗೆ ಈ ಪರಿಹಾರ ನಿಧಿಯು ಸಮರ್ಪಕವಾಗಿ ತಲುಪುವಂತೆ, ಸಮಾರೋಪಾದಿಯಲ್ಲಿ ತಮ್ಮ ಆಡಳಿತ ಕಾರ್ಯವನ್ನು ಮೊಯಿಲಿಯವರು ಸಮರ್ಥ ರೀತಿಯಲ್ಲಿ ನಿರ್ವಹಿಸಿದರು. ಸಾಕಷ್ಟು ಆಡಳಿತದ ಅನುಭವ ಹೊಂದಿರುವ ಶ್ರೀಯುತರು ಕೇಂದ್ರ ಆಡಳಿತ ಸುಧಾರಣಾ ಆಯೋಗದ ಅಧ್ಯಕ್ಷರಾಗಿ ಕಾರ್ಯನಿರ್ವಹಿಸುವುದರ ಮೂಲಕ ಕೇಂದ್ರ ಸರ್ಕಾರಕ್ಕೆ ಮೂರು ನೂರು ಪುಟಕ್ಕೂ ಹೆಚ್ಚು ಒಳಗೊಂಡ "ಆಡಳಿತ ಸುಧಾರಣಾ ಸಲಹಾ ವರದಿ"ಯನ್ನು ನೀಡಿದ್ದಾರೆ. ಮೊಯಿಲಿಯವರ ಮುಂದಾಳತ್ವದಲ್ಲಿ ಈ ಆಯೋಗವು ನೂರಾರು ಮೌಲ್ಯಯುತವಾದ ಸಲಹೆಯನ್ನು ತನ್ನ ವರದಿಯಲ್ಲಿ ಹಾಕಿಕೊಳ್ಳುವುದರ ಮೂಲಕ ಆಡಳಿತ ಸುಧಾರಣೆ ಮತ್ತು ಪ್ರಜೆಗಳ ಹಿತಾಶಕ್ತಿ, ದುಂದು ವೆಚ್ಚಕ್ಕೆ ಕಡಿವಾಣ, ಪಾರದರ್ಶಕತೆ, ಶೀಘ್ರನ್ಯಾಯ ಮುಂತಾದ ಸಲಹೆಗಳನ್ನು ಆ ವರದಿಯಲ್ಲಿ ಉಲ್ಲೇಖಿಸಿದ್ದಾರೆ.

ಮೊಯಿಲಿಯವರು ಕೇಂದ್ರ ಆಡಳಿತ ಸುಧಾರಣೆ ಆಯೋಗದ ಅಧ್ಯಕ್ಷರಾದಾಗ ಆ ಆಯೋಗವು ಮಂಡಿಸಿದ ವರದಿಯ ಪ್ರಮುಖ ಅಂಶಗಳು ಈ ರೀತಿಯಾಗಿವೆ.

೧) ಭಾರತ ಸರ್ಕಾರದ ಸಂಘಟನಾತ್ಮಕ ರಚನೆ ಹೇಗಿರಬೇಕೆಂಬುವುದಕ್ಕೆ ಕೆಲವು ಸೂತ್ರಬದ್ಧವಾದ ಅಂಶಗಳನ್ನು ನೀಡಿದ್ದಾರೆ.

- ಮಂತ್ರಿಗಳು ಮತ್ತು ಇಲಾಖೆಗಳ ಪುನರ್ ಸಂಘಟನೆಯಾಗಬೇಕು. ಅದಕ್ಕೆ ಸಂಬಂಧಿಸಿದ ಕೆಲವು ಸಲಹೆಗಳನ್ನು ನೀಡಿದ್ದಾರೆ.
- ಮಂತ್ರಿಗಳು ಮತ್ತು ಇಲಾಖೆಗಳ ಸಹಯೋಗ ಗಟ್ಟಿಯಾಗಬೇಕು. ಪ್ರಶಾಸನ/ಆಳ್ವಿಕೆಯ ಪಾತ್ರದ ವಿಕಸಿತ ಸಂದರ್ಭದಲ್ಲಿ ಮತ್ತು ಪ್ರಧಾನ ಸಹಯೋಗ ಅವಶ್ಯವಾದುದ್ದು. ಪುನರ್‌ಭೆಟ್ಟಿ ಪುನರ್ ವ್ಯಾಖ್ಯಾನ ಅವಶ್ಯವಾದದ್ದು.
- ಮಾನವನ ಶಕ್ತಿಯೋಜನೆ, ಮತ್ತು ಕಾರ್ಯವಿಧಾನದ ಪ್ರಕ್ರಿಯೆ ಪುನರ್ ಯೋಜಿತವಾಗಿ ಕೂಡಬೇಕು.

- ಜಾಗತಿಕ ಐಕ್ಯತೆ, ಹಾಗೂ ಮಾರುಕಟ್ಟೆಗಳ ಸೃಷ್ಟಿ ಮತ್ತು ಉದಾರೀಕರಣದ ಆಧುನಿಕ ಸಂದರ್ಭದಲ್ಲಿ ಆಡಳಿತ ಸೇವೆಗಳ ಸ್ಥಿತಿಗೆ ಕೆಲವು ಸೂಚನಾ ಮಾರ್ಗಗಳನ್ನು ತರಬೇಕು.

- ಕಾಲಘಟ್ಟಗಳ ಪರಿಸರಕ್ಕೆ ಅನುಗುಣವಾಗಿ ಪ್ರಶಾಸನದ ಪ್ರಸ್ತುತ ಪದ್ಧತಿಯನ್ನು ಉತ್ತಮವಾಗಿ ಸರಿಹೊಂದುವಂತೆ ಪರೀಕ್ಷಿಸಬೇಕು.

- ಕೆಲ ಸರ್ಕಾರಿ ಕಾಯ್ದೆಗಳ ಪರಿಮಿತಿ ಅಗತ್ಯವಾಗಿ ಅಥವಾ ಅಗತ್ಯ ಇರುವಲ್ಲಿ ಕಡಿಮೆ ಮಾಡಬೇಕಾದ ಸಾಧ್ಯತೆಯ ಬಗೆಗೆ ಸೂಚಿಸುವುದು ಸೂಕ್ತವಾಗಿದೆ.

- ಆಡಳಿತ ವ್ಯವಸ್ಥೆಯನ್ನು ದಕ್ಷವಾಗಿ, ಆರ್ಥಿಕವಾಗಿ, ಸೂಕ್ಷ್ಮಗ್ರಾಹಿ ಸ್ವಚ್ಛಂದತೆಯ ಮೂಲಕ ವಸ್ತು ನಿಷ್ಠವಾಗಿ, ವೇಗವಾದ ಆಡಳಿತಕ್ಕೆ ಪರಿಮಿತಿಯನ್ನು ಬಲಪಡಿಸುವುದು ಮುಖ್ಯವಾಗಿದೆ.

ಸರ್ಕಾರದ ಈ ಅಂಶಗಳು ಸೂಕ್ತವಾಗಿ ಜಾರಿಗೆ ಬಂದರೆ, ಸದೃಢವಾದ ಸರ್ಕಾರದ ಆಡಳಿತ ಮುನ್ನಡೆಯುವಲ್ಲಿ ಯಾವುದೇ ಸಂಶಯವಿಲ್ಲ.

೨) ಸರ್ಕಾರದ ಆಳ್ವಿಕೆಯ ನೀತಿ ನಿಯಮಗಳು, ಸೂಕ್ಷ್ಮ ಮತ್ತು ಕಾನೂನಿನ ಚೌಕಟ್ಟಿನಲ್ಲಿ ಒಳಗೊಂಡಿರುವಂತಹದ್ದು, ಸರ್ಕಾರ ತನ್ನ ಆಡಳಿತದ ನಿರ್ವಹಣೆಯಲ್ಲಿ ಸೂಕ್ಷ್ಮವಾದ ನೀತಿ ನಿಯಮಗಳನ್ನು ಅನುಸರಿಸಿಕೊಂಡು ಹೋಗುವುದು ಪಾರದರ್ಶಕತೆಯ ಹಿನ್ನೆಲೆಯಲ್ಲಿ ಅವಶ್ಯವಾಗಿದೆ.

- ಭ್ರಷ್ಟಾಚಾರವನ್ನು ತಡೆಯುವುದು ಮತ್ತು ಜನರಲ್ಲಿ ಜಾಗೃತಿ ಉಂಟುಮಾಡುವುದು.

- ಭ್ರಷ್ಟಾಚಾರದಂತಹ ಪಿಡುಗನ್ನು ಸಂಪೂರ್ಣವಾಗಿ ಮಟ್ಟ ಹಾಕಲು ನಾಗರಿಕರು ಪ್ರಾಮಾಣಿಕವಾಗಿ ಕಾರ್ಯನಿರ್ವಹಿಸುವುದು, ಕಾರ್ಯನಿರ್ವಹಣೆಯ ಆಡಂಬರವನ್ನು ಮಿತವ್ಯಯಗೊಳಿಸಲು ವಿಶೇಷ ಜಾಗೃತಿ ಮೂಡಿಸುವುದು.

- ಭ್ರಷ್ಟಾಚಾರಿಯಾದವನನ್ನು ವ್ಯವಸ್ಥಿತವಾಗಿ ಗುರುತಿಸುವ ಹಾಗೂ ಶಿಕ್ಷಿಸುವ ಕೆಲಸವಾಗಬೇಕು.

- ಭ್ರಷ್ಟಾಚಾರ ನಡೆಯಲು ದಾರಿ ಮಾಡಿಕೊಡುವ ಸಂಗತಿಗಳನ್ನು ಪ್ರಮುಖವಾಗಿ ಗುರತಿಸಬೇಕು.

- ಭ್ರಷ್ಟಾಚಾರವನ್ನು ಹತ್ತಿಕ್ಕಲು ನಿರಂಕುಶ ನಿರ್ಣಯ ತೆಗೆದುಕೊಳ್ಳಲು ಮಾನದಂಡಗಳು ಚಾಲ್ತಿಗೆ ಬರಬೇಕು.

- ಸ್ಟೇಕ್ ಹೋಲ್ಡರ್ಸ್‌ಗಳ ಜೊತೆ ಪರಾಮರ್ಶನೆ ಪುನರಾವಲೋಕನಕ್ಕಾಗಿ ಒಂದು ಮಾದರಿಯ ಚೌಕಟ್ಟನ್ನು ರೂಪಿಸುವುದು.

- ಶಾಶ್ವತ ನಾಗರಿಕ ಸೇವೆ ಮತ್ತು ರಾಜಕೀಯ ಕಾರ್ಯನಿರ್ವಹಕ ಇವೆರಡರ ನಡುವೆ ಉತ್ತಮವಾದ ಸಂಬಂಧವಿರಬೇಕು.

- ಸಾಂಸ್ಥಿಕ ವ್ಯವಸ್ಥೆಗಳ ಸುಧಾರಣೆ ಮೂಲಕ ನಾಗರಿಕ ಸೇವೆ ಮತ್ತು ರಾಜಕೀಯ ನಿರ್ವಹಣೆಗಳ ನಡುವೆ ದಕ್ಷ ಮತ್ತು ಏಕತೆಯ ಸಂಬಂಧವನ್ನು ಸೂಚಿಸುವುದು.

- ಸರಕಾರದ ಅಧೀನ ಅಂಗಗಳಿಗೆ ಕೆಲ ನಡುವಳಿಕೆಯ ನಿಯಮಗಳನ್ನು ಸೂಚಿಸುವುದು.

ಹೀಗೆ ಸರ್ಕಾರ ತನ್ನ ಆಳ್ವಿಕೆಯಲ್ಲಿ ಕೆಲ ಸುಧಾರಿತ ಸೂಚಿತ ಮಾನದಂಡಗಳನ್ನು ಅಳವಡಿಸಿಕೊಳ್ಳುವುದು ಸೂಕ್ತ ಎಂಬುದನ್ನು ಈ ಮೇಲಿನ ಅಂಶಗಳು ಸ್ಪಷ್ಟಪಡಿಸುತ್ತವೆ.

೩) ಉದ್ಯೋಗ ಮಂಡಳಿಯ ಆಡಳಿತಕ್ಕೆ ಮೆರಗುಕೊಡುವ ಕಾರ್ಯನಡೆಯಬೇಕಾಗಿದೆ. ಅದಕ್ಕೆ ಸಂಬಂಧಿಸಿದ ಕೆಲ ಅಂಶಗಳನ್ನು ಮೊಯಿಲಿಯವರ ನೇತೃತ್ವದ ಸಲಹಾ ಸಮಿತಿಯ ವರದಿಯಲ್ಲಿ ಕಂಡುಕೊಳ್ಳಲಾಗಿದೆ.

- ನೇಮಕಾತಿಗೆ ಸಂಬಂಧಿಸಿದ ಪ್ರಕ್ರಿಯೆಯಲ್ಲಿ ಅದರ ನೀತಿಯನ್ನು ಪುನರ್ ವಿಮರ್ಶಿಸುವುದು. ಹಾಗೂ ನೇಮಕಾತಿಯ ತರಬೇತಿಯ ಮಾನದಂಡವನ್ನು ಗುರುತಿಸುವುದು ಮತ್ತು ತರಬೇತಿಯ ವಿಧಗಳ ಜೊತೆಗೆ ಸ್ಥಳ ನಿಯೋಜನೆ ಹಾಗೂ ಅಪೇಕ್ಷಿತ ಸೂಚಿತವಾದ ಬದಲಾವಣೆಗಳನ್ನು ಪರಿಹರಿಸುವುದು

- ಸರ್ಕಾರಿ ಆಡಳಿತದ ನೌಕರರಾದ ನಾಗರಿಕ ಸೇವಕರ ಕಾರ್ಯ ನಿರ್ವಹಣೆ ದಕ್ಷತೆ ಹೆಚ್ಚಿಸಲು ಸೂಚನೆಗಳನ್ನು ನೀಡುವುದು.

- ವೃತ್ತಿ ಬೆಳವಣಿಗೆಗೆ ಪ್ರೇರಣೆ ಹಾಗೂ ಉತ್ಪದನಾ ಹೆಚ್ಚಳವನ್ನು ಮುಖ್ಯವಾಗಿರಿಸಿಕೊಂಡು ಆಡಳಿತದ ಪರಿಧಿಯ ಸುಧಾರಿತ ಪದ್ಧತಿಗಳನ್ನು ಅಳವಡಿಸಿಕೊಳ್ಳುವುದು

- ಸೂಕ್ತ ಮಧ್ಯಸ್ತಿಕೆಗಳ ರಣನೀತಿ ತಂತ್ರಗಳ ಮೂಲಕ ನಾಗರಿಕ ಸೇವಕರ ಕೌಶಲ್ಯವನ್ನು ಮತ್ತು ಸಾಮರ್ಥ್ಯಗಳನ್ನು ಉನ್ನತೀಕರಿಸುವುದಕ್ಕಾಗಿ ಈ ತಂತ್ರವನ್ನು ಅಳವಡಿಸುವುದು ಸೂಕ್ತವಾಗಿದೆ.

- ಸಾಮಾಜಿಕ, ಆರ್ಥಿಕ ಉದ್ದೇಶಗಳಿಗೆ ನಾಗರಿಕ ಸೇವಕರ ಮತ್ತು ಸರ್ಕಾರಿ ಉದ್ಯೋಗಿಗಳ ಕಾರ್ಯನಿರ್ವಹಣೆಯು ಕೂಡಿಕೊಂಡು ನಡೆದರೆ, ಫಲಿತಾಂಶ ಸೂಕ್ತವಾಗಿ ಹೊರಬರುತ್ತದೆ.

ಹೀಗೆ ಉದ್ಯೋಗ ಮಂಡಳಿಯ ಆಡಳಿತವನ್ನು ಚುರುಕುಗೊಳಿಸಲು ಮಹತ್ವದ ಅಂಶಗಳನ್ನು ಜಾರಿಗೊಳಿಸಿದರೆ ಆಡಳಿತವು ಕಾರ್ಯಶೀಲವಾಗುವುದೆಂದು ಸಲಹಾ ಸಮಿತಿಯ ಮೂಲಕ ಮೊಯಿಲಿಯವರು ಸಿಫಾರಸ್ಸು ಮಾಡಿದ್ದಾರೆ.

೪) ಆರ್ಥಿಕ ಕಾರ್ಯನಿರ್ವಹಣೆಯ ಪದ್ಧತಿಯಲ್ಲಿ ಸುಧಾರಣೆ ತರುವುದು ಮತ್ತು ಆರ್ಥಿಕ ವ್ಯವಸ್ಥೆಯನ್ನು ಬಲಪಡಿಸುವುದು.

- ಆರ್ಥಿಕ ಕಾರ್ಯ ನಿರ್ವಹಣಾ ವ್ಯವಸ್ಥೆಯಲ್ಲಿ ಕಾರ್ಯಕ್ರಮಗಳಿಗೆ ಯೋಜನೆಗಳಿಗೆ ಬಂಡವಾಳ ಬರುವಿಕೆಯನ್ನು ನಿರ್ದಿಷ್ಟಪಡಿಸುವುದು ಹಾಗೂ ಕ್ರಿಯಾ ಯೋಜನೆಯ ಉದ್ದೇಶಕ್ಕಾಗಿ ಲೆಕ್ಕ ಪತ್ರಗಳನ್ನು ಸಿದ್ದಪಡಿಸುವಿಕೆ ಮತ್ತು ಕಾಲಕ್ಕನುಸಾರವಾಗಿ ವ್ಯವಸ್ಥಿತವಾಗಿ ಮತ್ತು ಅವಶ್ಯಕವಾದ ಮಾಹಿತಿಯನ್ನು ದಾಖಲೆ ಪತ್ರಗಳನ್ನು ಸೂಕ್ತವಾಗಿ ಕಾಪಾಡುವುದು.

- ನಿರ್ದಿಷ್ಟ ಉದ್ದೇಶಗಳಿಗಾಗಿ ಒದಗಿಸಿದ ಬಂಡವಾಳವನ್ನು ಸರಿಯಾಗಿ ಬಳಕೆ ಮಾಡಿಕೊಳ್ಳುವ ನಿಟ್ಟಿನಲ್ಲಿ ಅಭಿವೃದ್ಧಿಸಿದ ಬೆಂಚ್‌ಮಾರ್ಕ್‌ಗೆ ಅನುಗುಣವಾಗಿ ಕಡತಗಳ ಬಟವಡೆಯ ವೆಚ್ಚವನ್ನು ಪರೀಕ್ಷಿಸಲಿಕ್ಕೆ ಆಂತರಿಕ ಲೆಕ್ಕ ಶೋಧನಾ ಪದ್ಧತಿಯನ್ನು ಬಲಪಡಿಸಬೇಕು.

- ಬಾಹ್ಯ ಲೆಕ್ಕ ಶೋಧನೆಯ ಸಂವಿಧಾನಾತ್ಮಕ ಪದ್ಧತಿ ಹಾಗೂ ಪತ್ರ ಬಟವಡೆಯ ತೆರಿಗೆ ಕುರಿತು ಕಾರ್ಯಕ್ರಮಗಳ ಪ್ರಭಾವ ಕುರಿತು ಆರ್ಥಿಕ ನಿರ್ವಹಣಾ ಪದ್ಧತಿಗಳನ್ನು ಬಲಪಡಿಸುವುದು ಸೂಕ್ತ

ಹೀಗೆ ವೀರಪ್ಪ ಮೊಯಿಲಿಯವರು ಆರ್ಥಿಕ ವ್ಯವಸ್ಥೆಯಲ್ಲಿಯೂ ಅನೇಕ ಸುಧಾರಣೆಗಳ ಸಲಹೆ ನೀಡಿದ್ದಾರೆ.

೫) ರಾಜ್ಯ ಮಟ್ಟದಲ್ಲಿ ಪರಿಣಾಮಕಾರಿಯಾಗಿ ಆಡಳಿತ ನಿರ್ವಹಿಸಲು ರಾಜ್ಯ ಆಡಳಿತ ಸಲಹಾ ವರದಿಯಲ್ಲಿ ಸೂಚಿಸಿದ್ದಾರೆ. ಆಡಳಿತ ವೈಖರಿಯನ್ನು ಬದಲಾವಣೆ ತರುವ ಸಲಹೆಗಳು ಇಂತಿವೆ.

- ರಾಜ್ಯ ಆಡಳಿತ ಮಟ್ಟದಲ್ಲಿ ಊಹಿಸಿದ ಫಲಿತಾಂಶಗಳನ್ನು ಅಥವಾ ಯೋಚಿಸಿದ ಕಾರ್ಯ ಸಾಧಿಸಲಿಕ್ಕೆ ಸೂಕ್ತವಾದ ಬದಲಾವಣೆಗಳನ್ನು ಮಾಡಿಕೊಳ್ಳಲಿಕ್ಕೆ ಉತ್ತೇಜನವನ್ನು ನೀಡಬೇಕು.

- ರಾಜ್ಯ ಆಡಳಿತದ ಕಾರ್ಯ ವೈಖರಿಯನ್ನು ಚುರುಕುಗೊಳಿಸಲು ಅದರ ಉದ್ದೇಶದಲ್ಲಿ ಬದಲಾವಣೆ ತರುವುದು.

೬) ಜಿಲ್ಲಾ ಆಡಳಿತ ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸಲು ಕೆಲ ವಿಧಾನಗಳನ್ನು ಮೊಯಿಲಿಯವರು ಸೂಚಿಸಿದ್ದಾರೆ.

- ಜಿಲ್ಲಾಡಳಿತ ಪ್ರಗತಿಪರ ಸೇವೆಗಳನ್ನು ಕ್ರಮ ಬದ್ಧಗೊಳಿಸುವಲ್ಲಿ ಮತ್ತು ಸುಲಭ ಬಟವಡೆ ಮಾಡುವ ಕಾರ್ಯ ಮನಸ್ಸಿನಲ್ಲಿಟ್ಟುಕೊಂಡು ಸೂಕ್ತವಾಗಿ ಸಾಗಬೇಕು.

- ವ್ಯವಸ್ಥಿತವಾದ ಬದಲಾವಣೆಯ ಮೂಲಕ ತಾಕಲಾಟ ಮತ್ತು ಪ್ರತಿಕ್ರಿಯೆಯನ್ನು ಮುಂದುವರಿಸಲಿಕ್ಕೆ ಹಾಗೂ ಅವುಗಳ ರೂಪವನ್ನು ಸರಿಸಲು ಈ ವ್ಯವಸ್ಥಿತ ಬದಲಾವಣೆ ಮಾರ್ಗ ಮಹತ್ವದ್ದು.

- ಸಾರ್ವಜನಿಕ ಕುಂದುಕೊರತೆಗಳ ನಿರ್ವಹಣೆ ಮತ್ತು ಸುಧಾರಣೆ ತಂತ್ರಗಳು ಪ್ರವಹಿಸುವಂತೆ ಮಾಡುವುದು.

- ಸ್ಥಳೀಯ ಮಟ್ಟದಲ್ಲಿ ಕಾರ್ಯಕ್ರಮಗಳ ನಿಯೋಜಿತ ಉದ್ದೇಶ ಹಾಗೂ ಸಂಪನ್ಮೂಲಗಳ ದೊಡ್ಡದಾದ ಹಸ್ತಾಂತರ ಪ್ರಕ್ರಿಯೆಗಳನ್ನು ತರುವುದು.

- ಅಭಿವೃದ್ಧಿ ಕಾರ್ಯಗಳಲ್ಲಿ ಭಾಗವಹಿಸುವ ಜನರ ಸಹಕಾರ ಪಡೆದುಕೊಳ್ಳುವುದಕ್ಕೆ ಜಿಲ್ಲಾ ಮಟ್ಟದ ಅಧಿಕಾರಿಗಳ ನಾಯಕತ್ವ ಗುಣಗಳನ್ನು ಗುರುತಿಸಿ ಸಂಯೋಜಕತ್ವ ಕೋರುವುದು.

೭) ಸ್ಥಳೀಯ ಸರ್ಕಾರ ಅಥವಾ ಪಂಚಾಯತ್ ರಾಜ್ಯ ಸಂಸ್ಥೆಗಳಲ್ಲಿ ಸಕ್ರೀಯ ಪಾಲ್ಗೋಳ್ಳುವಿಕೆ.

- ಸಾರ್ವಜನಿಕರ ಉಪಯುಕ್ತ ಸಲಹೆಗಳು ಆಡಳಿತ ಸುಧಾರಣೆಯ ಬಟವಡೆಯ ತಂತ್ರಗಳು ಈ ಪ್ರಕ್ರಿಯೆಯಲ್ಲಿ ನಾಗರಿಕರ ಮತ್ತು ಸ್ಟೇಕ್ ಹೊಲ್ಡರ್ಸ್ ಜೊತೆಗೆ ನಾಗರಿಕ ಸೇವಕರ ಭಾಗವಹಿಸುವಿಕೆ ಮಹತ್ವದ್ದಾಗಿದೆ.

- ಸ್ಥಳೀಯ ಜ್ವಲಂತ ಸಮಸ್ಯೆಗಳಾದ ನೀರು, ವಿದ್ಯುತ್‌ಶಕ್ತಿ ಆರೋಗ್ಯ ನೈರ್ಮಲೀಕರಣಕ್ಕೆ ಆದ್ಯತೆ ನೀಡುವುದರ ಮೂಲಕ ಶಿಕ್ಷಣವನ್ನು ನೀಡುವುದು ಉಪಯುಕ್ತವಾಗಿದೆ.

- ಸ್ಥಳೀಯ ಸ್ವ-ಸರ್ಕಾರ, ಸಂಸ್ಥೆಗಳನ್ನು ಸಶಕ್ತಗೊಳಿಸಲು ಪ್ರಶಾಸನ ಮತ್ತು ಜಾಲ ನಿರ್ವಹಣೆಯಲ್ಲಿ ಭಾಗವಹಿಸುವುದರಿಂದ ಉತ್ತೇಜನ ಉಂಟಾಗುವುದು.

- ಸ್ಥಳೀಯವಾಗಿ ವ್ಯಕ್ತಿಗಳ ಉತ್ತಮ ಕಾರ್ಯ ನಿರ್ವಹಣೆಗಾಗಿ ಅವರ ಸಾಮರ್ಥ್ಯ ಅಭಿವೃದ್ಧಿಪಡಿಸುವ ನಿಟ್ಟಿನಲ್ಲಿ ತರಬೇತಿ ಸಂಸ್ಥೆಗಳನ್ನು ಪ್ರೋತ್ಸಾಹಿಸುವುದು.

೮) ಸಾರ್ವಜನಿಕ ಸೇವಾ ಬಟವಡೆಯಲ್ಲಿ ಸಾಮಾಜಿಕ ಬಂಡವಾಳ ವಿಶ್ವಸ್ಥ ಸಮಿತಿ ಭಾಗವಹಿಸುವಿಕೆಯ ಕುರಿತು ಮೊಯಿಲಿಯವರು ತಮ್ಮ ಸಾಮಾಜಿಕ ಬಂಡವಾಳ ಚಿಂತನೆಯನ್ನು ಈ ವರದಿಯ ಮೂಲಕ ವಿಸ್ತರಿಸಲು ಪ್ರಯತ್ನಿಸಿದ್ದಾರೆ.

- ಸಾರ್ವಜನಿಕ ಬಂಡವಾಳವನ್ನು ತೊಡಗಿಸಲು ಎಲ್ಲ ಹಂತಗಳಲ್ಲಿ ಪರಿಣಾಮಕಾರಿ ಸಾಧನೆ ಮಾರ್ಗವನ್ನು ಕಂಡುಕೊಳ್ಳಬೇಕು.

- ದೂರದ ಪ್ರದೇಶಗಳಲ್ಲಿ ವಿಶೇಷವಾಗಿ ಪ್ರಾದೇಶಿಕ ಸಮುದಾಯಗಳೊಂದಿಗೆ ಮುಂದಾಲೋಚನೆಯ ಮೂಲಕ ಪಾಲುಗಾರರಾಗಲಿಕ್ಕೆ ಆಡಳಿತದ ಸಾಮರ್ಥ್ಯವನ್ನು ಸಶಕ್ತಗೊಳಿಸುವುದರಿಂದ ಸುಧಾರಣೆ ಮಾಡುವುದು ಸಾಧ್ಯ.

- ನಾಗರಿಕ ಸಮಾಜ ಸಂಸ್ಥೆಗಳ ಮತ್ತು ಸರ್ಕಾರದ ನಡುವಿನ ಬಾಂಧವ್ಯವನ್ನು ಉತ್ತಮಗೊಳಿಸುವುದು.

- ಜನ ಕೇಂದ್ರಿತವಾದ ಆಡಳಿತ ಮಾರ್ಗವನ್ನು ಹೆಚ್ಚಿಸುವುದು.

- ಜನ ಪ್ರತಿನಿಧಿಗಳು ಮತ್ತು ಸಮುದಾಯದ ಕಾರ್ಯಕ್ರಮಗಳ ನಿರ್ವಹಣೆಯಲ್ಲಿ ಸಕ್ರೀಯವಾಗಿ ಪಾಲ್ಗೊಳ್ಳುವುದು.

೯) ನಾಗರಿಕ ಕೇಂದ್ರಿತ ಆಡಳಿತ ಕುರಿತು ಮೊಯಿಲಿಯವರು ಉಪಯುಕ್ತವಾದ ಕೆಲ ಅಂಶಗಳನ್ನು ಸೂಚಿಸಿದ್ದಾರೆ.

- ಸರ್ಕಾರ ಪಾರದರ್ಶಕವಾಗಿರಬೇಕು ಮತ್ತು ಹೊಣೆಗಾರಿಕೆ ಅರಿತುಕೊಂಡಿರಬೇಕು.

- ಪ್ರತಿನಿಧಿಗಳು ಪ್ರಾಮಾಣಿಕರಾಗಿರಬೇಕು ಮತ್ತು ಹೊಣೆಗಾರೊಜೆಯನ್ನು ಅರಿತುಕೊಂಡಿರಬೇಕು.

- ಪ್ರಕ್ರಿಯೆಗಳ ಹೊಣೆಗಾರಿಕೆಯಿಂದ ಉತ್ಪಾದನಾತ್ಮಕ ಹೊಣೆಗಾರಿಕೆಗೆ ಮತ್ತು ವಹಿವಾಟುಗಳಿಂದ ಪರಿವರ್ತನಾ, ಪ್ರಶಾಸನದವರೆಗೆ ಚಲನೆಯಿಂದ ಕೂಡಿರಬೇಕು.

- ವಿಳಂಬವನ್ನು ಕಡಿಮೆ ಮಾಡಿ ಸೇವೆಗಳ ಬಟವಡೆ ಮಾಡುವಲ್ಲಿ ಪ್ರಾಮಾಣಿಕತೆಯನ್ನು ಬದ್ಧಗೊಳಿಸಬೇಕು.

- ಆಡಳಿತ ಹೆಚ್ಚು ಫಲಪ್ರದವಾಗಲಿಕ್ಕೆ ಪ್ರಗತಿಪರ ಮಧ್ಯಸ್ತಿಕೆಗಳು ಒಳಗೊಂಡಿರಬೇಕು. ಪ್ರಕ್ರಿಯೆಯು ಸರಳೀಕರಿಸುವಂತಿರಬೇಕು.

- ಆಡಳಿತ ಉತ್ತಮವಾಗಿ ನೆರವೇರಲು ಗುಂಪು ಪರಾಮರ್ಶೆಗಳ ಗುರಿ ಹೊಂದಿರಬೇಕು.

- ಸ್ಥಳೀಯ ಅವಶ್ಯಕತೆಗಳಿಗೆ ಮಧ್ಯಸ್ತಿಕೆದಾರರ ಸುಂಕವನ್ನು ಪೂರ್ಣಗೊಳಿಸಲಿಕ್ಕೆ ಸರಳತೆ ಮಾಡುವುದು ಸೂಕ್ತ.
- ನಾಗರಿಕ ಕೇಂದ್ರಿತ ತೀರ್ಮಾನ ಮಾಡುವಿಕೆಯನ್ನು ಬಲಪಡಿಸಬೇಕು.
- ನಾಗರಿಕ ಕೇಂದ್ರಿತ ತೀರ್ಮಾನ ಮಾಡುವ ಪ್ರಕ್ರಿಯೆಗಳಿಗೆ ಬಳಕೆದಾರರ ಗುಂಪುಗಳ ಸುಗಮತೆಯ ಅನುಕೂಲ ಮಾಡಬೇಕು.
- ಸಲಹಾ ಕೇಂದ್ರಗಳ ಮಾಹಿತಿ ಸ್ಥಾಪಿಸಬೇಕು ಮತ್ತು ಕ್ರೋಢೀಕರಿಸಬೇಕು.
- ಕುಂದು ಕೊರತೆಗಳ ನಿವಾರಣೆ ಹಾಗೂ ಜವಾಬುಗಳನ್ನು ಒದಗಿಸುವುದಕ್ಕೆ ಹೆಚ್ಚಿಸಬಹುದಾದ ಸಲಹೆಗಳು ಇರಬೇಕು.
- ಸಲಹೆಗಳನ್ನು ಸ್ವೀಕರಿಸಲಿಕ್ಕೆ ಸಲಹಾತ್ಮಕ ತಂತ್ರದ ವ್ಯವಸ್ಥೆಯನ್ನು ಸ್ಥಾಪಿಸಬೇಕು.
- ಮಾಹಿತಿಯನ್ನು ಪಡೆದುಕೊಳ್ಳುವಲ್ಲಿ ಸ್ವಾತಂತ್ರ್ಯವಿರಬೇಕು.
- ಸರ್ಕಾರಿ ದಾಖಲೆಗಳ ಬಗ್ಗೆ ಜನರಿಗೆ ವಿಶ್ವಾಸ ಬೆಳೆಯಬೇಕು. ಅವುಗಳ ವರ್ಗೀಕರಣಕ್ಕೆ ವಿಶೇಷವಾಗಿ ಸರಕಾರಿ ರಹಸ್ಯಗಳ ಕಾರ್ಯಗಳೊಂದಿಗೆ ಪುನರ್ ವಿಮರ್ಶೆಗೆ ಒಳಪಡಿಸಬೇಕು.
- ವರ್ಗೀಕರಣಗೊಳ್ಳುವ ದಾಖಲಾತಿಗಳಿಗೆ ಪಾರದರ್ಶಕತ್ವ ಹಾಗೂ ಅಭಿವೃದ್ಧಿಯನ್ನು ದೃಢೀಕರಿಸಬೇಕು.
- ನಾಗರಿಕ ಮಾಹಿತಿ ಹಕ್ಕಿಗೆ ಮಾಹಿತಿಯನ್ನು ಒದಗಿಸುವುದರ ಮೂಲಕ ಪಾರದರ್ಶಕತೆಯನ್ನು ಪ್ರಕಟಗೊಳಿಸಬೇಕು.

ಈ ಇತ್ಯಾದಿ ಅಂಶಗಳು ನಾಗರಿಕ ಕೇಂದ್ರಿತ್ವ ಆಡಳಿತ ಸುಧಾರಣೆಯಲ್ಲಿ ಬಹುಮುಖ್ಯ ಪಾತ್ರವಹಿಸುತ್ತವೆ ಎಂಬುದನ್ನು ಮೊಯಿಲಿಯವರು ಕಂಡುಕೊಂಡವರು.

೧೦) ಇ-ಆಡಳಿತವನ್ನು ಉನ್ನತೀಕರಿಸಿ ಸುಗಮಗೊಳಿಸಿ ಪಾರದರ್ಶಕತೆಗೆ ಒತ್ತು ನೀಡುವುದು.

- ಆಧುನಿಕ ಸಲಕರಣೆಗಳು ಇ-ಆಡಳಿತದಿಂದ ಅನಾವರಣಗೊಳ್ಳಬೇಕು. ತಂತ್ರಜ್ಞಾನಗಳು ಮತ್ತು ಸಾಧನೆಗಳನ್ನೊಳಗೊಂಡ ತಂತ್ರಜ್ಞಾನದ ಮದ್ಯಸ್ತಿಕೆಯಿಂದ

ಉಂಟಾಗುವ (ರೆಡ್ ಟೇಪ್) ವಿಳಂಬ ಮತ್ತು ಅನಾನುಕೂಲತೆಯನ್ನು ಕಡಿಮೆ ಮಾಡುವುದು.

- ಆಳ್ವಿಕೆಯ ಗುಣಾತ್ಮಕತೆ ಅಭಿವೃದ್ಧಿಯನ್ನು ಗುರುತಿಸಲಿಕ್ಕೆ, ಹಾಗೂ ಜ್ಞಾನ ಹಂಚಿಕೆಗೆ ಪ್ರೋತ್ಸಾಹ ನೀಡಬೇಕು.

೧೧) ಒಕ್ಕೂಟ ಪ್ರಜಾ ರಾಜ್ಯ ಪದ್ಧತಿಯ ಹರಿವುಗಳು :

- ಒಕ್ಕೂಟ ಸಂಬಂಧ ಕ್ರಿಯೆಯನ್ನು ಪುನರಾವಲೋಕನ ಮಾಡುವುದಕ್ಕೆ ನಾಗರಿಕ ಸೇವಾ ಕಾರ್ಯ ನಿರ್ವಹಣೆಗಳನ್ನು ಉತ್ತಮಪಡಿಸಬೇಕು.

- ಕೇಂದ್ರ ಮತ್ತು ರಾಜ್ಯ ಸರ್ಕಾರದ ನಡುವೆ ನಿರಂತರ ಸಂವಹನ ಪ್ರಕ್ರಿಯೆ ಇರಬೇಕು.

- ಬೇರೆ ಬೇರೆ ರಾಜ್ಯಗಳಲ್ಲಿರುವ ಪ್ರಚಲಿತ ವ್ಯತ್ಯಾಸ ತೋರಿಸುವ ಇಡೀ ಭಾರತದ ಸೇವೆಗಳ ವಿದ್ಯಮಾನಗಳ ಸಾಮರಸ್ಯ ಕ್ರಿಯೆಯನ್ನು ಉಂಟು ಮಾಡಬೇಕು.

೧೨) ಸಂದಿಗ್ಧ ಸಮಯದ ಆಡಳಿತದ ವೈಖರಿ ಕುರಿತು :

- ಸಂದಿಗ್ಧ ಸಮಯದ ಆಡಳಿತದ ತುರ್ತುಪ್ರತಿಕ್ರಿಯೆಗಳನ್ನು ಚುರುಕುಗೊಳಿಸಲಿಕ್ಕೆ ಸೂಚಿತ ಮಾರ್ಗಗಳು ಇರಬೇಕು.

- ಸಂದಿಗ್ಧ ಸನ್ನಿವೇಶಗಳನ್ನು ಮುಟ್ಟಲು ಹಾಗೂ ಸಂಧಿಗ್ಧ ಸನ್ನಿವೇಶ ಸಿದ್ದಗೊಳಿಸುವಿಕೆಯಲ್ಲಿ ಹೆಚ್ಚಿನ ವ್ಯವಸ್ಥೆಯ ಪರಿಣಾಮಕಾರಿ ಹೆಚ್ಚಳಕ್ಕೆ ಸೂಚಿತ ಮಾರ್ಗಗಳು ಒಳಗೊಂಡಿರಬೇಕು.

೧೩) ಸಾರ್ವಜನಿಕ ಆಜ್ಞೆ :

- ಸಾಮಾಜಿಕ ಐಕ್ಯತೆ ಮತ್ತು ಆರ್ಥಿಕ ಅಭಿವೃದ್ಧಿಗೆ ಸಾರ್ವಜನಿಕ ಆಜ್ಞೆಯನ್ನು ಪರಿಣಾಮಕಾರಿಯಾಗಿ ಕಾಯ್ದುಕೊಳ್ಳುವಿಕೆಗೆ ಆಡಳಿತಾತ್ಮಕ ವ್ಯವಸ್ಥೆಯನ್ನು ಬಲಗೊಳಿಸಲು ಒಂದು ಚೌಕಟ್ಟನ್ನು ನಿರ್ಮಿಸುವುದು.

- ವಿವಾದಾತ್ಮಕ ವಿಷಯಗಳ ಬಗೆಗೆ ತಿರ್ಮಾನ ತೆಗೆದುಕೊಳ್ಳಲು ಸಾಮಾರ್ಥ್ಯವನ್ನು ಹೆಚ್ಚಿಸುವುದು ಪ್ರಮುಖವಾದುದು.

ಹೀಗೆ ಕೇಂದ್ರ ಸುಧಾರಣಾ ಸಮಿತಿಯ ಸಲಹಾ ವರದಿಯಲ್ಲಿ ಮೊಯಿಲಿಯವರು ತಮ್ಮ ಆಡಳಿತ ಪರವಾದ ಚಿಂತನೆಯನ್ನು ಕೇಂದ್ರ ಸರ್ಕಾರಕ್ಕೆ ಒಪ್ಪಿಸುವುದರ ಮೂಲಕ ಭಾರತದ ಆಡಳಿತವನ್ನು ಬಲಿಷ್ಠಗೊಳಿಸಲು ಯೋಚಿಸಿರುವರು.

ಆಡಳಿತ ಸುಧಾರಣೆಗಾಗಿ ಮೊಯಿಲಿಯವರು ತಾವು ಮುಖ್ಯಮಂತ್ರಿಗಳಾಗಿದ್ದಾಗ ಹತ್ತು ಹಲವು ಚಿಂತನೆಗಳನ್ನು ಗುರಿಗಳನ್ನು ಹೊಂದಿದ್ದರು. ಅವುಗಳು "ದುರ್ಬಲ ವರ್ಗದವರ ಅಭ್ಯುದಯಕ್ಕೆ ರೂಪಿಸಲಾದ ಕಾರ್ಯಕ್ರಮಗಳ ಪ್ರಾಮಾಣಿಕ ಮತ್ತು ಪರಿಣಾಮಕಾರಿ ಅನುಷ್ಠಾನ ಬಡಜನತೆಗೆ ಮನೆಗಳ ನಿರ್ಮಾಣ ನಿವೇಶನಗಳ ವಿತರಣೆ ಅವರ ಕೈಗಾರಿಕಾ ಅಥವಾ ಕೃಷಿ ಚಟುವಟಿಕೆಗಳಲ್ಲಿ ನಿರತರಾಗಲು ಸಹಾಯದ ವಿಸ್ತರಣೆ, ಕಾವೇರಿ ಜಲ ವಿವಾದದಲ್ಲಿ ರಾಜ್ಯಕ್ಕೆ ಯಾವುದೇ ಅನ್ಯಾಯವಾಗದಂತೆ ಸರಿಯಾದ ಸಮಯದಲ್ಲಿ ನೀರಾವರಿ ಯೋಜನೆಗಳನ್ನು ಪೂರ್ಣಗೊಳಿಸಲು ಜಲಾನಯನ ಪ್ರದೇಶದ ಎಲ್ಲಾ ರೈತರಿಗೆ ಲಭ್ಯ ನೀರನ್ನು ಸಮಾನವಾಗಿ ವಿಸ್ತರಿಸುವುದು. ಉತ್ತರ ಕರ್ನಾಟಕದ ಜನತೆಯ ಉಳುವಿನ ಆಧಾರದಲ್ಲಿ ಕೃಷ್ಣಾ ನದಿ ನೀರನ್ನು ಬಚಾವತ್ ತೀರ್ಪಿನ ಆಧಾರದಲ್ಲಿ ೨೦೦೧ ಒಳಗೆ ನಮ್ಮ ಪಾಲನ್ನು ಬಳಸಿಕೊಳ್ಳುವಂತೆ ನೋಡುವುದು ನಮ್ಮ ಜವಾಬ್ದಾರಿಯಾಗಿವೆ. ಅದನ್ನು ಉಪೇಕ್ಷಿಸುವುದೆಂದರೆ ರಾಜ್ಯದ ಜನತೆಗೆ ಬಗೆಯುವ ಅವಮಾನವಾಗುತ್ತದೆ[೧೦]" ಎಂಬುದು ಮೊಯಿಲಿಯವರು ಜನತೆಯ ಮೇಲಿಟ್ಟುರುವ ಪ್ರೀತಿ ವಿಶ್ವಾಸ ಅಭಿವ್ಯಕ್ತಗೊಳ್ಳುತ್ತದೆ. ಒಬ್ಬ ರಾಜಕೀಯ ಚಿಂತಕ ಆಡಳಿತವನ್ನು ಸುಧಾರಣೆಗೊಳಿಸಲಿಕ್ಕೆ ತನ್ನೊಳಗೆ ಹಲವು ನಿರ್ಧಾರಗಳನ್ನು ಮಾಡಿಕೊಂಡಿರುತ್ತಾನೆ. ಆ ನಿಟ್ಟಿನಲ್ಲಿ ಸರ್ಕಾರಿ ಅಧಿಕಾರಿಗಳಿಗೆ ಮತ್ತು ಮಂತ್ರಿಗಳಿಗೆ ಮೊಯಿಲಿಯವರು ಮುಖ್ಯ ಮಂತ್ರಿಯಾಗಿದ್ದಾಗ ಸಾರ್ವಜನಿಕ ಅಭಿಪ್ರಾಯಗಳನ್ನು ಸಂಗ್ರಹಿಸಿ ಸಹುದ್ಯೋಗಿಗಳಿಗೆ ತಿಳಿಯಪಡಿಸಿದ್ದರು.

ಮೊಯಿಲಿಯವರು ಆಡಳಿತಕ್ಕೆ ಚುರುಕು ಮುಟ್ಟಿಸಲು ಕಾನೂನು ವ್ಯವಸ್ಥೆಗೆ ಹೆಚ್ಚಿನ ಬಲ ನೀಡಿದರು. ದುಂದುವೆಚ್ಚದ ಸಮಾವೇಶಗಳಿಗೆ ಕಡಿವಾಣ ಹಾಕಿದರು. ಅಧಿಕಾರಿಗಳಿಗೆ ನಿರ್ಭಯವಾಗಿ ಕಾರ್ಯ ನಿರ್ವಹಿಸಲು ಸೂಚಿಸಿದರು. ಆಯಾ ಇಲಾಖೆಯ ವರ್ಗಾವಣೆ

ನೀತಿಯನ್ನು ಆಯಾ ಇಲಾಖೆಗಳಿಗೆ ವಹಿಸಿಕೊಡುವುದರ ಮೂಲಕ ವರ್ಗಾವಣೆ ನೀತಿಯಲ್ಲಿ ಪಾರದರ್ಶಕತೆಯನ್ನು ಮೆರೆದರು. ಶಾಸಕರು ವಿಧಾನ ಸಭೆಯಲ್ಲಿ ಕಾಲ ಹರಣ ಮಾಡುವ ಬದಲು ಅವರವರ ಕ್ಷೇತ್ರಗಳತ್ತ ಸಂಚರಿಸಲು ಸೂಚಿಸಿದರು. ಕನ್ನಡ ಶಾಲೆಗಳ ಅಭಿವೃದ್ಧಿ ಹಾಗೂ ಶಿಕ್ಷಣದ ಸ್ವರೂಪದ ಬದಲಾವಣೆಗಾಗಿ ಶ್ರಮಿಸಿದರು. ಜೀವನಾವಶ್ಯಕ ವಸ್ತುಗಳ ಬೆಲೆಗಳ ಮೇಲೆ ಹಿಡಿತವನ್ನು ಇಟ್ಟುಕೊಂಡರು. ಅಕ್ಕ-ಪಕ್ಕದ ರಾಜ್ಯಗಳ ಜೊತೆಗೆ ನಮ್ಮ ರಾಜ್ಯವನ್ನು ತೂಗಿನೋಡುವ ಪ್ರಯತ್ನ ಮಾಡಿದರು. ಮದ್ಯದದೊರೆಗಳನ್ನು, ಗಣಿ ಲೂಟಿಕೋರರನ್ನು ದೂರದಲ್ಲಿರಿಸಿದರು. ಕಡಿಮೆ ಆಳ್ವಿಕೆಯಲ್ಲಿ ದಕ್ಷ ಆಡಳಿತ ನಿರ್ವಹಣೆಯನ್ನು ಮಾಡಿದರು. ಜನಪ್ರಿಯತೆಯ ಕಾರ್ಯಕ್ರಮಗಳಿಗೆ ಹೆಚ್ಚಿನ ಆದ್ಯತೆಯನ್ನು ನೀಡಿದರು. ಇವೆಲ್ಲ ನಿರ್ಧಾರಗಳು ಗುರಿಗಳು ಅವರ ಆಡಳಿತ ಚಿಂತನೆಯ ಫಲವಾಗಿವೆ.

ಮೊಯಿಲಿಯವರು ಅಬಕಾರಿ ನೀತಿಯನ್ನು ಸಮರ್ಥಿಸಿಕೊಳ್ಳುತ್ತಾ ವಿಧಾನ ಸಭೆಯಲ್ಲಿ ತಮ್ಮ ವಿಚಾರವನ್ನು ಈ ರೀತಿ ಸ್ಪಷ್ಟ ಪಡಿಸಿರುತ್ತಾರೆ. "ಕೆಲವು ಸಂದರ್ಭಗಳಲ್ಲಿ ನಾವು ಸಾರ್ವಜನಿಕ ಜೀವನದಲ್ಲಿರುವಾಗ ಕೆಲವು ವಿಷಯಗಳ ಬಗೆಗೆ ಸಾರ್ವಜನಿಕ ಗ್ರಹಿಕೆಗಳಿಗೆ ಸ್ಪಂದಿಸಬೇಕಾಗುತ್ತದೆ. ನಾವು ಸತ್ಯಧರ್ಮ ನೀತಿಗಳಿಗೆ ಅನುಗುಣವಾಗಿ ನಡೆದುಕೊಂಡರೆ ಸಾಕಾಗುವುದಿಲ್ಲ. ನಾವು ಸತ್ಯಧರ್ಮ ನೀತಿಗೆ ಸರಿಯಾಗಿ ನಡೆದುಕೊಳ್ಳುತ್ತಿದ್ದೇವೆ ಎಂಬುದನ್ನು ಜನತೆಯು ಗ್ರಹಿಸುವಂತಾಗಬೇಕು[೧೧]".

ಮುಖ್ಯಮಂತ್ರಿಯಾಗಿದ್ದ ಮೊಯಿಲಿಯವರು ಸಾರ್ವಜನಿಕ ಅಭಿಪ್ರಾಯ ಕುರಿತು ಹಾಗೂ ಜನತೆಯ ನಿರೀಕ್ಷೆಗೆ ಹೇಗೆ ಸ್ಪಂದಿಸಿ ಕಾರ್ಯಪ್ರವೃತ್ತರಾಗುತ್ತಿದ್ದರು ಎಂಬುದಕ್ಕೆ ಈ ಮೇಲಿನ ಮಾತುಗಳೇ ಉದಾಹರಣೆಗಳಾಗಿವೆ.

೪. ೩. ೫ ಕಾನೂನು ಸುಧಾರಣೆಗಳು

ಎಂ.ವೀರಪ್ಪ ಮೊಯಿಲಿಯವರು ನ್ಯಾಯವಾದಿಗಳಾಗಿ ತಮ್ಮ ವೃತ್ತಿ ಜೀವನವನ್ನು ಪ್ರಾರಂಭಿಸಿದರು. ತಾವು ಹುಟ್ಟಿ ಬೆಳೆದ ಪರಿಸರದಲ್ಲಿ ಅನ್ಯಾಯಕ್ಕೊಳಗಾದ ಜನರನ್ನು ರಕ್ಷಿಸುವ ಕಾರ್ಯ ಆರಂಭಿಸಿದರು. ಪ್ರಾರಂಭದಲ್ಲಿ ವಕೀಲ ವೃತ್ತಿ ಮಾಡಿದಾಗ ಮೊಯಿಲಿಯವರಿಗೆ ಬಹುದೊಡ್ಡ ಪ್ರಕರಣಗಳು ಅವರ ಮುಂದೆ ತಲೆ ಎತ್ತಿ ನಿಂತವು. ಭೂಮಾಲಿಕ ಮತ್ತು ಗೇಣಿದಾರನ್ನೊಳಗೊಂಡ ಪ್ರಕರಣ ಬಹು ಮಹತ್ವದ್ದಾಗಿದೆ. ಕೃಷಿಕ ರೈತರಿಗೆ ಬಡಕಾರ್ಮಿಕರಿಗೆ, ಮತ್ತು ಗೇಣಿದಾರರ ಹಕ್ಕಿನ ಸಂರಕ್ಷಣೆಗೆ ಕಿಸಾನ್‌ಸಭಾವನ್ನು

ಸ್ಥಾಪಿಸಿದರು. ಈ ನ್ಯಾಯಿಕ ಸಂಸ್ಥೆಯ ಮೂಲಕವಾಗಿ ಮೊಯಿಲಿಯವರು ಗೇಣಿದಾರರ ಮತ್ತು ಭೂ ರೈತರ ನಾಯಕರಾಗಿ ರೂಪುಗೊಂಡರು. ಮುಂದೆ ಕಿಸಾನ್ ಸಭಾದ ಮೂಲಕ ಹಲವು ಗೇಣಿದಾರರು ಕೃಷಿಕರು ಭೂ ಮಂಡಳಿಗೆ ಅರ್ಜಿ ಸಲ್ಲಿಸಿದರು. ಭೂಮಿಯನ್ನು ಉಳುವವರೆ ವಾಸ್ತವವಾಗಿ ಭೂಮಿಯ ಅನ್ನ ಉಣ್ಣಬೇಕು. ಎಂಬ ನ್ಯಾಯ ಬದ್ಧ ಹಕ್ಕಿನ ಪುನರ್ ಸ್ಥಾಪನೆಗಾಗಿ ಕಿಸಾನ್ ಸಭಾ ಕಾರ್ಯ ಪ್ರವೃತ್ತವಾಯಿತು.

'ಊಳುವವನೆ ಹೊಲದ ಒಡೆಯ' ಎಂಬ ಮಾತನ್ನು ಕಾಂಗ್ರೆಸ್ ಪಕ್ಷ ಜಾರಿಗೊಳಿಸಿತು. ಇದರನ್ವಯ ಮೊಯಿಲಿಯವರು ಕಾರ್ಯಕ್ರಮದ ಅನುಷ್ಠಾನದಲ್ಲಿ ಪಾಲ್ಗೊಂಡರು. ಹಲವು ದಶಕಗಳ ಕಾಲದಿಂದ ರಾಜ್ಯ ರಾಷ್ಟ್ರದಲ್ಲಿ ಸಮಾನ ಮತ್ತು ಗೇಣಿದಾರರ ಪರವಾದ ಭೂಸುಧಾರಣಾ ಕಾನೂನನ್ನು ಜಾರಿಗೊಳಿಸಬೇಕೆಂದು ಸತತವಾಗಿ ಹೆಚ್ಚುತ್ತಿದ್ದ ಬೇಡಿಕೆಯಿತ್ತು. ಈ ಬೇಡಿಕೆಯು ದೇವರಾಜ್ ಅರಸರು ಮುಖ್ಯಮಂತ್ರಿಯಾಗಿದ್ದ ಸಂದರ್ಭದಲ್ಲಿ ಕಾನೂನನ್ನು ಜಾರಿಗೊಳಿಸಿ ರಾಜ್ಯದ ಭೂಸುಧಾರಣೆಗೆ ಸಂಬಂಧಿಸಿದ ಮೊದಲ ಪ್ರಯತ್ನವಾಯಿತು.

ಈ ಸಂದರ್ಭದಲ್ಲಿ ಮೊಯಿಲಿಯವರು ಕಾರ್ಕಳ ತಾಲೂಕಿನ ಭೂನ್ಯಾಯ ಮಂಡಳಿಯ ಸದಸ್ಯರಾಗಿ ನೂರಾರು ಪ್ರಕರಣಗಳನ್ನು ಕೈಗೆತ್ತಿಕೊಂಡು ಇತ್ಯರ್ಥಗೊಳಿಸಿದರು. ಪ್ರಭಾವಿ ಭೂಮಾಲಿಕರು, ಗೇಣಿದಾರರ ಹಕ್ಕುಗಳನ್ನು ನಿರಾಕರಿಸಲು ರೂಪಿಸುತ್ತಿದ್ದ ಷಡ್ಯಂತ್ರಗಳ ವಿರುದ್ಧ ಬಡ ಗೇಣಿದಾರರಿಗೆ ನ್ಯಾಯ ಒದಗಿಸುವಲ್ಲಿ ಮೊಯಿಲಿಯವರು ಅಪಾರ ಮಾನಸಿಕ ಹಿಂಸೆಯನ್ನು ಎದುರಿಸಿದರು. ಕಾರ್ಕಳ ಕ್ಷೇತ್ರದ ವಿಧಾನಸಭೆಯ ಈಗಿನ ಸದಸ್ಯ ಎಚ್.ಗೋಪಾಲ ಭಂಡಾರಿಯವರು ಹೀಗೆ ಹೇಳುತ್ತಾರೆ "ಅಲ್ಲಿ ಎರಡು ರೀತಿಯ ಜಮೀನ್ದಾರರು ಇರುತ್ತಿದ್ದರು. ಒಂದನೇ ವರ್ಗದವರು ಗೈರು ಜಮೀನ್ದಾರರು ಸಾಮಾನ್ಯವಾಗಿ ಅವರು ಕೃಷಿಕರಲ್ಲ. ಕಾನೂನಿನ ಒತ್ತಡಕ್ಕೆ ಮನಸ್ಸಿಲ್ಲದ ಮನಸ್ಸಿನಿಂದ ಮುಂದಾಗಿದ್ದವರು. ಎರಡನೇ ವರ್ಗದವರು ಕೃಷಿಕ ವರ್ಗಕ್ಕೆ ಸೇರಿದ ಬೃಹತ್ ಭೂಹಿಡುವಳಿದಾರರು. ಇವರು ಮೊಯಿಲಿಯವರನ್ನು ಪ್ರಭಲವಾಗಿ ವಿರೋಧಿಸುತ್ತಿದ್ದರು. ಅನೇಕ ಬಾರಿ ಮೊಯಿಲಿಯವರಿಗೆ ಕೊಲೆ ಬೆದರಿಕೆ ಒಡ್ಡಲಾಯಿತು. ಆದರೆ ಮೊಯಿಲಿ ಕರ್ತವ್ಯ ಚ್ಯುತರಾಗಲಿಲ್ಲ. ಶಾಂತಿ ಭಂಗಕ್ಕೆ ಅಥವಾ ಗೊಂದಲ ಸೃಷ್ಟಿಗೆ ಎಂದೂ ಕಾರಣರಾಗಿರಲಿಲ್ಲ. ಅವರು "ಇದು ಕಾನೂನಿಗೆ ಸಂಬಂಧಿಸಿದ ಸಮಸ್ಯೆ ಇದಕ್ಕೆ ಕಾನೂನೇ ಸರಿಯಾದ ಪರಿಹಾರ[೧೨]" ಹೇಳುತ್ತಿದ್ದರು.

ಮೊಯಿಲಿಯವರು ಬಡ ಕೂಲಿ ಕಾರ್ಮಿಕರ ಪರವಾಗಿ ಗೇಣಿದಾರರನ್ನು ಮುಂದು ಮಾಡಿಕೊಂಡು ಅವರಿಗೆ ಸಲ್ಲಿಸಬೇಕಾದ ನ್ಯಾಯವನ್ನು ಕೊಡಿಸುತ್ತಿದ್ದರು. ಅದಕ್ಕಾಗಿ ಉಪೇಕ್ಷತೆಯನ್ನು ತಡೆಯದೇ ತಮ್ಮ ನ್ಯಾಯ ಪರವಾದ ಚಿಂತನೆಯ ಹೋರಾಟವನ್ನು ಮುಂದುವರಿಸಿದರು. ಮೊಯಿಲಿಯವರ ಆತ್ಮೀಯರಾದ ವಸಂತ ಚಿಪ್ಳೋಣ್ಕರ್ ಅವರು ಹೀಗೆ ಹೇಳುತ್ತಾರೆ.

"ಒಕ್ಕಲುತನದ ಹಕ್ಕನ್ನು ಹೊಂದಿದ ಬಗ್ಗೆ ಒಂದಿಷ್ಟು ಸಾಕ್ಷ್ಯಾಧಾರ ಇದ್ದ ಗೇಣಿದಾರರು ಘೋಷಣಾ ಪತ್ರ ಅರ್ಜಿ ಸಲ್ಲಿಸಲು ಮುಂದಾಗಿ ತಾವು ಊಳುತ್ತಿದ್ದ ಜಮೀನಿನ ಒಡೆತನ ಪಡೆಯಲು ಶಕ್ತರಾಗುತ್ತಿದ್ದರು. ಆದರೆ ತಮ್ಮ ಸ್ಥಾನಮಾನ ಸಾಬೀತು ಪಡಿಸಲು ಅನೇಕ ಗೇಣಿದಾರರಲ್ಲಿ ಯಾವುದೇ ಸಾಕ್ಷ್ಯಾಧಾರಗಳಿರಲಿಲ್ಲ ಅಂತವರ ಪರವಾಗಿ ಮೊಯಿಲಿಯವರು ಕಠಿಣ ಪರಿಶ್ರಮ ನಡೆಸಿದರು. ಗೇಣಿದಾರರ ಮತ್ತು ಭೂ ಮಾಲೀಕರ ಹಕ್ಕುಗಳ ಬಗ್ಗೆ ತನಿಖೆ ನಡೆಸಿ ತೀರ್ಪು ನೀಡಲು ಅನುವಾಗುವಂತೆ ಭೂ ನ್ಯಾಯ ಮಂಡಳಿಗಳ ರಚನೆಗೆ ಮೊಯಿಲಿಯವರು ಸರಕಾರಕ್ಕೆ ಸಲಹೆ ನೀಡಿದರು. ಇಲ್ಲವಾದಲ್ಲಿ ಬಹುತೇಕ ಗೇಣಿದಾರರಿಗೆ ಏನೂ ದೊರೆಯುತ್ತಿರಲಿಲ್ಲ. ಏನೂ ಇಲ್ಲದವರ ನೆರವಿಗೆ ಮೊಯಿಲಿಯವರು ಧಾವಿಸಿಕೊಂಡು ಬರುತ್ತಿದ್ದರು. ಭೂ ಸುಧಾರಣಾ ಕಾಯ್ದೆಯ ಪ್ರಕರಣಗಳನ್ನು ಎತ್ತಿಕೊಳ್ಳುವಾಗ ಜಾತಿ ಧರ್ಮ ರಾಜಕೀಯ ನಿಲುವು ಅಥವಾ ಜನಾಂಗ ಎಂಬ ಯಾವುದೇ ತಾರತಮ್ಯವನ್ನು ಅವರು ತೋರಿದವರಲ್ಲ ಎಲ್ಲಕ್ಕಿಂತಲೂ ಮಿಗಿಲಾದ ಸಂಗತಿಯೆಂದರೆ, ಭೂ ಮಾಲೀಕರ ಬೆದರಿಕೆಯಿಂದಾಗಿ ಸ್ವಂತ ಅರ್ಜಿಸಲು ಮುಂದಾಗದ ಗೇಣಿದಾರರ ಪರವಾಗಿ ಮೊಯಿಲಿಯವರೇ, ಒತ್ತಾಯಿಸಿ ಅರ್ಜಿ ಸಲ್ಲಿಸಿ ಭೂಮಿಯನ್ನು ಒದಗಿಸಿಕೊಟ್ಟಿರುವುದು[೧೩]".

ಈ ಮೇಲಿನ ಮಾತುಗಳಿಂದ ಮೊಯಿಲಿಯವರ ಸಮುದಾಯದ ದೃಷ್ಟಿ, ಉಳುಮೆಗಾರರ ಮೇಲಿರುವ ಪ್ರೀತಿ, ಎದ್ದು ಕಾಣುತ್ತದೆ. ನ್ಯಾಯ ಪರವಾದ ಹೋರಾಟ ಚಿಂತನೆ ಮೊಯಿಲಿಯವರ ಜೀವನದಲ್ಲಿ ಅವಿಸ್ಮರಣೀಯವಾಗಿವೆ. ದಕ್ಷಿಣ ಕನ್ನಡ ಜಿಲ್ಲೆಯ ಅನೇಕ ಕಡೆ ಶ್ರೀಯುತರು ಆಪೇಕ್ಷಿತರಿಗೆ ದೇವಾಲಯದ ಪ್ರವೇಶದ ಕಾರ್ಯಕ್ರಮವನ್ನು ಮುಕ್ತಗೊಳಿಸಿದರು.

ಮೊಯಿಲಿಯವರು ಹಿಂದುಳಿದ ವರ್ಗಗಳ ಮೀಸಲಾತಿಗಾಗಿ ಹಗಲಿರುಳು ಶ್ರಮಿಸಿದವರು. ಇಂದಿನ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಹಿಂದುಳಿದವರಿಗೆ ಶೈಕ್ಷಣಿಕವಾಗಿ ಮೀಸಲಾತಿಯನ್ನು ನೀಡಲು ಹಿಂಜರಿಯುತ್ತವೆ. ಆದ್ದರಿಂದ ಎಲ್ಲಾ ವರ್ಗದ ಜನರಿಗೆ ಅನುದಾನಿತ ಅನುದಾನೇತರ ಶಿಕ್ಷಣ ಸಂಸ್ಥೆಗಳಲ್ಲಿ ಮೀಸಲಾತಿ ದೊರೆಯಬೇಕೆಂದಿದ್ದಾರೆ. ಉನ್ನತ ವ್ಯಾಸಂಗಕ್ಕೆ ಹೆಚ್ಚು ಮೀಸಲಾತಿಯನ್ನು ಪಡೆಯುವದರೊಂದಿಗೆ ಸಾಮಾಜಿಕ ನ್ಯಾಯ ನೀಡಬೇಕೆಂದವರು. ಉನ್ನತ ಸಂಸ್ಥೆಗಳಲ್ಲಿ ಹಿಂದುಳಿದ ವಿದ್ಯಾರ್ಥಿಗಳಿಗೆ ಅನ್ಯಾಯವಾಗುತ್ತದೆ. ಹೆಚ್ಚು ಶುಲ್ಕ ನೀಡುವ ಸಾಮರ್ಥ್ಯ ಅವರಲ್ಲಿಲ್ಲ. ಅವರು ತಮ್ಮ ಕೋಟಾದಲ್ಲಿ ಸೀಟುಗಳನ್ನು ಪಡೆದು ಉನ್ನತ ವ್ಯಾಸಂಗ ಮಾಡಲು ಸಾಧ್ಯವಾಗುತ್ತದೆ. ಇದರಿಂದ ಸಾಮಾಜಿಕ ನ್ಯಾಯ ದೊರಕುತ್ತದೆ ಎಂದು ಮೊಯಿಲಿಯವರು ಹೇಳಿದ್ದಾರೆ.

ನ್ಯಾಯಾಂಗ ಮತ್ತು ಕಾರ್ಯಾಂಗದ ಮಧ್ಯೆ ಸಾಮರಸ್ಯ ಭಾವನೆಗಳು ಕುಸಿಯುತ್ತಿರುವ ದಿನಮಾನಗಳಲ್ಲಿ ಪೋಲಿಸ್ ಕಾಯ್ದೆಯಲ್ಲಿ ಹಾಗೂ ಪೋಲಿಸ್ ವ್ಯವಸ್ಥೆಯಲ್ಲಿ ಸುಧಾರಣೆ ದೇಶದ ಆದ್ಯತೆಯ ವಿಚಾರವಾಗಿದೆ ಎಂದು ಅರಿತು ವ್ಯವಸ್ಥೆಯ ಬದಲಾವಣೆಯಾಗಬೇಕೆಂದು ಒತ್ತಿ ಹೇಳಿದರು ಹಾಗೂ ಅಧಿಕಾರಿ, ರಾಜಕಾರಣಿಗಳು, ಕ್ರಿಮಿನಲ್, ಪೋಲಿಸು ಅಧಿಕಾರಿಗಳ ಸಂಬಂಧ ಗಟ್ಟಿಯಾಗುತ್ತಿದ್ದು, ಇದು ಪ್ರಜಾಪ್ರಭುತ್ವಕ್ಕೆ ಮಾರಕವಾದ ಕ್ರಿಯೆಯಾಗಿದೆ ಎಂದು ಹೇಳಿದರು.

ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಪೋಲಿಸ್ ವ್ಯವಸ್ಥೆ ಹೇಗಿರಬೇಕೆಂಬುದನ್ನು ಮೊಯಿಲಿಯವರು ಸ್ಪಷ್ಟವಾಗಿ ಗುರುತಿಸಿದ್ದಾರೆ.

೧) "ಕಾನೂನಿಗೆ ಬದ್ಧವಾಗಿರಬೇಕೇ ಹೊರತು ಕಾನೂನನ್ನು ಬಿಗಿ ಮುಷ್ಠಿಯಲ್ಲಿಟ್ಟು ದಮನಕಾರಿಯಾಗಬಾರದು. ಕಾನೂನು ಭಂಗವಾದಾಗ ಅದರ ಜವಾಬ್ದಾರಿಯನ್ನು ತಾನು ಹೊರುವ ಸ್ಪಂದನವಿರಬೇಕು

೨) ಪ್ರಜಾಸತ್ತಾತ್ಮಕ ವ್ಯವಸ್ಥೆ ಮತ್ತು ಸಮುದಾಯಕ್ಕೆ ತಾನು ಜವಾಬ್ದಾರಿಯಾಗಬೇಕು.

೩) ಪೋಲೀಸ್ ಆಡಳಿತ ಪಾರದರ್ಶಕವಿರಬೇಕು.

೪) ಮಾನವ ರಕ್ಷಣೆ ಹಕ್ಕಿನ ನಿರ್ವಹಣೆಗೆ ಬದ್ಧವಾಗಿರಬೇಕು.

೫) ಮಾನವನ ಹಕ್ಕುಗಳನ್ನು ಸಂರಕ್ಷಿಸಬೇಕು.

೬) ತನ್ನ ವೃತ್ತಿಪರ ನಿರ್ವಹಣೆಯಲ್ಲಿ ಸಮಾಜಕ್ಕೆ ಸ್ಪಂದಿಸಬೇಕು.

೭) ತಾನು ಸಲ್ಲಿಸುತ್ತಿರುವ ಸೇವೆಗೆ ಪ್ರತಿನಿಧಿಕವಾಗಿರಬೇಕು[೧೪]" ಎಂಬ ಅಂಶಗಳು ಪೋಲಿಸ್ ಇಲಾಖೆಗೆ ಮಹತ್ವವಾದವುಗಳು ಇದರಿಂದ ಕಾನೂನಿನ ಹೆದ್ದಾರಿಯಲ್ಲಿ ಆದರ್ಶಗಳ ರಥಯಾತ್ರೆ ನಡೆಯಲಿ ಎಂಬುದು ಮೊಯಿಲಿಯವರ ಆಶಯವಾಗಿದೆ. ಜೊತೆಗೆ ನ್ಯಾಯವಾದಿಗಳು ಕೂಡಾ ವಿಶೇಷ ತರಬೇತಿ ಪ್ರಗತಿಪರವಾದ ಮನೋಭಾವನೆಯ ಚಿಂತನೆಯ ಮೂಲಕ ಅನ್ಯಾಯದ ವಿರುದ್ಧ ನ್ಯಾಯ ಪರವಾದ ಕಾನೂನು ವ್ಯವಸ್ಥೆಯನ್ನು ಸೂಕ್ತ ಪ್ರಮಾಣದಲ್ಲಿ ಮುನ್ನೆಡೆಸಬೇಕಾಗಿರುವುದು ಅವಶ್ಯಕಯಾಗಿದೆ ಎಂಬುದು ಮೊಯಿಲಿಯವರ ಅಭಿಮತ.

ರಾಷ್ಟ್ರದ ನೈತಿಕ ಸ್ಥಿತಿ ಹಾನಿಗೆ ಒಳಪಡುತ್ತಿರುವ ಈ ಕಾಲದಲ್ಲಿ ಕಾನೂನು ಮತ್ತು ಸುವ್ಯವಸ್ಥೆ ಪ್ರಜಾಪ್ರಭುತ್ವ ಸಂಸ್ಥೆಗಳ ಮೇಲೆ ಜನತೆಯ ವಿಶ್ವಾಸ ಕುಸಿಯುತ್ತಿದೆ. ಕಾನೂನಿನ ಉಲ್ಲಂಘನೆಯೇ ತಲೆ ಎತ್ತಿ ನಿಂತಿದೆ. ಇಂತಹ ಸಂದರ್ಭದಲ್ಲಿ ನ್ಯಾಯವಾದಿಗಳು ಪೋಲಿಸರು ಕಾನೂನು ಮತ್ತು ವ್ಯವಸ್ಥೆಯ ಪುನರುತ್ಥಾನ ಮಾಡುವ ಜವಾಬ್ದಾರಿಯನ್ನು ನಿಭಾಯಿಸಬೇಕು. ಎಂಬುದು ಮೊಯಿಲಿಯವ ಚಿಂತನೆಯಾಗಿದೆ.

ಕಾನೂನು ಮತ್ತು ಶಿಸ್ತು ಎನ್ನುವುದು ದೇಶಕ್ಕೆ ಅತೀ ಮುಖ್ಯವಾದದು. ನ್ಯಾಯಯುತವಾಗಿ ಕಾನೂನಿನ ಮೂಲಕ ತಮ್ಮ ಅಹವಾಲನ್ನು ಬಗೆಹರಿಸಿಕೊಳ್ಳುವುದು ಸೂಕ್ತ ಎಂಬುದು ಮೊಯಿಲಿಯವರ ಅಭಿಮತ. ಧಾರ್ಮಿಕ ವಿವಾದಗಳು ಅತೀಶೀಘ್ರವಾಗಿ ಜನಸಾಮಾನ್ಯರ ಮನಸ್ಸನ್ನು ಕೆಡಿಸುತ್ತಿದ್ದು ಧಾರ್ಮಿಕ ಮೂಲಭೂತವಾದಿಗಳ ವಿವೇಚನಾ ರಹಿತವಾದ ಕೃತ್ಯವು ದೇಶದಲ್ಲಿ ಸಂಭವಿಸುತ್ತಿರುವುದು ಮುಂದಿನ ಜನಾಂಗಕ್ಕೆ ಮಾರಕವಾಗಿದೆ. ದೇಶದ ವಿವಿದೆಡೆಗಳಲ್ಲಿ ಘರ್ಷಣೆ ಹಿಂಸಾಚಾರ ಡೊಂಬರಾಟ ಮೊಯಿಲಿಯವರ ಅಧಿಕಾರವಧಿಯಲ್ಲಿ ನಡೆದವು. ಇವೆಲ್ಲವನ್ನು ಹತ್ತಿಕ್ಕುವ ನಿಟ್ಟಿನಲ್ಲಿ ಕಾನೂನು ರಕ್ಷಣೆ ನ್ಯಾಯಪರ ಚಿಂತನೆ ಮುಖ್ಯವಾದದು. ಮೊಯಿಲಿಯವರು ಮುಖ್ಯಮಂತ್ರಿಯಾದಾಗ ದೃಢಮನಸ್ಸಿನಿಂದ ಅಚಲವಾದ ವಿಶ್ವಾಸವಿಟ್ಟು ವಿಧಾನ ಸಭೆಯಲ್ಲಿ ನಿಷ್ಪಕ್ಷಪಾತವಾಗಿ ಭಾರತೀಯ ಸಂವಿಧಾನವು ೧೯೫೦ರಲ್ಲಿ ದೊರಕಿದ ಭಾರತೀಯ ಸಂವಿಧಾನ ಮಾತ್ರವಲ್ಲದೇ ಆಧ್ಯಾತ್ಮಿಕತೆಯನ್ನು ಅನುಸರಿಸಬೇಕು ಮತ್ತು ಭಾರತೀಯರು ರಾಷ್ಟ್ರೀಯತೆಯನ್ನು ಕಾಪಾಡಬೇಕು ಎಂದಿದ್ದಾರೆ.

ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರಾಗಿದ್ದಾಗ ಅನೇಕ ಚಿಂತನೆಯನ್ನು ಕಾರ್ಯರೂಪಕ್ಕೆ ತಂದರು. ಬಾಲ್ಯದಲ್ಲಿ ಮೊಯಿಲಿಯವರಿಗೆ ಒಲಿದ ಬಹುಜನ ಹಿತಾಸಕ್ತಿ ಆನಂತರ ನ್ಯಾಯವಾದಿಗಳಾದ ಸಂದರ್ಭದಲ್ಲಿ ಅನೇಕ ಸಣ್ಣಪುಟ್ಟ ಕಕ್ಷಿದಾರರ ಬದುಕು ಛಿದ್ರವಾಗುವುದನ್ನು ಗಮನಿಸಿ ನ್ಯಾಯದಾನ ವಿಳಂಬವಾಗಬಾರದು. ಅದಕ್ಕಾಗಿ ಕಕ್ಷಿದಾರರ ಸಮಸ್ಯೆಗಳನ್ನು ನಿವಾರಿಸಲು–೧೯೯೦ ಜೂನ್ ಮತ್ತು ಅಕ್ಟೋಬರ್ ತಿಂಗಳ ನಡುವೆ ಜಿಲ್ಲಾ ಮತ್ತು ತಾಲೂಕು ಕೇಂದ್ರಗಳಲ್ಲಿ ೧೨೦ ಲೋಕ ಅದಾಲತ್, ಜನತಾ ನ್ಯಾಯಲಯಗಳನ್ನು ನಡೆಸಿದರು ಆ ಮೂಲಕ ಸುಮಾರು ೧,೯೩,೦೦೦ ಪ್ರಕರಣಗಳು ಇತ್ಯರ್ಥಗೊಂಡವು. ಈ ಕಾರ್ಯ ದೇಶದ ಲೋಕ ಅದಾಲತ್ ಇತಿಹಾಸದಲ್ಲಿಯೇ ಅಭೂತಪೂರ್ವವಾದ ದಾಖಲೆಯಾಗಿದೆ.

೧೯೯೦ರ ಜೂನನಲ್ಲಿ ಬೆಂಗಳೂರಿನಲ್ಲಿ ಏರ್ಪಡಿಸಿದ ಬೃಹತ್ ಜನತಾ ನ್ಯಾಯಲಯದ ಶಿಬಿರದಲ್ಲಿ ಸುದೀರ್ಘ ಕಾಲದಿಂದ ಬಾಕಿ ಉಳಿದಿದ್ದ ೧,೮೪,೦೦೦ಮೋಟಾರು ವಾಹನಗಳ ಪ್ರಕರಣಗಳು ಇತ್ಯರ್ಥಗೊಂಡವು. ಈ ಲೋಕ ಅದಾಲತ್ ಕಾರ್ಯವು ಮೊಯಿಲಿಯವರಿಗೆ ಸಾವಿರಾರು ಕಕ್ಷಿದಾರರು ಧನ್ಯತೆಯನ್ನು ವ್ಯಕ್ತಪಡಿಸಿ ಮೊಯಿಲಿಯವರ ಅಭಿಮಾನಿಗಳಾಗಿದ್ದಾರೆ. ಈ ಅಭೂತಪೂರ್ವವಾದ ಕಾರ್ಯವನ್ನೂ ಸಂಘಟಿಸಿದ ರೀತಿ ಜನತೆಗೆ ಹತ್ತಿರವಾದ ಕಾರ್ಯ ನಿಜಕ್ಕೂ ದಾಖಲಾಗುವಂತಹದ್ದು.

ಮೊಯಿಲಿಯವರು ರಾಜ್ಯದ ಮುಖ್ಯಮಂತ್ರಿಗಳಾಗಿದ್ದಾಗ ತಿದ್ದುಪಡಿಯಾದ ಹಿಂದೂ ಉತ್ತರಾಧಿಕತ್ವ ಕಾಯ್ದೆ. ಇದು ೧೯೫೬ರನ್ವಯ ರಾಜ್ಯಕ್ಕೆ ಅನ್ವಯಿಸುವ ನಿಟ್ಟಿನಲ್ಲಿ ತಿದ್ದುಪಡಿಗೊಂಡ ಕಾಯ್ದೆಯಾಗಿದೆ. ಕರ್ನಾಟಕ Act No. 23 of ೧೯೯೪ ಹಿಂದೂ ಉತ್ತರಾಧಿಕತ್ವ ಕರ್ನಾಟಕ ತಿದ್ದುಪಡಿ ಕಾಯ್ದೆ ೧೯೯೦ಎಂದಾಯಿತು. ನಂತರ ಅದು ೨೩–೦೭–೧೯೯೪ರಲ್ಲಿ ರಾಷ್ಟ್ರಪತಿಯವರಿಂದ ಅಂಗೀಕೃತಗೊಂಡಿತು. ಈ ಕಾಯ್ದೆಯ ಅನ್ವಯವಾಗಿ ಮಗನಿಗೆ ಸಮನಾದ ಪಾಲನ್ನು ಮಗಳು ಸಹ ಪಡೆಯುವಂತಾಯಿತು. ಅಂದರೆ ಸ್ಥಿರಾಸ್ತಿಯಲ್ಲಿ ಉತ್ತರಾಧಿಕಾರತ್ವದ ಹಕ್ಕು ಆಕೆಯು ಪುತ್ರನಾಗಿದ್ದರೆ ಯಾವ ರೀತಿಯಲ್ಲಿ ದೊರೆಯಬಹುದಾಗಿತ್ತೋ ಅದೇ ತೆರನಾಗಿ ಪುತ್ರಿಯಾಗಿಯೂ ಪಡೆಯುವ ಹಕ್ಕು ಮಹಿಳೆಯರಿಗೆ ಪ್ರಾಪ್ತಿಯಾಯಿತು.

ಅಂದರೆ ಈ ಮೇಲಿನ ತಿದ್ದುಪಡಿ ಕಾಯ್ದೆಯ ಪ್ರಮುಖ ಅಂಶ ಜಂಟಿ ಹಿಂದೂ ಕುಟುಂಬವೊಂದರಲ್ಲಿ ಸ್ಥಿರಾಸ್ತಿಯನ್ನು ಪಾಲುಮಾಡುವಾಗ ಮಗನಿಗೆ ನೀಡುವ ಸಮನಾದ ಪಾಲು ಮಗಳಿಗೆ ದೊರೆಯುವಂತೆ ವಿಭಾಗ ಮಾಡಬೇಕು. ಈ ಕಾಯ್ದೆಯ ಪ್ರಮುಖ ಆಶಯವೆಂದರೆ, ವರದಕ್ಷಿಣೆಯನ್ನು ನಿವಾರಿಸುವ ಮತ್ತು ಹಿಂದೂ ಸಮಾಜದ ಮಹಿಳೆಯರ ಸ್ಥಿತಿಗತಿಗಳನ್ನು ಉನ್ನತೀಕರಿಸುವ ಗುರಿಯನ್ನು ಹೊಂದಿತು.

ಇನ್ನು ಒಂದು ಬಹುಮುಖ್ಯವಾದ ಮೊಯಿಲಿಯವರ ಆಶಯ ಗೊತ್ತುವಳಿಯಾಗಿದೆ. ಅಳಿಯ ಸಂತಾನ ಕುಟುಂಬದ ದಂಪತಿಗಳ ಹಲವು ವಿವಾಹ ವಿಚ್ಛೇದನ ಪ್ರಕರಣಗಳನ್ನು ಮೊಯಿಲಿಯವರು ತಾವು ನ್ಯಾಯವಾದಿಗಳಾದ ಸಂದರ್ಭದಲ್ಲಿ ನಿಭಾಯಿಸಬೇಕಾಯಿತು. ಈ ಪ್ರಕರಣದಲ್ಲಿ ಮಹಿಳೆಗೆ ಯಾವುದೇ ರಕ್ಷಣೆ ಇಲ್ಲದೇ ಆರು ತಿಂಗಳ ಅವಧಿಯ ನೋಟಿಸ್ ಮೂಲಕ ವಿಚ್ಛೇಧನ ತಡೆಯಬಹುದಾಗಿತ್ತು. ವಿಧಾನಸೌಧಕ್ಕೆ ಶಾಸಕರಾಗಿ ಮೊಯಿಲಿಯವರು ಬಂದ ಕೂಡಲೇ ಈ ಅಳಿಯ ಸಂತಾನ ಕುಟುಂಬಕ್ಕೆ ಸೇರಿದ ಮಹಿಳೆಯ ಮೇಲಿನ ದೌರ್ಜನ್ಯವನ್ನು ತಡೆಗಟ್ಟುವ ಸದುದ್ದೇಶದಿಂದ ತಿದ್ದುಪಡಿಗಾಗಿ ಗೊತ್ತುವಳಿಯನ್ನು ಮಂಡಿಸಿದರೆ ಇದು ಮಹಿಳೆಯರ ಕುರಿತು ಇರುವ ನ್ಯಾಯಪರವಾದ ಚಿಂತನೆಯಾಗಿದೆ ಎಂದು ಗುರುತಿಸಲಾಗಿದೆ.

ಮೊಯಿಲಿಯವರು ಸಾಮಾನ್ಯ ಮಹಿಳೆಯರನ್ನು ದೃಷ್ಟಿಯಲ್ಲಿಟ್ಟುಕೊಂಡು ತಮ್ಮ ಅಧಿಕಾರವಧಿಯಲ್ಲಿ ಕೆಲವು ಸವಲತ್ತುಗಳನ್ನು ನೀಡಿದ್ದಾರೆ ಅವುಗಳು ಈ ರೀತಿಯಾಗಿವೆ.

೧) "ಅನಧೀಕೃತ ಬೇಸಾಯವನ್ನು ಸಕ್ರೀಯಗೊಳಿಸಿ ಈ ಜಮೀನನ್ನು ಪತಿಯು ಮಾರಾಟ ಮಾಡದಂತೆ ಅಥವಾ ದುರುಪಯೋಗ ಪಡಿಸದಂತೆ ಪತಿ–ಪತ್ನಿಯ ಜಂಟಿ ಹೆಸರಿನಲ್ಲಿ ಜಮೀನು ವಿತರಣಾ ಪ್ರಮಾಣ ಪತ್ರ ನೀಡಿಕೆ ಸಹಿತ ಮಹಿಳಾ ಬೇಸಾಯಗಾರರಿಗೆ ಆದ್ಯತೆಯಲ್ಲಿ ಸಹಾಯ.

೨) ಸೂಕ್ತ ತಿದ್ದುಪಡಿಯೊಂದಿಗೆ ಭೂ ಸುಧಾರಣಾ ಕಾಯಿದೆಯನ್ವಯದ ಹೆಚ್ಚುವರಿ ಜಮೀನನಲ್ಲಿ ಶೇ.೫೦ನ್ನು ಮಹಿಳೆಯರಿಗೆ ವಿತರಣೆ.

೩) ಭೂ ಸುಧಾರಣಾ ಕಾಯಿದೆಯನ್ವಯ ಜಮೀನನ್ನು ಪರಿವರ್ತನೆಗೊಳಿಸಿ ಮಹಿಳೆಯರನ್ನು ಆಸಕ್ತರೆಂದು ಪರಿಗಣಿಸಿ ಪತಿ–ಪತ್ನಿಯರಿಬ್ಬರ ಜಂಟಿ ಹೆಸರಿನಲ್ಲಿ ಪರಿವರ್ತನೆಯನ್ನು ದಾಖಲಿಸಿ ಕಾಯಿದೆಗೆ ಸೂಕ್ತ ತಿದ್ದುಪಡಿಯನ್ನು ತರುವುದು.

೪) ಕಂದಾಯ ಇಲಾಖೆಯ ವ್ಯಾಪ್ತಿಯಲ್ಲಿ ಬರುವ ವಿವಿಧ ಸಮಿತಿಗಳಲ್ಲಿ ಮಹಿಳೆಯರಿಗೆ ಪ್ರತಿನಿಧ್ಯ.

೫) ಶಿಕ್ಷಕರ ನೇಮಕಾತಿಯಲ್ಲಿ ಶೇ.೫೦ರಷ್ಟು ಮಹಿಳೆರಿಗೆ ಮೀಸಲಾತಿಯನ್ನು ನೀಡಿ ನೇಮಕಾತಿ ಮಾಡಲಾಯಿತು[೧೫].

ಮೊಯಿಲಿಯವರ ಸರ್ಕಾರ ಕೈಗೊಂಡ ಈ ನ್ಯಾಯಿಕ ಕ್ರಮಗಳು ಮಹಿಳೆಯರು ತಮ್ಮ ಹಕ್ಕಿನ ಬಗ್ಗೆ ಮತ್ತು ಕಾನೂನಿನ ರಕ್ಷಣೆಯ ಬಗ್ಗೆ ಸಾಮಾಜಿಕ ಕೇಂದ್ರಗಳಾಗಿಯೂ ಕಾರ್ಯನಿರ್ವಹಿಸಬೇಕಿತ್ತು. ಆದರೆ ನ್ಯಾಯಾಂಗ ವ್ಯವಸ್ಥೆಯಲ್ಲಿ ನಿರ್ಣಯಗಳು ವಿಳಂಬವಾಗಿರುವುದರಿಂದ ಮಹಿಳೆಯರಿಗೆ ಅಷ್ಟೊಂದು ಭದ್ರತೆ ನೀಡಿಲ್ಲವೆಂದೇ ಹೇಳಬಹುದು. ಒಟ್ಟಿನಲ್ಲಿ ಮೊಯಿಲಿಯವರು ನ್ಯಾಯಕ್ಕಾಗಿ ಹೋರಾಡುವ ಛಲವುಳ್ಳವರು ಅನೇಕ ಸಮಸ್ಯೆಗಳನ್ನು ಸವಾಲಾಗಿ ಸ್ವೀಕರಿಸಿ ತನ್ನನ್ನು ನಂಬಿದ ಜನತೆಗೆ ನ್ಯಾಯ ಕೂಡಿಸುವಲ್ಲಿ ಶ್ರಮಿಸಿದವರು.

೪. ೩. ೬ ಸಾಂಸ್ಕೃತಿಕ ಸಂಕಥನಗಳು

ಎಂ.ವೀರಪ್ಪ ಮೊಯಿಲಿಯವರು ಕಲೆ, ಸಾಹಿತ್ಯ ಮತ್ತು ಸಾಂಸ್ಕೃತಿಕ ಕ್ಷೇತ್ರಕ್ಕೆ ಅಪಾರ ಕೊಡುಗೆಯನ್ನು ನೀಡಿದವರು. ಸಂಸ್ಕೃತಿ ಪರವಾದ ಚಿಂತನೆಗಳ ಮೂಲಕ ಸಾಂಸ್ಕೃತಿಕ ಬದುಕನ್ನು ಶ್ರೀಮಂತಗೊಳಿಸಿದರು. ರಾಜಕೀಯ ವ್ಯಕ್ತಿಗಳು ಸಾಮಾನ್ಯವಾಗಿ ಈ ಸಾಂಸ್ಕೃತಿಕ ಪ್ರಪಂಚದೊಂದಿಗೆ ಹೆಚ್ಚಾಗಿ ಗುರುತಿಸಿಕೊಳ್ಳುವುದಿಲ್ಲ. ಆದಾಗ್ಯೂ ಸಹ ಮೊಯಿಲಿಯವರು ತಮ್ಮ ಮನೆಯ ಪರಿಸರದ ಸಾಂಸ್ಕೃತಿಕ ಸಂಬಂಧ ಹಾಗೂ ತನ್ನ ಪ್ರದೇಶದ ಸಾಂಸ್ಕೃತಿಕ ಸಂಬಂಧ ಇವೆಲ್ಲವುಗಳನ್ನು ಮೊಯಿಲಿಯವರು ಬಾಲ್ಯದಲ್ಲಿ ಕಂಡುಂಡು ಅನುಭವಿಸಿದರು. ಹೀಗಾಗಿ ಸಾಂಸ್ಕೃತಿಕ ರಂಗದಲ್ಲಿ ಮೊಯಿಲಿಯವರು ಮೊದಲಿನಿಂದಲೂ ಆಸಕ್ತಿಯುಳ್ಳವರಾಗಿದ್ದಾರೆ.

ಎಂ.ವೀರಪ್ಪ ಮೊಯಿಲಿಯವರು ನಾಡು ಕಂಡ ಅಭೂತಪೂರ್ವ ಸಾಂಸ್ಕೃತಿಕ ರಾಯಭಾರಿ, ದೇಶಿಯ ಕಲೆಗಳನ್ನು ರಕ್ಷಿಸಲಿಕ್ಕೆ ಅಕಾಡೆಮಿ ಮಾದರಿಯ ಸಂಸ್ಥೆಗಳನ್ನು ತೆರೆಯುವ ಮೂಲಕ ಸಾಂಸ್ಕೃತಿಕವಾಗಿ ನಾಡು ಸಂಪದ್ಭರಿತವಾಗಲು ಪ್ರಯತ್ನಿಸಿದವರು. ತಮ್ಮ ಅಧಿಕಾರ ಅವಧಿಯಲ್ಲಿ ಹತ್ತು ಹಲವು ಸಾಂಸ್ಕೃತಿಕ ಕಾರ್ಯಗಳನ್ನು ಹಮ್ಮಿಕೊಳ್ಳುವುದರ ಮೂಲಕ ಹೊಸ ಅಧ್ಯಾಯವನ್ನು ಪ್ರಾರಂಭಿಸಿದರು. ಭಾರತೀಯ ಸಂಸ್ಕೃತಿ ಸಂಘರ್ಷವು

ಮತ್ತು ಸಮಾವೇಶಗಳ ಒಂದು ಅಪೂರ್ವ ಕ್ರಮವಾಗಿದೆ. ಸೃಜನಾತ್ಮಕ ಕ್ರಿಯೆಯಲ್ಲಿ ಧರ್ಮ ಚಲನಶೀಲತೆಯನ್ನು ಹಾಗೂ ಮೂಲ ತಿರುಳನ್ನು ಕಂಡುಕೊಂಡದ್ದು, ನಮ್ಮ ಧರ್ಮದಲ್ಲಿ ಎರಡು ತೆರನಾದ ಅಂಶಗಳಿವೆ. ಸಹಿಷ್ಣತೆ ಹಾಗೂ ಸಹಬಾಳ್ವೆಯೂ ಮುಖ್ಯವಾದದು. ಆ ನಿಟ್ಟಿನಲ್ಲಿ ಮೊಯಿಲಿಯವರು ಸಾಂಸ್ಕೃತಿಕ ಹಲವು ಯೋಜನೆಗಳನ್ನು ಅನಾವರಣಗೊಳಿಸಿದವರು. ಕನ್ನಡ ಭಾಷೆ, ಸಂಸ್ಕೃತಿಯನ್ನು ಬೆಳಗಲು ಮೊಯಿಲಿಯವರು ಕನ್ನಡ ಅಭಿವೃದ್ಧಿಪ್ರಾಧಿಕಾರದ ಜೊತೆ ಸಕ್ರೀಯಕ್ರಮದ ಕಾರ್ಯಕ್ರಮಗಳು ಹೆಚ್ಚಿರಬೇಕು. ಎಂದು ೨೦ ಅಂಶಗಳನ್ನು ಗುರುತಿಸಿದ್ದಾರೆ. ಆ ತೆರನಾಗಿ ಈ ಕಾರ್ಯಯೋಜನೆಯನ್ನು ಜಾರಿಗೆ ತರಲಾಗಿದೆ. ಕನ್ನಡ ಜಾರಿಗಾಗಿ ಪ್ರತ್ಯೇಕವಾದ ಸಚಿವಾಲಯ ಸ್ಥಾಪನೆಯಾಗಿದೆ. ಕನ್ನಡ ಜಾಗೃತಿ ವರ್ಷ ಕಾರ್ಯಕ್ರಮದ ಮುಖ್ಯ ಅಂಶಗಳು ಈ ರೀತಿಯಲ್ಲಿವೆ.

೧) "ಕನ್ನಡ ಬಳಕೆಯಲ್ಲಿ ಕನ್ನಡ ಬೆರಳಚ್ಚು ಯಂತ್ರಗಳ ಪಾತ್ರ ಬಹು ಮುಖ್ಯವಾದುದು.

೨) ಕನ್ನಡ ಮಾದರಿ ಪ್ರಾಥಮಿಕ ಶಾಲೆಗಳಿಗೆ ಎಲ್ಲಾ ಬಗೆಯ ಸೌಲಭ್ಯಗಳನ್ನು ಒದಗಿಸಲಾಗುವುದು.

೩) ಸಮಾಜ ಕಲ್ಯಾಣ ಇಲಾಖೆ ವ್ಯಾಪ್ತಿಯಲ್ಲಿ ಉತ್ತಮ ಗುಣಮಟ್ಟದ ಕನ್ನಡ ಶಿಶು ವಿಹಾರಗಳನ್ನು ಸ್ಥಾಪಿಸಿ ಕನ್ನಡ ಮಾಧ್ಯಮ ಶಾಲೆಗಳಿಗೆ ವಿದ್ಯಾರ್ಥಿಗಳನ್ನು ಆಕರ್ಷಿಸುವುದು.

೪) ಗಡಿ ಭಾಗದ ಕನ್ನಡ ಮಾಧ್ಯಮ ಶಾಲೆಗಳಿಗೆ ಕನ್ನಡ ಪುಸ್ತಕ ಪೀಠೋಪಕರಣ, ಪ್ರಯೋಗಶಾಲೆ ಅನುದಾನ ಮುಂತಾದ ಅನುಕೂಲತೆಗಳನ್ನು ಕಲ್ಪಿಸಲಾಗುವುದು.

೫) ರಾಜ್ಯದ ಎಲ್ಲಾ ಖಾಸಗಿ ಅಂಗಡಿ, ಸಂಸ್ಥೆಗಳ ನಾಮಫಲಕಗಳು ಕನ್ನಡದಲ್ಲೇ ಇರಬೇಕೆಂದು ಕಾನೂನು ಮಾಡಲಾಗುವುದು. ಕಾರ್ಮಿಕ ಇಲಾಖೆ ಮುಖಾಂತರ ಇದನ್ನು ಜಾರಿಗೊಳಿಸಲಾಗುವುದು.

೬) ರಾಜ್ಯ ಸರ್ಕಾರದ ಅಧೀನದಲ್ಲಿ ಬರುವ ಎಲ್ಲಾ ರಂಗಮಂದಿರಗಳಲ್ಲಿ ನಡೆಯುವ ಕಾರ್ಯಕ್ರಮಗಳ ಕುರಿತು ಜಾಹಿರಾತು ಫಲಕಗಳು ಕನ್ನಡದಲ್ಲಿರಬೇಕೆಂಬ ನಿಯಮ ಮಾಡಲಾಗುವುದು.

೭) ಶಿಕ್ಷಣ ಮಾಧ್ಯಮ ಕುರಿತಂತೆ ಡಾ.ಎಚ್.ನರಸಿಂಹಯ್ಯ ಸಮಿತಿ ವರದಿಯನ್ನು ಸಂಪೂರ್ಣವಾಗಿ ಜಾರಿಗೆ ತರಲಾಗುವುದು. ಇದರಿಂದ ಇಂಗ್ಲೀಷ ಮಾಧ್ಯಮ ಶಾಲೆಗಳ ಸ್ಥಾಪನೆ ಕುರಿತು ಎದ್ದಿರುವ ವಿವಾದ ಬಗೆಹರಿಯುತ್ತದೆ.

೮) ಕನ್ನಡ ಅಭಿವೃದ್ಧಿಗೆ ಪೂರಕವಾದ ಯೋಜನೆಗಳನ್ನು ತ್ವರಿತವಾಗಿ ಜಾರಿಗೊಳಿಸುವುದು. ಕನ್ನಡ ಸಾಹಿತ್ಯ ಪರಿಷತ್‌ನ ಕನ್ನಡ–ಕನ್ನಡ ನಿಘಂಟು ಮೈಸೂರು ವಿಶ್ವವಿದ್ಯಾಲಯದ ವಿಷಯ–ವಿಶ್ವಕೋಶ ಕನ್ನಡ ವಿಶ್ವಕೋಶ ಇತ್ಯಾದಿ ಸರ್ಕಾರದ ಅನುದಾನಗಳಿಂದ ನಡೆಯುವ ಯೋಜನೆಗಳನ್ನು ಒಂದು ನಿರ್ದಿಷ್ಟ ಕಾಲಾವಧಿಯಲ್ಲಿ ಪೂರ್ಣಗೊಳ್ಳುವಂತೆ ಮಾಡುವುದು.

೯) "ಕನ್ನಡ ಪುಸ್ತಕ ಖರೀದಿ ಹಾಗೂ ಮಾರಾಟ ವಿಚಾರವನ್ನು ಒಂದು ಜನಾಂದೋಲನವನ್ನಾಗಿ ಪರಿವರ್ತಿಸಲಾಗುವುದು ಕನ್ನಡ ಪುಸ್ತಕ ಪ್ರಾಧಿಕಾರ ರಚನೆಯಾಗಿದೆ. ಇದರಲ್ಲಿ ನಾನು ಸೇರಿದಂತೆ ಸಚಿವ ಸಂಪುಟದ ಸಹದ್ಯೋಗಿಗಳು ಸರ್ಕಾರದ ಹಿರಿಯ ಅಧಿಕಾರಿಗಳು ಜಿಲ್ಲಾಧಿಕಾರಿಗಳು, ಜಿಲ್ಲಾ ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿಗಳು ಶಾಸಕರು ಸಾಮಾನ್ಯ ಜನತೆ ಎಲ್ಲರೂ ಪುಸ್ತಕ ಮಾರಾಟ ಆಂದೋಲನದಲ್ಲಿ ಪಾಲ್ಗೋಳ್ಳಲಿದ್ದಾರೆ" ಎಂದು ಹೇಳಿದರು

೧೦) ಮೊಯಿಲಿಯವರು ಕನ್ನಡ ಮತ್ತು ಸಂಸ್ಕೃತಿ ಸಚಿವರಾಗಿದ್ದಾಗ ರೂಪಿಸಿದ್ದ ಕನ್ನಡ ಪುಸ್ತಕಗಳ ಸಗಟು ಖರೀದಿ ಸಂಬಂಧದಲ್ಲಿ ಯೋಜನೆಯನ್ನು ಕಾರ್ಯಗತಗೊಳಿಸಲಾಯಿತು. ಕನ್ನಡ ಎಲೆಕ್ಟ್ರಾನಿಕ್ ಬೆರಳಚ್ಚು ಯಂತ್ರ ರೂಪಿಸುವ ವಿಚಾರವನ್ನು ಕೈಗೆತ್ತಿಕೊಳ್ಳಲಾಗಿದೆ. ಕನ್ನಡ ಮಾಧ್ಯಮದಲ್ಲಿ ಅಭ್ಯಾಸ ಮಾಡಲು ಅನುಕೂಲವಾಗುವಂತೆ ಶಾಲಾ ಕಾಲೇಜುಗಳಿಗೆ ಮೂಲಭೂತ ಶೈಕ್ಷಣಿಕ ಪುಸ್ತಕಗಳನ್ನು ಪೂರೈಸಲಾಗುವುದು ಎಂದು ಹೇಳಿದ್ದಾರೆ.

೧೧) ಕನ್ನಡ ಅಭಿವೃದ್ಧಿ ಪ್ರಾಧಿಕಾರಕ್ಕೆ ಸ್ವಾಯತ್ತತೆ ಕೊಡಲು ಬರುವ ಅಧಿವೇಶನದಲ್ಲಿ ಮಸೂದೆಯನ್ನು ತರಲಾಗುವುದು[೧೬]" ಎಂದು ಮೊಯಿಲಿಯವರು ಹೇಳಿದ್ದಾರೆ.

ಇವಲ್ಲದೇ ಇನ್ನು ಹತ್ತು ಅಂಶಗಳನ್ನು ಸಿದ್ದಪಡಿಸುವುದರ ಜೊತೆಗೆ ಕನ್ನಡದ ಮೂಲಕ ರಾಜ್ಯದ ಆಡಳಿತ ಸಂಪೂರ್ಣವಾಗಿ ಜಾರಿಗೊಳಿಸುವ ಸಂಕಲ್ಪವನ್ನು ಕೈಗೊಳ್ಳುವುದು ಅಗತ್ಯವಾಗಿದೆ. ನನ್ನ ಸಚಿವಾಲಯದಲ್ಲಿ ಕನ್ನಡಕ್ಕೆ ಅಗ್ರಸ್ಥಾನ ಈ ನಡುವಳಿಕೆಯು ಎಲ್ಲ ಸಚಿವ ಅಧಿಕಾರಿಗಳಿಗೂ ಉಂಟಾಗಬೇಕು. ಕನ್ನಡ–ಕನ್ನಡ ತತ್ವವನ್ನು ರಾಜ್ಯದ ಆಡಳಿತದಲ್ಲಿ ಸಂಪೂರ್ಣವಾಗಿ ಅಳವಡಿಸುವುದೆಂದರೆ, ಸಂಪೂರ್ಣವಾಗಿ ಕನ್ನಡ ನಾಡಿನ ಪರಂಪರೆಯನ್ನು ಎತ್ತಿಹಿಡಿಯುವುದು ಎಂದರ್ಥವಾಗಿದೆ. ಮೊಯಿಲಿಯವರು ಈ ಮೇಲಿನ ಮಾತುಗಳು ಕನ್ನಡ

ಜಾಗೃತಿ ವರ್ಷದ ಪ್ರಾಸ್ತಾವಿಕ ನುಡಿಯಲ್ಲಿ ಹಾಸು ಹೂಕ್ಕಾಗಿವೆ. ಈ ಮಾತುಗಳ ಉದ್ದೇಶ ಕನ್ನಡ ಸಂಸ್ಕೃತಿ ಮಟ್ಟವನ್ನು ಹೆಚ್ಚಿಸುವದಾಗಿದೆ.

ಕನ್ನಡ ಪ್ರೇಮ ಎನ್ನುವುದು ಕೇವಲ ಮಾತಿನಲ್ಲಿ ವ್ಯಕ್ತವಾಗುವುದಲ್ಲ. ಅದು ಮನಸ್ಸಿನ ಹೃದಯದಲ್ಲಿ ಅವಿತುಕೊಂಡಿರಬೇಕು. ಪ್ರತಿಯೊಬ್ಬ ಕನ್ನಡಿಗನು ಕನ್ನಡದ ಪತ್ರಿಕೆ, ಮತ್ತು ಪುಸ್ತಕವನ್ನು ಕೊಂಡು ಓದುವ ಸದಭಿರುಚಿ ಇರಬೇಕು. ನಿಜವಾದ ಕನ್ನಡದವನೆಂದರೆ, ದಿನಪತ್ರಿಕೆಗಳನ್ನು, ಒಂದು ವಾರ ಪತ್ರಿಕೆಯನ್ನು, ವರ್ಷಕ್ಕೆ ಹನ್ನೆರಡು ಪುಸ್ತಕಗಳನ್ನು ಕೊಳ್ಳುವವರನ್ನು ನೈಜ ಕನ್ನಡಿಗರೆಂದು ಕರೆಯುವ ಕಾಲ ಇದಾಗಿದೆ ಎಂಬ ವಿಚಾರ ವೀರಪ್ಪ ಮೊಯಿಲಿಯವರದು. ಈ ಕನ್ನಡ ಮತ್ತು ಸಂಸ್ಕೃತಿಯ ಆರಾಧನೆಯಿಂದ ಇತ್ತೀಚೆಗೆ ಕೆಲ ಅಕಾಡೆಮಿ ರಚಿಸಿರುವ ಸರ್ಕಾರ, ಆ ಅಕಾಡೆಮಿ ಮೂಲಕವಾಗಿ ತುಳು, ಕೊಂಕಣಿ, ಕೊಡುವ ಭಾಷೆಗಳಿಗೆ ಅನನ್ಯವಾದ ಸ್ಥಾನವನ್ನು ಕೊಟ್ಟಿವೆ. ಈ ಅಕಾಡೆಮಿಗಳು ಕೇವಲ ಭಾಷೆಗೆ ಮಾತ್ರ ಮಹತ್ವವನ್ನು ನೀಡದೆ ಆ ಸಮುದಾಯಗಳ ಸಾಂಸ್ಕೃತಿಕ ಇತಿಹಾಸದ ಅಧ್ಯಯನಕ್ಕೆ ಬಹುದೊಡ್ಡ ಕೊಡುಗೆಯನ್ನು ನೀಡಿವೆ.

ಕನ್ನಡ ಮತ್ತು ಸಾಂಸ್ಕೃತಿಕ ಕ್ಷೇತ್ರಕ್ಕೆ ಮೊಯಿಲಿಯವರು ತೋರಿಸಿರುವ ಪ್ರೀತಿ ಅಗಾಧವಾದದ್ದು ಕನ್ನಡವನ್ನು ಆಡಳಿತದ ಪ್ರತಿ ಹಂತದಲ್ಲಿಯೂ ಪ್ರದರ್ಶಿಸಿಸುವ ಜಾಯಮಾನ ಅವರದು. ೧೯೯೨ ಮಾರ್ಚ ೧೦ರಂದು ವಿಧಾನ ಸಭೆಯಲ್ಲಿ ಮುಸ್ಲಿಂ ಲಿಗ್ ಶಾಸಕ ಕಮರುಲ್ಲ ಇಸ್ಲಾಂ ಪ್ರಶ್ನೆಗೆ ಮೊಯಿಲಿಯವರು ಕನ್ನಡದಲ್ಲಿ ಉತ್ತರಿಸಿದಾಗ ಕಮರುಲ್ಲ ಅವರು ತಕರಾರುವೆತ್ತಿದರು. ನನಗೆ ಕನ್ನಡ ಬರುವುದಿಲ್ಲ. ಇಂಗ್ಲೀಷನಲ್ಲಿ ಉತ್ತರಿಸಿ ಎಂದು ಹೇಳಿದರು. ಆದರೆ ಮೊಯಿಲಿಯವರು ಕನ್ನಡಕ್ಕಾಗಿ ಆ ಶಾಸಕರಿಗೆ ಕನ್ನಡ ಕಲಿಯಬೇಕು ಎಂದು ಸಲಹೆ ನೀಡಿದರು. ಇದು ಮೊಯಿಲಿಯವರ ಕನ್ನಡ ಸಂಸ್ಕೃತಿಯನ್ನು ಅನುಷ್ಠಾನಗೊಳಿಸಿದ ಪರಿಯನ್ನು ಅಭಿವ್ಯಕ್ತಿಸುತ್ತದೆ. ಕನ್ನಡ ಮತ್ತು ಸಂಸ್ಕೃತಿ ಸಚಿವರಾಗಿ ಮೊಯಿಲಿಯವರು ಸಾಂಸ್ಕೃತಿಕ ವಿವೇಚನೆಯನ್ನು ಇಟ್ಟುಕೊಂಡವರು. ಕನ್ನಡ ಸಂಸ್ಕೃತಿಯ ಸಂವರ್ಧನೆಗಾಗಿ ಸಾಂಸ್ಕೃತಿಕ ಸುದಿನ ಮತ್ತು ತಾಲೂಕ ಮಟ್ಟದ ಸಾಂಸ್ಕೃತಿಕ ಕಾರ್ಯಕ್ರಮಗಳಾದ ಶುಕ್ರವಾರದ ಕಾರ್ಯಕ್ರಮ ನಡೆಸಿ ಯಶಸ್ಸನ್ನು ಪಡೆದುಕೊಂಡರು.

ಕರ್ನಾಟಕದ ಪ್ರತಿಷ್ಠಿತ ಪ್ರಶಸ್ತಿಯಾದ ರಾಜ್ಯೋತ್ಸವ ಪ್ರಶಸ್ತಿಯು ರಾಜಕಾರಣದ ವಿವೇಚನೆಯಿಂದ ಕೂಡಿರದೆ, ವಿಶ್ವಾಸರ್ಹತೆಯ, ಮಾನದಂಡದ ಮೂಲಕ

ಬೆಳೆಯುವಂತಾಗಬೇಕು. ಜೊತೆಗೆ ಹಿರಿಯ ಸಾಹಿತಿಗಳಾದ ಶಿವರಾಮ ಕಾರಂತ, ಎಚ್.ನರಸಿಂಹಯ್ಯ ಇವರ ಅಧ್ಯಕ್ಷತೆಯಲ್ಲಿ 'ರಾಜ್ಯೋತ್ಸವ ಪ್ರಶಸ್ತಿ' ಸಮಿತಿಯನ್ನು ರಚಿಸಿ ಸರ್ಕಾರದ ಅನನ್ಯ ಪರಂಪರೆಯನ್ನು ಪ್ರಾರಂಭಿಸಿದರು. ಮೊಯಿಲಿಯವರು ತಮ್ಮ ಅಧಿಕಾರವಧಿಯಲ್ಲಿ ಸಾಹಿತಿ ಕವಿ ಮತ್ತು ಕಲಾವಿದರಿಗೆ ಗೌರವಧನವನ್ನು ಹೆಚ್ಚಿಸಿದರು.

ಹಂಪಿಯಲ್ಲಿ ಕನ್ನಡ ವಿಶ್ವವಿದ್ಯಾಲಯ ಸ್ಥಾಪನೆಯ ಹಿಂದೆ ಮೊಯಿಲಿಯವರ ಕನಸು ಅಡಗಿದೆ. ಕರ್ನಾಟಕ ವಿಶ್ವ ವಿದ್ಯಾಲಯದ ಕಾಯಿದೆಯಲ್ಲಿ ಪ್ರತ್ಯೇಕವಾದ ಕಾಯಿದೆಯನ್ನು ಅಂತರ್ಗತಗೊಳಿಸಿ ವಿಶಿಷ್ಟವಾದ ವಿಶ್ವವಿದ್ಯಾಲಯವನ್ನು ರೂಪಿಸಲು ಪಣತೊಟ್ಟರು. ಕನ್ನಡ ವಿಶ್ವವಿದ್ಯಾಲಯದ ಪ್ರಥಮ ಕುಲಪತಿಯಾದ ಡಾ.ಚಂದ್ರಶೇಖರ ಕಂಬಾರರಿಗೆ ಒಂದು ಮಾತನ್ನು ಹೇಳಿದರು. "ಈ ವಿಶ್ವವಿದ್ಯಾಲಯ ಎಲ್ಲ ವಿಶ್ವವಿದ್ಯಾಲಯಗಳಂತೆ ಸಮಾನವಾಗಿ ಗುರುತಿಸಿಕೊಳ್ಳದಂತೆ ವಿಶಿಷ್ಟತೆಯಿಂದ ಕನ್ನಡ ಭಾಷೆ, ಕನ್ನಡತ್ವ, ಕರ್ನಾಟಕ ಇತಿಹಾಸ ಪರಂಪರೆಯ ಸಂಸ್ಕೃತಿಯನ್ನು ಪ್ರತಿಬಿಂಬಿಸಬೇಕು. ಜೊತೆಗೆ ಸಂಯೋಜಿತ ಕಾಲೇಜುಗಳಿಗೆ ಸಾಮಾನ್ಯ ಪದವಿ ಪ್ರಧಾನ ಮಾಡುವ ವಿಶ್ವವಿದ್ಯಾಲಯ ಇದಾಗಬಾರದು. ಸಂಸ್ಕೃತಿಕ ಕಲಾ ಸೃಷ್ಟಿಗೆ ಅವಕಾಶವನ್ನುಂಟು ಮಾಡುವ ಸಾಮಾಜಿಕ ವ್ಯವಸ್ಥೆಯನ್ನೆ ನಾಗರಿಕತೆ ಎನ್ನುತ್ತಾರೆ. ಅದರ ಅಂಗಗಳು ನಾಲ್ಕು, ಆರ್ಥಿಕನೆಲೆ, ರಾಜಕೀಯ ಒಕ್ಕೂಟ, ನೈತಿಕ ಸಂಪ್ರದಾಯಗಳು ಮತ್ತು ಜ್ಞಾನ ಕಲಾ ಜಗತ್ತಿನ ನಾನಾ ಪ್ರಕಾರಗಳ ಶೋಧ ಎಲ್ಲಿ ಗೊಂದಲ ಮತ್ತು ಆತಂಕಗಳು ಕೊನೆಗೊಳ್ಳುತ್ತವೆಯೋ ಅಲ್ಲಿ ನಾಗರಿಕತೆ ಆರಂಭವಾಗುತ್ತದೆ[೧೭]".

ಎಂ. ವೀರಪ್ಪ ಮೊಯಿಲಿಯವರು ಕನ್ನಡ ಸಾಹಿತ್ಯ ಪರಿಷತ್ತಿನ ವಾರ್ಷಿಕ ಅನುದಾನವನ್ನು ವಿಸ್ತರಿಸುತ್ತಾ ಜಿಲ್ಲಾ ಪಂಚಾಯಿತ್ ತಾಲೂಕಾ ಪಂಚಾಯತಿಗೆ ಸರ್ಕಾರಿ ಆದೇಶವನ್ನು ಹೊರಡಿಸಿದರು. ಬೆಂಗಳೂರಿನಲ್ಲಿ ಕನ್ನಡ ಸಾಹಿತ್ಯ ಪರಿಷತ್‌ನ ವಾರ್ಷಿಕ ನಿರ್ವಹಣೆ ಜೊತೆಯಲ್ಲಿ ಅಭಿವೃದ್ಧಿ ಕಾರ್ಯಕ್ರಮಗಳು ಪ್ರತ್ಯೇಕವಾಗಿ ನಡೆಯುವಂತೆ ನೋಡಿಕೊಂಡರು. ಕನ್ನಡ ಮತ್ತು ಸಂಸ್ಕೃತಿ ಸಚಿವರಾಗಿದ್ದ ಸಂದರ್ಭದಲ್ಲಿ ಮೊಯಿಲಿಯವರು ಸಂಸ್ಕೃತಿ ಮತ್ತು ಸಾಹಿತ್ಯದ ಅಭಿವೃದ್ಧಿಯ ವಿಷಯಗಳನ್ನು ವರ್ಗಾಯಿಸಿಕೊಂಡರು. ಪತ್ರಾಗಾರ, ಪುರಾತತ್ವ ಶಾಸ್ತ್ರ ಮತ್ತು ವಸ್ತು ಸಂಗ್ರಹಾಲಯ ರಾಜ್ಯ ಪತ್ರಗಳು ವಿವಿಧ ಅಕಾಡೆಮಿಗಳ ಜೊತೆ ಕನ್ನಡ ಮತ್ತು ಸಂಸ್ಕೃತಿಗಳ ವಿಷಯಗಳನ್ನು ವಾರ್ತಾ ಪ್ರವಾಸೋದ್ಯಮ ಯುವಜನ ಸೇವಾ ಸಚಿವಾಲಯದಿಂದ ಪ್ರತ್ಯೇಕಿಸಿ ಈ ಇಲಾಖೆಗೆ

ಹೆಚ್ಚಿನ ಮಾನ್ಯತೆ ನೀಡಿದರು. ೩೭೪೧ ಕಲಾವಿದರಿಗೆ ಪಿಂಚಣಿ ಹಣವನ್ನು ನೀಡಿ ಬಾಕಿ ಉಳಿದ ೧೨೭೭ ಅರ್ಜಿಗಳನ್ನು ಸರ್ಕಾರ ಶೀಘ್ರವಾಗಿ ವಿಲೇವಾರಿ ಮಾಡಿತು. ಇದೇ ಸಂದರ್ಭದಲ್ಲಿ ೧೯೯೪ರಲ್ಲಿ ಕನ್ನಡ ಅಭಿವೃದ್ಧಿ ಪ್ರಾಧಿಕಾರ ಪ್ರಾರಂಭಿಸಿದ್ದು ಮಹತ್ವದ ಹೆಜ್ಜೆಯಾಗಿದೆ. ಕನ್ನಡ ಅಭಿವೃದ್ಧಿ ಪ್ರಾಧಿಕಾರದಿಂದ ದೇವಿಕಾ ರಾಣಿಯವರ ಕಲಾಕೃತಿಗಳ ಉಡುಗೊರೆಗಳು, ಆಭರಣಗಳು ಮತ್ತು ಬೆಂಗಳೂರು ಸಮೀಪದ ತಾತಗುಣಿ ಪ್ರದೇಶದಲ್ಲಿ ೪೦೦ ಎಕರೆ ತೋಟವನ್ನು ಸರ್ಕಾರ ಸ್ವಾಧೀನಪಡಿಸಿಕೊಂಡಿತು. ವಾರಸುದಾರರಿಲ್ಲದೇ ನಿಧನರಾದ ರಷ್ಯಾ ಕಲಾವಿದ ದಿ॥ರೋರಿಚ್ ಹಾಗೂ ಪತ್ನಿ ದೇವಿಕಾರಾಣಿಯವರ ಆಸ್ತಿ ಬೇರೆಯವರಿಗೆ ಹೋಗದ ಹಾಗೆ ಸರ್ಕಾರ ವಶಪಡಿಸಿಕೊಂಡು ಅಮೂಲ್ಯವಾದ ಕಲಾಕೃತಿಗಳನ್ನು ಸಂರಕ್ಷಿಸಿತು.

ತುಳು ಕೊಡುವ ಮತ್ತು ಕೊಂಕಣಿ ಭಾಷೆಗಳಿಗೆ ಅಕಾಡೆಮಿಗಳನ್ನು ರಚಿಸುವುದರ ಮೂಲಕ ಪ್ರಾದೇಶಿಕ ಭಾಷೆಗೆ ಹೆಚ್ಚಿನ ಒತ್ತನ್ನು ನೀಡಿದರು. ಈ ಭಾಷಾ ಅಕಾಡೆಮಿಗಳು ತಮ್ಮ ಸಂಸ್ಕೃತಿಕ ಭಾಷಾ ಸಂಬಂಧಿತ ಹಾಗೂ ಸಾಹಿತ್ಯಿಕ ಚಟುವಟಿಕೆಗಳನ್ನು ಇಂದು ಹೆಚ್ಚಿನ ಪ್ರಮಾಣದಲ್ಲಿ ಕಾರ್ಯವನ್ನು ಮಾಡುತ್ತಿವೆ. ಸಾಹಿತ್ಯಿಕ ಮತ್ತು ಜನಪದದ ನಂಬಿಕೆಯ ಕೃತಿಗಳನ್ನು ಪ್ರಕಟಿಸುವುದರ ಮೂಲಕ ಈ ಅಕಾಡೆಮಿಗಳು ಇಂದು ಸಂಸ್ಕೃತಿಕ ನೆಲೆಯನ್ನು ಭದ್ರಪಡಿಸುತ್ತಿವೆ.

: ಅಡಿ ಟಿಪ್ಪಣಿ :

೧) "ಎಲ್ಲಿ ಮನ ಕಳುಕಿರದೊ ಎಲ್ಲಿ ತಲೆ ಬಾಗಿರದೋ" ಮೂಲ ಲೇಖಕರು ಡಾ॥ಎಚ್.ಪಿ. ಶಶಿಧರ ಮೂರ್ತಿ, ಸಿ.ಪಾಲ್ ವರ್ಗೀಸ್, ಅನುವಾದ ಮನೋಹರ ದೇಸಾಯಿ ಪುಟ-೪೩ ಮಾಹೇಶ್ವರಿ ಪ್ರಕಾಶನ ಬೆಂಗಳೂರು-೨೦೦೫.

೨) ರಾಷ್ಟ್ರೀಯ ಚಿಂತನ ದರ್ಶನ ಎಂ.ವೀರಪ್ಪ ಮೊಯಿಲಿ ಸ್ವಪ್ನ ಬುಕ್ ಹೌಸ್ ಬೆಂಗಳೂರು-೨೦೦೩, ಪುಟ ಸಂಖ್ಯೆ-೩

೩) ಅದೇ-ಪುಟ-೨೮

೪) "ಎಲ್ಲಿ ಮನ ಕಳುಕಿರದೊ ಎಲ್ಲಿ ತಲೆ ಬಾಗಿರದೋ" ಮೂಲ ಲೇಖಕರು ಡಾ॥ಎಚ್.ಪಿ. ಶಶಿಧರ ಮೂರ್ತಿ, ಸಿ,ಪಾಲ್ ವರ್ಗೀಸ್, ಅನುವಾದ ಮನೋಹರ ದೇಸಾಯಿ ಪುಟ-೪೩-೪೪ ಮಾಹೇಶ್ವರಿ ಪ್ರಕಾಶನ ಬೆಂಗಳೂರು-೨೦೦೫.

೫) ರಾಷ್ಟ್ರೀಯ ಚಿಂತನ ದರ್ಶನ ಎಂ.ವೀರಪ್ಪ ಮೊಯಿಲಿ ಸ್ವಪ್ನ ಬುಕ್ ಹೌಸ್ ಬೆಂಗಳೂರು-೨೦೦೩, ಪುಟ ಸಂಖ್ಯೆ-೯, ಮುನ್ನುಡಿ ಡಿ.ಎಂ.ನಂಜುಂಡಪ್ಪ

೬) ರಾಷ್ಟ್ರೀಯ ಚಿಂತನ ದರ್ಶನ ಎಂ.ವೀರಪ್ಪ ಮೊಯಿಲಿ ಪುಟ-೨೩೪

೭) "ಎಲ್ಲಿ ಮನ ಕಳುಕಿರದೊ ಎಲ್ಲಿ ತಲೆ ಬಾಗಿರದೋ" ಮೂಲ ಲೇಖಕರು ಡಾ॥ಎಚ್.ಪಿ. ಶಶಿಧರ ಮೂರ್ತಿ, ಸಿ,ಪಾಲ್ ವರ್ಗೀಸ್, ಅನುವಾದ ಮನೋಹರ ದೇಸಾಯಿ ಪುಟ-೧೦೫ ಮಾಹೇಶ್ವರಿ ಪ್ರಕಾಶನ ಬೆಂಗಳೂರು-೨೦೦೫.

೮) "ಎಲ್ಲಿ ಮನ ಕಳುಕಿರದೊ ಎಲ್ಲಿ ತಲೆ ಬಾಗಿರದೋ" ಮೂಲ ಲೇಖಕರು ಡಾ॥ಎಚ್.ಪಿ. ಶಶಿಧರ ಮೂರ್ತಿ, ಸಿ,ಪಾಲ್ ವರ್ಗೀಸ್, ಅನುವಾದ ಮನೋಹರ ದೇಸಾಯಿ ಪುಟ-೧೦೯-೧೧೦ ಮಾಹೇಶ್ವರಿ ಪ್ರಕಾಶನ ಬೆಂಗಳೂರು-೨೦೦೫.

೯) 'ರಸಾಲ' ವಿಮರ್ಶಾ ಲೇಖನ, ಡಾ. ವ್ಹಿ.ಎಸ್. ಮಾಳಿ, ಪುಟ – ೩೮

೧೦) "ಎಲ್ಲಿ ಮನ ಕಳುಕಿರದೊ ಎಲ್ಲಿ ತಲೆ ಬಾಗಿರದೋ" ಪುಟ ಸಂಖ್ಯೆ-೧೨೭

೧೦) "ಎಲ್ಲಿ ಮನ ಕಳುಕಿರದೊ ಎಲ್ಲಿ ತಲೆ ಬಾಗಿರದೋ" ಪುಟ ಸಂಖ್ಯೆ-೧೨೮

೧೧) "ಎಲ್ಲಿ ಮನ ಕಳುಕಿರದೊ ಎಲ್ಲಿ ತಲೆ ಬಾಗಿರದೋ" ಪುಟ ಸಂಖ್ಯೆ-೫೫

೧೨) "ಎಲ್ಲಿ ಮನ ಕಳುಕಿರದೊ ಎಲ್ಲಿ ತಲೆ ಬಾಗಿರದೋ" ಪುಟ ಸಂಖ್ಯೆ-೧೨೭

೧೩) ಕಿರುದಾರಿ ಹೆದ್ದಾರಿ ಕವಿವಿ ಹಂಪಿ ೨೦೦೭ ಎಂ.ವೀರಪ್ಪ ಮೊಯಿಲಿ ಪುಟ-೧೪೯

೧೪) "ಎಲ್ಲಿ ಮನ ಕಳುಕಿರದೊ ಎಲ್ಲಿ ತಲೆ ಬಾಗಿರದೋ" ಪುಟ ಸಂಖ್ಯೆ-೧೮೦-೧೮೧

೧೫) ನುಡಿ ಕಾಣಿಕೆ ಎಂ.ವೀರಪ್ಪ ಮೊಯಿಲಿ ಪುಟ-೨೪-೨೫ ಆಯ್ದ ಭಾಷಣ

ಸಂಕಲನ-೧೯೯೮

೧೬) ಕಿರುದಾರಿ ಹೆದ್ದಾರಿ ಎಂ.ವೀರಪ್ಪ ಮೊಯಿಲಿ-೨೦೦೭ ಪುಟ-೧೦೨

ಅಧ್ಯಾಯ – ೫ ಚಿಂತನೆಯ ಸೆಲೆಗಳು

೫.೧ ಪ್ರಸ್ತಾವನೆ

೫.೨ ಚಿಂತನೆಯ ಸೆಲೆಗಳು

ಅಧ್ಯಾಯ–೫

ಚಿಂತನೆಯ ಸೆಲೆಗಳು

೫.೧ ಪ್ರಸ್ತಾವನೆ

ಒಬ್ಬ ಪ್ರಬುದ್ಧ ರಾಜಕೀಯ ಚಿಂತಕ ಆಡಳಿತವನ್ನು ನಡೆಸಲು ಅವನಲ್ಲಿ ವಿವಿಧ ರೀತಿಯಲ್ಲಿ ಚಿಂತನೆಗಳು ಶೇಖರಣೆಗೊಂಡಿರುತ್ತವೆ. ಶ್ರೇಷ್ಠ ಮಟ್ಟದ ಸಾಧಕನಾಗಲೀ ಅಥವಾ ರಾಜಕೀಯ ಚಿಂತಕನಾಗಲೀ ತಾನು ಕಂಡು ಕೇಳಿ, ಅನುಭವಿಸಿದ ಸಾಮಾಜಿಕ ನೆಲೆಯಲ್ಲಿ ಏನಾದರೂ ಬದಲಾವಣೆ ತರಬಯಸಲು ತನ್ನದೇ ಆದ ಹೊಸ ಮಾರ್ಗವನ್ನು ಸೃಷ್ಟಿಸಿಕೊಂಡಿರುತ್ತಾನೆ. ಆ ಮೂಲಕ ಸಾಮಾಜಿಕ ಪಟ್ಟ ಭದ್ರ ಹಿತಾಸಕ್ತಿಗಳನ್ನು ಅಲ್ಲಗಳೆದು ಹೊಸ ಚಿಂತನೆಯನ್ನು ಹರಡಿಸುತ್ತಾನೆ. ಇಂತಹ ಚಿಂತನೆಗಳು ಆ ವ್ಯಕ್ತಿಯ ಬದುಕಿನ ಪರಿಸರ, ಪ್ರೇರಣೆ, ಪ್ರಭಾವ ಮುಂತಾದ ಶ್ರೇಷ್ಠ ದಾರ್ಶನಿಕರ ಆದರ್ಶ ವ್ಯಕ್ತಿತ್ವ ಹಾಗೂ ಮೌಲಿಕ ಮಾತುಗಳು ಮತ್ತು ಶ್ರೇಷ್ಠ ಸಾಧಕರ ಬದುಕಿನ ಮಜಲುಗಳು ಪ್ರಭಾವ ಮತ್ತು ಪ್ರೇರಣೆಯನ್ನುಂಟು ಮಾಡಿ ವ್ಯಕ್ತಿಯ ಬದುಕಿನ ಮೂಲಕ ಚಿಂತನೆ ಸೆಲೆಗಳಾಗಿ ಕಂಡುಬರುತ್ತವೆ. ರಾಜಕೀಯ ಎಂಬುದು ಮನುಷ್ಯನ ಕೂಡುಬದುಕಿನ ಮಹತ್ವದ ರಂಗ; ವೈಚಾರಿಕ ಮೊತ್ತ. ಅದಕ್ಕೆ ಕೆಲವು ತತ್ವಸಿದ್ಧಾಂತಗಳ ಬೆಂಬಲವಿದ್ದೇ ಇರುತ್ತದೆ.

ಒಬ್ಬ ವ್ಯಕ್ತಿಯ ಚಿಂತನೆಗೆ ಮೂಲ ಸೆಲೆಯನ್ನು ಗುರುತಿಸುವುದು ಕಷ್ಟದಾಯಕವಾಗುತ್ತದೆ. ಅಂದರೆ ಆ ವ್ಯಕ್ತಿ ತಾನು ವ್ಯಾಪಕವಾದ ಓದಿನ ಜೊತೆಗೆ ತಾನು ಗೃಹಿಸಿಕೊಂಡ ಸಾಮಾಜಿಕ ಸಂದಿಗ್ಧ ಪರಿಸರ, ತನ್ನ ಬಾಲ್ಯದಲ್ಲಿ ಅನುಭವಿಸಿದ ಅಸಾಯಕ ಪರಿಸ್ಥಿತಿ ಹಾಗೂ ಅನುಭವಿಸಿದ ನೋವು ಇವೆಲ್ಲವುಗಳ ಜೊತೆಗೆ ತಾನು ತನ್ನ ಜೀವನದ ಬದುಕನ್ನು ಕುರಿತು ಇತರ ದಾರ್ಶನಿಕ ವ್ಯಕ್ತಿಗಳ ಜೀವನವನ್ನು ಅನುಸಂಧಾನ ಮಾಡಿಕೊಳ್ಳುವುದು ಮುಖ್ಯವಾಗಿರುತ್ತದೆ. ಆ ನಿಟ್ಟಿನಲ್ಲಿ ಮುಖ್ಯವಾಗಿ ಎಂ. ವೀರಪ್ಪ ಮೊಯಿಲಿ ಅವರು ಕೆಲವು ರಾಜಕೀಯ ಚಿಂತನೆಯ ಮುಖ್ಯ ನೆಲೆಗಳನ್ನು ಹೊಂದಿದ್ದಾರೆ.

ಅವುಗಳು ಮೊಯಿಲಿ ಅವರ ಚಿಂತನೆಗಳನ್ನು ವಿಸ್ತರಿಸುವಲ್ಲಿ ಹಾಗೂ ರೂಪಿಸುವಲ್ಲಿ ಮುಖ್ಯವಾಗಿವೆ.

ಮೊಯಿಲಿ ಅವರಲ್ಲಿ ಪ್ರಮುಖವಾಗಿ ತಮ್ಮ ಬಾಲ್ಯದ ಪರಿಸರ ಅತೀ ಮುಖ್ಯವಾಗಿ ಪ್ರೇರಣೆಯನ್ನುಂಟುಮಾಡಿದೆ. ಮೊಯಿಲಿ ಅವರು ತಮ್ಮ ಬಾಲ್ಯದ ಜೀವನದಲ್ಲಿ ತಾವು ಅನುಭವಿಸಿದ ನೋವು-ನಲಿವು, ಕಷ್ಟ-ನಷ್ಟ, ಸಾಂಸ್ಕೃತಿಕ ಪರಿಧಿ, ಹಾಗೂ ಸಾಮಾಜಿಕ ಏಣಿಶ್ರೇಣಿ ವ್ಯವಸ್ಥೆ ಮುಂತಾದವುಗಳು ಅವರ ಮುಂದಿನ ರಾಜಕೀಯ ನಡೆಗೆ ಹಾಗೂ ಚಿಂತನೆಗೆ ಮೂಲ ಪ್ರೇರಕವಾದ ಘಟನೆಗಳಾಗಿವೆ.

ಮೊಯಿಲಿ ಅವರು ತಾವು ಸಾಮಾಜಿಕ ವ್ಯವಸ್ಥೆಯ ಏಣಿಶ್ರೇಣಿ ವ್ಯವಸ್ಥೆಯಲ್ಲಿ ಕೆಳದರ್ಜೆಯ ಜನಾಂಗದಲ್ಲಿ ಹುಟ್ಟಿರುವುದು. ಮೇಲು ವರ್ಗದ ವ್ಯಕ್ತಿಗಳ ದಾಸ್ಯ ಸಂಕೋಲೆ ಅಂದಿನ ಹೀನಾಯ ಬದುಕು ಇವರನ್ನು ಹಲವು ಚಿಂತನೆಗಳಿಗೆ ದಾರಿಮಾಡಿಕೊಟ್ಟವು. ಹೀಗಾಗಿ ಮೊಯಿಲಿ ಅವರು ಭವಿಷ್ಯದ ಚಿಂತನೆಗಳ ಬಗ್ಗೆ ಕನಸು ಕಾಣುತ್ತಾ ಆ ಕನಸುಗಳನ್ನು ನನಸಾಗಿಸುವ ಇಚ್ಛಾಶಕ್ತಿಯನ್ನು ಹೊಂದಿ ವ್ಯಾಪಕ ಅಧ್ಯಯನ ಮೈಗೂಡಿಸಿಕೊಂಡು ಹಲವು ಸಾಹಿತಿಗಳ ಮತ್ತು ಸಮಾಜ ಚಿಂತಕರ ಮೌಲಿಕ ವಿಚಾರಗಳೊಂದಿಗೆ ತಮ್ಮ ಆದರ್ಶ ರಾಜಕೀಯ ಗುರಿಯನ್ನು ಬೆಳೆಸಿಕೊಂಡು ಇವತ್ತು ಸಮಕಾಲೀನ ರಾಜಕೀಯ ರಂಗದಲ್ಲಿ ಕಳಂಕರಹಿತ ವ್ಯಕ್ತಿಯಾಗಿ ತಮ್ಮನ್ನು ತಾವು ಸಮಾಜದಲ್ಲಿ ಗುರುತಿಸಿಕೊಂಡಿದ್ದಾರೆ.

ಮೊಯಿಲಿ ಅವರೆ ಹೇಳುವಂತೆ ತಮ್ಮ ಸಾಹಿತ್ಯಿಕ ಸ್ಪಂದನಕ್ಕೆ ಜೀವ ಸೆಲೆಯಾದ ಶಿವರಾಮ ಕಾರಂತರನ್ನು ಕುರಿತು ಒಂದೆಡೆಯಲ್ಲಿ ಈ ರೀತಿಯಾಗಿ ಹೇಳಿಕೊಂಡಿದ್ದಾರೆ. "ಡಾ. ಶಿವರಾಮ ಕಾರಂತ ಅವರು ನನ್ನ ಸಾಹಿತ್ಯಕ್ಕೆ ಸ್ಪೂರ್ತಿಯ ಸೆಲೆಯಾಗಿದ್ದಾರೆ. ಇವರನ್ನು ಒಂದು ಸಮಾರಂಭಕ್ಕೆ ಕರೆಯಲು ನಾನೇ ಹೋಗಿದ್ದೆ ಅವರು ಬರಲೇ ಇಲ್ಲ. ಅವರ ಮೇಲೆ ಬಹಳ ಸಮಯದವರೆಗೆ ಸಿಟ್ಟಿತ್ತು. ಅದು ಬೇಗನೆ ಹೊರಟುಹೋಯಿತು. ಅದಕ್ಕೆ ಕಾರಣ ಅವರ ಶ್ರೇಷ್ಠ ವ್ಯಕ್ತಿತ್ವ, ಅವರು ನನ್ನ ಈ ಕೊಟ್ಟ ಕಾದಬರಿಯ ಬಿಡುಗಡೆ ಸಮಾರಂಭಕ್ಕೆ ಆಗಮಿಸಿ ಹರಿಸಿ ಆಶೀರ್ವದಿಸಿರುವುದು ನನ್ನ ಸೌಭಾಗ್ಯ ಅವರಿಗೆ ನಾನು ಚಿರಋಣಿಯಾಗಿದ್ದೇನೆ. ಇದು ಬಹಳ ದೊಡ್ಡ ಕೃತಿ ಎಂಬ ದರ್ಪ ಆಗಲೀ ಇದಕ್ಕೆ ಪ್ರಶಸ್ತಿ ಬರುತ್ತದೆ ಎಂಬ ಆಶಾಭಾವನೆ ಆಗಲಿ ನನಗೆ ಕಿಂಚಿತ್ತು ಇಲ್ಲ ಈ ಕಾದಂಬರಿಯನ್ನು

ಸಹೃದಯರು ಓದಿ ಮೆಚ್ಚಿದರೆ ಕೂರಗ ಜನಾಂಗದ ಸಾಂಸ್ಕೃತಿಯ ಬಗ್ಗೆ ಓದುಗರು ಒಂದು ಅಭಿಮಾನ ಇಟ್ಟುಕೊಂಡರೆ ಅದೇ ನನಗೆ ಪ್ರಶಸ್ತಿ ನನ್ನ ಮನಸ್ಸಿನಲ್ಲಿ ಬಿದ್ದಂತಹ ಒಂದು ಸಣ್ಣ ಬೀಜ ಮರವಾಗಿ ಬೆಳೆಯುವುದಕ್ಕೆ ಇವತ್ತು ತಾವೆಲ್ಲ ನೀಡಿದ ಪ್ರೋತ್ಸಾಹವೇ ಈ ಕೃತಿಗೆ ಸಂದ ಪ್ರಶಸ್ತಿಯಾಗಿದೆ.[೧]" ಎನ್ನುವಲ್ಲಿ ಮೊಯಿಲಿ ಅವರು ತನ್ನ ಸುತ್ತಮುತ್ತಲಿನ ಪರಿಸರಕ್ಕೆ ಒಗ್ಗಿಕೊಂಡು ಅದರಿಂದ ಪ್ರೇರಣೆ ಪಡೆದ ಒಂದು ಜನ ಸಮುದಾಯದ ಸ್ಫೂರ್ತಿ ಇಲ್ಲಿ ಎದ್ದು ಕಾಣುತ್ತದೆ. ತಾನು ಸಾಹಿತಿಯಾಗಿ ರೂಪತಾಳುವಲ್ಲಿ ಹಿರಿಯ ಸಾಹಿತಿಗಳಾದ ಶಿವರಾಮ ಕಾರಂತರ ಕುರಿತು ಆಡಿದ ಮಾತುಗಳು ಇವರ ಮೇಲೆ ಆದ ಪ್ರಭಾವವನ್ನು ಎತ್ತಿ ತೋರಿಸುತ್ತವೆ. ಇಲ್ಲಿ ಮೊಯಿಲಿಯವರಲ್ಲಿಯ ಎರಡು ಗುಣಗಳ ವಿದಿತವಾಗಿತ್ತುವೆ. ಒಂದು ಅವರ ಸಿಟ್ಟು ದೀರ್ಘಕಾಲ ಉಳಿದು ದ್ವೇಷವಾಗುವುದಿಲ್ಲ; ಎರಡು ಜನರ ಪ್ರೋತ್ಸಾಹವೇ ದೊಡ್ಡ ಪ್ರಶಸ್ತಿ ಎಂಬುದನ್ನು ಗಮನಿಸಬೇಕು.

ಮೊಯಿಲಿ ಅವರು ಕೇವಲ ರಾಜಕೀಯ ವ್ಯಕ್ತಿಯಲ್ಲ. ಅವರೊಬ್ಬ ಸಮಾಜಮುಖಿ ಚಿಂತಕ. ತನ್ನ ಜೀವನದಲ್ಲಿ ಕಂಡುಂಡ ಕಹಿಗಳಿಗೆಯನ್ನೆ ನೆನೆಯುತ್ತ ಅವುಗಳನ್ನು ಸವಾಲಾಗಿ ಸ್ವೀಕರಿಸಿ ತಮ್ಮ ಆದರ್ಶ ತತ್ವವನ್ನು ಹಲವು ಸಮಾಜ ಚಿಂತಕರ ಪ್ರೇರಣೆ-ಪ್ರಭಾವದಿಂದ ಪಡೆದುಕೊಂಡು ತನ್ನ ಚಿಂತನೆಯ ಮೂಲ ಶಕ್ತಿಯನ್ನು ಭದ್ರಗೊಳಿಸಿಕೊಂಡಿರುವರು. ಶ್ರೀಯುತರ ಮೇಲೆ ಪ್ರಭಾವ ಬೀರಿದೆ ಆ ಚಿಂತಕರ ಮೌಲ್ಯವನ್ನು ಇವರ ಜೊತೆ ತುಲನಾತ್ಮಕವಾಗಿ ನೋಡುವುದೇ ಈ ಅಧ್ಯಾಯದ ಮುಖ್ಯ ಅಂಶವಾಗಿದೆ. ಅವುಗಳನ್ನು ಈ ಕೆಳಗಿನಂತೆ ಗುರುತಿಸಲಾಗಿದೆ.

೫. ೨ ಚಿಂತನೆಯ ಸೆಲೆಗಳು

ಶ್ರೀಯುತರು ಅನೇಕ ಕೃತಿಯಲ್ಲಿ ತಮ್ಮ ರಾಜಕೀಯ ಚಿಂತನೆಯ ಬದುಕಿಗೆ ಸಾಹಿತ್ಯಕ್ಕೆ ಸ್ಫೂರ್ತಿ ಸೆಲೆಯಾದ ಅನೇಕ ಶ್ರೇಷ್ಠ ವ್ಯಕ್ತಿಗಳ ಆದರ್ಶ ಬದುಕು ಕುರಿತು ಚರ್ಚಿಸಿದ್ದಾರೆ. ಅವರಲ್ಲಿ ಪ್ರಮುಖವಾಗಿ

೧) ಕಾಲನಟ- ಶಿವರಾಮ ಕಾರಂತ

೨) ಗಾಂಧೀಜಿಯ ಬದುಕೇ ಒಂದು ಮಹಾಕಾವ್ಯ

೩) ಮನುಕುಲ ದೀವಿಗೆ-ಗಾಂಧೀಜಿ

೪) ಕೋಟ ಶಿವರಾಮ ಕಾರಂತ–ಸತ್ಯದ ಪ್ರವಾದಿ

೫) ಭಕ್ತಿ ಭಂಡಾರಿ ಬಸವಣ್ಣ–ಕಾರ್ಲ್‌ಮಾರ್ಕ್ಸ್

೬) ಕುವೆಂಪು ವೈಚಾರಿಕತೆ ಮತ್ತು ವಿಶ್ವಪ್ರಜ್ಞೆಯ ಮಹಾಕವಿ

೭) ಡಾ॥ಬಿ.ಆರ್.ಅಂಬೇಡ್ಕರ ಜನ್ಮ ದಿನಾಚರಣೆಯ ಭಾಷಣ

೮) ದಿ॥ಡಿ.ದೇವರಾಜ ಅರಸರ ೭೯ರ ಜನ್ಮದಿನಾಚರಣೆ ಕುರಿತು ಭಾಷಣ

೯) ರವೀಂದ್ರನಾಥ ಟ್ಯಾಗೋರ್ ಪ್ರತಿಮೆ ಅನಾವರಣ ಕುರಿತು ಮಾತುಗಳು

ಮುಂತಾದ ಲೇಖನಗಳ ಪ್ರಭಾವಕ್ಕೆ ಒಳಗಾಗಿ ಅವರಿಂದ ಸ್ಫೂರ್ತಿ ಪಡೆದ ಅಂಶಗಳು ಎದ್ದು ಕಾಣುತ್ತವೆ. ಇವುಗಳಲ್ಲದೆ ರಾಮ ಮನೋಹರ ಲೋಹಿಯ, ಪೆರಿಯಾರ್, ಲಾಲ್‌ಬಾಹದ್ದೂರ ಶಾಸ್ತ್ರೀ, ನೆಹರೂ, ಇಂದಿರಾಗಾಂಧಿ ಮುಂತಾದ ರಾಜಕೀಯ ಮುತ್ಸದ್ಧಿಗಳು ಹಾಗೂ ಸಮಾಜಮುಖಿ ವಿದ್ವಾಂಸರ ತತ್ವ ಆದರ್ಶಗಳು ಇವರ ಜೀವನದ ಮೇಲೆ ಗಾಢ ಪ್ರಭಾವ ಬೀರಿವೆ. ಅವುಗಳು ಈ ರೀತಿಯಲ್ಲಿ ಅಭಿವ್ಯಕ್ತಗೊಂಡಿವೆ.

ಬಸವಣ್ಣ

೧೨ನೇ ಶತಮಾನದಲ್ಲಿ ಭಾರತೀಯ ಧಾರ್ಮಿಕ ಚಳುವಳಿಯಲ್ಲಿ ಎದ್ದು ಕಾಣುವ ಮಹಾನುಭಾವಿ ಬಸವಣ್ಣ. ಇಂತಹ ಶ್ರೇಷ್ಠ ಸಮಾಜಚಿಂತಕ ಸಮಾಜ ಕುರಿತು ತನ್ನ ವಚನಗಳ ಮೂಲಕವಾಗಿ ನೂರಾರು ಚಿಂತನೆಗಳನ್ನು ಮಾಡಿದ್ದಾರೆ. ಜೊತೆಗೆ ಆದರ್ಶ ಜೀವನದ ಬದುಕನ್ನು ನಡೆಸಿದ್ದಾರೆ. ಆ ಕಾಲ ಘಟ್ಟದಲ್ಲಿ ಸಮಾಜ ಅಂಧಕಾರದಲ್ಲಿ ಮುಳುಗಿದಾಗ ಬಸವಣ್ಣ ಸಮಾಜ ಸುಧಾರಕನಾಗಿ ಎಲ್ಲ ಮೌಢ್ಯಗಳನ್ನು ಕಿತ್ತೊಗೆಯುವ "ಅನುಭವ ಮಂಟಪವನ್ನು" ಸ್ಥಾಪಿಸಿ ಅದರ ಮೂಲಕ ಚಿಂತನೆಗೆ ಆಹ್ವಾನವನ್ನು ನೀಡಿದವರು.

ಜಾತಿ, ಕಾಯಕ, ಸ್ತ್ರೀ ಸ್ವಾತಾತ್ರ್ಯ, ಮೌಢ್ಯತೆ, ಅಂದಾನುಕರುಣೆ ಹೀಗೆ ಹಲವು ಅಂಶಗಳ ಕುರಿತು ತಮ್ಮ ವಚನಗಳಲ್ಲಿ ಅಭಿವ್ಯಕ್ತ ಪಡಿಸಿದ್ದಾರೆ. ವೇದಕ್ಕೆ ಒರೆಯಿಕ್ಕುವೆ, ಏಕದೇವೋಪಾಸನೆ, ಕಾಯಕತತ್ವದ ಮೂಲಕ ಸಮಾಜದಲ್ಲಿ ಅವುಗಳನ್ನು ಜಾರಿಗೊಳಿಸಲು ಕ್ರಾಂತಿಯನ್ನು ಮಾಡಿದ ವ್ಯಕ್ತಿ. ಇಂತಹ ಸುಧಾರಕನ ಆದರ್ಶ ತತ್ವಗಳು ಎಂ. ವೀರಪ್ಪ

ಮೊಯಿಲಿ ಅವರ ಮೇಲಾಗಿದೆ. ಬಸವಣ್ಣ ಸಮಾಜವನ್ನು ಎದುರುಹಾಕಿಕೊಂಡು ತನ್ನ ಸಿದ್ಧಾಂತವನ್ನು ಪ್ರಕಟಿಸಿರುವುದು ಮಹತ್ವದ ದಾಖಲೆಯಾಗಿದೆ. ಜಾತಿಯನ್ನು ಕುರಿತು ಬಸವಣ್ಣ ಅವರು ಹೇಳುವ ಮಾತು ಎಲ್ಲರಿಗೂ ಆದರ್ಶವಾಗಿದೆ.

"ಕಾಸಿಕಮ್ಮಾರನಾದ, ಬೀಸಿ ಮಡಿವಾಳನಾದ
ಹಾಸನಿಕ್ಕಿ ಸಾಲಿಗನಾದ, ವೇದವನೋದಿ ಹಾರುವನಾದ
ಆವ ಕುಲವಾದೊಡೇನು ?
ಶಿವಲಿಂಗವಿದ್ದವನೇ ಕುಲಜನು
ಕುಲವನರಸುವರೇ ? ಶರಣರಲಿ...[೨]"

ಎನ್ನುವಲ್ಲಿ ಬಸವಣ್ಣ ಜಾತಿ ಉಗಮ ಬಗೆಯನ್ನು ಸ್ಪಷ್ಟಪಡಿಸುತ್ತಾನೆ. ಜಾತಿ ವ್ಯವಸ್ಥೆಯಲ್ಲಿ ಕೆಳಮಟ್ಟದ ವ್ಯಕ್ತಿಯಾಗಿ ಗುರ್ತಿಸಿಕೊಂಡ ಮೊಯಿಲಿ ಅವರು ಬಸವಣ್ಣವರ ಜಾತಿ ವ್ಯವಸ್ಥೆಯ ವ್ಯಾಖ್ಯಾನ ಪ್ರಬಲವಾದ ಪ್ರೇರಕ ಅಂಶವಾಗಿದೆ. ಬಸವಣ್ಣನವರು ಜಾತಿ, ಮತ, ಪಂಥಗಳನ್ನು ಎಂದಿಗೂ ಒಪ್ಪಲಿಲ್ಲ. ಅವುಗಳನ್ನು ಬಲವಾಗಿ ಖಂಡಿಸುತ್ತಾರೆ. ಜೊತೆಗೆ ಆಕಾಲದಲ್ಲಿ ಬಸವಣ್ಣನವರು ಅಂತರ್‌ಜಾತಿಯ ವಿವಾಹ ಹಮ್ಮಿಕೊಂಡಿದ್ದು ಸರ್ವರನ್ನು ಸಮಾನವಾಗಿ ಕಂಡಿದ್ದ ವ್ಯಕ್ತಿ ಬಸವಣ್ಣ. ಬುದ್ಧಿ(ಜ್ಞಾನ) ಮತ್ತು ಜಾತಿ ಇವೆರಡು ಬೇರೆ ಬೇರೆಯಾಗಿವೆ. ಬುದ್ಧಿಯ ಪ್ರತಿವ್ಯಕ್ತಿಗೂ ಕಷ್ಟಪಟ್ಟುದೊರಕುವ ಕೈಗೆ ಸುಲಭದಲ್ಲಿ ಸಿಗಲಾರದ ವಿಷಯವಸ್ತು, ಆದರೆ ಜಾತಿ ಕಷ್ಟ ಪಡದಿದ್ದರೂ ಬೆಂಬಿಡದ ಭೂತವಾಗಿದೆ. ಕೆಲವರು ಜಾತಿಯ ಹೆಚ್ಚುಗಾರಿಕೆಯಿಂದ ಮೆರೆಯುತ್ತಿದ್ದಾರೆ ವಿನಹ ಜ್ಞಾನ ಕ್ಷಿತಿಜದಿಂದಲ್ಲ. ಹೀಗಾಗಿ ಈ ಮೇಲು-ಕೀಳನ್ನು ಹೋಗಲಾಡಿಸುವ ನಿಟ್ಟಿನಲ್ಲಿ ಬಸವಣ್ಣ ತಮ್ಮ ವಚನಗಳ ಮೂಲಕ ಸಮಾಜದಲ್ಲಿ ಹೋರಾಟವನ್ನು ಮಾಡಿದರು. ಇದು ಮೊಯಿಲಿಯವರನ್ನು ಪ್ರಭಾವಿಸಿದೆ.

ಇದೇ ರೀತಿಯಲ್ಲಿ ಮೊಯಿಲಿ ಅವರು ಸಹ ಬಾಲ್ಯದಲ್ಲಿ ತನ್ನ ಸ್ನೇಹಿತರು ಕೀಳಾಗಿ ಕಾಣುತ್ತಿರುವ ಕುರಿತು ಹಲವು ಕಡೆ ಪ್ರಸ್ತಾಪಿಸಿಕೊಂಡಿದ್ದಾರೆ. ಅಂತಹ ಕ್ರೌರ್ಯ ಮತ್ತು ದೌರ್ಜನ್ಯವನ್ನು ಅಲ್ಲಗಳೆಯಲು ಬಸವಣ್ಣನವರ ವಚನಗಳ ಪ್ರಭಾವಕ್ಕೆ ಒಳಗಾದವರು ಜೊತೆಗೆ ತಮ್ಮ ಜೀವನದ ಉದ್ದಕ್ಕೂ ಈ ಬಸವ ತತ್ವವನ್ನು ಪಾಲಿಸಿಕೊಂಡು ಮುನ್ನಡೆದವರು. ಕಾಯಕ ತತ್ವ ಬಸವಣ್ಣನವರ ಮಹತ್ವಪೂರ್ಣ ಆದರ್ಶ ಅಂಶವಾಗಿದೆ. ಕಾಯಕವನ್ನು ಆತ್ಮ ಸಂತೃಪ್ತಿಯಾಗಿ ಮಾಡಬೇಕು. ಹೃದಯ ಪೂರ್ವಕವಾಗಿ ನಡೆಸಿಕೊಂಡು

ಹೋಗಬೇಕೆನ್ನುವುದು ಅವರ ಮುಖ್ಯ ನೆಲೆಯಾಗಿದೆ. ಹೀಗಾಗಿ ಕಾಯಕ ಕುರಿತು "ಕಾಯಕದಲ್ಲಿ ನಿರತನಾದರೆ ಗುರುದರುಶನವಾದರೂ ಮರೆಯಬೇಕು" ಎನ್ನುವಲ್ಲಿ ಕಾಯಕತತ್ವಕ್ಕೆ ಅವರು ನೀಡಿದ ಮಹತ್ವ ಈಗಿನ ಸಮಕಾಲೀನ ಸಮಾಜಕ್ಕೆ ದಾರಿದೀಪಾಗಿದೆ. ಜೊತೆಗೆ ಆರ್ಥಿಕ ದೃಷ್ಠಿ ಈ ತತ್ವದಲ್ಲಿ ಅಡಗಿದೆ. ಇದನ್ನೇ ಶ್ರಮ ಸಂಸ್ಕೃತಿ ಎಂದು ಕೆಲ ವಿದ್ವಾಂಸರು ಹೇಳುತ್ತಾರೆ.

ಬಸವಣ್ಣನವರು ದಾನ ಎಂದು ಹೇಳಲಿಲ್ಲ. ಅದರ ಬದಲಾಗಿ ದಾಸೋಹ ಎಂದು ಹೇಳಿದರು. ದಾನದಲ್ಲಿ 'ನಾ' (ನಾನು ನನ್ನದು) ಎಂಬುವ ಗರ್ವ ಇರುವುದರಿಂದ ಈ ಪರಿಕಲ್ಪನೆಯನ್ನು ಅವರು ಬಳಿಸಿದರು. ಅದೇ ರೀತಿ ಊಟ ಎನ್ನದೇ ಪ್ರಸಾದ ಎಂದರು. ಇವೆಲ್ಲ ಬಸವಣ್ಣನವರ ಸಮಾಜವಾದ ತತ್ವದ ಹಿನ್ನೆಲೆಯನ್ನು ಪ್ರಚಾರಪಡಿಸುತ್ತವೆ. ಇವುಗಳ ಜೊತೆಗೆ ಭಕ್ತಿ ಅವರ ಆಧ್ಯಾತ್ಮಿಕ ಮತ್ತು ಧಾರ್ಮಿಕ ತತ್ವವನ್ನು ಎತ್ತಿ ತೋರಿಸುತ್ತದೆ. ಸಮಾಜದಲ್ಲಿ ಗಳಿಸಬೇಕೆಂಬ ಆಶೆಯಿಂದ ಮನುಷ್ಯ ತನ್ನ ಇರುವಿಕೆಯನ್ನೆ ಬದಲಾಯಿಸುತ್ತಿರುವ ಸಂದರ್ಭ ಅಥವಾ ಮಾನಸಿಕ ಸಮತೋಲನದ ಅರಿವಿನ ಪ್ರಜ್ಞೆಯ ನೆಲೆಯನ್ನು ಬಸವಣ್ಣನವರು ಗುರುತಿಸುತ್ತಾರೆ. ಇವೆಲ್ಲವುಗಳು ನೇರವಾಗಿ ಮೊಯಿಲಿ ಅವರ ಮೇಲೆ ಪರಿಣಾಮ ಬೀರಿರುವ ಸಾಧ್ಯತೆಯಿದೆ. ಜಾತಿ ಭೇದ ಅಲ್ಲಗಳೆದು ಅಸ್ಪೃಶ್ಯತೆಯನ್ನು ಹೋಗಲಾಡಿಸಿ ಆದರ್ಶಮೌಲ್ಯಗಳಿಗೆ ಮಹತ್ವವಿರಬೇಕೆಂಬ ಬಸವ ತತ್ವ ಇವರ ಮೇಲೆ ಪ್ರಭಾವ ಬೀರಿದೆ. ಅಷ್ಟೇ ಅಲ್ಲದೇ ಮೊಯಿಲಿ ಅವರು ತಮ್ಮ ಹಲವು ಭಾಷಣದಲ್ಲಿ ಬಸವಣ್ಣನವರ ವಚನವನ್ನು ಪದೇ ಪದೇ ಉದಾಹರಿಸುವ ಮೂಲಕ ಅವರಲ್ಲಿ ಬಸವಣ್ಣನವರ ತತ್ವದ ಪ್ರಭಾವ ಎದ್ದು ಕಾಣುವುದನ್ನು ಯಾರು ಅಲ್ಲಗಳೆಯುವಂತಿಲ್ಲ.

ಕಾರ್ಲಮಾರ್ಕ್ಸ್

ಜಗತ್ತು ಕಂಡು ಶ್ರೇಷ್ಠ ತತ್ವಜ್ಞಾನಿ ಕಾರ್ಲಮಾರ್ಕ್ಸ ತತ್ವಜ್ಞಾನ ಜಗತ್ತಿನಲ್ಲಿ ಇವರದು ಅದ್ವಿತೀಯ ಹೆಸರು ಒಬ್ಬ ವ್ಯಕ್ತಿ ಬದುಕುವುದು ಮುಖ್ಯವಲ್ಲ. ಘನತರವಾದ ಬಾಳನ್ನು ನಡೆಸುವುದು ಮುಖ್ಯ ಆ ಘನತೆ ಒಂದೆರಡು ದಿನದಲ್ಲಿ ಬರುವಂತಹುದಲ್ಲ ಅದಕ್ಕೆ ನಿತ್ಯ ಸಾಧನೆಯೆಂಬ ಪೂಜೆ ನಡೆಯಬೇಕು. ಜೀವನವೆಂಬ ಮರಕ್ಕೆ ಕರ್ತವ್ಯದ ಬೆವರು ಹರಿದಾಗಲೇ ಅಂಥಹ ಬದುಕಿನಲ್ಲಿ ಹೂವು ಅರಳುತ್ತದೆ. ಜೊತೆಗೆ ಸುತ್ತಲೂ ತನ್ನ ಪರಿಮಳವನ್ನು ಹರಿಸುತ್ತದೆ. ಕಾರ್ಲಮಾರ್ಕ್ಸ ಈ ಮಾತಿಗೆ ಒಪ್ಪುವ ವ್ಯಕ್ತಿ. ಆತನ

ಚಿಂತನೆಗಳನ್ನು ಇವತ್ತು ಜಗತ್ತು ಪಾಲಿಸಿಕೊಂಡು ಹೋಗುತ್ತಿದೆ. ಅಂದರೆ ಮುಂದಾಲೋಚನೆಯ ದೂರದೃಷ್ಟಿ, ಸಾಮಾಜಿಕ ಕಳಕಳಿ, ರೈತರ ಮೇಲಿರುವ ಮೋಹ, ಕಾರ್ಮಿಕರ ಬಗ್ಗೆ ಹಿತಾಶಕ್ತಿ ಇವೆಲ್ಲ ಆತನ ಶ್ರಮ ಸಾಂಸ್ಕೃತಿಯ ಆರ್ಥಿಕ ತತ್ವದಲ್ಲಿ ಅರಳಿದವುಗಳು ಇಂತಹ ಒಬ್ಬ ಶ್ರೇಷ್ಠ ತತ್ವಜ್ಞಾನಿ ಪ್ರಭಾವಕ್ಕೆ ಒಳಗಾದವರೂ ಶ್ರೀಯುತ ಎಂ. ವೀರಪ್ಪ ಮೊಯಿಲಿಯವರು.

ಕಾರ್ಲ್‌ಮಾರ್ಕ್ಸ್ ತನ್ನ ದೇಶದ ಜನ, ದುಡಿಯುವ ಕಾರ್ಮಿಕರು, ಹಾಗೂ ಬಂಡವಾಳ ಶಾಹಿಗಳ ನಡುವೆ ಇರುವ ಅಂತರತೆಯನ್ನು ಗುರುತಿಸಿ ತನ್ನ ಶ್ರಮಿಕ ವರ್ಗದ ಸಿದ್ಧಾಂತವನ್ನು ಜಗತ್ತಿಗೆ ನೀಡಿದವರು ಕಾಯಕ ದಾಸೋಹ ಬಸವಣ್ಣನವರ ಮಹತ್ವದ ತತ್ವವಾದರೆ ಕಾರ್ಲ್‌ಮಾರ್ಕ್ಸ್ ಅವರದು ಶ್ರಮಿಕ ವರ್ಗದ ಸರ್ವಾಧಿಕಾರ ಸ್ಥಾಪನೆಯೇ ಮುಖ್ಯವಾಗಿದೆ.

"ಶ್ರಮಭಾರವಲ್ಲದ ವೇತನ ನಿರ್ಧಾರದಿಂದಾಗಿ ಹೆಚ್ಚುವರಿ ಲಾಭಾಂಶವು ದರ್ಬಾರು ನಡೆಸುವ ಮಾಲೀಕನ ಕೈ ಸೇರಿ, ಕಾರ್ಮಿಕರು ಶೋಷಣೆಗೊಳಗಾಗುವುದು ತಪ್ಪಬೇಕು. ಉತ್ಪಾದನಾ ಸಾಧನೆಗಳು ರಾಷ್ಟ್ರೀಕರಣದ ಮೂಲಕ ಶೋಷಣೆಯನ್ನು ತಡೆಗಟ್ಟಿ ಕಾರ್ಮಿಕರಿಗೆ ನ್ಯಾಯ ದೊರೆಕಿಸಿಕೊಡಬೇಕು. ಯಾವ ವಿಧದ ಖಾಸಗಿ ಒಡೆತನವೇ ಆಗಲೀ ನಿರ್ಮೂಲವಾಗಬೇಕು. ಮತ ಮತ್ತು ಮತೀಯ ತತ್ವಗಳು ಬಹಿಷ್ಕಾರವಾಗಬೇಕು.[೩]" ಮಾರ್ಕ್ಸ್‌ರ ಈ ತತ್ವ ಎಂ. ವೀರಪ್ಪ ಮೊಯಿಲಿ ಅವರ ಮೇಲೆ ಗಾಢವಾದ ಪರಿಣಾಮ ಬೀರಿದೆ. ಮೊಯಿಲಿ ಅವರು ತನ್ನೂರಿನ ಸುತ್ತಮುತ್ತಲಿನ ಭೂಮಾಲಿಕರು ಮತ್ತು ಗೇಣಿದಾರರ ನಡುವಿನ ಅಂತರವನ್ನು ಮಾರ್ಕ್ಸ್‌ವಾದದ ಹಿನ್ನೆಲೆಯಲ್ಲಿ ಬಗೆ ಹರಿಸುವ ನಿಟ್ಟಿನಲ್ಲಿ ತಮ್ಮ ಆರಂಭಿಕ ಹೋರಾಟದ ಹೆಜ್ಜೆ ಗುರುತುಗಳನ್ನು ಮೂಡಿಸಿದವರು. ಹೀಗಾಗಿ ಒಬ್ಬ ವ್ಯಕ್ತಿ ವ್ಯಾಪಕ ಓದಿನಿಂದ ಜಗತ್ತಿನ ಎಲ್ಲ ವಿಷಯಗಳನ್ನು ಗ್ರಹಿಸುವ ಜೊತೆಗೆ ಅವುಗಳು ತನ್ನ ಪರಿಸರದಲ್ಲಿ ಉತ್ಪಾದನೆ ಅವುಗಳಿಗೆ ಪರಿಹಾರೋಪಾದಿಯಾಗಿ ಅವುಗಳನ್ನು ಪ್ರಯೋಗಿಸುವುದು ಕಂಡು ಬರುತ್ತದೆ. ಹೀಗಾಗಿಯೇ ಮೊಯಿಲಿ ಅವರು ತಮ್ಮ ಪರಿಸರದಲ್ಲಿ ನಡೆದ ಭೂ ಮಾಲಿಕರು ಮತ್ತು ಗೇಣಿದಾರರ ಸಂದರ್ಭದಲ್ಲಿ ಮಾರ್ಕ್ಸ್ ಸಿದ್ಧಾಂತವನ್ನು ಸಂಪೂರ್ಣವಾಗಿ ಪ್ರಯೋಗಿಸಿದ್ದು ಕಂಡು ಬರುತ್ತಿದೆ.

"ನಿನ್ನ ಬೆವರಿನಿಂದಲೇ ನಿನ್ನ ಆಹಾರವನ್ನು ಗಳಿಸಿಕೊಳ್ಳತಕ್ಕದ್ದು 'ದುಡಿಯದವನು ತಿನ್ನಬಾರದು' ಎಂದು ಬೈಬಲ್ ಕಟ್ಟು ಮಾಡುತ್ತದೆ. ಶ್ರಮ ಜೀವನವೇ ನಿಜವಾದ ಯಜ್ಞವೆಂದು ಗೀತೆ ಬೋಧಿಸುತ್ತದೆ. ಬೆವರು ಸುರಿಸಿ ಸಂಪಾದಿಸಿದ್ದೇ ಪವಿತ್ರವಾದ ಆಹಾರವೆಂದೂ ಯಾಚಕವೃತ್ತಿಗಿಂತ ಕಾಡಿನಿಂದ ಸೌದೆ ತಂದು, ಮಾರಿ, ಜೀವನ ಸಂಪಾದನೆ ಮಾಡುವವನೇ ಭಗವಂತನಿಗೆ ತೀರ ಹತ್ತಿರದವನೆಂದೂ, ವ್ಯಾಪಾರದಲ್ಲಿ ವಂಚನೆ ಸಲ್ಲದೆಂದೂ, ಲಂಚರುಷವತ್ತು ಪಾಪಕರವೆಂದೂ, ಪ್ರವಾದಿ ಮಹಮ್ಮದ ಬೋಧಿಸಿದ್ದುಂಟು. ಶ್ರಮಜೀವನ ಗೌರವಾರ್ಹವಾದದ್ದೆಂಬ ಪಾಠವನ್ನು ತಂದೆ ಮಕ್ಕಳಿಗೆ ಕಲಿಸಬೇಕೆಂದೂ, ಯಾವೊಬ್ಬನೂ ಮತ್ತೊಬ್ಬನಿಗೆ ಹೊರೆಯಾಗಕೂಡದೆಂದೂ, ಸಂಸಾರ ನಿರ್ವಹಣೆಯ ನಂತರ ಉಳಿದ ಹಣವನ್ನು ಸಮಾಜಕ್ಕರ್ಪಿಸತಕ್ಕದ್ದೆಂದೂ ನಾಸ್ತಿಕವಾದಿ ರಾಬರ್ಟ್ ಇಂಗರ್‌ಸಾಲ್ ನುಡಿಯುತ್ತಾನೆ. 'ನೀನು ಯಾವಾಗಲೂ ದುಡಿಯುತ್ತಿರಬೇಕು' ಆದರೆ ನಿಜವಾಗಿ ಅಲ್ಲ' ಎಂಬುದು ವರ್ಜಿಲ್‌ನ ಮತವಾದರೆ, 'ತಾನು ದುಡಿಯದೆ ಸೋಂಬೇರಿತನದಿಂದ ಬದುಕು ನಡೆಸುವವನು ಮಹಾಚೋರನೆಂಬುದು ರೂಸೋವಿನ ಅಭಿಪ್ರಾಯ ಕುರ್ವನ್ನೇ ದೇಹ ಕರ್ಮಾಣಿ ಸಮಾ: ಎಂಬುದು ಉಪನಿಷತ್ ಸಂದೇಶ, ಇಸ್ಲಾಂ ಧರ್ಮದ ಸಂತನೊಬ್ಬ ಜೋರ್ಡಾನ್ ನದಿಯ ತೀರದ ಹೊಲದಲ್ಲಿ ಕೆಲಸ ಮಾಡುತ್ತಿದ್ದ. ನದಿಯಲ್ಲಿ ತೇಲಿಬಂದ ಹಣ್ಣನ್ನು ತಿನ್ನಲು ತನಗೆ ಹಕ್ಕಿಲ್ಲವೆಂದು ಮರ ಹುಡುಕಿಕೊಂಡು ನದಿಗುಂಟು ಹೋದ. ಅದರ ಕೆಳಗೆ ಕೆಲವು ದಿನ ನಿಂತು ಅದರ ಸುತ್ತಲಿದ್ದ ಕಳೆ ತಗೆದ ನಂತರ ಅವನಿಗೆ ಸಮಾಧಾನವಾಗುತ್ತದೆ.[೬]"

ಈ ಮೇಲಿನ ಮಾತುಗಳು ವೀರಪ್ಪ ಮೊಯಿಲಿ ಅವರು ತಮ್ಮ ಕೃತಿಯಲ್ಲಿ ಮಾರ್ಕ್ಸ್ ಬಗ್ಗೆ ಬರೆಯುವಾಗ ಹೇಳಿಕೊಂಡಿದ್ದಾರೆ ಅವುಗಳು ತಮ್ಮ ಬದುಕಿನ ಮೇಲೆ ಪ್ರಭಾವ ಬೀರದೆ ಇಷ್ಟೊಂದು ರೀತಿಯಲ್ಲಿ ಅಭಿವ್ಯಕ್ತಿಗೊಳ್ಳಲು ಸಾಧ್ಯವಿಲ್ಲ. ಆದ್ದರಿಂದ ಒಬ್ಬ ರಾಜಕೀಯ ಚಿಂತಕ ಸಮಾಜಮುಖಿಯಾಗಿ ತನ್ನ ಹೆಜ್ಜೆಗುರುತುಗಳನ್ನು ದಾಖಲಿಸುತ್ತ ಇಂತಹ ಶ್ರೇಷ್ಠ ಚಿಂತಕರ ತತ್ವಗಳನ್ನು ಅಳವಡಿಸಿಕೊಂಡು ಬೆಳೆದಿರುವವರಲ್ಲಿ ಮೊಯಿಲಿ ಅವರು ಸಹ ಒಬ್ಬರಾಗಿದ್ದಾರೆ.

ಗಾಂಧೀಜಿ

ಇಪ್ಪತ್ತನೆಯ ಶತಮಾನದ ಯುಗ ಪುರುಷರೆಂದೇ ಖ್ಯಾತರಾದ ಮಹಾತ್ಮಾ ಗಾಂಧೀಜಿಯವರು ತಮ್ಮ ಸ್ವರಾಜ್ಯ ಕಲ್ಪನೆಯ ಆರಂಭಿಕ ಹೆಜ್ಜೆ ದಕ್ಷಿಣ ಆಫ್ರಿಕಾದಲ್ಲಿ ಸತ್ಯಾಗ್ರಹದ ಮೊದಲ ಪಾಠವಾಯಿತು. ತಮ್ಮ ಜೀವನದಾದ್ಯಂತ ಅನುಭವಿಸಿದ ಅನುಭವಗಳೇ ಅವರ ಸ್ವರಾಜ್ಯ ಕಲ್ಪನೆಯ ಕನಸಿನ ಮೂಲ ಅವರ ಈ ಪರಿಕಲ್ಪನೆ ಜನಸಾಮಾನ್ಯರ ಕಲ್ಪನೆಯ ಸ್ವರ್ಗವಾಗಿದೆ. ಗಾಂಧೀಜಿ ಒಬ್ಬ ಸತ್ಯಶೋಧಕ ಆ ಸತ್ಯವನ್ನು ವಶಪಡಿಸಿಕೊಳ್ಳಲು ತನ್ನದೇ ಆದ ಒಂದು ಮಾರ್ಗವನ್ನು ಕಂಡುಕೊಂಡವರು. ಅದು ಅವರ ವಿಶ್ವಾಸದಲ್ಲಿ ಎದ್ದುಕಾಣುತ್ತಿತ್ತು. ಅದನ್ನು ಪಡೆಯಲು ನಿರಂತರವಾಗಿ ಪ್ರಯತ್ನಶೀಲರಾಗಿದ್ದರು. ಅದು ಪೂರ್ಣವಾಗಿ ಸಿಗದಿದ್ದರೂ ಅದಕ್ಕಾಗಿ ಹುಡುಕಾಟ ಮಾಡಿದರು. ಅದು ಸಿಗದೇ ಇರುವುದನ್ನು ತಮ್ಮದೇ ಆದ ನ್ಯೂನತೆಗಳನ್ನು ಅರಿಯಲು ಯತ್ನಿಸಿದವರು. ಆ ಶೋಧನೆಯ ಹಿನ್ನೆಲೆಯಲ್ಲಿ ತನ್ನತನದ ಅರಿವಿನ ಪ್ರಜ್ಞೆಯನ್ನು ಅರಿತವರು. ಇಂತಹ ಶ್ರೇಷ್ಠ ರಾಷ್ಟ್ರಭಕ್ತರ ಪ್ರೇರಣೆಯನ್ನು ಪಡೆಯದ ಯಾವ ಭಾರತೀಯನೂ ಇಲ್ಲ. ಹಾಗಾಗಿ ಸಹಜವೆಂಬಂತೆ ವೀರಪ್ಪ ಮೊಯಿಲಿ ಅವರಲ್ಲಿಯೂ ಸಹ ಗಾಂಧೀಜಿಯವರ ಸ್ವರಾಜ್ಯಕಲ್ಪನೆ ಮತ್ತು ಅವರ ಬದುಕು, ಹೋರಾಟ ಸಾಗಿದದಾರಿ ಮುಂತಾದವುಗಳು ಬಾಲಕನಿರುವಾಗಲೇ ಸ್ಫೂರ್ತಿಯ ಸೆಲೆಗಳಾಗಿ ಅವರನ್ನು ತಟ್ಟಿದವು. ಗಾಂಧೀಜಿ ಅವರನ್ನು ಕುರಿತು ಮೊಯಿಲಿ ಅವರು ಒಂದೆಡೆಯಲ್ಲಿ ಹೀಗೆ ಹೇಳಿಕೊಂಡಿದ್ದಾರೆ.

"ಸರ್ವಸಮಾನತೆ ಸರ್ವಾಂಗೀಣ ಉನ್ನತಿ, ಹಿಂಸಾರಹಿತ ಸಾಮೂಹಿಕ ಬಾಳು ಬದುಕು, ಇವುಗಳನ್ನು ರೂಪಿಸುವುದೇ ಮಾನವ ಕಲ್ಯಾಣಕ್ಕಾಗಿ ಇವುಗಳನ್ನು ಬಳಸಲ್ಪಡಬೇಕಾದರೆ ಗಾಂಧಿ ಮಾರ್ಗವೇ ಶ್ರೇಷ್ಠ ಎಂದು ಜಗತ್ತಿನ ಅನೇಕ ವಿಚಾರವಂತರು ಅಭಿಪ್ರಾಯ ಪಟ್ಟಿದ್ದಾರೆ. ನಮ್ಮ ಕಾಲದ ಮಹಾವಿಜ್ಞಾನಿ ಅಲ್ಬರ್ಟ ಐನ್‌ಸ್ಟೀನ್ ತಾವು ಸಂಶೋಧಿಸಿದ ಅಣುಶಕ್ತಿ ಮಾನವನ ದುರಂತಕ್ಕೂ ಪ್ರೇರಣೆ ಆದೀತೇ ಎಂಬ ಶಂಕೆ ಅವರ ಜಾಗೃತ ಹೃದಯಕ್ಕೆ ಅರಿವಾಗಿ ಅಳಲು ತುಂಬಿದಾಗ ಗಾಂಧೀಜಿಯ ಅಹಿಂಸಾತ್ಮಕ ಸತ್ಯಾಗ್ರಹ ಜೀವನಕ್ಕೆ ಮಾರು ಹೋದರು. ಇದೇ ಮಾನವನ ಮಾನವೀಯತೆಯನ್ನುಳಿಸಬಲ್ಲ ಐಕ್ಯೈಕ ಭರವಸೆ; ಐನ್‌ಸ್ಟೀನ್ ಮತ್ತು ಗಾಂಧೀ ಇಬ್ಬರೂ ಜೀವನದ ಎರಡು ಮೌಲ್ಯಗಳ ಪ್ರತೀಕಗಳು ಭೌತಶಕ್ತಿ ಮತ್ತು ಆತ್ಮಶಕ್ತಿ ಅಪ್ರತಿಹತ ಮಹಿಮೆಗಳನ್ನು ದರ್ಶನ ಮಾಡಿಸಿದ ಯುಗಪ್ರವರ್ತಕರು, ವಿಜ್ಞಾನ ಆತ್ಮಜ್ಞಾನ ಒಂದಕ್ಕೆ ಮತ್ತೊಂದು ಪೂರಕ ಎಂದು ಸಾರಿದ ದಾರ್ಶನಿಕರು.[೫]"

ವ್ಯಕ್ತಿ ವ್ಯಕ್ತಿಗಳ ಜೀನವದ ತೋಳಲಾಟದ ಸಮಸ್ಯೆಯೇ ಗಾಂಧೀಜಿಯವರಿಗೆ ತಮ್ಮದೇ ಆದ ಸ್ವರಾಜ್ಯ ಸೂತ್ರಗಳಿಗೆ ದಾರಿ ಮಾಡಿಕೊಟ್ಟಿತು. ವ್ಯಕ್ತಿಯು ತನ್ನನ್ನು ತಾನು ಅರಿತುಕೊಂಡು ತನ್ನ ಬೇಕು-ಬೇಡಗಳ, ಸುಖ-ದುಃಖಗಳ, ನ್ಯಾಯ ಅನ್ಯಾಯದ ವಿಚಾರಮಾಡಿ ತನ್ನ ಜೀವನದ ಅಳತೆಗೋಲಿನಿಂದ ಇತರರನ್ನು ಕಂಡು ರಾಜ್ಯವನ್ನು ನಡೆಸುವಂತಾಗಬೇಕು ಎಂಬುದು ಅವರ ಸ್ವರಾಜ್ಯದ ಕಲ್ಪನೆಯಾಗಿತ್ತು. ಅದನ್ನೇ ನಂಬಿ ಅದರಂತೆಯೇ ಬಾಳಿ ಅದನ್ನೇ ಸ್ವರ್ಗದ ಸೋಪಾನವಾಗಿ ಮಾಡಿಕೊಂಡಿದ್ದರು ಮಹಾತ್ಮಾಗಾಂಧೀಜಿಯವರು. ಇವರ ಸ್ವರಾಜ್ಯ ಕಲ್ಪನೆ ಸೂತ್ರ ಪ್ರತಿಯೊಬ್ಬರಿಗೂ ಇಂದಿಗೂ ಮಾರ್ಗದರ್ಶನವಾಗಿವೆ. ಆದರೆ ಅವುಗಳ ಅನುಷ್ಠಾನವಾಗದೇ ಇರುವುದು ನಮ್ಮ ದುರದೃಷ್ಟ. ಈ ಸೂತ್ರದ ಪ್ರೇರಣೆ-ಪ್ರಭಾವ ಮೊಯಿಲಿ ಅವರ ಮೇಲೆ ತಮ್ಮ ರಾಜಕೀಯ ಚಿಂತನೆಯ ಸೆಲೆಗೆ ಪ್ರೇರಕವಾದ ಅಂಶಗಳಾಗಿವೆ.

ಸ್ವರಾಜ್ಯ ಕಲ್ಪನೆಯ ವಿಚಾರದಲ್ಲಿ ಮೊದಲನೆಯ ಸೂತ್ರ ವ್ಯಕ್ತಿಯ ಶ್ರಮಕ್ಕೆ ಸಂಬಂಧಿಸಿದೆ. ಅಂದರೆ ದೈಹಿಕವಾಗಿ ಶ್ರಮಿಸುವ ನಾಗರೀಕರಿಗೆ ಮತದ ಹಕ್ಕಿರಬೇಕು. ಎಂಬುದು ಗಾಂಧೀಜಿ ಅವರ ಮಾತು, ದುಡಿಯುವ ವ್ಯಕ್ತಿಗಳ ಪರವಾಗಿರುವಂತದ್ದು. ಸ್ವಾವಲಂಬನೆಯ ಮೂಲಕವೇ ಸದೃಷ್ಟವಾಗಬೇಕು ಎಂಬುದು ಅವರು ತಿಳಿಯಪಡಿಸಿರುವುದು ಸ್ವಂತವಾಗಿ ಶ್ರಮಿಸುವಂತ ತನ್ನ ಜವಾಬ್ದಾರಿಯನ್ನು ಅರಿತು ಕೆಲಸ ಮಾಡುವುದರಿಂದ ಶ್ರಮದ ಮಹತ್ವವನ್ನು ಅರಿಯಬಲ್ಲ. ಇಂತಹ ಜನ ವಿಚಾರಪೂರ್ವಕವಾಗಿ ಕೆಲಸ ಮಾಡುವುದರಿಂದ ಅವರು ನೀಡುವ ಮತ ಅತ್ಯಮೂಲ್ಯ. ಅದೇ ದೇಶದ ಅಭಿವೃದ್ಧಿಗೆ ಅಡಿಗಲ್ಲು ಎಂಬುದು ಗಾಂಧೀಜಿ ಅವರು ನಂಬಿದ್ದರು.

ಸೈನಿಕ ವೆಚ್ಚದಲ್ಲಿ ಕಡಿಮೆ ಮಾಡಬೇಕೆಂಬುದು ಗಾಂಧೀಜಿಯವರ ಎರಡನೇಯ ಸ್ವರಾಜ್ಯಕಲ್ಪನೆಯ ಸೂತ್ರವಾಗಿದೆ. ಸೈನ್ಯದ ಖರ್ಚಿನ ಕಡೆಗೆ ಗಮನ ಹೆಚ್ಚಾಗಿ ಹಾಕಿದರೆ ಇತರರೊಂದಿಗೆ ದ್ವೇಷ ಮತ್ತು ಸಂಶಯಕ್ಕೆ ಎಡೆಮಾಡಿಕೊಡುವಂತಾಗುತ್ತದೆ. ಜನಸಾಮಾನ್ಯರ ನಾಡಾದ ಭಾರತದಲ್ಲಿ ವ್ಯಕ್ತಿಯ ಚಿಂತನೆಯ ಬಗ್ಗೆ ಕುಂದುಂಟಾಗುತ್ತದೆ. ಶ್ರಮವಹಿಸಿ ದುಡಿದ ಈ ರಾಷ್ಟ್ರದ ವ್ಯಕ್ತಿ ಈ ರಾಷ್ಟ್ರವನ್ನು ಏನೇ ಆದರೂ ಇದನ್ನೇ ಪಣಕ್ಕೆ ಹಚ್ಚಿ ರಕ್ಷಿಸಿಕೊಳ್ಳಬಲ್ಲ. ವ್ಯಕ್ತಿಯ ಸುಭದ್ರತೆ ರಾಷ್ಟ್ರದ ಭದ್ರತೆಗೆ ಎಂದೂ ಕುಂದನ್ನುಂಟು ಮಾಡಲಾರದು ಎಂದು ಗಾಂಧೀಜಿ ಒತ್ತಿ ಹೇಳಿದ್ದಾರೆ.

ಗಾಂಧೀಜಿಯವರ ಮುಖ್ಯವಾದ ಸೂತ್ರವೆಂದರೆ ಅಮಲೇರುವಂತಹ ಪಾನೀಯ ಮತ್ತು ಔಷಧಿಗಳು ನಿರ್ಮೂಲನೆಯಾಗಬೇಕು. ಇಂತಹವುಗಳಿಂದ ಬರುವ ಆದಾಯ ಬಂದಾಗಬೇಕು. ಜನರ ಅದರಲ್ಲೂ ಬಡವರ ಶತ್ರು ಎನಿಸಿದ ಕುಡಿತದ ಈ ಚಟವನ್ನು ತೊಡೆದುಹಾಕುವುದು ಭಾರತದಲ್ಲಿ ಅತ್ಯವಶ್ಯಕ; ಬಡವರು ಇನ್ನೂ ಹೀನಸ್ಥಿತಿಗಳಿದು ಹೋಗಿ ಅವರ ಬಾಳನ್ನೇ ಹಾಳು ಮಾಡುವಂತಹ ಈ ಕುಡಿತಕ್ಕೆ ಮುಟ್ಟುಗೋಲು ಹಾಕಲೇಬೇಕು. ಬಡವರನ್ನೇ ಹೆಚ್ಚಾಗಿ ಸುತ್ತಿಕೊಂಡಿರುವ ಈ ದುಶ್ಚಟಗಳಿಂದ ಬರುವ ಆದಾಯವೂ ಪಾಪಕರವಾದುದು; ಇಂತಹ ಪಾನೀಯಗಳನ್ನೆಲ್ಲ ನಿರ್ಮೂಲ ಮಾಡಿ ಅದರಿಂದ ದೊರಕುತ್ತಿದ್ದ ಪಾಪಕರವಾದ ಆದಾಯವನ್ನು ತಡೆಯಬೇಕೆಂಬುದು ಮಹಾತ್ಮಾ ಗಾಂಧೀಜಿಯವರ ಮಹತ್ವದ ಉದ್ದೇಶಿತ ಸೂತ್ರವಾಗಿತ್ತು.

"ಮಾನವ ಸಮಾಜದ ವಿಕಾಸಪಥಕ್ಕೆ ಮೂರು ಮಜಲುಗಳುಂಟು ಮೊದಲನೆಯದು ಪಾಶುಬಲದ ಕಾಡುನ್ಯಾಯದ ರಾಜ್ಯ ಅಲ್ಲಿ ಸ್ವಾರ್ಥ ಮತ್ತು ಹಿಂಸೆ ತುಂಬಿರುತ್ತದೆ. ಎರಡನೆಯದು ಕಾನೂನು ಕಟ್ಟಳೆಗಳ ರಾಜ್ಯ, ಅಲ್ಲಿ ನ್ಯಾಯಾಲಯಗಳು, ಪೋಲಿಸರು ಸೆರೆಮನೆಗಳು ಎದ್ದು ಕಾಣುತ್ತವೆ. ಮೂರನೆಯದಾದ ನಿಜಮಾನವೀಯ ಸಮಾಜದಲ್ಲಿ ಅಹಿಂಸೆ ಮತ್ತು ನಿಸ್ವಾರ್ಥತೆ ಅರಳಿ ನಿಂತಿರುತ್ತದೆ. ಅಲ್ಲಿ ಪ್ರೇಮವೇ ಸಹಜ ಕಾನೂನು ಅದೇ ಸಾಂಸ್ಕೃತಿಕ ಮಾನವ ಕುಲದ ಗುರಿ. ಮಹಾತ್ಮಗಾಂಧೀಜಿಯವರ ಜೀವನ ಸಂದೇಶಗಳು ಈ ಗುರಿಯನ್ನು ನಮ್ಮ ಹತ್ತಿರಕ್ಕೆ ತಂದುಕೊಟ್ಟಿವೆ.[೬]" ಎನ್ನುವಲ್ಲಿ ಗಾಂಧೀಜಿಯವರ ತತ್ವದ ನಿಜ ಸ್ವರೂಪ ಅನಾವರಣವಾಗಿದೆ. ಇವೆಲ್ಲವುಗಳನ್ನು ಚಿಂತನಾತ್ಮಕವಾಗಿ ಗುರುತಿಸಿಕೊಂಡ ಮೊಯಿಲಿ ಅವರು ಗಾಂಧೀಜಿ ತತ್ವಗಳಿಗೆ ಒಗ್ಗಿಕೊಂಡಿರುವರು. ಇವರ ಮೇಲೆ ಆಗಿರುವ ಗಾಂಧೀ ತತ್ವಗಳ ಗಾಢ ಪ್ರಭಾಕ್ಕೆ ಇದು ಸಾಕ್ಷಿಯಾಗಿದೆ.

ನೌಕರರ ಮತ್ತು ಸೈನಿಕರ ವೇತನ ಕಡಿಮೆಯಾಗಬೇಕು. ವೇತನ ಪ್ರಮಾಣ ಕಡಿಮೆಯಾಗಬೇಕು. ಅಂದರೆ ಜೀವನಾವಶ್ಯಕ ವಸ್ತುಗಳ ಬೆಲೆಗಳೂ ಕಡಿಮೆಯಾಗಬೇಕು. ಇದನ್ನು ಸಾಧಿಸಬೇಕಾದರೆ ಇಂತಹ ವಸ್ತುಗಳು ಉತ್ಪಾದನೆಗಳು ಮಿತಿ ಮೀರಿ ಹೆಚ್ಚಿಸಬೇಕು. ಸಾಮಾನ್ಯನಿಗೂ ಸುಲಭವಾಗಿ ವಸ್ತುಗಳೂ ದೊರೆಕುವಂತಾಗಬೇಕು. ಅಧಿಕ ಉತ್ಪಾದನೆಗಳಿಂದ ಬೆಲೆಗಳು ಕಡಿಮೆಯಾಗುತ್ತಿವೆ. ಅಧಿಕ ಉತ್ಪಾದನೆಯಾಗಬೇಕಾದರೆ

ಜನರಿಗೆ ಉದ್ಯೋಗದ ಅವಕಾಶವೂ ದೊರೆಯುತ್ತದೆ. ಉತ್ಪಾದನೆ ಹೆಚ್ಚಾದಂತೆ ದೇಶವೂ ಅಧಿಕ ಪ್ರಗತಿ ಹೊಂದುತ್ತದೆ. ವೇತನ ಪ್ರಮಾಣ ತಾನಾಗಿಯೇ ಹಿಡಿತದಲ್ಲಿ ಬರಬಲ್ಲುದು.

ಗಾಂಧೀಜಿಯ ಪ್ರಮುಖ ಸೂತ್ರ ಭಾಷಾವಾರು ತತ್ವದ ಮೇಲೆ ರಾಜ್ಯಗಳ ಪುನರ್ವಿಂಗಡನೆಯಾಗಬೇಕೆಂಬುದು. ರಾಷ್ಟ್ರದ ಆಡಳಿತವು ಅಲ್ಲಲ್ಲಿ ಇರುವ ಜನರಿಗೆ ಅವರದೇ ಆದ ಭಾಷೆಯಲ್ಲಿ ನಡೆಸಲ್ಪಟ್ಟರೆ ದೇಶದ ಹಿತದ ದೃಷ್ಟಿಯಿಂದ ಹೆಚ್ಚು ಉತ್ತಮ ಹಾಗೂ ಅಗತ್ಯ ಎಂಬುದು ಕೂಡ ಗಾಂಧೀಜಿಯವರ ದೃಢವಾದ ಭಾವನೆಯಾಗಿತ್ತು. ಅದಕ್ಕಾಗಿಯೇ ಅವರು ಭಾಷಾವಾರು ರಾಜ್ಯಗಳ ಪ್ರಚೋದಕರಾಗಿದ್ದರು. ಅಂತಹ ರಾಜ್ಯಗಳ ಆಡಳಿತವನ್ನು ಅಲ್ಲಿಯ ಭಾಷೆಗಳಲ್ಲಿಯೇ ನಡೆಸಬೇಕು. ಎಂಬುದು ಬಾಪು ಅವರ ನಿಲುವಾಗಿತ್ತು ಜೊತೆಗೆ ಭಾರತ ಒಂದೇ ಅವಿಚ್ಛಿನ್ನವಾದ ದೇಶವಾಗಿ ವಿವಿಧತೆಯಲ್ಲಿ ಏಕತೆಯನ್ನು ಸಾಮರಸ್ಯವನ್ನು ಬಳಸಿಕೊಂಡು ಹೋಗುವ ದೇಶವಾಗಬೇಕೆಂಬುದು ಅವರ ಒಲವಾಗಿತ್ತು.

"ಗಾಂಧೀಜಿ ತೋರಿಸಿಕೊಟ್ಟ 'ಸರ್ವೋದಯ' ಮಾರ್ಗದ ಆಳದಲ್ಲಿ ಜಾಗತಿಕ ಸಮಾನತೆ ಮತ್ತು ಸರ್ವಾಂಗೀಣ ಅಭಿವೃದ್ಧಿಯನ್ನು ಮೈಗೂಡಿಸುವ ಶಕ್ತಿಯೊಂದಿಗೆ ಬಾಳಬಲ್ಲರು. ಜಗತ್ತಿನ ಅನೇಕ ಚಿಂತಕರು ಮಾನವ ಸಮಾಜ ಕಲ್ಯಾಣಕ್ಕಾಗಿ ಎಲ್ಲಾ ಬಗೆಯ ವೈಜ್ಞಾನಿಕ ಪ್ರಗತಿಯನ್ನು ಬಳಸಲು ಗಾಂಧೀಜಿಯ ಪಥವೇ ಅತ್ಯುತ್ತಮವಾದದು ಎಂಬ ಅಭಿಪ್ರಾಯ ಕೊಟ್ಟಿದ್ದಾರೆ. ೨೦ನೇ ಶತಮಾನದ ಸರ್ವಶ್ರೇಷ್ಠ ವಿಜ್ಞಾನಿ ಹಾಗೂ ಸಮಕಾಲೀನರಾಗಿದ್ದ ಜರ್ಮನ್ ಮೂಲದ ಅಮೇರಿಕದ ಆಲ್ಬರ್ಟ ಐನ್‌ಸ್ಟೀನ್ ಮಹಾತ್ಮರ ಅಹಿಂಸಾತ್ಮಕ ಆಂದೋಲನವನ್ನು ಸ್ವೀಕರಿಸಿದ್ದರು. ಅಣುಶಕ್ತಿಯನ್ನು ಹುಟ್ಟಿಸಿದ ಐನ್‌ಸ್ಟೀನ್, ಅದು ಮಾನವ ದುರಂತಗಳಿಗೂ ಇಂಬಾಗಬಹುದೆಂದು ಅರ್ಥ ಮಾಡಿಕೊಂಡಾಗ, ಅವರು ಬಾಪುವಿನ ದಾರಿಯನ್ನು ಸಮರ್ಥಿಸಿದರು. ಗಾಂಧೀಜಿಯ ಕೊಲೆಯಾದಾಗ ವ್ಯಾಕುಲರಾದ ಐನ್‌ಸ್ಟೀನ್ ಉದ್ಗಾರ ತೆಗೆದು ಹೀಗೆ "ಮುಂದಿನ ಪೀಳಿಗೆಯು ಮಹಾತ್ಮಾ ಗಾಂಧೀಜಿಯಂತಹ ಹಿರಿಯ ವ್ಯಕ್ತಿಯೊಬ್ಬರು ನಮ್ಮ ನಡುವೆ ೨೦ನೇ ಶತಮಾನದಲ್ಲಿ ಜೀವಿಸಿ ಅಹಿಂಸಾತ್ಮಕ ಚಳುವಳಿಗೆ ದಾರಿತೋರಿ ಸಾಧಿಸಿದರೆಂಬುದನ್ನು ನಂಬಲಾರರು." ಅವರಿಬ್ಬರೂ ನಮ್ಮ ಕಾಲದ ಎರಡು ವಿಭಿನ್ನ ಮೌಲ್ಯಗಳ ಪ್ರತಿಪಾದಕರೂ ಪ್ರತಿನಿಧಿಗಳೂ ಆಗಿದ್ದರು."

ಎಂಬುದು ಮೊಯಿಲಿ ಅವರು ತಮ್ಮ ಕೃತಿಯಲ್ಲಿ ಬಾಪುವಿನ ದಾರಿಯನ್ನೇ ಮನಸಾರೆ ಹೊಗಳಿದ್ದಾರೆ.

ಗಾಂಧೀಜಿಯವರು ಸಂಪೂರ್ಣವಾಗಿ ವಿದೇಶಿಯವರಲ್ಲಿದ್ದ ಗುತ್ತಿಗೆಯನ್ನು ಕಿತ್ತುಕೊಳ್ಳಬೇಕೆಂದು ಹೇಳದೇ, ಅಂತರಾಷ್ಟ್ರೀಯ ಕ್ಷೇತ್ರದಲ್ಲಿ ಭಾರತ ಎಲ್ಲರೊಂದಿಗೂ ಬಾಳಿ, ಬದುಕಿ ಗೌರವದ ಸ್ಥಾನವನ್ನು ಗಳಿಸಬೇಕು. ಭಾರತವು ವಿದೇಶಗಳಲ್ಲಿ ತನ್ನ ಕಾರ್ಯಚಟುವಟಿಕೆಗಳನ್ನು ನಡೆಸಲು ಬೇಕು. ಸೌಹಾರ್ದಮಯ ಸಹಕಾರವನ್ನು ಅಗತ್ಯವಾಗಿ ಬೆಳೆಸಿಕೊಂಡು ಹೋಗಬೇಕು. ಆದ್ದರಿಂದ ವಿದೇಶಿಯರು ನಮ್ಮ ದೇಶದಲ್ಲಿ ಅಧಿಕಾರದ ಗುತ್ತಿಗೆಯನ್ನು ಹೊಂದಿದ್ದರೂ ಆ ಬಗೆಗಿನ ನೀತಿ ಮತ್ತು ವ್ಯವಹಾರದಲ್ಲಿ ಬದಲಾವಣೆ ಮಾಡಿ ಪರಿಶೀಲಸಿ, ಪ್ರಸಂಗಕ್ಕೆ ತಕ್ಕಂತೆ ಹೊಂದಾಣಿಕೆ ಮಾಡಿಕೊಳ್ಳಬೇಕೆಂದು ಗಾಂಧೀಜಿಯವರು ತಮ್ಮ ಧೋರಣೆಯಿಂದ ಹೇಳಿದ ಮಾತು ಇಂದಿಗೂ ಗಮನಿಸುವಂತಿದ್ದು ಅದು ರಾಜಕೀಯ ಧುರೀಣರನ್ನು ಪ್ರಭಾವಿಸಿದೆ.

ಅಸ್ಪೃಶ್ಯತೆಯನ್ನು ತೊಡೆದುಹಾಕಿ, ವಿವಿಧ ಜಾತಿ-ಧರ್ಮಗಳ ಜನರ ಮಧ್ಯೆ ಸೌಹಾರ್ದಯುತ ಬಾಳುವೆಗೆ ವಿಶೇಷ ಗಮನಹರಿಸಬೇಕೆಂದು ಹಾಗೂ ಆ ಮೂಲಸೂತ್ರವಾಗಿರಬೇಕೆಂಬುದು ಗಾಂಧೀಜಿಯವರ ಪ್ರಬಲ ಇಚ್ಛೆಯಾಗಿತ್ತು. ದೇಶಿಯ ವಸ್ತುಗಳ ಉತ್ಪಾದನೆಗೆ ಮಹತ್ವ ಕೊಟ್ಟು ಅವುಗಳ ಬೆಳವಣಿಗೆಗೆ ಪ್ರೋತ್ಸಾಹ ನೀಡಿ, ಗ್ರಾಮಾಂತರ ಅಭಿವೃದ್ಧಿಗೆ ಒತ್ತುಕೊಡಬೇಕೆಂದೂ ಉಚ್ಚಾರಿಸಿದ್ದಾರೆ. ಗಾಂಧೀಜಿಯವರ ಈ ಮಾರ್ಗ ಸೂತ್ರಗಳು ಎಂದೆಂದಿಗೂ ಅವು ಇದುವರೆಗೆ ಮಾರ್ಗದರ್ಶಿಯಾಗಿವೆ. ಇದು ಮೊಯಿಲಿ ಅವರ ವ್ಯಕ್ತಿತ್ವದ ಮೇಲೆ ಗಾಢ ಪ್ರಭಾವ ಬೀರಿದೆ. ಅದಕ್ಕಾಗಿ ಮೊಯಿಲಿ ಅವರು ಹೀಗೆ ಪ್ರಸ್ತಾಪಿಸುತ್ತಾರೆ.

"ಈ ದೇಶದಲ್ಲಿ ಬೆಳಗಿನ ಜ್ಯೋತಿ ಸಾಧಾರಣ ಬೆಳಕಲ್ಲ. ಸಾವಿರಾರು ವರ್ಷಗಳು ಕಳೆದರೂ ಆ ಬೆಳಕು ಭಾರತದಲ್ಲಿ ಇನ್ನೂ ಕಂಡು ಬರುತ್ತದೆ. ಜಗತ್ತು ಅದಕ್ಕೆ ಸಾಕ್ಷಿಯಾಗುತ್ತದೆ. ಅನೇಕ ಅತೃಪ್ತ ಹೃದಯಗಳ ಸಾಂತ್ವನದ ಅಮೃತಧಾರೆಯಾಗುತ್ತದೆ. ಈ ಬೆಳಕು ಜೀವಂತ ಸತ್ಯದ ರೂಪ. ಈ ಶಾಶ್ವತ ವ್ಯಕ್ತಿ ಆತನ ಶಾಶ್ವತ ಸತ್ಯದೊಡನೆ ನಮ್ಮೊಡನಿದ್ದು ಸರಿಯಾದ ಮಾರ್ಗ ತೋರಿ ತಪ್ಪು ದಾರಿಯಿಂದ ರಕ್ಷಿಸಿ ಈ ಪುರಾತನ ರಾಷ್ಟ್ರದ ಸ್ವಾತಂತ್ರ್ಯ ಗಳಿಸಿಕೊಟ್ಟರು.[೮]" ಜೊತೆಗೆ ಮೊಯಿಲಿ ಅವರು ಸಾಮಾಜಿಕ,

ರಾಜಕೀಯ, ಆರ್ಥಿಕ ಮುಂತಾದ ಕ್ಷೇತ್ರಗಳ ಮೇಲೆ ಪ್ರಭಾವ ಬೀರಿ ಅವರು ಜ್ಞಾನದ ಹಸಿವನ್ನು ಗಾಂಧೀಜಿಯವರ ಬದುಕು ಪ್ರಭಾವಿಸಿದೆ ಎಂಬುದನ್ನು ಯಾರು ಅಲ್ಲಗಳಿಯುವಂತಿಲ್ಲ.

ಡಾ.ಬಿ.ಆರ್. ಅಂಬೇಡ್ಕರ

ಡಾ.ಬಿ.ಆರ್. ಅಂಬೇಡ್ಕರರು ತತ್ವನಿಷ್ಠ ರಾಜಕೀಯ ಪ್ರಜ್ಞೆ ಹೊಂದಿದ್ದವರು. ಆಧುನಿಕ ಭಾರತದ ನಿರ್ಮಾಪಕರಲ್ಲಿ ಒಬ್ಬರು. ಭಾರತದ ಸಂವಿಧಾನ ಶಿಲ್ಪಿಗಳು, ಜೊತೆಗೆ ಹಿರಿಯ ರಾಜನೀತಿ ತಜ್ಞರು ಆಗಿದ್ದಾರೆ. ಶತಶತಮಾನಳಿಂದ ತುಳಿತಕ್ಕೊಳಗಾಗಿ ಶೋಷಣೆಯನ್ನು ಅನುಭವಿಸಿದ ಅಸ್ಪೃಶ್ಯರ ಪರ ಹೋರಾಟ ಮಾಡಿದ ಹರಿಕಾರರು, ವಿಶ್ವದ ಶ್ರೇಷ್ಠ ಮಾನವತಾವಾದಿಗಳು, ಜೊತೆಗೆ ಭಾರತ ಕಂಡ ಶ್ರೇಷ್ಠ ವಿಚಾರವಾದಿಗಳು, ಸಮಾನತೆ ಮತ್ತು ಸ್ವಾತಂತ್ರ್ಯ ಹಾಗೂ ಸಹೋದರತ್ವಗಳ ಬಗೆಗೆ ವಿಶೇಷ ಕಾಳಜಿ ಹೊಂದಿದವರು ಡಾ.ಬಿ.ಆರ್. ಅಂಬೇಡ್ಕರರು.

“ಹಿಂದೂ ಸಮಾಜ ಅಸಮಾನತೆಯ ತವರು, ಅದು ಏಣಿ ಇಲ್ಲದ, ಪ್ರವೇಶದ್ವಾರವಿಲ್ಲದ, ಅನೇಕ ಮಹಡಿಗಳುಳ್ಳ ಗೋಪುರ, ಒಂದು ಮಹಡಿಯಲ್ಲಿ ಹುಟ್ಟಿದ ಜನ ಅಲ್ಲಿಯೇ ಸತ್ತು ಕೊಳೆಯಬೇಕು. ಅಸ್ಪೃಶ್ಯರು ಶತಶತಮಾನಗಳ ಬಡತನದಿಂದ ಜಾಗೃತರಾಗುವ ತನಕ ಈ ನಾಡಿಗೆ ಮುಕ್ತಿಯಿಲ್ಲ. ಭಾರತ ಸ್ವಾತಂತ್ರ್ಯವಾದರೆ ಸಾಲದು, ಧಾರ್ಮಿಕ, ರಾಜಕೀಯ, ಸಾಮಾಜಿಕ, ಆರ್ಥಿಕ ವಿಷಯಗಳಲ್ಲಿ ಭಾರತ ಖಂಡದಲ್ಲಿ ಹುಟ್ಟಿದವರೆಲ್ಲರೂ ಸಮಾನ ಹಕ್ಕುವುಳ್ಳರಾಗಬೇಕು. ಪ್ರತಿಯೊಬ್ಬನು ವಿಕಾಸ ಹೊಂದಲು ಅನುಕೂಲವಾಗುವಂತೆ ಸಮಾನಾವಕಾಶಗಳನ್ನು ಕಲ್ಪಿಸಬೇಕು.[೯]”

ಇಂತಹ ಒಬ್ಬ ಶ್ರೇಷ್ಠ ಸಮಾಜ ಚಿಂತಕ ಎಂ.ವೀರಪ್ಪ ಮೊಯಿಲಿ ಅವರಿಗೆ ರಾಜಕೀಯ ಚಿಂತನೆಗೆ ಸ್ಫೂರ್ತಿದಾಯಕರಾಗಿದ್ದು ಸಹಜ. ಅವರು ಅನುಭವಿಸಿದ ಮತೀಯ ಶೋಷಣೆ ಮೊಯಿಲಿ ಅವರು ಸಹ ಅನುಭವಿಸಿದ್ದಾರೆ. ಆ ನೋವಿನ ಹಿನ್ನೆಲೆಯಲ್ಲಿ ಡಾ.ಅಂಬೇಡ್ಕರರು ಎಲ್ಲರಿಗೂ ಆದರ್ಶ ಪ್ರೀಯರಾಗಿದ್ದಾರೆ. ಅಂಬೇಡ್ಕರರು ಖ್ಯಾತ ನ್ಯಾಯಶಾಸ್ತ್ರಜ್ಞರು. ಅಸ್ಪೃಶ್ಯತೆಯ ಮೂಲ ಅದರ ದುಷ್ಪರಿಣಾಮಗಳನ್ನು ಕುರಿತು ಅಧ್ಯಯನ ಮಾಡಿದವರಲ್ಲಿ ಪ್ರಮುಖರು.

ದಲಿತರ ಏಳಿಗೆಗಾಗಿ ಅಂಬೇಡ್ಕರವರು ಸೂತ್ರಗಳನ್ನು ಸೂಚಿಸಿದವರು ದಲಿತ ಸಮುದಾಯವು ತಮ್ಮ ಜೀವನದಲ್ಲಿ ಪ್ರಗತಿಯನ್ನು ಹೊಂದಬೇಕಾದರೆ ಅವರು ಈ ಸೂತ್ರಗಳನ್ನು ಕಡ್ಡಾಯವಾಗಿ ಅನುಸರಿಸಬೇಕೆಂಬ ನಂಬಿಕೆಯನ್ನು ಅಂಬೇಡ್ಕರರು ಹೊಂದಿದ್ದರು ಅವುಗಳು ಈ ತೆರನಾಗಿವೆ.

೧) **ಸ್ವ-ಸುಧಾರಣೆ :**

ದಲಿತರು ತಮ್ಮ ಸ್ವಂತ ಜೀವನವನ್ನು ಸುಧಾರಿಸಿಕೊಳ್ಳುವುದು ಮುಖ್ಯವಾಗಿದೆ.

೨) **ಸ್ವ-ಏಳ್ಗೆ :** ದಲಿತನಾದವನು ತನ್ನ ಸ್ವಂತ ಉನ್ನತಿಯನ್ನು ಕುರಿತು ಯೋಚಿಸಿ, ಕಾರ್ಯ ಪ್ರವೃತ್ತನಾಗುವನು.

೩) **ಸ್ವಾವಲಂಬನೆ :** ದಲಿತ ಸಮುದಾಯದವರು ತನ್ನ ಶ್ರಮವನ್ನು ಅವಲಂಬಿಸಿ ಬದುಕುವುದು ಮುಖ್ಯವಾಗಿದೆ.

೪) **ಸ್ವಾಭಿಮಾನ :** ದಲಿತ ಸಮುದಾಯದ ವ್ಯಕ್ತಿಗಳು ಯಾವಾಗಲೂ ತನ್ನ ಆತ್ಮ ಗೌರವಕ್ಕೆ ಚ್ಯುತಿ ಬರದಂತೆ ಇರುವದು.

೫) **ಸ್ವ-ನಂಬಿಕೆ :** ದಲಿತರು ತಮ್ಮ ವ್ಯಕ್ತಿತ್ವದ ಮೇಲೆ ನಂಬಿಕೆಯಿಟ್ಟು ಮುನ್ನೆಡೆಯಬೇಕು. ಇವುಗಳ ಮೂಲಕ ಅಂಬೇಡ್ಕರವರು ದಲಿತರಲ್ಲಿ ಆತ್ಮ ಸ್ಥೈರ್ಯ ತುಂಬುವ ಮೂಲಕ ಅವರ ಇರುವಿಕೆಯನ್ನು ಹಾಗೂ ಬದುಕನ್ನು ಉಜ್ವಲಗೊಳಿಸುವಂತಹ ಕಾರ್ಯ ಈ ಸೂತ್ರದಲ್ಲಿ ಅಡಗಿರುವುದು ಪ್ರಮುಖವಾಗಿದೆ.

ಅಸ್ಪೃಶ್ಯರು ತಮ್ಮ ಜೀವನ ನಡೆಸುವ ರೀತಿ ನೀತಿಗಳಲ್ಲಿ ಸೂಕ್ತವಾದ ಬದಲಾವಣೆಗಳು ಆಗದಿದ್ದರೆ ಅವರಲ್ಲಿ ನಾವು ಇತರರಂತೆ ಎಂಬ ಆತ್ಮ ವಿಶ್ವಾಸ ಮಾಡುವುದಿಲ್ಲ. ಅಲ್ಲದೆ ಇತರ ಜಾತಿಗಳ ಜನರಿಗೂ ದಲಿತರ ಬಗ್ಗೆ ಗೌರವಭಾವನೆಗಳು ಹೊರಟು ಹೋಗುತ್ತದೆ ಎಂದು ಅಂಬೇಡ್ಕರ ನಂಬಿದ್ದರು. ಈ ಕಾರಣದಿಂದ ಸತ್ತಪ್ರಾಣಿಗಳ ಸಾಗಿಸುವ ಕಾರ್ಯವನ್ನು ಕೈಬಿಡಿರಿ ಮದ್ಯಪಾನ ವ್ಯಸನಿಗಳಾಗದೇ ಸಾತ್ವಿಕ ವ್ಯಕ್ತಿತ್ವ ಗುಣವನ್ನು ಬೆಳೆಸಿಕೊಳ್ಳಿ ಶುಭ್ರವಾದ ಬಟ್ಟೆಗಳನ್ನು ಧರಿಸಿರಿ. ನಾಗರಿಕತೆಯನ್ನು ಮೈಗೂಡಿಸಿಕೊಂಡು ತಾವು ಉತ್ತಮ ನಾಗರಿಕರಾಗಿ ಎಂದು ದಲಿತ ಸಮುದಾಯ ಕುರಿತು ತಮ್ಮ ಉತ್ತಮವಾದ ಅಂಶಗಳನ್ನು ಹೇಳಿರುವುದು

ಅವರ ಮನೋಸ್ಥೈರ್ಯವನ್ನು ಸೂಚಿಸುತ್ತದೆ. ಅಂಬೇಡ್ಕರರ ಚಿಂತನೆಗಳ ಪ್ರಭಾವ ಮೊಯಿಲಿ ಅವರಿಗೂ ಆಗಿದೆ. ಹೀಗಾಗಿ ಅವರು ಆತ್ಮ ಗೌರವ, ಸ್ವಾಭಿಮಾನದಿಂದ ರಾಜಕೀಯದಲ್ಲಿ ಹೆಜ್ಜೆ ಹಾಕಿದ್ದಾರೆ.

ಪೆರಿಯಾರ್

ಇವರು ದ್ರಾವಿಡ ಸಂಸ್ಕೃತಿ ಚಿಂತಕರಲ್ಲಿ ಒಬ್ಬರಾದವರು. ಪೆರಿಯಾರರು, ಭಾರತೀಯ ಸಾಮಾಜಿಕ ವ್ಯವಸ್ಥೆಯಲ್ಲಿ ಬೇರೂರಿದ್ದ ಅಸ್ಪೃಶ್ಯತೆ. ಜಾತೀಯತೆ ಇವೆರಡೂ ಹಿಂದೂ ಧರ್ಮದ ಕಣ್ಣುಗಳಿದ್ದಂತೆ ಈ ಹೀನ ಕಣ್ಣುಗಳ ಕರಾಳ ಛಾಯೆಯಡಿಯಲಿ ನಲುಗಿದ ದಲಿತರನ್ನು ಮಹಿಳೆಯರನ್ನು ಇತರರಂತೆ ಬದುಕು ಮಾಡಲು ದಾರಿ ತೋರಿದ ಆಧುನಿಕರಲ್ಲಿ ಪ್ರಮುಖರೆನಿಸಿಕೊಂಡವರಲ್ಲಿ ಫುಲೆ ಶಾಹುಮಹಾರಾಜ್, ಅಂಬೇಡ್ಕರ, ಲೋಹಿಯಾ ಮುಂತಾದವರಂತೆ ಎದ್ದು ಕಾಣುವ ಇನ್ನೊಂದು ಹೆಸರು ಪೆರಿಯಾರ್ ಅವರದು. ಆಧುನಿಕ ಭಾರತ ನಿರ್ಮಾಣದಲ್ಲಿ ಸಾಮಾಜಿಕ ಸಾಮಾನತೆಯಲ್ಲಿ ಪೆರಿಯಾರ್ ರಾಮಸ್ವಾಮಿ ನಾಯಕರು ಮಹತ್ವವೆನಿಸಿದ್ದಾರೆ. ಪೆರಿಯಾರ್‌ರು ತೀಕ್ಷ್ಣ ಬುದ್ಧಿಯ ಚಿಂತಕರು, ಬಡತನ, ಅಸಾಯಕತೆ, ದಬ್ಬಾಳಿಕೆ, ಅವಮಾನ ಅಸ್ಪೃಶ್ಯತೆ ಮುಂತಾದವುಗಳು ಅವರ ಚಿಂತನೆಯನ್ನು ಬಲಪಡಿಸಿದವುಗಳು.

ಪೆರಿಯಾರ್ ಅವರು ಊರಾಚೆ ವಾಸಮಾಡುವ ಜನಸಮುದಾಯ ಕುರಿತು ಹಾಗೂ ಅವರು ಅನುಭವಿಸುತ್ತಿರುವ ಅವಮಾನ ಕುರಿತು ಚಿಂತಿಸಿದವರು. ಇದು ನಾಗರಿಕ ಸಮಾಜದ ದುರಂತದಲ್ಲಿ ಒಂದಾಗಿದೆ ಎಂದು ಅಭಿಪ್ರಾಯ ಪಟ್ಟವರು. ಸಮುದಾಯದ ಸರ್ವದುಃಖಕ್ಕೆ ಅವಮಾನಗಳಿಗೂ ನಮ್ಮ ಸಮಾಜವೇ ಕೊನೆ ಎಂದು ಒತ್ತಿಹೇಳಿದವರು. ಇಂತಹ ಸಮಾಜಕ್ಕೆ ಸರಿಯಾದ ಚಿಕಿತ್ಸೆಯನ್ನು ನೀಡದೇ ಹೋದರೆ ಅಸ್ಪಶ್ಯರಾದ ಕೆಳಸಮುದಾಯದ ಪರಿಸ್ಥಿತಿ ಎಂದಿಗೂ ಬದಲಾಗದು ಎಂಬ ಮನಸ್ಥಿತಿಯನ್ನು ಶ್ರೀಯುತರು ಎಳೆಯ ಪ್ರಾಯದಲ್ಲಿರುವಾಗಲೇ ಬಲಪಡಿಸಿಕೊಂಡವರು. ರಾಮಸ್ವಾಮಿ ನಾಯಕರವರು ಕೆಳದರ್ಜೆಯ ಸಮುದಾಯದ ಜೊತೆ ಬೆರೆತವರು. ಅವರೊಡನೆ ಊಟ ಮತ್ತು ವಾಸ್ತವ್ಯವನ್ನು ಮಾಡಿದವರು. ಎಲ್ಲ ಸಮುದಾಯಗಳಿಗೆ ಗೊತ್ತಾಗುವ ಹಾಗೇ ಈ ಚಟುವಟಿಕೆಯಲ್ಲಿ ನಿರತರಾದವರು. ಇದರಿಂದ ತಮ್ಮ ಕೌಟುಂಬಿಕ ಜೀವನದಲ್ಲಿ ಕಷ್ಟವನ್ನು ಎದುರಿಸಿದವರು. ಜೊತೆಗೆ ಅಸ್ಪಶ್ಯತೆಯ ಬಗ್ಗೆ ಅಪರವಾದ ನೋವಿತ್ತು ಸಂಪ್ರದಾಯ

ಮಡಿವಂತಿಗೆ ಶಿಕ್ಷಣವನ್ನು ವಿರೋಧಿಸುವುದರ ಮೂಲಕ ಕಠಿಣವಾದ ವ್ಯಕ್ತಿತ್ವವನ್ನು ತೋರ್ಪಡಿಸಿದವರು.

ಪರಂಪರೆ ಮತ್ತು ವೈಚಾರಿಕ ಪ್ರಜ್ಞೆ ರಾಮಸ್ವಾಮಿ ನಾಯಕರಿಗೆ ಇತ್ತು ಈ ಕುರಿತು ಅವರ ತಂದೆ ವೆಂಕಟಪ್ಪನಾಯಕ ಅವರ ಕುಶಲತೆಯ ಪ್ರಜ್ಞೆಯನ್ನು ಮೆಚ್ಚಿಕೊಂಡಿದ್ದರು. ಜೊತೆಗೆ ಕುಟುಂಬ ವೃತ್ತಿಯಾದ ವ್ಯಾಪಾರ ಹಾಗೂ ಅನುಭವದ ಹಲವು ಮಜಲುಗಳು ಇವರ ಜೀವನ ನಿರ್ವಹಣೆಯಲ್ಲಿ ಜ್ಞಾನದ ವಿಕಾಸಕ್ಕೆ ಸಹಾಯಕವಾದವುಗಳು. ರಾಮಸ್ವಾಮಿ ಅವರ ಜೀವನದಲ್ಲಿ ತಮ್ಮದೇ ಆದ ಆಲೋಚನೆಗಳನ್ನು ಹೊಂದಿದ್ದರು. ಅವುಗಳಲ್ಲಿ ಬಹುಮುಖ್ಯವಾಗಿ ವೈಚಾರಿಕ ನೆಲೆಗಟ್ಟಿನಲ್ಲಿ ಜೀವನ ಸಾಗಿಸುವ ಅವರು ಆಯ್ಕೆ ಮಾಡಿಕೊಂಡ ಆದರ್ಶ ತತ್ವ ಆಗಿತ್ತು. ಜೀವನವೆಂಬುದು ಜಂಜಾಟದ ಗೂಡು ಎಂಬ ನಿತ್ಯದ ಅರಿವಿನ ಪ್ರಜ್ಞೆ ಅವರಲ್ಲಿತ್ತು. ಅವಾಸ್ತವಿಕೆ ಮತ್ತು ಅವೈಜ್ಞಾನಿಕ ಪರಿಕಲ್ಪನೆಗಳಿಗೆ ಅವರೆಂದೂ ಜೋತು ಬಿದ್ದವರಲ್ಲ ಹಾಗಾಗಿಯೇ ಎಂ. ವೀರಪ್ಪ ಮೊಯಿಲಿ ಅವರಿಗೆ ಪೆರಿಯಾರ್ ಜೀವನ ಚಿಂತನೆಯ ಸೆಲೆಗಳು ಪ್ರಭಾವನ್ನು ಬೀರಿದವುಗಳಾಗಿವೆ.

ಪೂಜೆಯೇ ಕಾಯಕವೆಂದು ತಿಳಿದ ವೈದಿಕ ಸಂಸ್ಕೃತಿಯನ್ನು ಅಲ್ಲಗಳೆದು ಬಸವಣ್ಣನವರ ಕಾಯಕದ ಮಹತ್ವನ್ನು ಹೆಚ್ಚಿಸಿದ ಶೂದ್ರರ ವಾರಸುದಾರರಾದ ರಾಮಸ್ವಾಮಿನಾಯಕರು ಕಾಯಕದಲ್ಲಿ ಯಾವುದು ಮೇಲಲ್ಲ ಹಾಗೂ ಯಾವುದು ಕೀಳಲ್ಲ ಎಂದು ನಂಬಿಕೊಂಡವರು. ಸಂಪ್ರದಾಯ ಶಿಕ್ಷಣ ಕುರಿತು ಹಾಗೂ ತಮ್ಮ ಬಿಡುವಿನ ವ್ಯವಹಾರದ ನಡುವೆ ವಿಶ್ರಾಂತಿ ಪಡೆದಾಗ ಜಾತೀಯತೆಗೆ ಸಂಬಂಧಪಟ್ಟ ಅನೇಕ ಕೃತಿಗಳನ್ನು ಅಧ್ಯಯನ ಮಾಡುತ್ತಿದ್ದರು. ಅವರ ವೈಚಾರಿಕತೆಯ ನಡಾವಳಿಕೆಯಲ್ಲಿಯೇ ವಿಮರ್ಶಾತ್ಮಕ ಒಂದು ಗುಣ ಅವರಲ್ಲಿತ್ತು. ಸಾಮಾಜಿಕ ಅನಿಷ್ಠತೆಗಳ ಕುರಿತು ಅನೇಕ ವಿದ್ವಾಂಸರ ಜೊತೆ ಸಂವಾದ ಚರ್ಚೆ ಮಾಡುತ್ತಿದ್ದರು. ಜೊತೆಗೆ ಶಿಕ್ಷಣ ಸರ್ವರಿಗೂ ದೊರೆಯುವಂತಾಗಬೇಕು ಎಂಬ ಮನದ ಮಾತು ಅವರದು.

ಭಾರತದ ಸಾಮಾಜಿಕ ವ್ಯವಸ್ಥೆಯಲ್ಲಿ ಅಸ್ಪೃಶ್ಯರಷ್ಟೇ ಸಮನಾಗಿ ಅವಮಾನಕ್ಕೆ ಒಳಗಾದವರು ಮಹಿಳೆಯರು. ಅವರ ಶ್ರೇಯೋಭಿವೃದ್ಧಿಗಾಗಿ ದುಡಿದ ಮಹನೀಯರಲ್ಲಿ ಪೆರಿಯಾರ್ ಒಬ್ಬರು. ಬುದ್ಧ, ಬಸವಾದಿ ಶರಣರ ಕಾಲದಿಂದಲೂ ಅವರನ್ನು ಮೇಲೆತ್ತುವುದಲ್ಲದೆ ಪುರುಷರಷ್ಟೇ ಸಮಾನವಾಗಿ ಕಾಣಬೇಕೆಂದು ಹೇಳಿ ಅದನ್ನು

ಕಾರ್ಯಗತ ಮಾಡಿ ತೋರಿಸಿದ್ದಾರೆ. ಅವಕಾಶ ವಂಚಿತವಾದ ಆಧುನಿಕ ಭಾರತದ ಮಹಿಳಾ ಸಮುದಾಯವನ್ನು ಮೇಲೆತ್ತುವಲ್ಲಿ ಪೆರಿಯಾರ್ ಶ್ರಮಿಸಿದ್ದಾರೆ.

ಪೆರಿಯಾರ್ ಅವರು ಸ್ವ ಗೌರವ ವಿವಾಹಕ್ಕೆ ಬದ್ಧರಾದವರು. ಶ್ರೀಯುತರು ಮದುವೆ ಎಂಬುದು ಗಂಡು ಹೆಣ್ಣಿನ ನಡುವೆ ಏರ್ಪಡುವ ಸಾಮಾಜಿಕ ಒಪ್ಪಂದ ಮಾತ್ರ. ಇದಕ್ಕೆ ಯಾವುದೇ ಧಾರ್ಮಿಕ ಪಾವಿತ್ರ್ಯತೆಯ ಅವಶ್ಯಕತೆ ಇಲ್ಲ. ಹೆಣ್ಣು ಗಂಡು ಒಂದಾಗಿ ಬಾಳಲು, ಜೀವನದಲ್ಲಿ ಬರುವ ಕಷ್ಟ–ಸುಖಗಳನ್ನು ಹಂಚಿಕೊಳ್ಳುವ ಒಪ್ಪಂದ ಮಾತ್ರವಾಗಿದ್ದು ಎಂಬುದು ಅವರ ಮನದ ಇಂಗಿತವಾಗಿದೆ. ಇಂಥ ವೈವಾಹಿಕ ಒಪ್ಪಂದಗಳಿಗೆ ಒಂದು ವೈಚಾರಿಕವಾದ ಮಾನವೀಯ ಅರ್ಥ ಕೊಡುವತ್ತ ಪೆರಿಯಾರ್ ಅವರು ಪರಸ್ಪರ ಹಾಗೂ ಸಹಬಾಳ್ವೆಯೇ ಈ ಒಪ್ಪಂದದ ಮುಖ್ಯ ತಿರುಳು ಎಂದು ಅಭಿಪ್ರಾಯ ಪಟ್ಟವರು. ಪೆರಿಯಾರ್ ಅವರು ಮದುಮಕ್ಕಳಿಗೆ ತಮ್ಮ ಆರ್ಥಿಕ ಶಕ್ತಿಗನುಸಾರ ಸರಳ ಜೀವನ ನಡೆಸಲು ಬೋಧಿಸುತ್ತಿದ್ದರು. ಜನನ ನಿಯಂತ್ರಣ, ಲಿಂಗ ಸಮಾನತೆ, ಮೂಢನಂಬಿಕೆಗಳಲ್ಲದೆ ವೈಚಾರಿಕ ಬದುಕು, ಸಾಮಾಜಿಕ ಬದುಕಿನಲ್ಲಿ ಇವು ಸಾಮಾನ್ಯವಾಗಿ ಸ್ವಗೌರವ ಮದುವೆಗಳಲ್ಲಿ ಪೆರಿಯಾರ್ ಬೋಧಿಸುತ್ತಿದ್ದ ಬೋಧನೆಗಳಾಗಿವೆ. ಸ್ವಗೌರವ ಮದುವೆಗಳು ಧರ್ಮಶಾಸ್ತ್ರ, ಧಾರ್ಮಿಕ ಆಚರಣೆಗಳು, ನಂಬಿಕೆಗಳ ವಿರುದ್ಧ ನೇರವಾದ ಬಂಡಾಯವಾಗಿದೆ. ಬ್ರಾಹ್ಮೀಮುಹುರ್ತ, ರಾಜಯೋಗ, ರಾಹುಕಾಲ, ಗುಳಿಕಕಾಲ, ಭವಿಷ್ಯಶಾಸ್ತ್ರ, ಹಸ್ತರೇಖಾ ಶಾಸ್ತ್ರಗಳ ವಿರುದ್ಧ ಸ್ವಗೌರವ ಚಳುವಳಿಗಳು ಸಾಮೂಹಿಕ ಪ್ರಜ್ಞೆಯನ್ನು ಎಚ್ಚರಿಸಿದವುಗಳು ತಾಳಿಕಟ್ಟುವ ಪದ್ಧತಿ ಪುರೋಹಿತರು ಮಕ್ಕಳಿಗೆ ನಾಮಕರಣಮಾಡುವುದು ಇವೆಲ್ಲವುಗಳನ್ನು ವಿರೋಧಿಸಿದರು.

ಆತ್ಮಗೌರವರಿಂದಲೇ ಸ್ವರಾಜ್ಯವನ್ನು ಪಡೆಯಬಹುದು ವಿನಾ ಅದಿಲ್ಲದೇ ಪಡೆಯಲು ಸಾಧ್ಯವಿಲ್ಲ ಎಂಬುದು ಪೆರಿಯಾರ್ ಅವರ ವಾದವಾಗಿತ್ತು. ಕೆಳವರ್ಗದ ಸಮುದಾಯದಲ್ಲಿ ಈ ಕುರಿತು ಚಿಂತನೆಯನ್ನು ಬೆಳೆಸಿದರು. ಸ್ವನಂಬಿಕೆ, ಸ್ವಭರವಸೆ, ಪ್ರೇಮ, ಅನುಕಂಪ, ದಯೆ, ಕರುಣೆ, ಮುಂತಾದ ಮಾನವೀಯ ಗುಣಗಳನ್ನು ಪಡೆಯಲು ಪ್ರೇರಣೆಯನ್ನು ನೀಡಿದರು. ಜೊತೆಗೆ ಜೀವನದುದ್ದಕ್ಕು ಅದನ್ನು ಚಾಚುತಪ್ಪದೇ ಪಾಲಿಸಿಕೊಂಡು ಬಂದರು. ಮುಂದೆ ಇವೆಲ್ಲ ಆದರ್ಶ ತತ್ವದಿಂದಲೇ ಶ್ರೀಯುತರು ರಾಜಕೀಯ ರಂಗವನ್ನು ಪ್ರವೇಶಿಸಿದರು. ಜನಪರ ಕೆಲಸಕಾರ್ಯಗಳಲ್ಲಿ ಸಕ್ರೀಯವಾಗಿ ತೊಡಗಿಸಿಕೊಂಡು ಬಹುಬೇಗನೆ ಬಹುಜನರಿಗೆ

ಪ್ರೀತಿ ಪಾತ್ರರಾದರು. ಈ ದಾರಿಯಲ್ಲಿ ತಮ್ಮದೇ ಆದ ಪ್ರಭಾವನ್ನು ಬೆಳೆಸಿಕೊಂಡರು. ಸ್ಥಳೀಯ ಸಾರ್ವಜನಿಕರ ಆಡಳಿತದ ಕೆಲಸಮಾಡಿ, ನಗರ ಸಭೆಯ ಅಧ್ಯಕ್ಷರಾಗಿ ತಮ್ಮ ರಾಜಕೀಯ ಚಟುವಟಿಕೆಗಳನ್ನು ಆರಂಭಿಸಿದರು. ನಂತರ ತಮ್ಮ ರಾಜಕೀಯ ನಡೆಯನ್ನು ವಿಸ್ತರಿಸಿಕೊಂಡರು. ರಾಜಕೀಯ ನೆಲೆಯಿಂದಲೇ ಸಮಾಜಸೇವೆಯನ್ನು ಮಾಡಲು ದೃಢನಿರ್ಧಾರ ತಾಳಿದರು. ಇವರ ಸಾಮಾಜಿಕ ಹಾಗೂ ರಾಜಕೀಯ ಚಟುವಟಿಕೆಗಳನ್ನು ಗಮನಿಸಿ ಕಾಂಗ್ರೇಸ್ ಪಕ್ಷ ಇವರನ್ನು ತಮ್ಮ ಪಕ್ಷಕ್ಕೆ ಬರಮಾಡಿಕೊಂಡಿತು.

ದೇಶದ ಸಾಮಾಜಿಕ ವ್ಯವಸ್ಥೆಯನ್ನು ನಲುಗಿಸಿದ್ದ ಅಸ್ಪೃಶ್ಯತೆಯನ್ನು ಶಮನಗೊಳಿಸಬೇಕೆಂದು ಅಸೃಶ್ಯತಾ ನಿವಾರಣೆ, ಪಾನನಿರೋಧ, ಮತ್ತು ಆರ್ಥಿಕ ಸುಧಾರಣೆಗಳಂಥ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವ ಮೂಲಕ ಜನರ ಮನಸ್ಸನ್ನು ಗೆದ್ದುಕೊಂಡರು. ಭಾರತ ಬಹು ಸಾಂಸ್ಕೃತಿಯ ದೇಶ ಇಲ್ಲಿ ಅನೇಕ ಜಾತಿ, ಧರ್ಮ ಮತ್ತು ಬುಡಕಟ್ಟಿನ ಸಮುದಾಯಗಳಿವೆ. ಈ ಕಾರಣಕ್ಕಾಗಿಯೇ ವಿಶಿಷ್ಟವಾದ ಸಂಸ್ಕೃತಿಗೆ ತನ್ನ ಹೆಸರನ್ನು ಪ್ರಚಾರಪಡಿಸಿಕೊಂಡಿದೆ. ಆದರೆ ಇಲ್ಲಿಯ ಹಿಂದೂ ಧರ್ಮಿಯರು ಬೇರೆ ಧರ್ಮಗಳಾದ ಕ್ರೈಸ್ತ, ಇಸ್ಲಾಂ, ಸಿಖ್, ಜೈನ್ ಬೌದ್ಧರೊಡನೆ ಸಮಾನತೆಯನ್ನು ಪ್ರತಿಪಾದಿಸುತ್ತಾರೆ. ಆದರೆ ಅದೇ ಧರ್ಮದ ಕೆಳಸಮುದಾಯಕ್ಕೆ ಸೇರಿದ ದಲಿತರನ್ನು ಅವರು ಒಪ್ಪಿಕೊಳ್ಳುತ್ತಿಲ್ಲ ಯಾಕೆ? ಎಂಬ ಪ್ರಶ್ನೆ ಪೆರಿಯಾರ್ ಅವರದು ಉಳಿದ ಧರ್ಮಿಯರೊಂದಿಗೆ ಸಹಭೋಜನ ಸಹಕೂಟಗಳನ್ನು ಸಂಕೋಚವಿಲ್ಲದೆ ನಡೆಸುವ ಹಿಂದೂ ಧರ್ಮಿಯರು ಅಸ್ಪ್ರಶ್ಯರನ್ನು ಮಾತ್ರ ಅಮಾನವೀಯವಾಗಿ ಏಕೆ ಪರಿಗಣಿಸಿದ್ದಾರೆ. ಅವರನ್ನು ಊರಿಂದ ದೂರವಿಟ್ಟು ಅವರ ಸ್ವಗೌರವ ಹಕ್ಕನ್ನು ಕಸಿದುಕೊಂಡಿದ್ದನ್ನು ಪ್ರಶ್ನಿಸುತ್ತಾರೆ. ಪೆರಿಯಾರ್‌ರು ಇಂತಹ ತೀಕ್ಷ್ಣ ವಿಚಾರಗಳಿಂದಲೇ ಎಂ.ವೀರಪ್ಪ ಮೊಯಿಲಿ ಅವರಿಗೆ ಆದರ್ಶ ಪ್ರಾಯರಾಗಿದ್ದಾರೆ. ಬದುಕಿನ ಚಿಂತನೆಗೆ ಅಮೃತದ ಸೆಲೆಯಾಗಿದ್ದಾರೆ.

ಕೇರಳ ರಾಜ್ಯದ ತಿರುವಾಂಕೂರು ಸಂಸ್ಥಾನದಲ್ಲಿ ವೈಕಂ ಒಂದು ಚಿಕ್ಕ ಪಟ್ಟಣ ವೈಕತ್ತಪ್ಪನ್ ಊರಿನ ಆದಿ ದೈವ್ ಕೆಳಸಮುದಾಯದವರು. ಈ ದೇವಸ್ಥಾನವನ್ನು ಪ್ರವೇಶಮಾಡುವಂತಿಲ್ಲ. ಆ ದೇವಸ್ಥಾನದಿಂದ ಸುಮಾರು ದೂರ ಇವರು ಇರಬೇಕು ಎಂಬ ಕಟ್ಟಪ್ಪಣೆ ಆ ಗ್ರಾಮದಲ್ಲಿ ತಲೆತಲಾಂತರದಿಂದ ನಡೆದುಕೊಂಡು ಬಂದಿತ್ತು. ಇಂತಹ ಅಮಾನವೀಯ ನಡುವಳಿಕೆಯ ವಿರುದ್ಧ ೧೯೨೪ರಲ್ಲಿ ಚಳುವಳಿಯನ್ನು ಆರಂಭಿಸಿ, ಜೈಲು

ಸೇರಿ ಹಲವು ನಿಟ್ಟಿನಲ್ಲಿ ಸತ್ಯಾಗ್ರಹವನ್ನು ಮಾಡಿದವರಲ್ಲಿ ಪ್ರಮುಖರು. ಶೂದ್ರ ಅತಿಶೂದ್ರದಲ್ಲಿ ಆತ್ಮವಿಶ್ವಾಸ ತುಂಬಿ ಅವರಲ್ಲಿ ವೈಚಾರಿಕ ಪ್ರಜ್ಞೆಯನ್ನು ಬೆಳೆಸಿದರು. ಇದರಿಂದ ಅನೇಕ ಕಠಿಣ ಜೈಲುಶಿಕ್ಷೆ ಅನುಭವಿಸಿದರು. ಈ ಘಟನೆ ದೇಶವಿದೇಶದಲ್ಲಿ ಅನೇಕ ಮಾಧ್ಯಮದ ಮೂಲಕ ಪ್ರಚಾರ ಪಡೆಯಿತು. ಮುಂದೆ ದೇಶದಲ್ಲಿ ಈ ವಿಷಯ ಕುರಿತು ಅನೇಕ ದಾಂದಲೆಗಳು ಜರುಗಿದವು. ಕೊನೆಗೂ ತಮ್ಮ ನಿಲುವಿಗೆ ಬದ್ಧರಾಗಿ ಕೆಳಸಮುದಾಯದವರು ದೇವಸ್ಥಾನ ಪ್ರವೇಶ ಪಡೆಯಬಹುದೆಂದು ಸರ್ಕಾರ ಪತ್ರರವಾನಿಸಿದಾಗ ಅಷ್ಟಕ್ಕೆ ಸುಮ್ಮನಿರದ ಶ್ರೀಯುತರು ಅಸ್ಪೃಶ್ಯರೇ ದೇವಾಲಯದ ಅರ್ಚಕರಾಗಬೇಕೆಂದು ವಾದಿಸಿದರು. ಹೀಗೆ ಅನೇಕ ಚಳುವಳಿಗಳನ್ನು ಮಾಡಿ ಹಿಂದುಳಿದವರಲ್ಲಿ ಒಂದು ಮಾನಸಿಕ ಸ್ಥೈರ್ಯ ತುಂಬುವ ಕೆಲಸವನ್ನು ಮಾಡಿದರು.

ಇವುಗಳ ಜೊತೆಗೆ ಶರ್ಮಾದೇವಿ ಗುರುಕುಲದಲ್ಲಿ ಅಸ್ಪೃಶ್ಯತೆ ನಡೆಸುತ್ತಿದ್ದನ್ನು ವಿರೋಧಿಸಿದರು. ಮುಂದೆ ಅನೇಕ ರಾಜಕೀಯ ಮುಖಂಡರ ಕೆಂಗಣ್ಣಿಗೆ ಗುರಿಯಾದರು. ಮತ್ತು ಕಾಂಗ್ರೇಸ್ ಪಾರ್ಟಿ ತೊರೆದು ಜಸ್ಟೀಸ್ ಪಾರ್ಟಿಯನ್ನು ಸೇರ್ಪಡೆಗೊಂಡು ತಮ್ಮ ನಿರಂತರವಾದ ಹೋರಾಟವನ್ನು ಶ್ರೀಯುತರು ಮುಂದುವರೆಸಿದರು. ಪೆರಿಯಾರ್‌ರು ಅವೈದಿಕ ನೆಲೆಯ ಬಹುದೊಡ್ಡ ಹೋರಾಟಗಾರರು. ಅಸ್ಪಶ್ಯತೆ ವಿಚಾರಣೆಯ ಹೋರಾಟ, ವೈಕಂ ಚಳುವಳಿಯ ನೇತೃತ್ವ ದ್ರಾವಿಡ ಕಳಂ ಪಕ್ಷ ಕಟ್ಟುವುದು ಮೂಲಕ ದ್ರಾವಿಡ್ ಸಾಂಸ್ಕೃತಿಯ ಪ್ರತಿಪಾದಕರಾಗಿ ತಮ್ಮ ಅಪ್ರತಿಮ ವ್ಯಕ್ತಿತ್ವ ಹೊಂದಿದ್ದವರು. ದಲಿತ ಶೋಷಿತ ಸಮುದಾಯದಲ್ಲಿ ಸ್ವಗೌರವನ್ನು ಮೂಡಿಸುವಲ್ಲಿ ಜೀವನ ಪರ್ಯಂತ ದುಡಿದವರು. ಇವೆಲ್ಲ ಕಾರಣಕ್ಕಾಗಿಯೇ ಶ್ರೀಯುತರು ಎಂ.ವೀರಪ್ಪ ಮೊಯಿಲಿ ಅವರ ಮೇಲೆ ಪ್ರಭಾವಿತರಾಗಿದ್ದಾರೆ.

ರಾಮ ಮನೋಹರ ಲೋಹಿಯಾ

"ಸಮಾಜವಾದವು ಇನ್ನೂ ತೆರೆದ ಪದ್ಧತಿ ಆದರೆ ಕಮ್ಯುನಿಸಂ ಹಾಗೂ ಬಂಡವಾಳಶಾಹಿ ಮುಚ್ಚಿದಂಥವು. ನವೀನ ಜಗತ್ತು ಜನರಿಗೆ ಸಭ್ಯ ಜೀವನಾವಕಾಶಕ್ಕಾಗಿ ಹೋರಾಡಬೇಕು. ಸಂಪದಭಿವೃದ್ಧಿಗಿಂತ ಸಭ್ಯಜೀವನ ಈ ಕಾಲದ ಮುಖ್ಯವಾದ ಘೋಷಣೆ ಎಂದು ನನ್ನ ನಂಬಿಕೆ[೧೦]" ಮಾನವನ ಬದುಕು ಉತ್ತಮವಾದ ಜೀವನಾವಶ್ಯಕ ಕೊರತೆಯ ಹಿನ್ನೆಲೆಯಲ್ಲಿನ ಈ ಮಾತುಗಳನ್ನು ಆಡಿದವರು ಶ್ರೀಯುತ ರಾಮಮನೋಹರರ ಲೋಹಿಯಾ ಅವರು. ಲೋಹಿಯಾ ಅವರು ಭಾರತಕಂಡ ಅತ್ಯುತ್ತಮ ಸಮಾಜವಾದಿ

ಚಿಂತಕರಲ್ಲಿ ಒಬ್ಬರು. ಸ್ವಾತಂತ್ರ್ಯ ಹೋರಾಟ ಹಾಗೂ ಮಾನವ ಹಕ್ಕುಗಳ ಹೋರಾಟವನ್ನು ತಮ್ಮ ಜೀವನದ ಅವಿಭಾಜ್ಯ ಅಂಗವೆಂದು ತಿಳಿದು ಅವುಗಳನ್ನು ನೀಗಿಸುವ ನಿಟ್ಟಿನಲ್ಲಿ ಸೈದ್ಧಾಂತಿಕ ಸಂಘರ್ಷ ಹೋರಾಟದಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡವರು.

ರಾಮಮನೋಹರ ಲೋಹಿಯಾ ಅವರು ಅಪ್ಪಟ ದೇಶಭಕ್ತ, ತ್ಯಾಗ ಜೀವಿ. ಇವರ ಇರುವಿಕೆಯನ್ನು ಕಂಡ ಮಹಾತ್ಮಗಾಂಧಿ ಇವರನ್ನು ತಾಯ್ನಾಡಿನ ಮೇಲಿನ ಪ್ರೀತಿಗಾಗಿ ತಮ್ಮ ಸರ್ವಸ್ವವನ್ನು ತ್ಯಾಗಮಾಡಿದ ಅಪರೂಪ ದೇಶಭಕ್ತರೆಂದು ಹೊಗಳಿದ್ದಾರೆ. ಅಂದರೆ ಲೋಹಿಯಾ ಅವರಲ್ಲಿ ಇರುವ ದೇಶಪ್ರೇಮ ತ್ಯಾಗಜೀವನ ಇವರೆಡು ರಕ್ತಗತವಾಗಿ ಬೆಳೆದು ಬಂದಿರುವುದರಿಂದ ಗಾಂಧೀಜಿ ಅವರು ಆ ರೀತಿಯಲ್ಲಿ ತಮ್ಮ ನಿಲುವನ್ನು ಸ್ಪಷ್ಟಪಡಿಸಿದ್ದಾರೆ. ರಾಮಮನೋಹರ ಅವರ ಬಾಲ್ಯ ತೀರ ಕಠಿಣವಾದ ಬದುಕಿನಿಂದ ಕೂಡಿತ್ತು. ಅನೇಕ ಸಮಸ್ಯೆಗಳ ಸರಮಾಲೆಯನ್ನೇ ಅವರು ಎದುರಿಸಿದ್ದರು. ಇವರ ಸಹೋದರ ಅಕಾಲಿಕ ಮರಣಕ್ಕೆ ತುತ್ತಾಗಿ ಬದುಕಿನಲ್ಲಿ ಕಹಿ ಅನುಭವವನ್ನೆ ಉಂಡವರು. ಶ್ರೀಯುತರ ಕುಟುಂಬದ ಏಕಮಾತ್ರ ಬಾಲಕನಾಗಿ ಹೀರಾಲಾಲ್ ಮತ್ತು ಚಂದಾ ದಂಪತಿಗಳ ಪುತ್ರನಾಗಿ ತಮ್ಮ ಬದುಕಿನ ಆರಂಭಿಕ ಜೀವನವನ್ನು ಪಡೆದುಕೊಂಡವರು.

ಹೀರಾಲಾಲ್ ಅವರು ಕಾಂಗ್ರೆಸ್ ಸಕ್ರೀಯ ಕಾರ್ಯಕರ್ತರಾಗಿದ್ದರಿಂದ ಸಹಜವೆಂಬಂತೆ ಇವರ ಮೇಲೆ ದೇಶದ ಸ್ವಾತಂತ್ರ್ಯದ ಕನಸು ಪ್ರಾರಂಭಗೊಂಡಿತು. ೧೯೨೧ರ ಕಾಲದಲ್ಲಿ ತರುಣ ಯುವಕ ಲೋಹಿಯಾ ಅವರು ತಂದೆಯ ಹೋರಾಟದ ಮುಂದಾಳತ್ವ ಗುಣವನ್ನು ಅನುಕರಣೆ ಮಾಡಿಕೊಳ್ಳುತ್ತಾ ಕಾಲೇಜಿನ ವಿದ್ಯಾರ್ಥಿಯಾದ ಆ ಗುಣವನ್ನು ಸಂಪೂರ್ಣವಾಗಿ ಪಡೆದುಕೊಂಡರು. ಮುಂದೆ ಹೆಚ್ಚಿನ ಓದಿಗಾಗಿ ಲಂಡನ ನಗರಕ್ಕೆ ಹೋಗಿ ಅಲ್ಲಿ ಶ್ರೇಷ್ಠ ವಿದ್ವಾಂಸರ ಮಾರ್ಗದರ್ಶನವನ್ನು ಪಡೆದುಕೊಂಡರು. ಈ ಸಮಯದಲ್ಲಿ ಜರ್ಮನ್ ಪರಿಸ್ಥಿತಿ ಸರಿಯಿರಲಿಲ್ಲ. ದೇಶ ಆರ್ಥಿಕವಾಗಿ ಕುಸಿದಿತ್ತು. ನಿರುದ್ಯೋಗ ತಾಂಡವವಾಡುತ್ತಿತ್ತು. ಬೆಲೆ ಗಗನಕ್ಕೆ ಏರಿತ್ತು. ಇದರಿಂದ ಜನ ಕಂಗೆಟ್ಟಿದ್ದರು. ಜೊತೆಗೆ ಹಿಟ್ಲರನ ಬಿಗಿಮುಷ್ಠಿಯಲ್ಲಿ ಇಡೀ ದೇಶವೇ ನಲುಗಿ ಹೋಗಿತ್ತು.

ಇಂತಹ ಸಮಯದಲ್ಲಿ ಲೋಹಿಯಾ ಅವರು ಭಾರತೀಯ ವಿದ್ಯಾರ್ಥಿಗಳನ್ನು ಒಗ್ಗೂಡಿಸಿ ಭಾರತದ ಸ್ಥಿತಿಗತಿ ಕುರಿತು ಚಿಂತನೆಗೆ ಹಚ್ಚುತ್ತಿದ್ದರು. ಜೊತೆಗೆ ಹಿಟ್ಲರ ನಡವಳಿಯನ್ನು ಖಂಡಿಸಿದ್ದರು. ಈ ಅವಧಿಯಲ್ಲಿ ೧೯೩೨ರಲ್ಲಿ ಶ್ರೀಯುತರು ಅರ್ಥಶಾಸ್ತ್ರದಲ್ಲಿ

ವಿಶೇಷ ಪರಿಣತಿಯನ್ನು ಪಡೆದುಕೊಂಡರು. ಈ ವಿಷಯದಲ್ಲಿಯೇ ಶ್ರೀಯುತರು ಪಿ.ಎಚ್.ಡಿ. ಪದವಿಯನ್ನು ಪಡೆದುಕೊಂಡು ಮುಂಬಯಿ ನಗರಕ್ಕೆ ಬಂದು ತನ್ನ ನೆಲೆಯ ಹುಡುಕಾಟವನ್ನು ಪ್ರಾರಂಭಿಸಿದರು. ಈ ಸಮಯದಲ್ಲಿ ತಂದೆ ಮದುವೆಗೆ ಮುಂದಾದ ಆದರೆ ಮದುವೆಯನ್ನು ನಿರಾಕರಿಸಿ ಇಡೀ ತಮ್ಮ ಜೀವನದಲ್ಲಿ ಬ್ರಹ್ಮಾಚಾರಿಯಾಗಿ ಉಳಿದುಬಿಟ್ಟರು.

೧೯೩೬ರಲ್ಲಿ ಲಖನೌದಲ್ಲಿ ಕಾಂಗ್ರೆಸ್ ಅಧಿವೇಶನ ನಡೆಯಿತು. ಈ ಅಧಿವೇಶನದಲ್ಲಿ ಲೋಹಿಯಾ ಅವರನ್ನು ವ್ಯವಹಾರ ಕಾರ್ಯದರ್ಶಿ ಎಂದು ನೇಮಕಮಾಡಿದರು. ಇದರಿಂದ ಜವಾಬ್ದಾರಿಕೆ ಲೋಹಿಯಾ ಅವರಲ್ಲಿ ಹೆಚ್ಚಾಯಿತು. ಇದರಿಂದ ಸಂಪೂರ್ಣವಾಗಿ ವಿದೇಶದ ವ್ಯವಹಾರದಲ್ಲಿ ತಮ್ಮ ಆರಂಭಿಕ ದೇಶಸೇವೆಯನ್ನು ನಡೆಸಿದರು. ಮುಂದು ೧೯೩೮ರಲ್ಲಿ ಲಾಹೋರ್‌ನಲ್ಲಿ ಕಾಂಗ್ರೆಸ್ ಅಧಿವೇಶನ ನಡೆಯಿತು. ಇದರಲ್ಲಿ ಕಾರ್ಯಕಾರಿ ಸಮೀತಿಯಲ್ಲಿ ತಮ್ಮ ಹೆಸರನ್ನು ಗುರುತಿಸಿಕೊಂಡರು. ಹೀಗೆ ತಮ್ಮ ಜವಾಬ್ದಾರಿಯನ್ನು ಹೆಚ್ಚಿಸಿಕೊಳ್ಳುತ್ತಾ ಕಾಂಗ್ರೆಸ್ಸಿನ ಸಕ್ರೀಯ ಸದಸ್ಯರಲ್ಲಿ ಒಬ್ಬರಾದದು.

ಲೋಹಿಯಾ ಅವರು ತೀಕ್ಷ್ಣಬುದ್ಧಿಯ ಚಿಂತಕರು ತಮ್ಮ ಬರವಣಿಗೆಯ ಮೂಲಕ ಹಲವು ಜನರ ಮನಸ್ಸನ್ನು ಸೆರೆಹಿಡಿದವರು. ಶ್ರೀಯುತರು ಗಾಂಧೀಜಿಯವರು ನಡೆಸುತ್ತಿದ್ದ "ಹರಿಜನ" ಪತ್ರಿಕೆಯಲ್ಲಿ ತಕ್ಷಣ ಸತ್ಯಾಗ್ರಹ ಎಂಬ ಲೇಖನ ಎಲ್ಲರ ಗಮನ ಸೆಳೆಯಿತು. ಇದರಲ್ಲಿ ೪ ಅಂಶಗಳನ್ನು ಅವರು ನೀಡಿದ್ದರು.

೧) "ಎಲ್ಲ ರಾಷ್ಟ್ರಗಳೂ ಸ್ವತಂತ್ರವಾಗಬೇಕು. ಯಾವ ರಾಷ್ಟ್ರಗಳಿಗೆ ಇದೀಗ ಸ್ವಾತಂತ್ರ್ಯ ಸಿಕ್ಕಿದಿಯೋ ಆ ರಾಷ್ಟ್ರಗಳು ವಯಸ್ಕರ ಮತದಾನದ ಮೂಲಕ ಆಯ್ಕೆಗೊಂಡ ಶಾಸನ ಸಭೆಗಳ ತೀರ್ಮಾನದಿಂದ ಆಡಳಿತ ನಡೆಸಬೇಕು.

೨) ಎಲ್ಲ ಜನಾಂಗಗಳೂ ಸಮನಾಗಿದ್ದು ಜಗತ್ತಿನ ಯಾವುದೇ ಭಾಗದಲ್ಲಿ ಯಾವುದೇ ಜನಾಂಗೀಯ ವಿಶೇಷ ಅಧಿಕಾರ ಇರಕೂಡದು. ಯಾರು ಎಲ್ಲಿಯಾದರೂ ವಾಸ ಮಾಡಬಹುದು. ಇದಕ್ಕೆ ರಾಜಕೀಯ ಅಡಚಣೆ ಇರಕೂಡದು.

೩) ಅನ್ಯದೇಶದಲ್ಲಿ ಯಾವುದೇ ದೇಶದ ಸರ್ಕಾರ ಹಾಗೂ ಅದರ ಪ್ರತಿನಿಧಿಗಳ ಪೌರತ್ವ ಅವರು ತೊಡಗಿಸಿದ ಬಂಡವಾಳವನ್ನು ಮುಟ್ಟುಗೋಲು ಹಾಕಿಕೊಳ್ಳಬೇಕು. ಅಂತರಾಷ್ಟ್ರೀಯ ನ್ಯಾಯಾಲಯದಲ್ಲಿ ಇದರ ವಿಚಾರಣೆ ನಡೆಸಬೇಕು.

೪) ಸಂಪೂರ್ಣ ನಿಶ್ಯಸ್ತ್ರೀಕರಣಕ್ಕೆ ಬದ್ಧವಾಗಿರಬೇಕು[೧೧]"

ಹೀಗೆ ತಮ್ಮ ನಾಲ್ಕು ಅಂಶಗಳ ಲೇಖನದ ಮೂಲಕ ಹೋರಾಟದ ಹೆಜ್ಜೆಯನ್ನು ತೀಕ್ಷ್ಣಗೊಳಿಸಿಕೊಂಡರು. ಮುಂದೆ ೧೯೪೨ರಲ್ಲಿ ಬ್ರಿಟಿಷರ ವಿರುದ್ಧ ಧ್ವನಿ ಎತ್ತಿ ಜೈಲು ಸೇರಿದರು. ಅನೇಕ ಸಮಯದಲ್ಲಿ ಇವರ ವಿಚಾರಗಳು ಭಾರತೀಯರಿಗೆ ಹಾಗೂ ಸ್ವಾತಂತ್ರ್ಯ ಹೋರಾಟಗಾರರಿಗೆ ಸ್ಫೂರ್ತಿದಾಯಕವಾಗಿದ್ದವು. ಇಂತಹ ಮಾತುಗಳನ್ನು ಹೇಳುವುದಕ್ಕಾಗಿಯೇ ಶ್ರೀಯುತರು ಮಾರುವೇಶದಿಂದ ಸಂಚರಿಸುತ್ತಿದ್ದರು. ನಂತರ ೧೯೪೭ರಲ್ಲಿ ಭಾರತ ವಿಭಜನೆಯಾಗತೊಡಗಿತು. ಇದಕ್ಕೆ ಪ್ರಬಲವಾದ ವಿರೋಧವನ್ನು ವ್ಯಕ್ತಪಡಿಸಿದರು. ದೇಶದ ಸರ್ವತೋಮುಖ ಬೆಳವಣಿಗೆಗೆ ತಮ್ಮ ಜೀವನವನ್ನು ಮೀಸಲಿಡಿಸಿಕೊಂಡು ಆ ಮೂಲಕ ತಮ್ಮ ಹಲವು ವೈಚಾರಿಕ ಚಿಂತನೆಯನ್ನು ಜನರಿಗೆ ತಿಳಿಪಡಿಸಿದರು.

ರಾಮಮನೋಹರ ಲೋಹಿಯ ಕೇವಲ ಹೋರಾಟಗಾರರಾಗಿರದೆ ಅವರೊಬ್ಬ ಸೈದ್ಧಾಂತಿಕ ನೆಲೆಗಟ್ಟಿನ ಚಿಂತನಶೀಲ ವ್ಯಕ್ತಿಯಾಗಿದ್ದರು. ನಮ್ಮ ಸಾಮಾಜಿಕ ವ್ಯವಸ್ಥೆ ಮತ್ತು ಜನಜೀವನ ಅವರ ಚಿಂತನೆಯ ಮುಖ್ಯ ನೆಲೆಯಾಗಿತ್ತು. ವರ್ಗ, ವರ್ಣ, ಜಾತಿ, ಲಿಂಗಭೇದ, ಸಾಮಾಜಿಕ ಅನ್ಯಾಯ, ಮೌಢ್ಯ, ಕೀಳರಿಮೆ ತೊಲಗಿಸುವುದು ಲೋಹಿಯಾ ಅವರ ಮುಖ್ಯ ಕಾಳಜಿಗಳಾಗಿದ್ದವು. ಭಾರತ ದೇಶವನ್ನು ಈ ಎಲ್ಲ ಅನಿಷ್ಟ ಪದ್ಧತಿಯಿಂದ ಮುಕ್ತಗೊಳಿಸಲು ಕನಸನ್ನು ಕಂಡವರು. ತಮ್ಮ "ರಾಜಕೀಯ ಮಧ್ಯೆ ಬಿಡುವು" ಎಂಬ ಗ್ರಂಥದಲ್ಲಿ ತಮ್ಮ ಸ್ಪಷ್ಟ ನಿಲುವನ್ನು ಹೊರಹಾಕಿದವರು.

ಸ್ತ್ರೀ ಪುರುಷರಲ್ಲಿ ಸಮಾನತೆ ಇರಬೇಕು. ವರ್ಣಭೇದವನ್ನು ಅನುಸರಿಸುವ ಅಸಮಾನತೆ ನಾಶ ಹೊಂದಬೇಕು. ಜಾತಿಮೂಲವಾದವನ್ನು ಬೇರು ಸಹಿತ ಕಿತ್ತು ಹಾಕಬೇಕು. ಆರ್ಥಿಕ ಸಮಾನತೆಯಿಂದ ಜೀವನ ಸಾಗಿಸಬೇಕು. ವ್ಯಕ್ತಿಗತವಾದ ಸ್ವಾತಂತ್ರದ ಮೇಲಿನ ಅತಿಕ್ರಮಣ ನಿವಾರಣೆಯಾಗಬೇಕು. ಪ್ರಜಾಪ್ರಭುತ್ವದಲ್ಲಿ ಪ್ರಜೆಗೆ ಆದ್ಯತೆ ಇರಬೇಕು. ಮುಂದಾದವು ಅವರ ಕೃತಿಯಲ್ಲಿ ಅಭಿವ್ಯಕ್ತಗೊಂಡ ಚಿಂತನೆಗಳಾಗಿವೆ. ಜಾತಿ, ವರ್ಗ ರಹಿತ

ಸಮಾಜ ಮುಕ್ತವಾಗಿರಬೇಕು. ಹಾಗೂ ಅವುಗಳಿಗಾಗಿ ಹಗಲಿರುಳು ಚಿಂತನೆ ಅಭಿವ್ಯಕ್ತ ಪಡಿಸಿರುವರು. ಹೀಗಾಗಿಯೇ ಚರಿತ್ರೆಯನ್ನು ನಿಷ್ಠೆಯಿಂದ ಅಧ್ಯಯನ ಮಾಡಿದವರಿಗೆ ಜಾತಿ ಮತ್ತು ವರ್ಗಗಳು ಏರಿಳಿತಕ್ಕೆ ಒಳಗಾಗುವ ಸಾಮಾನ್ಯ ನಿಯಮ ಇತಿಹಾಸದುದ್ದಕ್ಕೂ ಗೋಚರಿಸುತ್ತದೆ ಎಂಬುದು ಲೋಹಿಯಾ ಅವರಿಗೆ ಮನವರಿಕೆ ಆಗಿತ್ತು.

ಶೋಷಣೆ ವಿರುದ್ಧ ತಮ್ಮ ಧ್ವನಿಯನ್ನು ಎತ್ತಿದವರು. ಅದಕ್ಕಾಗಿ ಹಲವಾರು ಹೋರಾಟದಲ್ಲಿ ಭಾಗಿಯಾಗಿ ಯಶಸ್ಸನ್ನು ಗಳಿಸಿಕೊಂಡವರು. ದೇವರು ಕುರಿತು ಅವರಿಗಿರುವ ವಿಚಾರ ಮೆಚ್ಚುವಂತದ್ದು. ಹೀಗಾಗಿಯೇ ಮನುಷ್ಯನ ಬದುಕಿನ ಶೋಷಣೆ ಅನ್ಯಾಯ, ಅತ್ಯಾಚಾರ, ಜಾತಿ, ವರ್ಗಭೇದ ಮುಂತಾದವುಗಳನ್ನು ಕಿತ್ತೊಗೆಯಲು ತಮ್ಮ ಲೇಖನಿಯನ್ನು ಹರಿತವಾಗಿ ಬಳಸಿಕೊಂಡ ಧೀಮಂತನಾಯಕರಲ್ಲಿ ಲೋಹಿಯಾ ಅವರು ಒಬ್ಬರು. ಕರ್ನಾಟಕದಲ್ಲಿ ಅನೇಕ ಜನ ಹೋರಾಟಗಾರರು, ಬುದ್ಧಿಜೀವಿಗಳು, ಲೇಖಕರು ಲೋಹಿಯಾ ಅವರ ಪ್ರಭಾವಕ್ಕೆ ಒಳಗಾಗಿದ್ದಾರೆ. ಶ್ರೀಯುತರು ಎಂ.ವೀರಪ್ಪ ಮೊಯಿಲಿ ಅವರ ರಾಜಕೀಯ ಜೀವನದ ಮೇಲೆ ಪ್ರಭಾವ ಬೀರಿದಲ್ಲದೇ ಅನೇಕ ರಾಜಕೀಯ, ಸಾಮಾಜಿಕ ಚಿಂತನೆಯ ಗಮನವನ್ನು ಸೆಳೆದವರಾಗಿದ್ದಾರೆ.

ಇಂದಿರಾಗಾಂಧಿ

ಭಾರತದ ಇತಿಹಾಸದಲ್ಲಿ ಸ್ವಾತಂತ್ರ್ಯ ನಂತರ ಪ್ರಪ್ರಥಮ ಮಹಿಳಾ ಪ್ರಧಾನಿಯಾಗಿ ಶ್ರೀಮತಿ ಇಂದಿರಾಗಾಂಧಿಯವರು ಆಯ್ಕೆಗೊಂಡಿದ್ದು ವಿಶ್ವವೇ ಭಾರತದತ್ತ ಚಿಕಿತ್ಸಕ ಬುದ್ಧಿಯಿಂದ ನೋಡುವಂತೆ ಆಯಿತು. ಆ ಸಂದರ್ಭದಲ್ಲಿ ಕ್ರಿ.ಶ. ೧೯೬೬ರಲ್ಲಿ ಪ್ರಧಾನಮಂತ್ರಿ ಪದವಿಯನ್ನು ವಹಿಸಿಕೊಂಡಾಗ ಅನೇಕ ಜನರ ಹಾಸ್ಯಕ್ಕೆ ಗುರಿಯಾದರು ಪ್ರಧಾನಿ ಹುದ್ದೆ ಹೂವಿನ ಹಾಸಿಗೆಯಲ್ಲ. ಅದು ಮುಳ್ಳಿನ ಹಾಸಿಗೆ ಇದ್ದಂತೆ ಅನೇಕ ಸಮಸ್ಯೆಗಳು ಬರುವುದು ಸಹಜ. ಇವೆಲ್ಲ ಕಾರ್ಯಭಾರವನ್ನು ಮಹಿಳೆಯಾದ ಇಂದಿರಾಗಾಂಧಿ ನಿರ್ವಹಿಸಲು ಅಸಾಧ್ಯ ಎಂಬ ಇತ್ಯಾದಿ ಇಲ್ಲ ಸಲ್ಲದ ಮಾತುಗಳು ಇವರ ವಿರುದ್ಧ ವ್ಯಕ್ತವಾದವು. ಆದರೆ ಇಂದಿರಾ ಅವರು ಇವೆಲ್ಲ ಸಮಸ್ಯೆ ಸವಾಲುಗಳನ್ನು ಸಾಧ್ಯತೆಯನ್ನಾಗಿ ಸ್ವೀಕರಿಸಿಕೊಂಡು ಜಾಣ್ಮೆಯ ದಕ್ಷತೆಯನ್ನು ತೋರ್ಪಡಿಸಿ ಪುರುಷರಿಗಿಂತ ನಾವೇನೂ ಕಡಿಮೆ ಇಲ್ಲ ಎಂಬುದನ್ನು ಇಡೀ ಜಗತ್ತಿಗೆ ಮೊದಲ ಬಾರಿಗೆ ತೋರಿಸಿಕೊಟ್ಟರು.

ಭಾರತದ ಇತಿಹಾಸದಲ್ಲಿ ಅನೇಕ ವೀರ ಮಹಿಳೆಯರು ದೇಶಕ್ಕಾಗಿ ತಮ್ಮ ಪ್ರಾಣವನ್ನು ನೀಡಿದ್ದಾರೆ. ಅಂತಹ ಮಹಿಳೆಯಲ್ಲಿ ಶ್ರೀಮತಿ ಇಂದಿರಾಗಾಂಧಿಯೂ ಒಬ್ಬರು. ಇಂದಿರಾ ಅವರು ಅಧಿಕಾರಕ್ಕೆ ಬರುವ ಮುಂಚೆ ದೇಶದಲ್ಲಿ ಆರ್ಥಿಕ ಮುಗ್ಗಟ್ಟು ಹೆಚ್ಚಾಗಿತ್ತು ಅನ್ಯಾಯ ಅತ್ಯಾಚಾರಗಳು ತಲೆದ್ದೋರಿದ್ದವು. ಪಂಜಾಬ ಸಮಸ್ಯೆ ಜಟಿಲವಾಗಿತ್ತು. ಆಹಾರದ ಕೊರತೆ ಉಂಟಾಗಿತ್ತು. ನಿರುದ್ಯೋಗ ಹೆಚ್ಚಾಗಿತ್ತು ಅಪರಿಮಿತವಾದ ಜನಸಂಖ್ಯೆಗೆ ಭಾರತ ದೇಶ ತುತ್ತಾಗಿತ್ತು. ಇವೆಲ್ಲವುಗಳನ್ನು ಹೋಗಲಾಡಿಸುವ ನಿಟ್ಟಿನಲ್ಲಿ ಇಂದಿರಾಗಾಂಧಿಯವರು ಸೂಕ್ತ ಪರಿಹಾರವನ್ನು ಕಂಡುಕೊಳ್ಳುವ ನಿಟ್ಟಿನಲ್ಲಿ ೧೯೬೭ರಿಂದ ಕಾರ್ಯ ಪ್ರವೃತ್ತವಾದರು. ಇಂದಿರಾಗಾಂಧಿಯವರು ಪ್ರಪ್ರಥಮವಾಗಿ ೧೪ ಬ್ಯಾಂಕಗಳನ್ನು ರಾಷ್ಟ್ರೀಕರಣಗೊಳಿಸಿದರು. ಇದರಿಂದ ರೈತರಿಗೆ ಭೂಹಿಡುವಳಿಗಾರರಿಗೆ ಸಣ್ಣ ಕೈಗಾರಿಕೋದ್ಯಮಿಗಳಿಗೆ ಹೀಗೆ ನಾನಾ ಬಡ ಜನರ ಸಾಲ ಪಡೆದು ತಮ್ಮ ಜೀವನವನ್ನು ಪ್ರಗತಿಯತ್ತ ಸಾಗಿಸಿದರು. ಈ ಕಾರಣದಿಂದ ಶ್ರೀಮತಿ ಇಂದಿರಾಗಾಂಧಿ 'ಬಡವರ ಬಂಧು' ಎಂಬ ಹೆಗ್ಗಳಿಕೆಗೆ ಪಾತ್ರರಾದರು. ಅವರ 'ಗರಿಬೀ ಹಠಾವೊ' ಕಾರ್ಯಕ್ರಮ ಅವರಲ್ಲಿರುವ ಬಡವರ ಕಾಳಜಿಯನ್ನು ಎತ್ತಿ ಹಿಡಿಯುತ್ತದೆ. ದಲಿತ ಮತ್ತು ಶೋಷಿತ ಸಮುದಾಯದ ಮೇಲೆ ಅವರು ಅನುಕಂಪ ಹಾಗೂ ಕರುಣೆ ಇಟ್ಟಿದ್ದರು. ಅವರು ಪ್ರಗತಿಯನ್ನು ಹೊಂದದೇ ದೇಶ ಸರ್ವತೋಮುಖ ಪ್ರಗತಿ ಹೊಂದಲಾರದು ಎಂಬುದನ್ನು ಮನಗಂಡಿದ್ದರು. ಬಡವರ ಸ್ಥಿತಿಗತಿಗಳನ್ನು ಅರಿತುಕೊಂಡು ಪ್ರಧಾನಿಯಾದ ಸಂದರ್ಭದಲ್ಲಿ ಆರ್ಥಿಕ ಪರಿಸ್ಥಿತಿಯನ್ನು ಸುಧಾರಿಸುವಲ್ಲಿ ಸಾಕಷ್ಟು ಪ್ರಯತ್ನ ಪಟ್ಟರು. ಮುಂದೆ ಸುತ್ತ ಮುತ್ತಲಿನ ದೇಶಗಳ ಭಾರತದ ಅತಿಕ್ರಮಣ ಮಾಡುವುದನ್ನು ತಡೆಗಟ್ಟಿ ದೇಶದಲ್ಲಿ ಶಾಂತಿ ಐಕ್ಯತೆಯನ್ನು ಕಾಪಾಡುವ ನಿಟ್ಟಿನಲ್ಲಿ ಪ್ರಯತ್ನವನ್ನು ಮಾಡಿದರು. ಮತ್ತು ಭಾರತ ಚೀನಾ ಜಪಾನ ಮುಂತಾದ ದೇಶಗಳ ಜೊತೆಗೆ ಏಷ್ಯಾ ಖಂಡದ ಶಾಂತಿ ಸುವ್ಯವಸ್ಥೆ ಉಂಟಾಗಲು ಶ್ರಮಿಸಿದರು. ಜೊತೆಗೆ ಶಿಮ್ಲಾ ಒಪ್ಪಂದ ಮಾಡಿಕೊಂಡರು.

ಹಲವು ರಾಜಕೀಯ ಏಳು ಬೀಳುಗಳ ನಡುವೆ ಇಂದಿರಾಗಾಂಧಿಯವರು ಶ್ರೀಮಂತರ ಕೆಂಗಣ್ಣಿಗೆ ಗುರಿಯಾಗಿದ್ದರು. ೧೯೭೫ ಜೂನ್ ೨೫ರಂದು ತುರ್ತು ಪರಿಸ್ಥಿತಿಯನ್ನು ಜಾರಿಗೆ ತರುವ ಮೂಲಕ ದೇಶದಲ್ಲಿ ತಲೆದೂರಿದ ಅಶಾಂತಿಯನ್ನು ಶಮನಗೊಳಿಸಿ ಜನರ ಒಲವು ಗಳಿಸಲು ಯೋಜನೆ ರೂಪಿಸಿದರು. ಇದರ ಮೂಲಕವಾಗಿ ೨೦ ಅಂಶದ ಆರ್ಥಿಕ ಕಾರ್ಯಕ್ರಮ ಹಾಕಿಕೊಳ್ಳುವದರ ಮೂಲಕ ಜನರಲ್ಲಿ ಚೈತನ್ಯವನ್ನು

ತುಂಬಿದರು. ಈ ಇಪ್ಪತ್ತು ಅಂಶಗಳ ಕಾರ್ಯಕ್ರಮವೇ ಎಂ.ವೀರಪ್ಪ ಮೊಯಿಲಿಯವರ ರಾಜಕೀಯ ಚಿಂತನೆಗೆ ಕಾರಣವಾಯಿತು. ಅವುಗಳು ಈ ರೀತಿಯಲ್ಲಿವೆ:

೧) ದೇಶದಲ್ಲಿ ಆಹಾರದ ಕೊರತೆ ಉಂಟಾಗದಂತೆ ಎಲ್ಲಾ ಜನರಿಗೂ ಸರಿಯಾದ ಆಹಾರ ಭದ್ರತೆ ಒದಗಿಸುವುದು.

೨) ದೇಶದ ಹೆಚ್ಚುವರಿ ಜಮೀನನ್ನು ಬಡವರಿಗೆ ಹಂಚುವುದು.

೩) ದುರ್ಬಲ ವರ್ಗದವರಿಗೆ ಭೂ ರಹಿತರಿಗೆ ನಿವೇಶನ ಹಂಚುವುದು.

೪) ಜೀತ ಪದ್ಧತಿಯನ್ನು ದೇಶದಿಂದ ಮುಕ್ತಗೊಳಿಸುವುದು.

೫) ಗ್ರಾಮೀಣ ಪ್ರದೇಶದ ರೈತರಿಗೆ ಕೃಷಿ ಸಾಲವನ್ನು ತೀರಿಸುವುದಕ್ಕೆ ಯೋಜನೆ ಮಾಡುವುದು.

೬) ಕೃಷಿ ಕಾರ್ಮಿಕರಿಗೆ, ರೈತರಿಗೆ ಕನಿಷ್ಠ ಕೂಲಿ ಜಾರಿಗೊಳಿಸುವುದು.

೭) ಕೃಷಿ ಜಮೀನುಗಳಿಗೆ ನೀರಾವರಿ ಸೌಲಭ್ಯವನ್ನು ಒದಗಿಸುವುದು.

೮) ವಿದ್ಯಾರ್ಥಿಗಳ ವಸತಿ ನಿಲಯಗಳಿಗೆ ಕಡಿಮೆ ಬೆಲೆಯಲ್ಲಿ ಅವಶ್ಯಕ ವಸ್ತುಗಳನ್ನು ಒದಗಿಸುವುದು.

೯) ಮಧ್ಯಮ ವರ್ಗದ ಜನರಿಗೆ ತೆರಿಗೆಯಿಂದ ವಿನಾಯ್ತಿ ನೀಡುವುದು.

೧೦) ಸಾರಿಗೆ ವ್ಯವಸ್ಥೆಯನ್ನು ಅಂತರಾಜ್ಯ ಮಟ್ಟಕ್ಕೇರಿಸುವುದು.

೧೧) ಕಾರ್ಖಾನೆಗಳಲ್ಲಿ ಮತ್ತು ಕೈಗಾರಿಕೆಗಳಲ್ಲಿ ಕಾರ್ಮಿಕ ಸಂಘಗಳನ್ನು ಸ್ಥಾಪಿಸುವುದು.

೧೨) ಕಳ್ಳ ಸಾಗಾಣಿಕೆ ಮೇಲೆ ಉಗ್ರ ಕ್ರಮ ಜರುಗಿಸುವುದು.

೧೩) ಬ್ಯಾಂಕಿನ ಠೇವಣಿ ವಿಧಾನಗಳನ್ನು ಸರಿಪಡಿಸುವುದು.

೧೪) ನಗರ ಪ್ರದೇಶದಲ್ಲಿ ಆಸ್ತಿ ಮಿತಿಗಳನ್ನು ನಿಗದಿಪಡಿಸುವುದು.

೧೫) ಉತ್ತಮ ಗುಣಮಟ್ಟದ ಬಟ್ಟೆಯನ್ನು ನೀಡುವುದು.

೧೬) ದೇಶದಲ್ಲಿ ವಿದ್ಯುತ್ ಕೊರತೆ ಉಂಟಾಗದಂತೆ ವಿದ್ಯುತ್ ಉತ್ಪಾದನ ಕೇಂದ್ರಗಳನ್ನು ಸ್ಥಾಪಿಸುವುದು.

೧೭) ಕೈಮಗ್ಗ ಹಾಗೂ ಗುಡಿ ಕೈಗಾರಿಕೆಗಳಿಗೆ ಪ್ರೋತ್ಸಾಹ ನೀಡುವುದು.

೧೮) ವಿದ್ಯಾರ್ಥಿಗಳಿಗೆ ಉಚಿತವಾಗಿ ಅಧ್ಯಯನ ಸಾಮಾಗ್ರಿಗಳನ್ನು ನೀಡುವುದು.

೧೯) ದುರ್ಬಲ ಹಾಗೂ ಪರಿಶಿಷ್ಟ ಜಾತಿ ಪಂಗಡದವರಿಗೆ ಉದ್ಯೋಗ ಅವಕಾಶಗಳನ್ನು ಒದಗಿಸುವುದು.

೨೦) ತೆರಿಗೆ ವಂಚಿತರಿಗೆ ಶಿಕ್ಷೆ ನೀಡಿ ತೆರಿಗೆ ಸೋರಿಕೆಯನ್ನು ತಡೆಗಟ್ಟುವುದು.

ಶ್ರೀಮತಿ ಇಂದಿರಾಗಾಂಧಿಯವರ ಜನಪ್ರಿಯ ಕಾರ್ಯಕ್ರಮಗಳು ದೇಶದಲ್ಲಿ ಕ್ರಾಂತಿಯನ್ನುಂಟು ಮಾಡಿದವು. ಮತ್ತು ಹಿಂದೆಂದೂ ಆಗದ ಕಾರ್ಯಕ್ರಮಗಳನ್ನು ರೂಪಿಸಿ ಯೋಜನೆ ಮಾಡಿ ಜನ ಸಾಮಾನ್ಯರಿಗೆ ಅನುಕೂಲವಾಗುವಂತೆ ನೋಡಿಕೊಂಡರು. ನಿಜವಾದ ಪ್ರಗತಿ ಸಾಮಾನ್ಯ ಯೋಜನೆಗಳು ಪ್ರಜೆಗಳಿಗೆ ತಲುಪಿದಾಗ ದೇಶದ ಪ್ರಗತಿಯನ್ನು ಕಂಡುಕೊಳ್ಳಬಹುದೆಂದು ಅರಿತು ಅವುಗಳನ್ನು ಜಾರಿಗೆ ತಂದು ಇಂದಿರಾಗಾಂಧಿ ಇತರ ರಾಜಕಾರಣಿಗಳಿಗೆ ಮಾದರಿಯಾದರು. ಅದರಂತೆ ಇಂದಿರಾಗಾಂಧಿಯವರ ಅನೇಕ ಕಾರ್ಯಕ್ರಮಗಳು ಎಂ. ವೀರಪ್ಪ ಮೊಯಿಲಿಯವರಿಗೆ ಪ್ರಭಾವ ಬೀರಿ ಅವರ ಕೆಲ ಯೋಜನೆಗಳನ್ನು ಮುಂದುವರೆಸಿ ಶ್ರೀಮತಿ ಇಂದಿರಾಗಾಂಧಿಯನ್ನು ಆದರ್ಶ ರಾಜಕಾರಣಿಯಾಗಿರಿಸಿಕೊಂಡು ಕರ್ನಾಟಕದಲ್ಲಿ ಉತ್ತಮ ಆಡಳಿತ ನೀಡಿದ ಕೀರ್ತಿ ಮೊಯಿಲಿಯವರಿಗೆ ಸಲ್ಲುತ್ತದೆ.

ಡಿ. ದೇವರಾಜ ಅರಸು

ವೀರಪ್ಪ ಮೊಯಿಲಿಯವರ ರಾಜಕೀಯ ಗುರುವಾಗಿ ದೇವರಾಜ ಅರಸು ಹಲವು ನಿಟ್ಟಿನಲ್ಲಿ ಮೊಯಿಲಿಯವರ ರಾಜಕೀಯ ಜೀವನಕ್ಕೆ ಬೆನ್ನೆಲುಬಾಗಿ ನಿಂತವರು. ಮೊಯಿಲಿವರಿಗೆ ಡಿ.ದೇವರಾಜ ಅರಸರು ಸ್ಫೂರ್ತಿಯ ಪ್ರಮುಖ ಸೆಲೆ.

ಡಿ.ದೇವರಾಜ ಅರಸರು ಹೋರಾಟಗಾರರು ಇವರಲ್ಲಿ ಗಾಂಧಿವಾದ ಮತ್ತು ಮಾರ್ಕ್ಸ್‌ವಾದ ಅಪಾರ ಪ್ರಮಾಣದಲ್ಲಿ ಪ್ರೇರಣೆ ಒದಗಿಸಿದ್ದವು. ಪರಿಶಿಷ್ಟ ಜಾತಿ ಪಂಗಡ ಹಾಗೂ ಶೋಷಿತರ ಪರವಾಗಿ ವಿಶೇಷ ಕಾಳಜಿ ಇವರಲ್ಲಿ ಎದ್ದು ಕಾಣುತ್ತಿತ್ತು. ತಮ್ಮ ಅಧಿಕಾರವಧಿಯಲ್ಲಿ ಅನೇಕ ಹೊಸ ಕಾರ್ಯವನ್ನು ಜಾರಿಗೆ ತರುವ ಮೂಲಕ ನಿರುದ್ಯೋಗ ಬಡತನ, ಜಾತೀಯತೆ ಇವೆಲ್ಲವನ್ನು ಅಲ್ಲಗಳೆಯಲು ತನ್ನದೇ ಆದ ಸೈದ್ಧಾಂತಿಕ ನೆಲೆಯಲ್ಲಿ ಜನರಪ ಕಾರ್ಯ ಯೋಜನೆಗಳನ್ನು ಮಾಡಿ ತೋರಿಸಿದವರು. ಇವುಗಳಿಂದಲೇ ಮೊಯಿಲಿಯವರು ದಕ್ಷ ರಾಜಕೀಯ ವ್ಯಕ್ತವಾಗಿ ಸ್ವಚ್ಛ ಆಡಳಿತ ನಿರ್ವಹಣೆಯಲ್ಲಿ ಡಿ. ದೇವರಾಜ ಅರಸರಿಗೆ ಸಮೀಪರಾದರು. ಜೊತೆಗೆ ಅವರು ಮುಖ್ಯಮಂತ್ರಿಯಾದ ಸಮಯದಲ್ಲಿ ಮೊಯಿಲಿಯವರಿಗೆ ಮಂತ್ರಿ ಪದವಿಯನ್ನು ನೀಡುವುದರ ಮೂಲಕ ಮೊಯಿಲಿಯವರ ರಾಜಕೀಯ ಚಿಂತನೆಗೆ ಇಂಬು ನೀಡಿದರು. ಅರಸರು ಹಾಕಿಕೊಟ್ಟ ಮಾದರಿಯಲ್ಲಿ ಇಂದು ಸಹ ಮೊಯಿಲಿಯವರು ರಾಜಕೀಯ ನೆಲೆಯನ್ನು ಭದ್ರಪಡಿಸಿಕೊಂಡು ಮುನ್ನೆಡೆದಿರುವುದು ಯಾರು ಮರೆಯುವುಂತಿಲ್ಲ.

ಕುವೆಂಪು

ಈ ಯುಗದ ಶ್ರೇಷ್ಠ ಸಾಹಿತಿ ಗುಂಪಿನಲ್ಲಿ ಎದ್ದು ಕಾಣುವ ವ್ಯಕ್ತಿತ್ವ ಕುವೆಂಪು ಅವರದು. ಕನ್ನಡ ನಾಡು ನುಡಿ ಚಿಂತನೆ ಹಾಗೂ ಮುಕ್ತ ಮನಸ್ಸು ವೈಜ್ಞಾನಿಕ ಪ್ರಜ್ಞೆ ಇವುಗಳ ಕುರಿತು ಚಿಂತನೆಯನ್ನು ತಮ್ಮ ಸಾಹಿತ್ಯ ಕೃತಿಗಳ ಮೂಲಕ ಕಟ್ಟಿ ಕೊಟ್ಟಿದ್ದಾರೆ. ಮೌಢ್ಯ, ಅಂಧ:ಶ್ರದ್ಧೆ, ಗೊಡ್ಡು ಸಂಪ್ರದಾಯ ಇವುಗಳ ವಿರುದ್ಧ ತಮ್ಮ ಅಚಲವಾದ ನಿಲುವನ್ನು ಸಮರ್ಥಿಸಿಕೊಂಡವರು. ಶ್ರೀಯುತರು ಮೈಸೂರು ವಿಶ್ವವಿದ್ಯಾಲಯದ ಘಟಿಕೋತ್ಸವದಲ್ಲಿ ಮಾಡಿದ ಭಾಷಣದಲ್ಲಿ ವಿದ್ಯಾರ್ಥಿಗಳನ್ನು ಕುರಿತು ವಿಚಾರ ಕ್ರಾಂತಿಗೆ ಆಹ್ವಾನ ನೀಡಿದ್ದು ಬಹುಮುಖ್ಯವಾದದ್ದು.

"ಗುಡಿ ಚರ್ಚು ಮಸೀದಿಗಳ ಬಿಟ್ಟು ಹೊರಬನ್ನಿ
ಬಡತನವ ಬುಡಮಟ್ಟ ಕೀಳ ಬನ್ನಿ
ಮೌಢ್ಯತೆಯ ಮಾರಿಯನ್ನು ಹೊರದೂಡಿ ತನ್ನಿ
ವಿಜ್ಞಾನ ದೀವಿಗೆಯ ಹಿಡಿಯ ಬನ್ನಿ
ಓ ಬನ್ನಿ ಸಹೋದರರೆ ಬೇಗ ಬನ್ನಿ

ಎಂಬ ವಾಕ್ಯದ ಸಾಲುಗಳಲ್ಲಿ ಜಾತಿ ಪಂಥ ಇವೆಲ್ಲವನ್ನು ಮೆಟ್ಟಿ ಅಂಧಾನುಶ್ರದ್ಧೆಯನ್ನು ಬುಡ ಸಹಿತ ಕೀಳುವಂತೆ ಮಾಡಿದ ಕುವೆಂಪುರವರು ವೀರಪ್ಪ ಮೊಯಿಲಿಯವರ ಮಹಾಕಾವ್ಯಕ್ಕೆ ಸ್ಫೂರ್ತಿದಾತರು. ಕುವೆಂಪುರವರ ಶ್ರೀ ರಾಮಾಯಣ ದರ್ಶನಂ ಕೃತಿ ಆರು ದಶಕಗಳಿಂದ ತನ್ನ ಮಹತ್ವವನ್ನು ವಿಸ್ತರಿಸಿಕೊಂಡಿತ್ತು. ಆ ನಿಟ್ಟಿನಲ್ಲಿ ಸಾಗಿದ ಮೊಯಿಲಿಯವರು ಶ್ರೀ ರಾಮಾಯಣ ಮಹಾನ್ವೇಷಣಾ ಕೃತಿಯನ್ನು ಪ್ರಕಟಿಸುವುದರ ಮೂಲಕ ಕುವೆಂಪು ಅವರ ವಿಚಾರಕ್ಕೆ ಅವರ ಸಾಹಿತ್ಯಕ್ಕೆ ಒಂದಲ್ಲ ಒಂದು ರೀತಿಯಿಂದ ಸ್ಫೂರ್ತಿಗೆ ಒಳಗಾದವರು. ಕುವೆಂಪುರವರು ಕೊಟ್ಟ ಪಂಚಮಂತ್ರ ಹಾಗೂ ಸಪ್ತಸೂತ್ರ ಮೊಯಿಲಿಯವರ ಗಮನವನ್ನು ಹಲವು ನಿಟ್ಟಿನಲ್ಲಿ ಸೆಳೆದುಕೊಂಡಂತಹವುಗಳು.

ಶಿವರಾಮ ಕಾರಂತ

ಶಿವರಾಮ ಕಾರಂತ ಅವರು ಭಾರತದ ಸಾಹಿತ್ಯದ ಮೇರು ಪರ್ವತ ಕುವೆಂಪುರವರ ಸಮಕಾಲೀನರಾಗಿ ಅನೇಕ ಮಹಾನ್ ಕೃತಿಗಳನ್ನು ಕನ್ನಡಕ್ಕೆ ನೀಡಿದ ಮಹಾನ್ ಪುರುಷರಿವರು. ವೈಚಾರಿಕ ನೆಲೆಗಳನ್ನು ತಮ್ಮ ಸಾಹಿತ್ಯವನ್ನು ವಿಸ್ತೃತ್ವಗೊಳಿಸಿಕೊಂಡವರು. ಕಾರಂತರ ಸೃಜನಶೀಲತೆ ಅನೇಕ ಬರಹಗಾರರಿಗೆ ಪ್ರೇರಣೆಯಾದಂತೆ ವೀರಪ್ಪ ಮೊಯಿಲಿ ಅವರಿಗೂ ಸ್ಫೂರ್ತಿಯಾಗಿದ್ದಾರೆ. ಮೊಯಿಲಿಯವರೇ ಹೇಳಿಕೊಂಡಿರುವಂತೆ ನನ್ನ ಸಾಹಿತ್ಯಕ್ಕೆ ಕಾರಂತರೇ ಸ್ಫೂರ್ತಿ ಎಂದಿರುವುದರ ಹಿನ್ನೆಲೆ ಕರಾವಳಿ ಪ್ರಾದೇಶಿಕತೆಯ ವೈಶಿಷ್ಟ್ಯ ಹಾಗೂ ಶಿವರಾಮ ಕಾರಂತರ ವೈಚಾರಿಕ ಬರವಣಿಗೆಯು ಮೊಯಿಲಿಯವರಿಗೆ ಅಪಾರವಾದ ಪ್ರೇರಣೆಯನ್ನು ಒದಗಿಸಿಕೊಟ್ಟಿವೆ.

ಕಾರಂತ ಅವರದು ಸಮಾಜಮುಖಿ ಬದುಕು. ಅವರಲ್ಲಿ ಆತ್ಮಸಾಕ್ಷಿಗೆ ಅನುಗುಣವಾಗಿ ನಡೆದುಕೊಳ್ಳುವ ಗುಣ ಅವರಲ್ಲಿತ್ತು. ಕಾರಂತರು ತಮ್ಮ ಕೃತಿಗಳಲ್ಲಿ ಅನೇಕ ರಾಜಕೀಯ ವಿಚಾರಗಳನ್ನು ಸೂಕ್ಷ್ಮ ಸಂದರ್ಭ ಸನ್ನಿವೇಶಕ್ಕೆ ತಕ್ಕಂತೆ ಬಿಂಬಿಸುತ್ತಿದ್ದರು. "ಸಮಕಾಲೀನ ರಾಜಕೀಯದ ಬಗ್ಗೆ ಕಾರಂತರು ಪ್ರತಿಕ್ರಿಯಿಸಿದ ಕ್ರಮ ಹೀಗಿದೆ. ಸ್ವಾತಂತ್ರ್ಯ ದೊರಕಿದಂದಿನಿಂದ ನಾವು ಆಡುತ್ತಿರುವ ಆಟದಲ್ಲಿ ಯಾವ ಜಾತಿಗೆ ಸೇರಿದ ಯಾವ ಮತಕ್ಕೆ ಸೇರಿದ ಅಭ್ಯರ್ಥಿಯನ್ನು ಕೂಡಿಸಿಕೊಂಡರೆ ನಮ್ಮ ರಾಜಕೀಯ ಸ್ಥಾನ ಭದ್ರಗೊಳ್ಳುತ್ತದೆ ಎಂಬ ಒಂದೇ ತಂತ್ರ ನಮ್ಮನ್ನು ನಡೆಯಿಸುತ್ತದೆ. ಆ ಆಟದಲ್ಲಿ ಬಹುಸಂಖ್ಯಾತರ ಮತ ಮುಖ್ಯ ಸಮಾನತೆಯಾಗಲೀ, ನ್ಯಾಯವಾಗಲೀ ಮುಖ್ಯವಲ್ಲ. ಅವರು ಎಂದೂ ಸಮೂಹ ಸನ್ನಿಗೆ ಒಳಗಾಗಲಿಲ್ಲ. ಅವರು ಕಲೆ ಮತ್ತು ಸಾಹಿತ್ಯ ವಿಮರ್ಶಕರನ್ನು ತನ್ನ ಹರಿತವಾದ

ನಾಲಗೆಯಿಂದ ಚುರುಕುಗೊಳಿಸಿದರು" ಹೀಗೆ ಶಿವರಾಮ ಕಾರಂತರಲ್ಲಿರುವ ನಿರಂತರ ಚಿಂತನೆಯ ಪ್ರಭಾವ ಮೊಯಿಲಿಯವರ ಮೇಲೆ ಬೀರಿದೆ ಎಂಬುದರಲ್ಲಿ ಸಂದೇಹವಿಲ್ಲ.

ಒಟ್ಟಿನಲ್ಲಿ ವೀರಪ್ಪ ಮೊಯಿಲಿಯವರು ತಮ್ಮ ರಾಜಕೀಯ ಚಿಂತನೆಯ ಸೆಲೆಗೆ ಕಾರಣವಾದ ಅವರ ವೈಯಕ್ತಿಕ ಬದುಕಿನ ಪರಿಸರ ಹಾಗೂ ಬಾಲ್ಯದಲ್ಲಿ ಅನುಭವಿಸಿದ ನೋವು ನಲಿವುಗಳು ಮತ್ತು ಸಾಮಾಜಿಕ ಏಣಿ ಶ್ರೇಣಿಯ ಕೆಳಸ್ಥರದಲ್ಲಿ ಅನುಭವಿಸಿದ ಶೋಷಣೆಯು ಅವರಲ್ಲಿ ಪ್ರಭುದ್ವ ಚಿಂತನೆಗೆ ಪ್ರೇರಣೆಗಳಾದವು. ಇವುಗಳ ಜೊತೆಗೆ ಶಿವರಾಮ ಕಾರಂತ ಅವರು ಮೊಯಿಲಿಯವರ ಸಾಹಿತ್ಯಿಕ ಸೆಲೆಗೆ ಮೂಲ ಪ್ರೇರಕ. ಜೊತೆಗೆ ಗಾಂಧೀಜಿ, ಬಸವಣ್ಣ, ಕುವೆಂಪುರವರ ವೈಚಾರಿಕತೆ, ಬಿ.ಆರ್.ಅಂಬೇಡ್ಕರವರ ಹೋರಾಟದ ಬದುಕು ಡಿ.ದೇವರಾಜ ಅರಸು ಅವರ ಸಾಮಾಜಿಕ ಕಳಕಳಿ ಮುಂತಾದವರ ರಾಜಕೀಯ ಚಿಂತನೆ ಹಾಗೂ ಸಾಮಾಜಮುಖಿ ಆದರ್ಶ ತತ್ವಗಳು ಇವರನ್ನು ಚಿಂತನೆಯಡೆಗೆ ಸೆಳೆದವು.

ಅಷ್ಟೇ ಅಲ್ಲದೇ ಇವರಲ್ಲಿ ಇರುವ ಸಾಮಾಜಿಕ ಸ್ಪಂದನ ಗುಣ ಸಾಹಿತ್ಯಿಕ ಕಳಕಳಿ ಹಿಂದುಳಿದ ಜನಾಂಗದ ಕುರಿತು ಅಭಿಯಾನ ಅವರ ಸಾಮಾಜಿಕ ಪರಿಸರದಲ್ಲಿ ರೂಪಗೊಂಡು ಇವರನ್ನು ರಾಜಕೀಯ ಚಿಂತನೆಗೆ ಮತ್ತು ಸಮಾಜಮುಖಿ ಚಿಂತನೆಗೆ ಪ್ರೇರಣೆ, ಪ್ರಭಾವವನ್ನು ಬೀರಿದವುಗಳಾಗಿವೆ.

: ಅಡಿಟಿಪ್ಪಣಿಗಳು :

೧) ನುಡಿ ಕಾಣಿಕೆ – ಎಂ. ವೀರಪ್ಪ ಮೊಯಿಲಿ ಅಂಕಿತ ಪ್ರಕಾಶನ ಬೆಂಗಳೂರು ೧೯೯೮ ಪುಟ ಸಂಖ್ಯೆ ೩೯

೨) ಬಸವಣ್ಣನವರ ವಚನ

೩) ನುಡಿ ಕಾಣಿಕೆ – ಎಂ. ವೀರಪ್ಪ ಮೊಯಿಲಿ ಅಂಕಿತ ಪ್ರಕಾಶನ ಬೆಂಗಳೂರು ೧೯೯೮ ಪುಟ ಸಂಖ್ಯೆ ೧೬೭

೪) ನುಡಿ ಕಾಣಿಕೆ – ಎಂ. ವೀರಪ್ಪ ಮೊಯಿಲಿ ಅಂಕಿತ ಪ್ರಕಾಶನ ಬೆಂಗಳೂರು ೧೯೯೮ ಪುಟ ಸಂಖ್ಯೆ ೧೬೮

೫) ಚಿಂತನ ದರ್ಶನ – ಎಂ. ವೀರಪ್ಪ ಮೊಯಿಲಿ ಕನ್ನಡ ಸಾಹಿತ್ಯ ಪರಿಷತ್ತು ಬೆಂಗಳೂರು ೨೦೦೭ ಪುಟ ೨೧೧–೨೧೨

೬) ಚಿಂತನ ದರ್ಶನ – ಎಂ. ವೀರಪ್ಪ ಮೊಯಿಲಿ ಕನ್ನಡ ಸಾಹಿತ್ಯ ಪರಿಷತ್ತು ಬೆಂಗಳೂರು ೨೦೦೭ ಪುಟ ೨೧೨

೭) ರಾಷ್ಟ್ರೀಯ ಚಿಂತನದರ್ಶನ – ಎಂ.ವೀರಪ್ಪ ಮೊಯಿಲಿ ಸಪ್ನ ಬುಕ್ ಹೌಸ್ ೨೦೦೩ ಪುಟ ಸಂಖ್ಯೆ – ೨೪೬

೮) ಚಿಂತನ ದರ್ಶನ – ಎಂ. ವೀರಪ್ಪ ಮೊಯಿಲಿ ಕನ್ನಡ ಸಾಹಿತ್ಯ ಪರಿಷತ್ತು ಬೆಂಗಳೂರು ೨೦೦೭ ಪುಟ ಸಂಖ್ಯೆ ೨೧೨

೯) ನುಡಿ ಕಾಣಿಕೆ ಎಂ. ವೀರಪ್ಪ ಮೊಯಿಲಿ ಅಂಕಿತ ಪ್ರಕಾಶನ ಬೆಂಗಳೂರು ೧೯೯೮ ಪುಟ ಸಂಖ್ಯೆ ೪೭

೧೦) ರಾಮಮನೋಹರ ಲೋಹಿಯಾ ಜಿ.ಎಸ್. ರಂಗನಾಥರಾವ್ – ಸಪ್ನ ಬುಕ್ ಹೌಸ್ ಬೆಂಗಳೂರು ೨೦೦೮ ಪುಟ ಸಂಖ್ಯೆ ೧

೧೧) ರಾಮಮನೋಹರ ಲೋಹಿಯಾ ಜಿ.ಎಸ್. ರಂಗನಾಥರಾವ್ – ಸಪ್ನ ಬುಕ್ ಹೌಸ್ ಬೆಂಗಳೂರು ೨೦೦೮ ಪುಟ ಸಂಖ್ಯೆ ೧೬

ಅಧ್ಯಾಯ–೬ ಯೋಜನೆಗಳು : ಅನುಷ್ಠಾನ–ಅನ್ವೇಷಣೆ

೬.೧ ಪ್ರಸ್ತಾವನೆ

೬.೨ ಯೋಜನೆಗಳು : ಅನುಷ್ಠಾನ

೬.೩ ಅನ್ವೇಷಣೆ

ಅಧ್ಯಾಯ–೬

ಯೋಜನೆಗಳು : ಅನುಷ್ಠಾನ–ಅನ್ವೇಷಣೆ

---

೬. ೧ ಪ್ರಸ್ತಾವನೆ

ಎಂ. ವೀರಪ್ಪ ಮೊಯಿಲಿಯವರು ರಾಜಕೀಯ ಚಿಂತಕರಾಗಿ ತಮ್ಮೆಲ್ಲ ಚಿಂತನೆಗಳನ್ನು ಮುಖ್ಯಮಂತ್ರಿಯಾದ ಸಂದರ್ಭದಲ್ಲಿ ಅನುಷ್ಠಾನಗೊಳಿಸುವ ಮಹತ್ವಪೂರ್ಣವಾದ ಪ್ರಯೋಗ ಮಾಡಿದ್ದಾರೆ. ಅವರ ಯೋಜನೆಯ ಅನುಷ್ಠಾನದಲ್ಲಿ ಸಾಫಲ್ಯ–ವೈಫಲ್ಯಗಳೇನೇ ಇರಬಹುದು, ಆದರೆ ಒಬ್ಬ ರಾಜಕೀಯ ಚಿಂತಕರಾದ ಮೊಯಿಲಿಯವರು ತಾವು ಕಂಡ ಸಮಾಜವನ್ನು ಜನರ ಕಷ್ಟ–ಸುಖವನ್ನು ತಮ್ಮ ಅಧಿಕಾರದ ಪರಿಮಿತಿಯೊಳಗೆ ಬಿಚ್ಚಿಡಬೇಕೆಂಬ ಕನಸುಗಾರಿಕೆ ಮೊಯಿಲಿಯವರದು. ಅವರು ಶ್ರೇಷ್ಠ ರಾಜಕೀಯ ಚಿಂತಕರ ಪ್ರೇರಣೆ ಪ್ರಭಾವಕ್ಕೆ ಒಳಗಾಗಿ ಕಾರ್ಯ ಯೋಜನೆಗಳನ್ನು ರೂಪಗೊಳಿಸುವುದು ಆ ಮೂಲಕವಾಗಿ ಸಮೃದ್ಧ ರಾಷ್ಟ್ರ ಕಟ್ಟುವ ಗುರಿಯನ್ನು ಹೊಂದಿ ರಾಷ್ಟ್ರದ ಸಮರ್ಥ ಯೋಜನೆಗಳ ಅನ್ವೇಷಕರಾದವರು.

೬. ೨ ಯೋಜನೆಗಳು–ಅನುಷ್ಠಾನ

ಮೊಯಿಲಿಯವರು ಮೊದಲು ಮುಖ್ಯಮಂತ್ರಿಯಾದಾಗ ಮಾಡಿದ ಕಾರ್ಯ ಸಹೊದ್ಯೋಗಿ ಸಚಿವರಿಗೆ ಕೆಲವು ಸಲಹೆಗಳನ್ನು ನೀಡಿದರು. ಜನರ ವಿಶ್ವಾಸಗಳಿಸಿ, ಅವರ ಆಸೆ, ಆಕಾಂಕ್ಷೆಗಳಿಗೆ ಸ್ಪಂದಿಸಲು ಕೆಲವು ಆಡಳಿತದ ಗುರಿಗಳನ್ನು ರೂಪಿಸಿದರು. ಹಿಂದುಳಿದ ವರ್ಗದ ಶ್ರೇಯೋಭಿವೃದ್ಧಿಗಾಗಿ ರೂಪಿಸಲಾದ ಕಾರ್ಯಕ್ರಮಗಳನ್ನು ಪ್ರಾಮಾಣಿಕ ಮತ್ತು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಿದರು. ಬಡ ಜನರ ಮನೆಗಳ ನಿರ್ಮಾಣ ನಿವೇಶನಗಳ ವಿತರಣೆ ಕೈಗಾರಿಕೆ ಮತ್ತು ಕೃಷಿ ಚಟುವಟಿಕೆಯನ್ನು ವಿಸ್ತರಿಸಿದರು. ತಮ್ಮ ಮುಖ್ಯಮಂತ್ರಿಯ ಕಡಿಮೆ ಅವಧಿಯಲ್ಲಿ ದಕ್ಷ ಮತ್ತು ಪ್ರಾಮಾಣಿಕ ಆಡಳಿತಕ್ಕೆ ಹೆಚ್ಚಿನ ಅವಕಾಶ ನೀಡಿದರು. ನೆರೆಹಾವಳಿಯಂತಹ ಪ್ರಾಕೃತಿಕ ವಿಕೋಪಗಳಿಗೆ ಸ್ಪಂದಿಸಿ, ಪರಿಹಾರ

ನೀಡಿದರು. ಇಂತಹ ವಿಕೋಪಗಳಿಗೆ ಕೇಂದ್ರ ಸರ್ಕಾರ ಮತ್ತು ವಿಶ್ವಬ್ಯಾಂಕಿನಿಂದ ನೂರಾರು ಕೋಟಿ ರೂಪಾಯಿಯನ್ನು ಮಂಜೂರು ಮಾಡಿಸಿಕೊಂಡು ಗ್ರಾಮೀಣ ಜನರಿಗೆ ಪುನರ್ವಸತಿ ಯೋಜನೆಯನ್ನು ರೂಪಿಸಿದರು.

ಮೊಯಿಲಿಯವರು ನೂರಾರು ಯೋಜನೆಗಳ ಕನಸನ್ನು ಹೊತ್ತುಕೊಂಡು ಆಡಳಿತ ಚುಕ್ಕಾಣಿಯನ್ನು ಹಿಡಿದವರು. ಗ್ರಾಮೀಣ ಪ್ರದೇಶದಲ್ಲಿಯ ಬಡತನದ ಕಹಿಗಳಿಕೆಯನ್ನುಂಡು ರಾಜ್ಯ ಮತ್ತು ರಾಷ್ಟ್ರದ ಅಭ್ಯುದಯಕ್ಕೆ ಕಂಕಣಬದ್ಧವಾಗಿ ಯೋಜನೆಗಳನ್ನು ರೂಪಿಸಿ ಅವುಗಳನ್ನು ಅನುಷ್ಠಾನಗೊಳಿಸಲು ಅವಿರತವಾದ ಸಾಹಸವನ್ನು ಮಾಡಿ ಯಶಸ್ವಿಯಾದವರು. ಇವರು ಅನೇಕ ಯೋಜನೆಗಳನ್ನು ಇಲ್ಲಿಯವರೆಗೆ ಹಾಕಿಕೊಂಡಿದ್ದಾರೆ. ಅವುಗಳಲ್ಲಿ ಹಲವಾರು ಯೋಜನೆಗಳು ಅನುಷ್ಠಾನಗೊಂಡು ಬಹುಜನರಿಗೆ ಕಲ್ಯಾಣವಾಗಿದೆ. ಇದಲ್ಲದೆ ಇನ್ನು ಹೊಸ ಹೊಸ ಯೋಜನೆಗಳ ಆವಿಷ್ಕಾರದಲ್ಲಿ ಅವರು ತೊಡಗಿಕೊಂಡಿದ್ದಾರೆ. ಹೀಗಾಗಿ ಅವರೊಬ್ಬ ಕ್ರೀಯಾಶೀಲ ರಾಜಕೀಯ ಚಿಂತಕರಾಗಿದ್ದಾರೆ. ಅವರು ತಮ್ಮ ರಾಜಕೀಯ ಹುದ್ದೆಯಲ್ಲಿ ಹಾಕಿಕೊಂಡ ಯೋಜನೆಗಳನ್ನು ಸ್ಥೂಲವಾಗಿ ವಿಶ್ಲೇಶಿಸುವ ಕಾರ್ಯ ಈ ಅಧ್ಯಾಯದಲ್ಲಿ ಪ್ರಮುಖವಾಗಿದೆ. ಜೊತೆಗೆ ಅವರು ರೂಪಿಸಿದ ಯೋಜನೆಗಳು ಜನರಿಗೆ ಸಹಾಯವಾಗಿವೆ ಎಂಬುದನ್ನು ಗುರುತಿಸುವ ಪ್ರಯತ್ನ ಇದಾಗಿದೆ. ಅವರ ಪ್ರಮುಖ ಯೋಜನೆಗಳು ಕಾರ್ಯರೂಪ ಪಡೆದುಕೂಂಡ ಬಗೆಯನ್ನು ಹಾಗೂ ಅವರ ಕ್ರೀಯಾಶೀಲ ಅನ್ವೇಷಣೆಯ ಪ್ರಮುಖವಾದ ಅಂಶಗಳನ್ನು ಈ ರೀತಿಯಲ್ಲಿ ಗುರುತಿಸಲಾಗಿದೆ.

ಕೇಂದ್ರ ಸರ್ಕಾರವು ೧೯೯೧ರಲ್ಲಿ ನೂತನ ಕೈಗಾರಿಕಾ ನೀತಿಯನ್ನು ಜಾರಿಗೊಳಿಸಿತು. ಅದಕ್ಕೆ ಅನುಗುಣವಾಗಿ ೧೯೯೩ರಲ್ಲಿ ಕರ್ನಾಟಕ ಸರ್ಕಾರವು ಸಹ ತನ್ನ ಕೈಗರಿಕಾ ನೀತಿಯನ್ನು ಪ್ರಕಟಿಸಿತು. ಈ ಕೈಗಾರಿಕಾ ನೀತಿಯನ್ನು ರಾಷ್ಟ್ರದಲ್ಲಿ ಕರ್ನಾಟಕ ಪ್ರಥಮವಾಗಿ ಜಾರಿಗೊಳಿಸಿತು. ಈ ನೀತಿಯು ಮೂರು ಮಾದರಿಗಳನ್ನು ಒಳಗೂಂಡಿತು. ಒಂದು ಅಭಿವೃದ್ಧಿಗೊಂಡ ಪ್ರದೇಶವಾದರೆ ಮೊತ್ತೂಂದು ಅಭಿವೃದ್ಧಿಗೊಳ್ಳುತ್ತಿರುವ ಪ್ರದೇಶ, ಹಾಗೂ ಅಭಿವೃದ್ಧಿ ಕೇಂದ್ರಗಳನ್ನಾಗಿ ವಿಭಜಿಸಿ, ಈ ಮೂರು ವಿಧದಲ್ಲಿ ಹೆಚ್ಚಿನ ಹೂಡಿಕೆಯ ಸಾಮರ್ಥ್ಯವನ್ನು ಕೈಗಾರಿಕಾ ವಲಯದಲ್ಲಿ ಸೃಷ್ಠಿಸಿ ಮಹಾ ಯೋಜನೆಗಳಿಗೆ ವಿಶೇಷ ಗಮನ ನೀಡಲು ನಿರ್ಧರಿಸಿತು. ಮೊಯಿಲಿಯವರು ಮುಖ್ಯಮಂತ್ರಿಯಾಗುವ ಪೂರ್ವದಲ್ಲಿ ಕೈಗಾರಿಕೆಯಲ್ಲಿ ಕರ್ನಾಟಕ ಎಂಟನೇ ಸ್ಥಾನ ಪಡೆದಿತ್ತು. ಇದನ್ನು ಗಮನಿಸಿದ

ಮೊಯಿಲಿಯವರು ತಾವು ಮುಖ್ಯಮಂತ್ರಿಯಾದ ಮೇಲೆ ಕರ್ನಾಟಕ ರಾಜ್ಯವನ್ನು ಕೈಗಾರಿಕಾ ಅಭಿವೃದ್ದಿಯ ಉತ್ತುಂಗಕ್ಕೆ ಒಯ್ಯುವ ನಿಟ್ಟಿನಲ್ಲಿ ಪ್ರಯತ್ನಿಸಿ ೪ನೇಯ ಸ್ಥಾನ ಹೊಂದಲು ಕಾರಣಕರ್ತರಾದರು. ಹೀಗಾಗಿ ೧೯೯೫ನೇ ವರ್ಷದಲ್ಲಿ ಯೋಜನೆಯ ಹೂಡಿಕೆಯ ಮೊತ್ತ ೮೭ಸಾವಿರ ಕೋಟಿ ರೂಪಾಯಿಗಳಷ್ಟಾಗಿ ಹಾಕಿಕೊಂಡ ಯೋಜನೆ ಅನುಷ್ಟಾನ ಹಂತ ತಲುಪಿತು.

ಮೊಯಿಲಿಯವರು ೨೫ ವರ್ಷಕ್ಕೂ ಹೆಚ್ಚು ಕಾಲ ನೆನೆಗುದಿಗೆ ಬಿದ್ದ ಬೃಹತ್ ಯೋಜನೆಗಳಲ್ಲಿ ಒಂದಾದ ಜಿಂದಾಲ ವಿಜಯ ನಗರದ ಉಕ್ಕು ಸ್ಥಾವರ ಕನಸಿನ ಯೋಜನೆಯಾಗಿತ್ತು. ಆ ಯೋಜನೆಗೆ ಮರು ಜೀವವನ್ನು ನೀಡಿ ಜಿಂದಾಲ ವಿಜಯನಗರ ಸ್ಟೀಲ್ ಲಿಮಿಟೆಡ್ ಮತ್ತು ಕರ್ನಾಟಕ ರಾಜ್ಯ ಕೈಗಾರಿಕಾ ಹೂಡಿಕೆ ಹಾಗೂ ಅಭಿವೃದ್ಧಿ ನಿಗಮಗಳ ನಡುವೆ ೧೯೯೪ರಲ್ಲಿ ಒಪ್ಪಂದ ಏರ್ಪಡಿಸಿ ಆ ಯೋಜನೆಗೆ ಚಾಲನೆಯನ್ನು ನೀಡಿದರು. ಮೊದಲ ಹಂತದಲ್ಲಿ ೩,೨೦೦ ಕೋಟಿ ರೂಪಾಯಿ ಎರಡನೇ ಹಂತದಲ್ಲಿ ೬೫೦೦ ಕೋಟಿ ವೆಚ್ಚದಲ್ಲಿ ವಿಸ್ತೃತಗೊಂಡಿತು. ಇದು ಮೊಯಿಲಿಯವರ ದೂರದೃಷ್ಠಿ ಹಾಗೂ ರಾಜ್ಯದ ಕೈಗಾರಿಕೆಯ ದಾರ್ಶನಿಕತೆಯ ನೋಟದಿಂದ ಆರಂಭಗೊಂಡ ಬೃಹತ್ ಯೋಜನೆಯಾಗಿದೆ.

ಮೊಯಿಲಿಯವರು ಕೈಗಾರಿಕೆ ಅಭಿವೃದ್ಧಿಗೊಳ್ಳಲು ಮೂಲಭೂತ ಸೌಲಭ್ಯಗಳನ್ನು ಬಲಪಡಿಸುವುದು ಕೈಗಾರಿಕೆಗಳ ಉದ್ದೇಶಗಳ ಯೋಜನೆಗೆ ಜಮೀನು ಸ್ವಾದೀನತೆ, ಹಾಗೂ ಬದಲಾವಣೆಗಳ ಸಮಸ್ಯೆಗಳನ್ನು ನಿವಾರಿಸುವುದು. ರಫ್ತು ಮತ್ತು ಆಮದುಗಳಿಗೆ ವಿಶೇಷ ಒತ್ತನ್ನು ನೀಡಿದರು. ಸಣ್ಣ ಅತೀ ಸಣ್ಣ ಕೈಗಾರಿಕಾ ಘಟಕಗಳಿಗೆ ಸಹಾಯಧನ ನೀಡುವಿಕೆ, ಹಿಂದುಳಿದ ಅಲ್ಪಸಂಖ್ಯಾತ ಮುಂತಾದವರಿಗೆ ಹೆಚ್ಚುವರಿ ಸಹಾಯಧನ ನೀಡಿ ಶಾಸನಾತ್ಮಕವಾದ ರಿಯಾಯ್ತಿ ಅಡಿಯಲ್ಲಿ ನೂತನ ಕೈಗಾರಿಕಾ ನೀತಿಯಲ್ಲಿ ಸೇರ್ಪಡೆಗೊಂಡವು. ಕೇವಲ ಕೈಗಾರಿಕೆಗಳನ್ನು ಬೆಳೆಸದೆ ಅದರಿಂದ ಪರಿಸರಕ್ಕೆ ಹಾನಿ ಉಂಟಾಗಬಾರದೆಂದು ಪರಿಸರ ಸ್ನೇಹಿ ಕೈಗಾರಿಕೆಗಳ ಕ್ರಿಯಾ ಯೋಜನೆಗಳನ್ನು ಹಾಕಿಕೊಂಡರು. ಆ ಮೂಲಕ ಕರ್ನಾಟಕ ಕೈಗಾರಿಕಾ ಯೋಜನೆಗಳಲ್ಲಿ ೧೯೯೪ರಲ್ಲಿ ಮೂರನೇ ಸ್ಥಾನಕ್ಕೆ ಬಡ್ತಿ ಪಡೆಯಿತು. ಇವು ಮೊಯಿಲಿಯವರು ಆರಂಭದಲ್ಲಿ ಕೈಗಾರಿಕಾ

ಯೋಜನೆಯಲ್ಲಿ ರೂಪಿಸಿ ಅವುಗಳಲ್ಲಿ ತಮ್ಮ ಅಧಿಕಾರ ಅವಧಿಯಲ್ಲಿ ಹಂತ-ಹಂತವಾಗಿ ಅನುಷ್ಠಾನಗೊಳಿಸಲು ಮಾಡಿದ ಮಹತ್ವಪೂರ್ಣ ಕಾರ್ಯಗಳಾಗಿವೆ.

೧೯೯೩ರಲ್ಲಿ ಮೊಯಿಲಿಯವರು 'ಅಂತರಾಷ್ಟ್ರೀಯ ಟೆಕ್ನಾಲಜಿ ಪಾರ್ಕ' ಪರಿಕಲ್ಪನೆಯನ್ನು ಹಾಕಿಕೊಂಡು ಈ ಯೋಜನೆಯನ್ನು ಅನುಷ್ಠಾನಗೊಳಿಸಿದರು. ಈ ಯೋಜನೆಯು ಅತೀ ವೇಗವಾಗಿ ಕಾರ್ಯ ನಿರ್ವಹಿಸಲು ಮೊಯಿಲಿಯವರು ಅವಿರತ ಪ್ರಯತ್ನ ಮಾಡಿದರು. ಆ ಮೂಲಕವಾಗಿ ಸಿಂಗಾಪೂರದ ಸಚಿವರ ನಿಯೋಗವು ಕರ್ನಾಟಕಕ್ಕೆ ಪೂರ್ವ ಸಿದ್ಧತೆಯನ್ನು ಮಾಡಿಕೊಂಡಿದ್ದು ಈ ಯೋಜನೆಯ ವೇಗವನ್ನು ಹೆಚ್ಚಿಸಲು ಮೊಯಿಲಿಯವರು ಸರ್ಕಾರಿ ಆದೇಶವನ್ನು ಹೊರಡಿಸಿದರು. ಈ ಯೋಜನೆಯ ಪರಿಕಲ್ಪನೆ ದೃಢ ಸ್ವರೂಪವನ್ನು ತಾಳಿ ಸಿಂಗಾಪೂರದ ಪ್ರಧಾನ ಮಂತ್ರಿ 'ಗೂ-ಚೂ ಟಾಂಗ್' ಅವರು ಬೆಂಗಳೂರಿಗೆ ಬಂದು ಯೋಜನೆಯನ್ನು ಅನುಷ್ಠಾನಗೊಳಿಸಿದರು. ಮೊದಲ ಬಾರಿಗೆ ಕರ್ನಾಟಕ ಸರ್ಕಾರ ಪಿ.ಟಿ.ಪಿ.ಎಲ್. ಹೆಸರಿನ ಸಂಸ್ಥೆಯನ್ನು ಖ್ಯಾತ ಉದ್ಯಮಿ ಟಾಟಾ ಸಮೂಹ ಮತ್ತು ಸಿಂಗಪೂರ ಉದ್ಯಮ ಸಮೂಹದೊಂದಿಗೆ ಜಂಟಿಯಾಗಿ ೧೯೯೪ರಲ್ಲಿ ವೈಟ್ ಫೀಲ್ಡ್‌ನ ಕಾಡುಗೋಡಿ ಸಾದರ ಮಂಗಳ ಗ್ರಾಮದಲ್ಲಿ ಸ್ಥಾಪಿತಗೊಂಡಿತು. ಹೀಗೆ ಈ ಬೃಹತ್ ಯೋಜನೆಯು ಕರ್ನಾಟಕದಲ್ಲಿ ತಲೆ ಎತ್ತಿ ನಿಂತುಕೊಳ್ಳಲು ಶ್ರೀಯುತ ವೀರಪ್ಪ ಮೊಯಿಲಿಯವರು ಸಾಕಷ್ಟು ಶ್ರಮ ಹಾಕಿ ಕಾರ್ಯ ರೂಪಕ್ಕೆ ತಂದರು. ಇವುಗಳು ಜೊತೆಗೆ ಮುಂಬರುವ ಯೋಜನೆಗಳ ಆವಿಷ್ಕಾರಕ್ಕೆ ಒತ್ತನ್ನು ನೀಡಿದರು.

ವೀರಪ್ಪ ಮೊಯಿಲಿಯವರ ಅನುಷ್ಠಾನ ಹಂತದ ಯೋಜನೆಗಳು ಪ್ರಮುಖವಾಗಿ ಈ ರೀತಿಯಾಗಿವೆ. ಐ.ಟಿ. ಪಾರ್ಕ್‌ಗಾಗಿ ಮಾಡಿಕೊಂಡಿರುವ ಈ ವಿಸ್ತರಣಾ ಯೋಜನೆಗಳು ಮುಂದಾಲೋಚನೆಯ ಕಾರ್ಯವೈಖರಿಯನ್ನು ಸೂಚಿಸುವಂತಿವೆ. ೧) "ಬಹು ವಾಸ್ತವ್ಯದ ಕಟ್ಟಡಗಳು, ೨) ಕ್ಲಬ್ ಹೌಸ್ ಮತ್ತು ಉಪಹಾರ ಗೃಹ, ೩) ಪ್ರತಿಯೊರ್ವ ಗ್ರಾಹಕನ ಅಗತ್ಯಗಳಿಗೆ ತಕ್ಕಂತಹ (ಬಿಲ್ಟ ಶೂಟ) ನಿರ್ಮಾಣ ಇದು ಏಕನೆಲೆಯಲ್ಲಿ ವಾಸ್ತವ್ಯವಿರುವ ಕಂಪನಿಗಳಿಗೆ ಅನ್ವಯಿಸುತ್ತದೆ. ಮತ್ತು ಕಟ್ಟಡ ಹಕ್ಕನ್ನು ನಾಡು ನಿರ್ದೇಶಿಸುವ ಭೋಗ್ಯಕ್ಕೆ ಪಡೆಯುವ ಖರೀದಿ ಸಹಿತ ಭೋಗ್ಯದ ಅವಕಾಶವಿದೆ[೧]". ಹೀಗೆ ಬೆಂಗಳೂರಿನಲ್ಲಿ ಸ್ಥಾಪಿಸಲ್ಪಟ್ಟ ಮಾಹಿತಿ ಮತ್ತು ತಂತ್ರಜ್ಞಾನ ಸಮುಚ್ಛಯ ಆರ್ಥಿಕ ಕ್ಷೇತ್ರದಲ್ಲಿ ಹೊಸಯುಗಕ್ಕೆ

ನಾಂದಿ ಹಾಡಿತ್ತು. ಈ ಯೋಜನೆಯ ಕೆಲ ಉಪಯುಕ್ತವಾದ ಲಾಭಗಳ ಪಟ್ಟಿ ಈ ರೀತಿಯಲ್ಲಿದೆ.

೧) "ಐ.ಟಿ. ಪಾರ್ಕ ಯೋಜನೆಯು ಸಿಂಗಾಪೂರ ಉದ್ಯಮ ಸಮೂಹದ ಸಹಯೋಗದ್ದಾಗಿದ್ದು ಅವರು ಬಹುರಾಷ್ಟ್ರೀಯ ಕಂಪನಿಗಳಿಗೆ ಅಗತ್ಯವಿರುವ ಇಂತಹ ಪಾರ್ಕಗಳ ನಿರ್ಮಾಣದಲ್ಲಿ ಅನುಭವಿ ಅವಕಾಶವು ವಿಶ್ವಾಸರ್ಹ ಮೂಲಭೂತ ಸೌಲಭ್ಯಗಳೊಂದಿಗೆ ಲಭ್ಯವಿರುವುದರಿಂದ ಇದು ಐ.ಟಿ. ಪಾರ್ಕನಲ್ಲಿ ಸಾಫ್ಟವೇರ್ ಮತ್ತು ಸಂಬಂಧಿತ ಉದ್ಯಮಗಳ ಸ್ಥಾಪನೆಗೆ ಬಹುರಾಷ್ಟ್ರೀಯ ಸಂಸ್ಥೆಗಳನ್ನು ಆಕರ್ಷಿಸುತ್ತದೆ.

೨) ಯೋಜನೆಯ ಉನ್ನತ ಗುಣಮಟ್ಟದ ಸ್ಥಳೀಯ ಭಾರತೀಯ ಸಾಫ್ಟವೇರ್ ನಿರ್ಮಾತೃಗಳನ್ನು ಪ್ರೋತ್ಸಾಹಿಸುತ್ತಾ ಸಾಫ್ಟವೇರ್ ರಫ್ತಿನ ಉತ್ತೇಜನಕ್ಕೆ ಪಾರ್ಕಿನಲ್ಲಿ ಅವಕಾಶ ಕಲ್ಪಿಸುತ್ತದೆ.

೩) ಖರ್ಚುವೆಚ್ಚಗಳ ಸ್ಪರ್ಧಾತ್ಮಕ ದೃಷ್ಟಿಕೋನದಲ್ಲಿ ಸಿಂಗಾಪುರ ದುಬಾರಿ ಎನಿಸಿರುವ ಕೆಲವು ಬಹು ರಾಷ್ಟ್ರೀಯ ಕಂಪನಿಗಳವರಿಗೆ ಇದು ಸಿಂಗಾಪುರದ ಸಹಯೋಗದ ಸಂಸ್ಥೆಯಾಗಿರುವುದರಿಂದ ಇಲ್ಲಿಗೆ ಸ್ಥಳಾಂತರಿಸಲು ಪ್ರೇರಕವಾಗುತ್ತದೆ.

೪) ಐ.ಟಿ. ಪಾರ್ಕ ಪೂರ್ಣ ಅಭಿವೃದ್ದಿಗೊಂಡಾಗ ೧ ಲಕ್ಷ ಆರು ಸಾವಿರ ಮಂದಿಗೆ ಉದ್ಯೋಗವಕಾಶ ದೊರೆಯುದೆಂದು ನಿರೀಕ್ಷಿಸಲಾಗಿತ್ತು. ಮತ್ತು ಪಾರ್ಕನ ವ್ಯವಹಾರವು ೨ ಸಾವಿರ ಕೋಟಿ ರುಪಾಯಿಗಳಿದ್ದು ಇದರಲ್ಲಿ ಅರ್ಧದಷ್ಟು ಉತ್ಪನ್ನಗಳು ರಫ್ತು ಮತ್ತು ಸೇವೆಯಿಂದ ಲಭಿಸಿದೆ.

೫) ಐಟಿ ಪಾರ್ಕಿನ ಯಶಸ್ಸು ಭಾರತದ ಇತರೆ ವ್ಯವಹಾರ ಮತ್ತು ಕೇಂದ್ರಗಳಿಗೆ ಈ ಪರಿಕಲ್ಪನೆಯ ಅನುಷ್ಠಾನಕ್ಕೆ ಪ್ರೇರಣೆಯಾಗುತ್ತದೆ.

೬) ಸಿಂಗಾಪೂರ ವ್ಯವಹಾರ ಸಮುದಾಯದ ಕೆಲವು ಸದಸ್ಯರು ರಫ್ತಿನ ದೃಷ್ಠಿಕೋನದಿಂದ ಭಾರತ ಸ್ಪರ್ಧಾತ್ಮಕವಾದ ಲಾಭಗಳಿಸಬಹುದಾದ ಕೆಲವು ನಿರ್ದಿಷ್ಠ ಉತ್ಪನ್ನ ಸೇವೆಗಳ ಕೈಗಾರಿಕಾ ಪಾರ್ಕಗಳ ನಿರ್ಮಾಣ ಸಾಧ್ಯತೆಗಳನ್ನು ಅನ್ವೇಷಿಸಲು ಮುಂದಾಗಬಹುದು.

೭) ಫ್ಯಾಕ್ಟರಿ ಸ್ಥಳವಕಾಶ, ಕಛೇರಿ ಸ್ಥಳವಕಾಶ ಮತ್ತು ವಸತಿ ಅವಕಾಶ ಮುಂತಾದ ಆರ್ಥಿಕ ಮೂಲಭೂತ ಸೌಲಭ್ಯಗಳ ನಿರ್ಮಾಣಕ್ಕೆ ಯೋಜನೆಯು ಪೂರಕವಾಗಬಲ್ಲದು."

ಹೀಗೆ ಮೊಯಿಲಿಯವರು ಬೆಂಗಳೂರಿನಲ್ಲಿ ಅಂತರಾಷ್ಟ್ರೀಯ ಟೆಕ್ನಾಲಜಿ ಪಾರ್ಕ ಸ್ಥಾಪಿಸಿ ತಮ್ಮ ಕನಸನ್ನು ಸಾಕಾರಗೊಳಿಸಿದರು.

೧೯೯೪ ರಲ್ಲಿ ಮೊಯಿಲಿಯವರು ಗುಲಬರ್ಗಾ ಜಿಲ್ಲೆಯನ್ನು ಸಿಮೆಂಟ ಜಿಲ್ಲೆಯನ್ನಾಗಿ ಮಾಡಿದರು. ಈ ಜಿಲ್ಲೆಯಲ್ಲಿ ನಾಲ್ಕು ಸಿಮೆಂಟ್ ಫ್ಯಾಕ್ಟರಿಯನ್ನು ಎರಡು ಸಾವಿರ ಕೋಟಿ ವೆಚ್ಚದಲ್ಲಿ ನಿರ್ಮಿಸಿ, ಉದ್ಯಮಕ್ಕೆ ಹೊಸ ಮೆರಗನ್ನು ನೀಡಿದರು. ವಿಪ್ರೊ ಮತ್ತು ಜನರಲ್ ಎಲೆಕ್ಟ್ರಿಕಲ್ ಕಂಪನಿಯವರ ಮುಂದಾಳತ್ವದಲ್ಲಿ ಭಾರತೀಯ ಮಾರುಕಟ್ಟೆಗೆ ವೈಧ್ಯಕೀಯ ಉಪಕರಣಗಳನ್ನು ಮಾರಾಟ ಮತ್ತು ಸೇವೆಯ ಉದ್ಯಮದ ಕುರಿತಾದ ಉದ್ಯಮಕ್ಕೆ ಹೆಚ್ಚಿನ ಉತ್ತೇಜನೆಯನ್ನು ನೀಡಿದರು. ಈ ನಿಟ್ಟಿನಲ್ಲಿ ವಿಪ್ರೋ ಕಂಪನಿಯವರು ಕರ್ನಾಟಕದ ಪ್ರದೇಶವನ್ನು ಆಯ್ಕೆ ಮಾಡಿಕೊಂಡಾಗ ಮೊಯಿಲಿಯವರ ಸೂಚನೆಯ ಮೇರೆಗೆ 'ಮಾರ್ಗದರ್ಶಕ ಕೈಗಾರಿಕೆ' ಎಂಬ ತತ್ವದಡಿಯಲ್ಲಿ ವಿಪ್ರೋ ಜಿ.ಆಯ್. ಸ್ಕ್ಯಾನರ್ ಯೋಜನೆಗೆ ಸಮ್ಮತಿ ದೊರೆತಾಕ್ಷಣ ಆ ಕಂಪನಿಯವರಿಗೆ ವೈಟ್ ಫಿಲ್ಡ್‌ನಲ್ಲಿ ಜಮೀನನ್ನು ಮೊಯಿಲಿಯವರು ನೀಡಿದರು. ಮೊಯಿಲಿಯವರಿಂದಾಗಿ ಆ ಕಂಪನಿಯು ಇಂದು ಅಭಿವೃದ್ಧಿಗೊಂಡು ಹಿಂದುಳಿದ ಪ್ರದೇಶದ ಸೌಲಭ್ಯ ಪಡೆದುಕೊಳ್ಳಲು ಶಕ್ತವಾಗಿದೆ.

ಚಿಂತನಾಶೀಲ, ದೂರದೃಷ್ಟಿ ಹಾಗೂ ಕ್ರೀಯಾಶೀಲ ನೀತಿಯಿಂದಾಗಿ ಜಾಗತಿಕ ಉತ್ಪಾದನಾ ಪ್ರಕ್ರಿಯೆಯಲ್ಲಿ ಹಾಗೂ ತಂತ್ರಜ್ಞಾನದ ಪ್ರಕ್ರಿಯೆಯ ಪ್ರಮುಖ ಕೇಂದ್ರವಾಗಿದೆ. ಇದಲ್ಲದೇ ಸಿಮೆಂಟ್ ಮತ್ತು ಫೀಲಿಪ್ಸ್ ಮೆಡಿಕಲ್ ಕೂಡಾ ಬೆಂಗಳೂರಿನಲ್ಲಿ ತಮ್ಮ ಕೇಂದ್ರವನ್ನು ಸ್ಥಾಪಿಸಿಕೊಂಡಿದೆ. ಜೊತೆಗೆ ಈ ಮೂರು ಕಂಪನಿಗಳು ಮೂರು ಸಾವಿರಕ್ಕೂ ಅಧಿಕ ಜನರಿಗೆ ಉದ್ಯೋಗವನ್ನು ನೀಡಿವೆ. ಮೊಯಿಲಿಯವರು ಈ ಕಂಪನಿಗಳಿಗೆ ಅನುಮೋದನೆ ನೀಡಿದ್ದರಿಂದ ಇಂದು ಬೆಂಗಳೂರು ಪ್ರಮುಖ ವೈದ್ಯಕೀಯ ತಂತ್ರಜ್ಞಾನದ ಕೇಂದ್ರವಾಗಿ ಜಾಗತಿಕ ನಕ್ಷೆಯಲ್ಲಿ ತನ್ನ ಸ್ಥಾನವನ್ನು ಪಡೆದುಕೊಂಡಿದೆ. ಅನಂತರದಲ್ಲಿ ಈ ಕಂಪನಿಗಳು ಕರ್ನಾಟಕದಲ್ಲಿ ಹೆಚ್ಚಿನ ಕಾರ್ಯ ಯೋಜನೆಗಳನ್ನು ಹಾಕಿಕೊಂಡು ಇಂದು ಕಾರ್ಯ ನಿರ್ವಹಿಸುತ್ತಿರುವುದು ಇದು ಮೊಯಿಲಿಯವರು ಮಾಡಿದ ಕಾರ್ಯಯೋಜನೆಯ ಅನುಷ್ಠಾನದ ನಂತರದ ಹಂತವಾಗಿದೆ.

ಶ್ರೀ ಎಂ ವೀರಪ್ಪ ಮೊಯಿಲಿಯವರು ಆಡಳಿತದ ಅವಧಿಯಲ್ಲಿ ಅಲ್ಪ ಸಂಖ್ಯಾತ ಸಮುದಾಯದವರ ಅಭಿವೃದ್ಧಿಗಾಗಿ ವಕ್ಫ್ ಮಂಡಳಿಯನ್ನು ಸ್ಥಾಪಿಸಿದರು. ಈ ಸಮಿತಿಯ

ಜವಾಬ್ದಾರಿಯನ್ನು ಕೆ.ರೆಹಮಾನಖಾನ್ ಅವರಿಗೆ ವಹಿಸಿದರು. ಅಲ್ಪಸಂಖ್ಯಾತರ ಶೈಕ್ಷಣಿಕ, ಸಾಮಾಜಿಕ, ಆರ್ಥಿಕ ಸ್ಥಿತಿಗಳನ್ನು ಕಂಡು ಮೊಯಿಲಿಯವರು ರಾಜ್ಯದ ಎಲ್ಲಾ ತಾಲೂಕು ಹಾಗೂ ಜಿಲ್ಲಾ ಕೇಂದ್ರಗಳಲ್ಲಿ ಸಮೀಕ್ಷೆ ನಡೆಸಿ ಸುಮಾರು ೪೦ ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಿ ಸಮೀಕ್ಷೆಯ ಶಿಫಾರಸುಗಳನ್ನು ಸ್ವೀಕರಿಸಿ ಮೊಯಿಲಿಯವರು ಈ ಯೋಜನೆಯನ್ನು ಅನುಷ್ಠಾನಗೊಳಿಸಲು ಮುಂದಾದರು. ಇದರ ಪರಿಣಾಮವಾಗಿ 'ಕರ್ನಾಟಕ ವಕ್ಫ್ ಮಂಡಳಿ' ರಚನೆ ಮಾಡಿ ಮೊದಲ ಹಂತದಲ್ಲಿ ೨೦ ಲಕ್ಷ ರೂಪಾಯಿಯನ್ನು ಯೋಜನೆಯ ಅನುಷ್ಠಾನಕ್ಕಾಗಿ ಬಿಡುಗಡೆ ಮಾಡಿದರು. ನಂತರದಲ್ಲಿ ಒಂದು ಕೋಟಿ ರೂಪಾಯಿ ಅನುದಾನ ಒದಗಿಸಲಾಯಿತು. ಈ ಯೋಜನೆಯ ಹಣವನ್ನು ಅಲ್ಪ ಸಂಖ್ಯಾತರ ಸಮಗ್ರ ಅಭಿವೃದ್ಧಿಗಾಗಿ ಬಳಸಲಾಯಿತು. ಮುಖ್ಯವಾಗಿ ಈ ಯೋಜನೆಯ ಆದಾಯದಲ್ಲಿ ವೈದ್ಯಕೀಯ, ಇಂಜನೀಯರಿಂಗ್ ಮುಂತಾದ ಶಿಕ್ಷಣ ಪಡೆಯುತ್ತಿರುವ ಬಡ ಮುಸ್ಲಿಂ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ ಸೌಲಭ್ಯ ಒದಗಿಸಲು ಬಳಸಲಾಯಿತು. ಜೊತೆಗೆ ಶಿವಮೊಗ್ಗದಲ್ಲಿ ಮುಸ್ಲಿಂ ಹಾಸ್ಟೆಲ್ ಕಾಂಪ್ಲೆಕ್ಸ ನಿರ್ಮಾಣ, ದಕ್ಷಿಣ ಕನ್ನಡದಲ್ಲಿ ತನ್ನೀರಭಾವಿ ಶಾದಿ ಕಾಂಪ್ಲೆಕ್ಸ ನಿರ್ಮಾಣ ಇತ್ಯಾದಿಗಾಗಿ ಬಳಸಲಾಯಿತು. ಈ ಯೋಜನೆಯನ್ನು ವಿಸ್ತರಿಸಲು ಮೊಯಿಲಿಯವರು ಹೊಸದಿಲ್ಲಿಯ ಕೇಂದ್ರೀಯ ವಕ್ಫ್ ಮಂಡಳಿಗೆ ಹೆಚ್ಚಿನ ಸೌಲಭ್ಯವನ್ನು ಪಡೆಯುವ ಸಲುವಾಗಿ ಶಿಫಾರಸು ಮಾಡಿದರು. ಲೋಕಸಭೆಯಲ್ಲಿ ಮಂಜೂರುಗೊಳಿಸಿದ ವಕ್ಫ ಮಸೂದೆಯನ್ನು ಕರ್ನಾಟಕದಲ್ಲಿ ಪ್ರಪ್ರಥಮವಾಗಿ ಅನುಷ್ಠಾನಗೊಳಿಸಿದ ಕೀರ್ತಿ ಮೊಯಿಲಿಯವರಿಗೆ ಸಲ್ಲುತ್ತದೆ. ಮೊಯಿಲಿಯವರು ಅಲ್ಪ ಸಂಖ್ಯಾತರ ಅಭಿವೃದ್ಧಿ ಮತ್ತು ಶಿಕ್ಷಣ ಪ್ರಸಾರದ ಉದ್ದೇಶದಿಂದ ಮಹಿಳೆಯರ ಅಭಿವೃದ್ಧಿಗಾಗಿ ಕರ್ನಾಟಕ ವಕ್ಫ್ ಫೌಂಡೇಶನ್ ಅಡಿಯಲ್ಲಿ 'ಸ್ವಾವಲಂಬನೆ' ಯೋಜನೆಯಡಿಯಲ್ಲಿ ಮಹಿಳೆಯರಿಗೆ ಹೊಲಿಗೆ ಯಂತ್ರ, ಕಂಪ್ಯೂಟರ, ಝರಾಕ್ಸ ಯಂತ್ರ ಮುಂತಾದವುಗಳನ್ನು ಮಹಿಳೆಯರ ಆರ್ಥಿಕ ಸ್ವಾವಲಂಬನೆಗಾಗಿ ರಾಜ್ಯ ಸರಕಾರದಿಂದ ಸಹಾಯಧನ ಬಿಡುಗಡೆಗೊಳಿಸಿದರು.

೧೯೯೩ ರಲ್ಲಿ ಮೊಯಿಲಿಯವರು ಕರ್ನಾಟಕ ನಗರ ಮೂಲಭೂತ ಸೌಕರ್ಯ ಅಭಿವೃದ್ಧಿ ಮತ್ತು ಆರ್ಥಿಕ ನಿಗಮವನ್ನು ಸ್ಥಾಪಿಸಿದರು. ಮೊಯಿಲಿಯವರು ಇದರ ಪ್ರಥಮ ಅಧ್ಯಕ್ಷರಾದರು. ಮೂಲಭೂತ ಸೌಕರ್ಯ ಅಭಿವೃದ್ಧಿ ಯೋಜನೆಗಳ ರೂಪಣೆ ಹಾಗೂ ಅನುಷ್ಠಾನಗೊಳಿಸುವುದು ಇದರ ಮೂಲ ಉದ್ದೇಶವಾಗಿದೆ. ಈ ಯೋಜನೆಯು

ಸ್ಥಾಪನೆಯಾದ ನಂತರ ಮೊಯಿಲಿಯವರು ಏಷಿಯನ್ ಅಭಿವೃದ್ಧಿ ಬ್ಯಾಂಕನ್ನು ಸಂಪರ್ಕಿಸಿ ಸಹಾಯ ಧನವನ್ನು ಪಡೆದು ಮೂಲಭೂತ ಸೌಕರ್ಯಗಳ ನಿರ್ವಹಣೆ, ನಗರ ಸ್ಥಳಿಯ ಆಡಳಿತ ಸಂಸ್ಥೆಗಳ ಆಡಳಿತ ಸಾಮರ್ಥ್ಯ ವೃದ್ಧಿಸುವುದು, ಪರಿಸರ ಸಂಬಂಧಿತ ಸೂಕ್ತ ಯೋಜನೆ ಹಾಕಿಕೊಳ್ಳುವುದು ಇಂತಹ ಯೋಜನೆಗಳನ್ನು ಕೈಗೆತ್ತಿಕೊಂಡು ಮಹತ್ವದ ಅಭಿವೃದ್ಧಿಯನ್ನು ಮೊಯಿಲಿಯವರು ಸಾಧಿಸಿದರು.

ಮೊಯಿಲಿಯರು ೧೯೯೪-೯೫ ರಲ್ಲಿ ಮೂಲಭೂತ ಸೌಕರ್ಯಗಳ ಆಭಿವೃದ್ಧಿಗೆ ೧೧೫ ಕೋಟಿ ರೂಪಾಯಿಯ ಯೋಜನೆಯೊಂದನ್ನು ರೂಪಿಸಲು ನಿರ್ಧರಿಸಿದರು. ಈ ಯೋಜನೆಯಲ್ಲಿ ಬೆಂಗಳೂರಿನ ಅಭಿವೃದ್ಧಿಗೆ ೧೬ ಅಂಶಗಳ ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದರು. ಮುಖ್ಯವಾಗಿ ಬಹು ಅಂತಸ್ತಿನ ವಾಹನ ನಿಲುಗಡೆ ಪ್ರದೇಶ, ಶಾಪಿಂಗ್ ಸಂಕೀರ್ಣ, ರಸ್ತೆಗಳನ್ನು ಅಗಲಿಕರಣಗೊಳಿಸುವುದು, ಕೊಳಚೆ ನೀರನ್ನು ಸಾಗಿಸಲು ಕೊಳವೆಗಳ ಜೋಡಣೆ, ಮೇಲು ಸೇತುವೆ ನಿರ್ಮಾಣ ಮುಂತಾದ ಯೋಜನೆಗಳನ್ನು ಮೊಯಿಲಿಯವರು ಹಾಕಿಕೊಂಡಿದ್ದರು. ಆದರೆ ಮೊಯಿಲಿಯವರ ಕಾಲದಲ್ಲಿ ಈ ಯೋಜನೆಗಳು ಅನುಷ್ಠಾಣಗೊಳ್ಳಲಿಲ್ಲ. ಮುಂದೆ ಬಂದ ಎಸ್.ಎಂ ಕೃಷ್ಣ ಅವರ ಅವಧಿಯಲ್ಲಿ ಈ ಯೋಜನೆಗಳನ್ನು ಅನುಷ್ಠಾಣಕ್ಕೆ ತರಲಾಯಿತು.

ಮೊಯಿಲಿಯವರು ೧೯೯೩ ಫೆಬ್ರುವರಿಯಲ್ಲಿ ೩೦ ಲಕ್ಷ ಮೆಟ್ರಿಕ್ ಟನ್ ಸಾಮರ್ಥ್ಯದ ತೈಲಾಗಾರ ಯೋಜನೆಯನ್ನು ಆರಂಭಿಸಿದರು. ಬಹುದಿನಗಳಿಂದ ಕನಸಾಗಿ ಉಳಿದಿದ್ದ ಮೊಯಿಲಿಯವರ ಕನಸು ನನಸಾಯಿತು. “ಮಂಗಳೂರು ರಿಪಾಯಿನರಿಸ್ ಮತ್ತು ಪೆಟ್ರೊ ಕೆಮಿಕಲ್ಸ್ ಲಿಮಿಟೆಡ್” (MRPL) ಪಶ್ಚಿಮ ಕರಾವಳಿಯಲ್ಲಿ ಸ್ಥಾಪನೆಯಾಯಿತು. ಈ ತೈಲಗಾರ ಯೋಜನೆಯನ್ನು ೧೩ ವರ್ಷಗಳ ಹಿಂದೆ ರೂಪಿಸಲಾಗಿತ್ತು. ಮೊಯಿಲಿಯವರು ಕರ್ನಾಟಕದ ಮುಖ್ಯ ಮಂತ್ರಿಯಾಗಿ ಅಧಿಕಾರ ವಹಿಸಿಕೊಂಡ ಬಳಿಕವೇ ಆರಂಭಿಸಲಾಯಿತು. ಈ ಯೋಜನೆಯು ಅತ್ಯಂತ ಬೃಹತ್ ಪ್ರಮಾಣದ ಯೋಜನೆಯಾಗಿದ್ದು ಇದನ್ನು ಅನುಷ್ಠಾನಗೊಳಿಸಿದ ಮೊಯಿಲಿಯವರನ್ನು ಅನೇಕ ಸಂಸ್ಥೆಗಳು ಪ್ರಶಂಸಿವೆ. ಮತ್ತು ಕರ್ನಾಟಕದ ಪತ್ರವನ್ನು ತೈಲ ಉದ್ಧಿಮೆಯಲ್ಲಿ ಶ್ಲಾಘಿಸಲಾಗಿದೆ. ಈ ಯೋಜನೆಯಿಂದ ರಾಜ್ಯದ ಖಜಾನೆಗೆ ೪೩.೨೨ ಕೋಟಿ ರೂಪಾಯಿ ಆದಾಯ

ಬರುವಂತೆ ಮಾಡಿದರು. ಈ ಯೋಜನೆಯಿಂದ ಕನಿಷ್ಠ ೯೦೦ ಕರ್ನಾಟಕದ ಜನರಿಗೆ ಉದ್ಯೋಗ ದೊರಕಿದೆ.

೧೯೬೩ ರಲ್ಲಿ ಶಂಕುಸ್ಥಾಪನೆಯಾದ ಆಲಮಟ್ಟಿ ಆಣೆಕಟ್ಟಿನ ಕಾಮಗಾರಿಯನ್ನು ೧೯೯೨ ರವರೆಗೂ ಆರಂಭಿಸಿರಲಿಲ್ಲ. ಮೊಯಿಲಿಯವರೆ ಈ ಬಗ್ಗೆ ಯೋಜನಾ ಆಯೋಗ, ಪರಿಸರ ಸಚಿವಾಲಯಕ್ಕೆ ಪತ್ರ ಬರೆದು ಇದರ ಎತ್ತರವನ್ನು ೫೨೪ ಮೀಟರಗಳಿಗೆ ಏರಿಸಲು ಗೇಟ್ ಕಮೀಟಿಯಿಂದ ಮಂಜುರಾತಿ ಪಡೆದರು. ಈ ಯೋಜನೆಗೆ ಸಾಕಷ್ಟು ಅನುದಾನವನ್ನು ಬಿಡುಗಡೆ ಮಾಡಿದರು. ಮುಂದೆ ಇದರ ಕಾರ್ಯಾರಂಭವನ್ನು ಎಸ್.ಎಂ. ಕೃಷ್ಣರವರ ಸರಕಾರ ಕೈಕೊಂಡಿತು.

ಎಂ. ವೀರಪ್ಪ ಮೊಯಿಲಿಯವರು ಸಚಿವರು ಮತ್ತು ಮುಖ್ಯಮಂತ್ರಿಗಳಾಗಿದ್ದ ಸಂದರ್ಭದಲ್ಲಿ ಗ್ರಾಮ ಅಭಿವೃದ್ಧಿ ಮಾಡುವ ಕನಸನ್ನು ಹೊಂದಿದರು. ಕರ್ನಾಟಕದ ೭೦% ಗ್ರಾಮಾಂತರ ನಿವಾಸಿಗಳು ಎಂಬುದನ್ನು ಮೊಯಿಲಿಯವರು ಅರಿತಿದ್ದರು. ಗ್ರಾಮೀಣ ಜನತೆಯ ಬಹುಮುಖ್ಯ ಸಮಸ್ಯೆಗಳನ್ನು ಅರಿತುಕೊಂಡು ಅವರಿಗಾಗಿ ಅನೇಕ ಯೋಜನೆಗಳನ್ನು ಆರಂಭಿಸಿದರು. ಅವುಗಳಲ್ಲಿ ದಶಲಕ್ಷ ಭಾವಿ ಯೋಜನೆಯನ್ನು ರೂಪಿಸಿದರು. ಮೊಯಿಲಿಯವರು ಅಧಿಕಾರ ಅವಧಿಯಲ್ಲಿ ಸುಮಾರು ೨ ಲಕ್ಷ ಭಾವಿಗಳನ್ನು ನಿರ್ಮಿಸಲಾಯಿತು. ಗ್ರಾಮೀಣ ಜನರಿಗೆ ಕುಡಿಯುವ ನೀರಿನ ಪೂರೈಕೆಗಾಗಿ ಮೊಯಿಲಿಯವರು 'ಗ್ರಾಮೀಣ ನೀರು ಪೂರೈಕೆ' ಯೋಜನೆಯನ್ನು ಜಾರಿಗೆ ತಂದರು. ಇವುಗಳಲ್ಲಿ ಕೈಪಂಪ ಸಹಿತ ಬೋರವೆಲ್ಗಳು, ಕೊಳವೆ ಮೂಲಕ ನೀರು ಪೂರೈಕೆ ಮಾಡುವ ಬೋರವೆಲ್ಲಗಳು ಮತ್ತು ಕಿರು ನೀರು ಪೂರೈಕೆ ಯೋಜನೆಗಳೆಂದು ರೂಪಿಸಿದರು. ಈ ಯೋಜನೆಯಿಂದ ೨೦ ಸಾವಿರ ಬೋರವೆಲ್ ೫ ಸಾವಿರ ಕೊಳವೆ ನೀರು ಪೂರೈಕೆ ಮತ್ತು ೫ ಸಾವಿರ ಕಿರು ನೀರು ಪೂರೈಕೆ ಯೋಜನೆಗಳು ಜಾರಿಗೊಂಡವು.

ಮೊಯಿಲಿಯವರು ಕೇಂದ್ರದ ಗ್ರಾಮೀಣ ಬಡಜನರ ಅಭಿವೃದ್ದಿಗಾಗಿ ಸಮಗ್ರ ಗ್ರಾಮೀಣ ಅಭಿವೃದ್ದಿ ಯೊಜನೆಯನ್ನು (IRDP) ಪರಿಣಾಮಕಾರಿಯಾಗಿ ಜಾರಿಗೆ ತಂದರು. ಈ ಯೋಜನೆಯು ಸಣ್ಣ ಮತ್ತು ಮಾಧ್ಯಮ ವರ್ಗದ ರೈತರಿಗೆ ಕೃಷಿಕಾರ್ಮಿಕರಿಗೆ ಕರಕುಶಲಗಾರರಿಗೆ ಮಾತ್ರ ಸೀಮಿತವಾಗಿತ್ತು. ಈ ಯೋಜನೆಯು ಆರ್ಥಿಕ ಸಹಾಯ ನೀಡಿ

ಬಡ ಜನರಿಗೆ ಆರ್ಥಿಕ ಪ್ರಗತಿ ಸಾಧಿಸಲು ಸಹಕಾರಿಯಾಯಿತು. ಯೋಜನೆಯಿಂದ ಸುಮಾರು ೨ರಿಂದ ೪ ಲಕ್ಷ ಜನರು ಸ್ವಾವಲಂಬಿಗಳಾದರು.

ಮೊಯಿಲಿಯವರು ಗ್ರಾಮೀಣ ಯುವಕರ ಸ್ವಂತ ಉದ್ಯೋಗಕ್ಕಾಗಿ ಟ್ರೈಸಂ ಎನ್ನುವ ಕೇಂದ್ರದ ಯೋಜನೆಯನ್ನು ಜಾರಿಗೊಳಿಸಿದರು. ಇದು ಗ್ರಾಮೀಣ ಯುವಕರಿಗೆ ಉದ್ಯೋಗ ತರಬೇತಿಯನ್ನು ನೀಡಿ ಯ್ಯೋಗ್ಯ ಉಪಕರಣಗಳ ನೆರವು ನೀಡಿ ಸ್ವಂತ ಉದ್ಯೋಗ ಹೊಂದುವಂತೆ ಮಾಡಿ ಯುವಕರನ್ನು ಸ್ವವಲಂಬಿಯನ್ನಾಗಿಸುವುದು ಇದರ ಉದ್ದೇಶ. ಈ ಯೋಜನೆಯಡಿಯಲ್ಲಿ ಯುವಕರಿಗೆ ಬ್ಯಾಂಕಿನಿಂದ ರಿಯಾಯತಿ ದರದಲ್ಲಿ ಸಾಲ ನೀಡಿ ಅವರ ಉದ್ಯೋಗಕ್ಕೆ ಪ್ರೋತ್ಸಾಹ ಕೊಡುವುದಾಗಿದೆ. ಮೂರು ವರ್ಷಗಳಲ್ಲಿ ಸುಮಾರು ೪೫ ಸಾವಿರಕ್ಕೂ ಅಧಿಕ ಯುವಕರು ಈ ಯೋಜನೆಯ ಪ್ರಯೋಜನವನ್ನು ಪಡೆದರು.

ಎಂ. ವೀರಪ್ಪ ಮೊಯಿಲಿಯವರು ಗ್ರಾಮೀಣ ಪ್ರದೇಶ ಮಹಿಳೆಯರನ್ನು ಸ್ವಾವಲಂಬಿಗಳನ್ನಾಗಿಸಲು ಡ್ವಾಕ್ರಾ : ಎಂಬ ಯೋಜನೆಯನ್ನು ರೂಪಿಸಿದರು. ಈ ಯೋಜನೆ ಗ್ರಾಮೀಣ ಪ್ರದೇಶದ ಮಹಿಳೆ ಮತ್ತು ಮಕ್ಕಳ ಅಭಿವೃದ್ದಿಗಾಗಿ ಆರ್ಥಿಕ ನೆರವನ್ನು ನೀಡುವುದಾಗಿದೆ. ಮಹಿಳೆಯರು ಸ್ವಂತ ಉದ್ಯೋಗ ಮತ್ತು ಕರಕುಶಲ ವೃತ್ತಿಯಲ್ಲಿ ತರಬೇತಿ ನೀಡಿ ಅವರನ್ನು ಸಬಲರನ್ನಾಗಿಸುವ ಉದ್ದೇಶದಿಂದ ಭಾರತ ಸರಕಾರ ಮತ್ತು ಕರ್ನಾಟಕ ರಾಜ್ಯ ಸರಕಾರ ೫೦:೫೦ರ ಅನುಪಾತದಲ್ಲಿ ಅನುದಾನ ನೀಡಿ ಯೋಜನೆಯನ್ನು ರೂಪಿಸಿದರು. ಮೊಯಿಲಿಯವರು ಕರ್ನಾಟಕದಲ್ಲಿ ಪ್ರತ್ಯೇಕವಾಗಿ ಮಹಿಳೆಯರ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಸ್ಥಾಪಿಸಿ ಹೆಚ್ಚಿನ ಅನುದಾನವನ್ನು ನೀಡಿ ಯೋಜನೆಯನ್ನು ಯಶಸ್ವಿಯಾಗಿ ನಿರ್ವಹಿಸಿದರು. ಇದರಿಂದ ೧೯೯೨ರಿಂದ ೯೫ರವರೆಗೆ ಗ್ರಾಮೀಣ ಮಹಿಳೆಯರು ಸುಮಾರು ೨೦೦೦ಕ್ಕೂ ಹೆಚ್ಚಿನ ಗುಂಪುಗಳು ಕರಕುಶಲ ವೃತ್ತಿಯಲ್ಲಿ ತರಬೇತಿ ಪಡೆದರು. ಮಹಿಳೆ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಸ್ಥಾಪಿಸಿದ ಗೌರವ ಮೊಯಿಲಿಯವರಿಗೆ ಸಲ್ಲುತ್ತದೆ.

ಎಂ. ವೀರಪ್ಪ ಮೊಯಿಲಿಯವರು ೧೯೮೧ರಲ್ಲಿ ಹಂಪಿ ಪುನರುತ್ಥಾನ ಯೋಜನೆಯನ್ನು ಹಾಕಿ ಅನುಷ್ಠಾನಗೊಳಿಸಿದರು. ಇದರ ಪರಿಣಾಮವಾಗಿ ಹಂಪಿಯಲ್ಲಿ ಕನ್ನಡ ವಿಶ್ವವಿದ್ಯಾಲಯ ಸ್ಥಾಪಿನೆಯ ಯೋಜನೆ ನನಸಾಯಿತು. ಅಂದಿನ ಶಿಕ್ಷಣ ಸಚಿವರಾಗಿದ್ದ ವೀರಪ್ಪ ಮೊಯಿಲಿಯವರು ಕನ್ನಡ ಮತ್ತು ಸಂಸ್ಕೃತಿ ಅಭಿವೃದ್ಧಿಗೆ ಮಹತ್ವ ನೀಡುವ ಉದ್ದೇಶದಿಂದ ಹಂಪಿಯಲ್ಲಿ ಕನ್ನಡ ವಿಶ್ವವಿದ್ಯಾಲಯ ಸ್ಥಾಪಿಸಬೇಕೆಂದು

ಮಹದಾಸೆಯಾಗಿತ್ತು. ಈ ಮಹತ್ವ ಪೂರ್ಣವಾದ ಯೋಜನೆಗೆ ೧೯೯೩-೯೪ರಲ್ಲಿ ಮೊಯಿಲಿಯವರು ಮುಖ್ಯಮಂತ್ರಿಗಳಾಗಿದ್ದಾಗ ಹೊಸ ವಿಶ್ವ ವಿದ್ಯಾಲಯಕ್ಕೆ ಮೂಲಭೂತ ಸೌಕರ್ಯಗಳ ಅಭಿವೃದ್ಧಿಗಾಗಿ ಎರಡುವರೆ ಕೋಟಿ ರೂಪಾಯಿಗಳಷ್ಟು ಅನುದಾನವನ್ನು ಒದಗಿಸಿ ವಿಶ್ವವಿದ್ಯಾಲಯ ಸ್ಥಾಪಿಸಲು ಮುಂದಾದರು. ವಿಶೇಷ ಅಧಿಕಾರಿಯ ಕಚೇರಿಯನ್ನು ೧-೧-೧೯೯೧ರಂದು ತೆರೆಯಲಾಯಿತು. ಸುಮಾರು ೨೦೦ಎಕರೆ ಬೆಟ್ಟ ಪ್ರದೇಶದಲ್ಲಿ ವಿಶ್ವವಿದ್ಯಾಲಯ ಪ್ರಾರಂಭವಾಯಿತು. ಮೊದಲ ಕುಲಪತಿಗಳಾಗಿ ಡಾ.ಚಂದ್ರಶೇಖರ ಕಂಬಾರ ಅವರು ನೇಮಕಗೊಂಡರು. ಕನ್ನಡ ವಿಶ್ವವಿದ್ಯಾಲಯವನ್ನು ಎಂ. ವೀರಪ್ಪ ಮೊಯಿಲಿಯವರು ಉದ್ಘಾಟಿಸಿದರು.

ಮೊಯಿಲಿಯವರದು ಇನ್ನೊಂದು ಮಹತ್ವದ ಸಾಧನೆಯೆಂದರೆ ಬೆಂಗಳೂರಿನಲ್ಲಿ ರಾಷ್ಟ್ರೀಯ ಕಾನೂನು ಶಾಲಾ ವಿಶ್ವವಿದ್ಯಾಲಯ ಸ್ಥಾಪನೆಯ ಯೋಜನೆ ರೂಪಿಸಿದ್ದು, ಈ ವಿಶ್ವವಿದ್ಯಾಲಯವನ್ನು ಉತ್ತರ ಪ್ರದೇಶ ಅಥವಾ ಮಧ್ಯಪ್ರದೇಶ ಅಥವಾ ಹೈದರಾಬಾದನಲ್ಲಿ ಸ್ಥಾಪಿಸಲು ಉದ್ದೇಶಿಸಲಾಗಿತ್ತು. ಮೊಯಿಲಿಯವರ ವಿಶೇಷ ಆಸಕ್ತಿಯಿಂದ ರಾಷ್ಟ್ರೀಯ ಕಾನೂನು ಶಾಲಾ ವಿಶ್ವವಿದ್ಯಾಲಯಕ್ಕೆ ಜಮೀನು ಹಾಗೂ ೫೦ ಲಕ್ಷ ರೂಪಾಯಿ ಅನುದಾನವನ್ನು ನೀಡಿ ರಾಷ್ಟ್ರೀಯ ಕಾನೂನು ಶಾಲಾ ವಿಶ್ವವಿದ್ಯಾಲಯದ ಬಾರ್ ಕಾನ್ಸಿಲ್ ಅಧ್ಯಕ್ಷರಾದ ವಿ.ಆರ್. ರೆಡ್ಡಿಯವರ ಅನುಮೋದನೆ ಪಡೆದು ಈ ಯೋಜನೆಗೆ ವಿದ್ಯುಕ್ತ ಚಾಲನೆ ನೀಡಿದರು. ಇದು ಮೊಯಿಲಿಯವರು ಕೈಗೊಂಡ ಅತ್ಯಂತ ಕ್ಷಿಪ್ರ ನಿರ್ಧಾರಕ್ಕೆ ಉದಾಹರಣೆಯಾಗಿದೆ. ಮೊಯಿಲಿಯವರು ಕಠಿಣ ಸಂದಿಗ್ಧ ಪರಿಸ್ಥಿತಿಗಳಲ್ಲಿ ಜನಪರ ಚಿಂತಿಸಿ ಯೋಗ್ಯ ನಿರ್ಧಾರ ತೆಗೆದುಕೊಳ್ಳುತ್ತಿದ್ದರು ಎಂಬುದಕ್ಕೆ ಇದು ಸಾಕ್ಷಿಯಾಗಿದೆ.

ಸೃಜನಶೀಲ ವ್ಯಕ್ತಿತ್ವವುಳ್ಳ ಮೊಯಿಲಿಯವರು ಆಡಳಿತದಲ್ಲಿ ಮತ್ತು ಸಾರ್ವಜನಿಕ ಜೀವನದಲ್ಲಿ ಕನ್ನಡವು ಆಡಳಿತ ಭಾಷೆಯಾಗಬೇಕೆಂಬ ಯೋಜನೆ ಅನುಷ್ಠಾನ ಗೊಳಿಸಬೇಕೆಂದು ೨೨-೨-೧೯೯೩ರಂದು ಆದೇಶ ಹೊರಡಿಸಿದರು. ಮೊಯಿಲಿಯವರು ಈ ಹಿಂದೆ ಡಾ ಸರೋಜನಿ ಮಹಿಷಿ ಸಮಿತಿ ವರದಿಯ ಪರಶೀಲನೆ ಸಂಪುಟ ಉಪಸಮಿತಿ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದರಿಂದ ಆಡಳಿತದಲ್ಲಿ ಕನ್ನಡದ ಅನುಷ್ಠಾನದ ಬಗ್ಗೆ ವಿಶೇಷ ಕಾಳಜಿ ವಹಿಸಿದರು. ಅದರಂತೆಯೇ ಆಡಳಿತದಲ್ಲಿ ಕನ್ನಡವನ್ನು ಅನುಷ್ಠಾನಗೊಳಿಸಲಾಯಿತು.

೩-೯- ೧೯೯೩ರ ಸರಕಾರದ ಆದೇಶವು ಸೂಚಿಸಿದ ಕ್ರಮಗಳು ಇಂತಿವೆ.

೧) ಕೇಂದ್ರ ಸರಕಾರ ಇತರೆ ರಾಜ್ಯ ಸರಕಾರಗಳು ಮತ್ತು ನ್ಯಾಯಾಲಯಗಳ ಹೊರತುಪಡಿಸಿ ಎಲ್ಲ ಹಂತದಲ್ಲಿ ಕನ್ನಡವನ್ನೇ ಬಳಸಬೇಕು.

೨) ಎಲ್ಲ ಆದೇಶಗಳು, ಸುತ್ತೋಲೆಗಳು, ಅಧಿಸೂಚನೆಗಳು ಅಧಿಕೃತ ನೆನಪೋಲೆಗಳನ್ನೆಲ್ಲ ೧-೪-೧೯೯೩ರಿಂದ ಕನ್ನಡದಲ್ಲಿಯೇ ಕಳುಹಿಸಬೇಕು.

೩) ಎಲ್ಲಾ ಅಧಿಕಾರಿಗಳೂ ಮತ್ತು ಸಿಬ್ಬಂದಿ ೧-೬-೧೯೯೩ರಿಂದ ಕಡತಗಳನ್ನು ಮತ್ತು ಕಡತ ಟಿಪ್ಪಣಿಗಳನ್ನು ಕನ್ನಡದಲ್ಲಿಯೇ ನಮೂದಿಸಬೇಕು.[೩೭] ಎಪ್ರೀಲ್ ೧೯೯೩ರಿಂದ ೧೯೯೪ರವರೆಗೆ ಕರ್ನಾಟಕ ರಾಜ್ಯ ಸರಕಾರವು 'ಕನ್ನಡ ಜಾಗ್ರತಿ ವರ್ಷ' ಎಂದು ಘೋಷಿಸಿತು. ಕನ್ನಡದಲ್ಲಿ ಅನೇಕ ಕಾರ್ಯಕ್ರಮಗಳನ್ನು ರೂಪಿಸಿತು. ಇದು ಮೊಯಿಲಿಯವರು ಕನ್ನಡಕ್ಕೆ ನೀಡಿದ ಬಹುಮುಖ್ಯವಾದ ಕೊಡುಗೆ.

ಎಂ ವೀರಪ್ಪ ಮೊಯಿಲಿಯವರು ಉನ್ನತ ಶಿಕ್ಷಣ ಸಚಿವರಾಗಿದ್ದಾಗ ಕರ್ನಾಟಕದ ಶೈಕ್ಷಣಿಕ ಸ್ಥಿತಿಗತಿ ಅರಿತು ಈ ಸಂಬಂದದಲ್ಲಿ ಅನೇಕ ಯೋಜನೆಗಳನ್ನು ಜಾರಿಗೆ ತರಲು ಪ್ರಾಮಾಣಿಕ ಪ್ರಯತ್ನ ಮಾಡಿದರು. ಇವರ ಆಡಳಿತದ ಅವಧಿಯಲ್ಲಿ ಯಾವುದೇ ಶೈಕ್ಷಣಿಕ ಚಟುವಟಿಕೆಗಳು ಕುಂಠಿತಗೊಳ್ಳಲಿಲ್ಲ. ರಾಜ್ಯದಲ್ಲಿ ಅನೇಕ ಉಪಯುಕ್ತವಾದ ಶೈಕ್ಷಣಿಕ ಯೋಜನೆಗಳು ಜಾರಿಗೊಂಡವು. ಅವರು ಮುಖ್ಯಮಂತ್ರಿಯಾಗಿದ್ದಾಗಲೂ ಕೂಡ ಶಿಕ್ಷಣ ಕ್ಷೇತ್ರಕ್ಕೆ ಹೆಚ್ಚಿನ ಆದ್ಯತೆ ನೀಡಿದ್ದಾರೆ ಮೊಯಿಲಿಯವರು ಕೈಗೊಂಡ ಶೈಕ್ಷಣಿಕ ಯೋಜನೆಗಳು ಈ ಕೆಳಗಿನಂತಿವೆ.

ಮೊಯಿಲಿಯವರು ಯಾವುದೇ ಶಿಕ್ಷಣವು ಮಾತೃಭಾಷೆಯಲ್ಲಿರಬೇಕು ಎಂಬ ಅಂಶವನ್ನು ತಿಳಿದು ಅತ್ಯಂತ ಮಹತ್ವವಾದ ಭಾಷಾನೀತಿ ಯೋಜನೆಯನ್ನು ಜಾರಿಗೊಳಿಸಲು ಪರಿಣಾಮಕಾರಿಯಾದ ನಿರ್ಧಾರ ಕೈಗೊಂಡರು. ಕನ್ನಡ ಮಾಧ್ಯಮದಲ್ಲಿಯೇ ಶಿಕ್ಷಣ ನೀಡುವುದು ಅತ್ಯಗತ್ಯ. ಆದ್ದರಿಂದ ರಾಜ್ಯದ ಶಾಲೆಗಳಲ್ಲಿ ಶಿಕ್ಷಣ ಮಾಧ್ಯಮ ಪ್ರಾದೇಶಿಕ ಭಾಷೆ ಅಥವಾ ಮಾತೃ ಭಾಷೆಯಲ್ಲಿ ಇರಬೇಕೆಂದು ದಟ್ಟವಾದ ನಿಲುವು ತಳೆದು ಈ ನೀತಿಯನ್ನು ಜಾರಿಗೊಳಿಸಲು ತೀರ್ಮಾನಿಸಿದರು.

ಈ ಭಾಷಾ ನೀತಿ ಅನ್ವಯ ಡಾ.ಎಚ್ ನರಸಿಂಹಯ್ಯ ಅವರ ಸಮಿತಿಯ ಶಿಫಾರಸ್ಸುಗಳನ್ನು ಸ್ವೀಕರಿಸಿ ಒಂದರಿಂದ ಐದನೆಯ ತರಗತಿಯವರೆಗಿನ ಶಿಕ್ಷಣದ ಮಾಧ್ಯಮ ಮಾತೃ ಭಾಷೆಯಾಯಿತು.

೩೦-೬-೧೯೯೪ಳ ರಿಂದ ಅನ್ವಯವಾಗುವಂತೆ ಶಾಲೆಗಳಲ್ಲಿ ಕನ್ನಡ ಮಾಧ್ಯಮ ಅನುಷ್ಠಾನ ಸಮಿತಿಯ ನೇತೃತ್ವ ವಹಿಸಿದ ಡಾ.ಎಚ್ ನರಸಿಂಹಯ್ಯ ಅವರು ಸಾವಧಾನದಿಂದಲೇ ಹೀಗೆ ಹೇಳಿದರು. ಅತ್ಯುತ್ಕೃಷ್ಟ ಮೂಲಭೂತ ಸೌಕರ್ಯಗಳಿವೆ ಎಂದು ಹೇಳಿಕೊಂಡರು ಒಂದೇ ಸಲ ಎಲ್ಲಾ ಶಾಲೆಗಳನ್ನು ಅಧಿಕೃತಗೊಳಿಸಲು ಸಾಧ್ಯವಿಲ್ಲ. ಆದರೆ ಖಂಡಿತವಾಗಿಯೂ ಪ್ರಕ್ರಿಯೆ ಆರಂಭವಾಗಿದೆ ಎಂದು ತಿಳಿಸಿದರು. ಈ ಯೋಜನೆಯ ಅನುಷ್ಠಾಣದ ಬಗ್ಗೆ ಕರ್ನಾಟಕದ ಬಹುತೇಕ ಶಾಲೆಗಳು ಸ್ವಾಗತಿಸಿದವು.

ಎಂ. ವೀರಪ್ಪ ಮೊಯಿಲಿಯವರ ಇನ್ನೊಂದು ಗಮನಾರ್ಹ ಕೊಡುಗೆ ಎಂದರೆ ಸರಕಾರಿ ಗ್ರಂಥಾಲಯಗಳಲ್ಲಿ ಕನ್ನಡ ಪುಸ್ತಕಗಳ ಖರೀದಿಗೆ ಸಂಬಂಧಿಸಿದ್ದು, ೧೯೯೧ರ ನವ್ಹೆಂಬರ್ ೧ರಂದು ಅವರು ಪ್ರಕಟನಾ ಸಂಸ್ಥೆಗಳು ವಿಶ್ವವಿದ್ಯಾಲಯದ ಪ್ರಸಾರಾಂಗಗಳು ಪ್ರಕಟಿಸುವ ಎಲ್ಲಾ ಪುಸ್ತಕಗಳನ್ನು ಕರ್ನಾಟಕ ರಾಜ್ಯ ಗ್ರಂಥಾಲಯ ಇಲಾಖೆಯಿಂದ ಮುಕ್ತವಾಗಿ ಖರೀದಿಸಲಾಗುವುದೆಂದು ಘೋಷಿಸಿದರು. ಈ ನಿಟ್ಟಿನಲ್ಲಿ ಹೆಚ್ಚು ಹೆಚ್ಚು ಕನ್ನಡ ಪುಸ್ತಕಗಳ ಪ್ರಕಟನೆಯನ್ನು ಪ್ರೋತ್ಸಾಹಿಸಲು ಅವರು ಸರಕಾರಕ್ಕೆ ಪೂರೈಸಲಾಗುವ ಪುಸ್ತಕಗಳ ಮೇಲಿನ ರಿಯಾಯತಿಯನ್ನು ಶೇಕಡಾ ೧೦%ಕ್ಕೆ ಇಳಿಸಿದರು.

ಮೊಯಿಲಿಯವರ ಮತ್ತೊಂದು ಮಹತ್ವದ ಸಾಧನೆಯೆಂದರೆ ವೈದ್ಯಕೀಯ ಇಂಜನೀಯರಿಂಗ ಮತ್ತಿತರ ವೃತ್ತಿಪರ ಕೋರ್ಸುಗಳಿಗೆ ಸಾಮಾನ್ಯ ಪ್ರವೇಶ ಪರೀಕ್ಷಾ ಪದ್ಧತಿಯನ್ನು ಅನುಷ್ಠಾನಕ್ಕೆ ತಂದ ಮೊದಲ ಮುಖ್ಯಮಂತ್ರಿಯಾಗಿದ್ದಾರೆ. ಸಾಮಾನ್ಯ ಪ್ರವೇಶ ಪರೀಕ್ಷೆಯು (ಸಿ.ಇ.ಟಿ.) ಎಲ್ಲಾ ವೃತ್ತಿಪರ ಕಾಲೇಜುಗಳ ಎಲ್ಲಾ ಸೀಟುಗಳು ಅರ್ಹತೆಯ ಆಧಾರದ ಮೇಲೆ ಭರ್ತಿಯಾಗಬೇಕು ಎಂಬ ಮಹತ್ವಾಕಾಂಕ್ಷೆ ಹೊಂದಿದ್ದ ಮೊಯಿಲಿಯವರು ವೃತ್ತಿಪರ ಕಾಲೇಜುಗಳಿಗೆ ಹೊಸ ಪ್ರವೇಶ ನಿಯಮಾವಳಿಯನ್ನು ರೂಪಿಸಿದರು. ಸಾಮಾನ್ಯ ಪ್ರವೇಶ ಪರೀಕ್ಷೆಯು ಜಾತಿ, ಧರ್ಮ, ಲಿಂಗ ಬೇಧಗಳನ್ನು ಹೋಗಲಾಡಿಸಲು ಮತ್ತು ದುರ್ಬಲವರ್ಗ, ಮಧ್ಯಮವರ್ಗ ಮತ್ತು ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಸಾಮಾಜಿಕ ನ್ಯಾಯ ಆಧಾರಿತ ಪ್ರವೇಶ ನೀತಿಯನ್ನು ಒದಗಿಸಲು ಈ ಯೋಜನೆಯನ್ನು ಅನುಷ್ಠಾನಕ್ಕೆ ತಂದರು.

೧೯೯೩ ರಿಂದ ಇದು ಕರ್ನಾಟಕದಲ್ಲಿ ಅನುಷ್ಠಾನಗೊಂಡಿತು. ಮತ್ತು ಇಡೀ ದೇಶದಲ್ಲಿ ಪ್ರಥಮ ಬಾರಿಗೆ ಈ ನೀತಿಯನ್ನು ಜಾರಿಗೆ ತಂದ ಕೀರ್ತಿ ವೀರಪ್ಪ ಮೊಯಿಲಿಯವರ ಸರಕಾರಕ್ಕೆ ಸಲ್ಲುತ್ತದೆ. ಈ ಯೋಜನೆಯು ದೇಶದ ಅನೇಕ ರಾಜ್ಯಗಳ ಗಮನ ಸೆಳೆಯಿತು. ಚೀನಾದಂತಹ ದೇಶಗಳು ಇತ್ತ ಗಮನಹರಿಸಿದವು. ಈ ಯೋಜನೆ ಅನುಷ್ಠಾನಗೊಂಡಾಗ ಖಾಸಗಿ ಕಾಲೇಜುಗಳು ವಿರೋಧ ವ್ಯಕ್ತಪಡಿಸಿದಾಗಲೂ ಮೊಯಿಲಿಯವರು ಹಿಂಜರಿಯದೇ ಅನುಷ್ಠಾನಗೊಳಿಸಲು ಕಟ್ಟುನಿಟ್ಟಿನ ಕ್ರಮ ತೆಗೆದುಕೊಂಡರು. ಈ ಮೂಲಕ ಮೊಯಿಲಿಯವರು ಶಿಕ್ಷಣ ಎಲ್ಲಾ ವರ್ಗದ ಜನತೆಗೆ ದೊರೆಯುವಂತೆ ಮಾಡಿದಿರು. ಈ ಯೋಜನೆಯನ್ನು ಸರ್ವೋಚ್ಚನ್ಯಾಯಾಲಯದ ಜಸ್ಟೀಸ್ ಕೃಷ್ಣನ್ ಅವರ ತೀರ್ಪು ಸಿ.ಇ.ಟಿ. ಪದ್ಧತಿಗೆ ವ್ಯಾಪಕ ಬೆಂಬಲ ನೀಡಿತು.

ಮೊಯಿಲಿಯವರು ಶ್ರೀ ಎಸ್. ಬಂಗಾರಪ್ಪನವರ ಮಂತ್ರಿಮಂಡಳದಲ್ಲಿ ಶಿಕ್ಷಣ ಸಚಿವರಾಗಿದ್ದಾಗ ಕರ್ನಾಟಕದ ಶಾಲಾ ಕಾಲೇಜುಗಳಲ್ಲಿ ಶಿಕ್ಷಕರ ಕೊರತೆಯನ್ನು ಮನಗಂಡು ಬಹುಕಾಲದಿಂದಲೂ ನೆನೆಗುದಿಯಲ್ಲಿದ್ದ ಶಿಕ್ಷಕರ ನೇಮಕಾತಿಗೆ ಕ್ರಮಬದ್ದ ಕಾರ್ಯಸಂಹಿತೆ ರೂಪಿಸಿ ಸುಮಾರು ೪೦ ಸಾವಿರಕ್ಕೂ ಹೆಚ್ಚಿನ ವಿವಿಧ ವರ್ಗದ ಶಿಕ್ಷಕರನ್ನು ನೇಮಿಸಿ ದಾಖಲೆ ನಿರ್ಮಿಸಿದರು. ಈ ಅಸಾಧಾರಣ ಪ್ರಮಾಣದ ನೇಮಕಾತಿಯ ಬಗೆಗೆ ಒಂದೂ ಅಪಸ್ವರವು ಕೇಳಿ ಬರಲಿಲ್ಲ. ಎಂದರೆ ಅದು ಎಷ್ಟು ಕ್ರಮಬದ್ದವಾಗಿತ್ತು ಮತ್ತು ನ್ಯಾಯ ಸಮ್ಮತವಾಗಿತ್ತು ಎಂಬುದನ್ನು ಮನಗಾಣಬಹುದಾಗಿದೆ.

ಮೊಯಿಲಿಯವರು ಈ ಹಿಂದೆ ಆರಂಭಿಸಿದ್ದ ಸಂಪೂರ್ಣ ಸಾಕ್ಷರತಾ ಕಾರ್ಯಕ್ರಮದ ಯೋಜನೆಯನ್ನು ರಾಜ್ಯದ ಎಲ್ಲಾ ಜಿಲ್ಲೆಗಳಿಗೆ ವಿಸ್ತರಿಸಿದರು. ಕರ್ನಾಟಕದಲ್ಲಿ ಶಿಕ್ಷಣದಿಂದ ವಂಚಿತರಾದ ಜನರನ್ನು ಅಂದರೆ ೯ರಿಂದ ೩೫ನೇ ವರ್ಷದೊಳಗಿನ ಸುಮಾರು ೮೦ಲಕ್ಷ ಜನರನ್ನು ಸಾಕ್ಷರರನ್ನಾಗಿಸುವ ಯೋಜನೆಯ ಗುರಿ ಹೊಂದಿದ್ದರು. ಈ ಯೋಜನೆಯಂತೆ ಅನೇಕ ಜಿಲ್ಲೆಗಳಿಗೆ ೨ ವರ್ಷದ ಅವಧಿಯಲ್ಲಿ ಇಡೀ ರಾಜ್ಯವ್ಯಾಪಿಯಾಗುವಂತೆ ಜಾರಿಗೊಳಿಸಲಾಯಿತು. ಈ ಸಾಕ್ಷರತಾ ಆಂದೋಲನವು ವೀರಪ್ಪ ಮೊಯಿಲಿಯವರ ಆಡಳಿತ ಅವಧಿಯಲ್ಲಿ ಕರ್ನಾಟಕ ರಾಜ್ಯವನ್ನು ಇಡೀ ರಾಷ್ಟ್ರದಲ್ಲೆ ಸಾಕ್ಷರತಾ ಆಂದೋಲನವನ್ನು ಜಾರಿಗೊಳಿಸಿದ ರಾಜ್ಯವೆಂಬ ಹೆಗ್ಗಳಿಕೆಗೆ ಪಾತ್ರವಾಯಿತು.

ಇದರಿಂದ ಪ್ರಚೋದನೆಗೊಂಡ ಅಂತರಾಷ್ಟ್ರೀಯ ಯುನಿಸೆಪ್ (UNICEF) ಸಂಸ್ಥೆ ಇದನ್ನು ಪ್ರಪಂಚದ ಇತರ ಭಾಗಗಳಿಗೆ ಕಾರ್ಯಗತಗೊಳಿಸಲು ಯೋಜನೆ ರೂಪಿಸಿತು.

ವೀರಪ್ಪ ಮೊಯಿಲಿಯವರು ಮುಖ್ಯಮಂತ್ರಿಯಾಗಿದ್ದಾಗ ರಾಜ್ಯ ಮತ್ತು ಕೇಂದ್ರಗಳ ಸಹಯೋಗದಲ್ಲಿ ಕರಿಹಲಗೆ ಯೋಜನೆ, ಪ್ರಾಥಮಿಕ ಶಿಕ್ಷಣದ ಸಾರ್ವತ್ರಿಕರಣ ಯೋಜನೆಗಳನ್ನು ರೂಪಿಸಿದರು. ಈ ಯೋಜನೆಗಳ ಉದ್ದೇಶ ಸಾರ್ವತ್ರಿಕ ಶಿಕ್ಷಣ ನೀಡುವುದರೊಂದಿಗೆ ಕೊಠಡಿಗಳ ನಿರ್ಮಾಣ, ಶಿಕ್ಷಕರ ಆಯ್ಕೆ, ಶೈಕ್ಷಣಿಕ ಉಪಕರಣಗಳನ್ನು ಒದಗಿಸುವುದಾಗಿದೆ. ಈ ಯೋಜನೆಯ ಫಲದಿಂದ ಗ್ರಾಮೀಣ ಪ್ರದೇಶದಲ್ಲಿ ೧೭೯೯ ಶಿಕ್ಷಕರ ನೇಮಕಾತಿ ೧೯೯೨ರಲ್ಲಿ ೧೨೪೮ ತರಗತಿ ಕೊಠಡಿಗಳನ್ನು ನಿರ್ಮಿಸಲಾಯಿತು. ೧೯೯೩ – ೯೪ರಲ್ಲಿ ೪೮೧೯ ಹೆಚ್ಚುವರಿ ತರಗತಿ ಕೊಠಡಿಗಳನ್ನು ನಿರ್ಮಿಸಲಾಯಿತು. ಮತ್ತು ೧೦೦೦ ದೈಹಿಕ ಶಿಕ್ಷಣ ಶಿಕ್ಷಕರನ್ನು ನೇಮಿಸಿಕೊಳ್ಳಲು ನಿರ್ಧರಿಸಲಾಯಿತು.

ಅಲ್ಪ ಸಂಖ್ಯಾತ ಸಮುದಾಯದವರು ಹೆಚ್ಚು ವಾಸಿಸುವ ಪ್ರದೇಶದಲ್ಲಿ ಅವರ ಮಕ್ಕಳಿಗಾಗಿ 'ಹೊಸ ಹೆಜ್ಜೆ' ಎಂಬ ಯೋಜನೆಯನ್ನು ಅನುಷ್ಠಾನಗೊಳಿಸಲಾಯಿತು. ಈ ಯೋಜನೆ ಅಡಿಯಲ್ಲಿ ಆಹಾರ, ಕ್ಷೀರ, ವಸ್ತ್ರಾಧಾರ ಮತ್ತು ಉಚಿತ ಪುಸ್ತಕ ವಿತರಣಾ ಯೋಜನೆಗಳು ಅನುಷ್ಠಾನಗೊಂಡವು.

ಎಂ. ವೀರಪ್ಪ ಮೊಯಿಲಿಯವರು ಉನ್ನತ ಶಿಕ್ಷಣ ಸಚಿವರಾಗಿದ್ದಾಗ ವಿಶ್ವವಿದ್ಯಾಲಯದ ಪಠ್ಯಕ್ರಮವು ತೀರ ಅವೈಜ್ಞಾನಿಕವಾಗಿದ್ದನ್ನು ಕಂಡು ಅಘಾತಗೊಂಡ ಮೊಯಿಲಿಯವರು ಅಂತಹ ವಿಶ್ವವಿದ್ಯಾಲಯ ಮಂಡಳಿಯ ಸಭೆ ಕರೆದು ದೀರ್ಘ ಚರ್ಚೆಯ ನಂತರ ತಜ್ಞರ ಸಮಿತಿ ರಚಿಸಿ ಮುಂದಿನ ಶೈಕ್ಷಣಿಕ ವರ್ಷದಿಂದಲೇ ಅನುಷ್ಠಾನವಾಗುವಂತೆ ಪ್ರತಿ ವಿಷಯದಲ್ಲೂ ಈ ಕಾಲಘಟ್ಟಕ್ಕೆ ಪ್ರಸ್ತುತವಾದ ಪಠ್ಯಕ್ರಮವನ್ನು ಸಿದ್ದಪಡಿಸಲು ಸೂಚಿಸಲಾಯಿತು. ಈ ಯೋಜನೆಯು ೬ ತಿಂಗಳಲ್ಲಿ ಎಲ್ಲ ವಿಶ್ವವಿದ್ಯಾಲಯದಲ್ಲಿ ಅನುಷ್ಠಾನಗೊಳಿಸಲಾಯಿತು. ವಿಶ್ವವಿದ್ಯಾಲಯದಲ್ಲಿ ಕಾನೂನಿನ್ವಯ ಯಾವುದೇ ವಿಳಂಬವಿಲ್ಲದೆ ಹುದ್ದೆಗಳನ್ನು ತುಂಬಲು ಯೋಜನೆ ರೂಪಿಸಿದರು. ಕಾಲೇಜುಗಳನ್ನು ಬಲಪಡಿಸುವ ಉದ್ದೇಶದಿಂದ ಕೆ.ಪಿ.ಎಸ್.ಸಿ. ಮೂಲಕ ೨೫೭ ಉಪನ್ಯಾಸಕರನ್ನು ನೇಮಿಸಲಾಯಿತು.

ಎಂ. ವೀರಪ್ಪ ಮೊಯಿಲಿಯವರು ೧೯೯೪ರಲ್ಲಿ ರಾಜೀವಗಾಂಧೀ ಆರೋಗ್ಯ ವಿಶ್ವವಿದ್ಯಾಲಯವನ್ನು ಸ್ಥಾಪಿಸಿದರು. ಕರ್ನಾಟಕ ರಾಜ್ಯದಲ್ಲಿ ಆಧುನಿಕ ವೈದ್ಯಕೀಯ ಮತ್ತು ಭಾರತೀಯ ವೈದ್ಯಕೀಯ ಪರಂಪರೆಯ ವ್ಯವಸ್ಥಿತ ಶಿಕ್ಷಣ, ಬೋಧನೆ ಮತ್ತು ಸಂಶೋಧನೆಯ ಅನುಷ್ಠಾನಕ್ಕಾಗಿ ಕರ್ನಾಟಕ ಸರಕಾರವು ಮೈಸೂರಿನಲ್ಲಿ ಆರೋಗ್ಯ ವಿಶ್ವವಿದ್ಯಾಲಯವನ್ನು ಸ್ಥಾಪಿಸಲು ನಿರ್ಧರಿಸಿತು. ವಿಶ್ವವಿದ್ಯಾಲಯದ ಸ್ಥಾಪನೆಗೆ ಮುಂಗಡಪತ್ರದಲ್ಲಿ ೨೫ ಲಕ್ಷ ರೂಪಾಯಿ ಅನುದಾನ ಒದಗಿಸಿತು. ಇದರ ಒಂದು ಪರಿಣಾಮವಾಗಿ ನಂತರದಲ್ಲಿ ಬೆಂಗಳೂರಿನಲ್ಲಿ ವಿಶ್ವವಿದ್ಯಾಲಯ ಆರಂಭವಾಯಿತು. ಹುಬ್ಬಳ್ಳಿ, ಬಳ್ಳಾರಿ ವೈದ್ಯಕೀಯ ಕಾಲೇಜುಗಳನ್ನು ಸ್ವಾಯತ್ ಸಂಸ್ಥೆಗಳಾಗಿ ಆರಂಭಿಸಲಾಯಿತು. ಮತ್ತು ಸರಕಾರದ ಅಧೀನದಲ್ಲಿ ೪ ವೈದ್ಯಕೀಯ ೧ ದಂತ ವೈದ್ಯಕೀಯ ಕಾಲೇಜನ್ನು ಆರಂಭಿಸಲಾಯಿತು. ರಾಜ್ಯದಲ್ಲಿ ವೈದ್ಯಕೀಯ ಶಿಕ್ಷಣ ಗುಣಮಟ್ಟ ಸುಧಾರಿಸಲು ಮೊಯಿಲಿಯವರ ಸರಕಾರ ಕ್ರಮ ತೆಗೆದುಕೊಂಡಿತು.

ಮೊಯಿಲಿಯವರ ಆಡಳಿತದ ಅವಧಿಯಲ್ಲಿ ೧೯೯೪ ಅಕ್ಟೋಬರ್‌ನಲ್ಲಿ ಬೆಳಗಾವಿಯಲ್ಲಿ ವಿಶ್ವೇಶ್ವರಯ್ಯಾ ತಾಂತ್ರಿಕ ವಿಶ್ವವಿದ್ಯಾಲಯ ಸ್ಥಾಪಿಸಲು ನಿರ್ಧರಿಸಿತು. ಮತ್ತು ಪೊಲಿಟೆಕ್‌ನಿಕ್ ಇಂಜನೀಯರಿಂಗ್ ಕಾಲೇಜುಗಳಲ್ಲಿ ೫೦ ವೃತ್ತಿಪರ ಕೋರ್ಸುಗಳನ್ನು ಆರಂಭಿಸಲಾಯಿತು. ೧೯೯೨-೯೩ರಲ್ಲಿ ಎಂ.ಬಿ.ಎ. ಮತ್ತು ಬಿ.ಬಿ.ಎಮ್. ಕಾಲೇಜುಗಳಲ್ಲಿ ಇಂಟರನ್ಯಾಶನಲ್ ಟ್ರೇಡ್, ಎಕ್ಸಪೋರ್ಟ, ಇಂಪೋರ್ಟ ಮ್ಯಾನೇಜಮೆಂಟಿಗೆ ಸಂಬಂಧಿಸಿದಂತೆ ಹೊಸ ಕೋರ್ಸುಗಳ ಆರಂಭಕ್ಕೆ ಅನುಮತಿ ನೀಡಲಾಯಿತು. ಮತ್ತು ಪ್ಯಾಷನ್ ಟೆಕ್ನಾಲಾಜಿ ಮತ್ತು ಹೊಟೇಲ್ ಮ್ಯಾನೇಜಮೆಂಟ್ ಕೋರ್ಸುಗಳನ್ನು ತೆರೆಯಲು ವಿವಿಧ ಕಾಲೇಜುಗಳಿಗೆ ಅನುಮತಿ ನೀಡಲಾಯಿತು. ಹಾಗೂ ರಾಜ್ಯದಲ್ಲಿ ೧೨೯ ಖಾಸಗಿ ಐ.ಟಿ.ಐ. ಕಾಲೇಜುಗಳಿಗೆ ಅನುದಾನ ವಿಸ್ತರಿಸುವ ನಿರ್ಧಾರವನ್ನು ಸರಕಾರ ಕೈಗೊಂಡಿತು. ಇದರಿಂದ ಗ್ರಾಮೀಣ ಪ್ರದೇಶದ ಖಾಸಗಿ ಐ.ಟಿ.ಐ. ಕಾಲೇಜುಗಳಿಗೆ ಅನುಕೂಲವಾಯಿತು. ಗ್ರಾಮೀಣ ಮಟ್ಟದಲ್ಲಿ ವಿದ್ಯಾರ್ಥಿಗಳಿಗು ವೃತ್ತಿಪರ ಕೋರ್ಸು ಸೇರಲು ಸಹಾಯಕವಾಯಿತು.

ಹೀಗೆ ವೀರಪ್ಪ ಮೊಯಿಲಿಯವರು ಶೈಕ್ಷಣಿಕ ಅಭಿವೃದ್ಧಿಯ ರೂವಾರಿಗಳಾಗಿ ಶಿಕ್ಷಣದಲ್ಲಿ ಹೊಸತನವನ್ನು ತಂದು ರಾಜ್ಯದ ಅಭಿವೃದ್ಧಿಗೆ ಶಿಕ್ಷಣವು ತಳಹದಿಯಾಗುವಂತೆ ಪ್ರಮುಖ ನಿರ್ಧಾರಗಳನ್ನು ತೆಗೆದುಕೊಂಡರು. ಮತ್ತು ಶೈಕ್ಷಣಿಕ ಕಾಯಿದೆಗಳನ್ನು ವೃತ್ತಿಪರ

ಶಿಕ್ಷಣ ನೀತಿಯನ್ನು ಸರ್ಟಿಫಿಕೇಟ್ ಕೋರ್ಸುಗಳನ್ನು ಆರಂಭಿಸಿದರು. ಗೋಕಾಕ ಸಮೀಪದ ಅರಭಾಂವಿಯಲ್ಲಿ ತೋಟಗಾರಿಕಾ ಸಂಶೋಧನಾ ಕೇಂದ್ರ ಆರಂಭಿಸಿದ್ದಲ್ಲದೆ ಗಾಂಧೀಜಿಯವರು ಪ್ರತಿಪಾದಿಸಿದ ಜೀವನ ಶಿಕ್ಷಣ, ರಾಜೀವ ಗಾಂಧೀಯವರು ರೂಪಿಸಿದ್ದ ಹೊಸರಾಷ್ಟ್ರೀಯ ಶಿಕ್ಷಣ ನೀತಿ ಎರಡನ್ನೂ ಸಮನ್ವಯಗೊಳಿಸಿ ಅನುಷ್ಠಾನಗೊಳಿಸಿದ ಕೀರ್ತಿ ಮೊಯಿಲಿಯವರಿಗೆ ಸಲ್ಲುತ್ತದೆ.

ಎಂ. ವೀರಪ್ಪ ಮೊಯಿಲಿಯವರು ಕರ್ನಾಟಕದ ಅನೇಕ ನಗರಗಳಿಗೆ ಮೂಲಭೂತ ಸೌಕರ್ಯ, ಬಡತನ ನಿರ್ಮೂಲನೆ, ಪರಿಸರ ನಿರ್ವಹಣೆ ಮುಂತಾದ ಯೋಜನೆಗಳನ್ನು ಜಾರಿಗೆ ತರವುದರೊಂದಿಗೆ ಪ್ರಾದೇಶಿಕ ಅಸಮತೋಲನ ಸರಿಪಡಿಸಲು ಪ್ರಯತ್ನಿಸಿದ್ದಾರೆ. ವಿರೇಂದ್ರ ಪಾಟೀಲರ ಸರಕಾರದಲ್ಲಿ ಸಚಿವರಾಗಿದ್ದಾಗ ೧೯೯೦ರಲ್ಲಿ ಹೈದರಾಬಾದ ಕರ್ನಾಟಕ ಅಭಿವೃದ್ಧಿ ಮಂಡಳಿಯು ಶಾಸನಬದ್ಧ ಸಂಸ್ಥೆಯಾಗಿ ರಚನೆಯಾಯಿತು. ಆ ಸಂದರ್ಭದಲ್ಲಿ ೧೦ ಕೋಟಿ ರೂ. ಅನುದಾನ ನೀಡಿ ಸಂಸ್ಥೆಯ ಸ್ಥಾಪನೆಗೆ ಯೋಜನೆ ಹಾಕಿದರು. ಮತ್ತು ವಿವಿಧ ಹಂತಗಳಲ್ಲಿ ೧೯೯೦ರಲ್ಲಿ ೪೦ ಕೋಟಿ ೧೯೯೧ರಲ್ಲಿ ೬೦ಕೋಟಿ ರೂಪಾಯಿ ಬಿಡುಗಡೆಗೊಳಿಸಿದರು. ಆ ಪ್ರಾದೇಶಿಕ ಸಮಸ್ಯೆಗಳನ್ನು ನಿವಾರಿಸಲು ಪಣ ತೊಟ್ಟರು. ಮೊಯಿಲಿಯವರು ಮುಖ್ಯಮಂತ್ರಿಯಾದ ಬಳಿಕ ಹೈದರಾಬಾದ್ ಕರ್ನಾಟಕ ಅಭಿವೃದ್ಧಿ ಮಂಡಳಿಗೆ ೧೯೯೨-೯೩ರಲ್ಲಿ ೮೦-೨೨ ಕೋಟಿ ರೂಪಾಯಿ ೧೯೯೩-೯೪ರಲ್ಲಿ ೧೧೬ಕೋಟಿ ರೂಪಾಯಿ ನೀಡಿದರು. ಈ ಮಂಡಳಿಯ ವಿವಿಧ ಅಭಿವೃದ್ಧಿಗಳ ಅನುಷ್ಠಾನಗಳ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.

ಕರ್ನಾಟಕ ರಾಜ್ಯದ ಮಲೆನಾಡು ಪ್ರದೇಶವು ಅನೇಕ ಮೂಲಭೂತ ಸಮಸ್ಯೆಗಳಿಂದ ಬಳಲುತ್ತಿರುವುದನ್ನು ಕಂಡು ಮೊಯಿಲಿಯವರು ಯೋಜನಾ ಸಚಿವರಾಗಿ ಮಲೆನಾಡು ಅಭಿವೃದ್ಧಿ ಮಂಡಳಿ ರಚಿಸಿದರು. ಈ ಮಂಡಳಿಗೆ ಅಗತ್ಯವಾದ ರಸ್ತೆ, ಸೇತುವೆ, ವಿದ್ಯುತ್ ಮುಂತಾದ ಮಲೆನಾಡಿನ ಪ್ರವಾಹದಂತಹ ಸಮಸ್ಯೆಗಳನ್ನು ಬಗೆಹರಿಸಲು ೧೯೯೪-೯೫ರಲ್ಲಿ ೩೫ಕೋಟಿ ಅನುದಾನ ನೀಡಿ ಯೋಜನೆಗಳ ಅನುಷ್ಠಾನಗೊಳಿಸಿದರು.

ಎಂ. ವೀರಪ್ಪ ಮೊಯಿಲಿಯವರು ಯೋಜನಾ ಸಚಿವರಾಗಿದ್ದಾಗ ರಾಜ್ಯದ ಗಡಿಭಾಗದ ತಾಲೂಕಗಳ ಅಭಿವೃದ್ಧಿಗಾಗಿ ಗಡಿ ಪ್ರದೇಶ ಅಭಿವೃದ್ಧಿ ಯೋಜನೆಯನ್ನು ಆರಂಭಿಸಿದರು. ರಾಜ್ಯದಲ್ಲಿ ವ್ಯಾಪಕವಾಗಿ ಸಾಮಾಜಿಕ ಆರ್ಥಿಕ ಸಮಸ್ಯೆಯಿಂದ ಬಳಲುವ

ಜಿಲ್ಲೆಗಳಲ್ಲಿ ಮುಖ್ಯವಾಗಿ ರಾಯಚೂರು ಬಳ್ಳಾರಿ ಮತ್ತು ತುಮಕೂರ ಗಡಿಭಾಗದ ತಾಲೂಕುಗಳಿಗೆ ತಲಾ ೯೦ ಲಕ್ಷದಂತೆ ೨೦ ಕೋಟಿರೂಪಾಯಿ ಅನುದಾನವನ್ನು ದುರ್ಬಲವರ್ಗದವರಿಗೆ ಯೋಜನೆ ಹಾಕಿಕೊಂಡು ಮತ್ತು ನೆರೆರಾಜ್ಯಗಳ ನಕ್ಸಲ್ ದಾಳಿಯನ್ನು ತೆಡೆಯಲು ಯೋಜನೆ ಹಾಕಿಕೊಂಡರು. ಮತ್ತು ಆ ಪ್ರದೇಶದ ವಿದ್ಯುತ್, ರಸ್ತೆಗಳ ಸೇತುವೆಗಳ ಇತ್ಯಾದಿಗಳ ನಿರ್ಮಾಣಕ್ಕಾಗಿ ಗಡಿಪ್ರದೇಶ ಅಭಿವೃದ್ಧಿ ಯೋಜನೆಗೆ ೫ ಕೋಟಿ ರೂಪಾಯಿಗಳನ್ನು ನೀಡಲಾಗಿದೆ.

ಎಂ. ವೀರಪ್ಪ ಮೊಯಿಲಿಯವರು ಜನಸಮುದಾಯದ ಸ್ನೇಹಿಪರ ಚಿಂತಕರಾಗಿ ಹಲವು ಯೋಜನೆಗಳಿಗೆ ಚಾಲನೆ ನೀಡಿದ ಶ್ರೇಯಸ್ಸು ಇವರಿಗೆ ಸಲ್ಲುತ್ತದೆ. ಆರ್ಥಿಕ ಸಚಿವರಾಗಿ ತಮ್ಮ ಅಧಿಕಾರ ಅವಧಿಯಲ್ಲಿ ರಾಜ್ಯದ ಸಂಪತ್ತನ್ನು ಉಳಿಸಿದ್ದಲ್ಲದೆ ಹಲವು ಯೋಜನೆಗಳ ಅನುಷ್ಠಾನಕ್ಕಾಗಿ ಅಪಾರ ಅನುದಾನ ನೀಡಿದರು. ಕರ್ನಾಟಕದ ಇತಿಹಾಸದಲ್ಲಿ ಪ್ರಪ್ರಥಮಬಾರಿಗೆ ಏಕ ವ್ಯಕ್ತಿ ವೇತನ ಆಯೋಗವನ್ನು ರಚಿಸಿದರು. ಸರಕಾರಿ ನೌಕರರಿಗೆ ಯಾವುದೇ ವಿಳಂಬವಿಲ್ಲದೆ ಮೊಯಿಲಿಯವರು ಎಲ್ಲಿ ಸಂಘ ಸಂಸ್ಥೆಗಳು ಹಾಗೂ ಸರಕಾರದ ಒಪ್ಪಿಗೆಯೊಂದಿಗೆ ವೇತನ ಆಯೋಗದ ಶಿಫಾರಸ್ಸನ್ನು ಅನುಷ್ಠಾನಗೊಳಿಸಿದರು. ಗುಂಡುರಾವ ಅವರ ಆಡಳಿತ ಅವಧಿಯಲ್ಲಿ ಆರ್ಥಿಕ ಮತ್ತು ಯೋಜನಾ ಖಾತೆಯ ಸಚಿವರಾಗಿ ಮೊಯಿಲಿಯವರು ಕರ್ನಾಟಕದ ಅಭಿವೃದ್ಧಿಗಾಗಿ ಹಿಂದುಳಿದ ವರ್ಗದವರ ಏಳಿಗೆಗಾಗಿ ಕರ್ನಾಟಕ ಹಿಂದುಳಿದ ಮತ್ತು ಅಲ್ಪ ಸಂಖ್ಯಾತರ ಅಭಿವೃದ್ದಿ ನಿಗಮ ನಿಯಮಿತವನ್ನು ೧೯೭೭ರಲ್ಲಿ ಸ್ಥಾಪಿಸಿದರು. ಹಿಂದುಳಿದ ವರ್ಗಗಳಿಗೆ ಸೇರಿದ ಜನರಿಗೆ ಗಾಮೋದ್ಯೋಗ ಗ್ರಾಮೀಣ ಕರಕುಶಲಗಳಿಗೆ ಗುಡಿ ಕೈಗಾರಿಕೆಯನ್ನು ಪ್ರೋತ್ಸಾಹಿಸಲು ಈ ನಿಗಮದಡಿಯಲ್ಲಿ ಫಲಾನುಭವಿಗಳಿಗೆ ೩೦%ರಷ್ಟು ಹೂಡಿಕೆ ಹಣ ನೀಡಿಲಾಗಿದೆ "ಬಡವರು ಮತ್ತು ಅನಾಥರು, ಶೋಷಿತರು, ನೇಕಾರರು ಬಡಿಗೆಗಳು, ಚಮ್ಮಾರರು ಹಾಗೂ ಅಂತಹ ಕಠಿಣ ಪರಿಶ್ರಮ ಜನರು ಸಣ್ಣಪುಟ್ಟ ವ್ಯಾಪಾರಿಗಳು ಗುಡಿ ಕೈಗಾರಿಕಾ ನಿರತ ಪುರುಷರು ಮಹಿಳೆಯರು, ರೈತರು, ಬಡ ವಿದ್ಯಾರ್ಥಿಗಳು ಒಟ್ಟಿನಲ್ಲಿ ಪ್ರಾಮಾಣಿಕ ಬದುಕನ್ನು ಬಯಸುವವರೆಲ್ಲಾ ಎಲ್ಲಾ ವಿಧದ ಸಹಾಯಗಳಿಗೆ ಅರ್ಹರಾಗಿದ್ದಾರೆ[೬]" ಎಂದು ಮೊಯಿಲಿಯವರು ದುರ್ಬಲ ವರ್ಗದವರ ಏಳಿಗೆಗಾಗಿ ಅನೇಕ ಯೋಜನೆಗಳನ್ನು ರೂಪಿಸಿ ಅನುಷ್ಠಾನಗೊಳಿಸಿದರು.

ಚಲನಚಿತ್ರ ಮಾಧ್ಯಮವು ಹೆಚ್ಚು ಹೆಚ್ಚು ಬೆಳೆಯಬೇಕು ಎಂದು ಮೊಯಿಲಿಯವರು ಈ ಹಿಂದೆ ಸರಕಾರ ಆರಂಭಿಸಿದ ಚಲನಚಿತ್ರಗಳಿಗೆ ಸಹಾಯಧನ ಯೋಜನೆ ಕಾರ್ಯಕ್ರಮವನ್ನು ಹೆಚ್ಚು ಆರ್ಥಿಕ ಸಹಾಯ ಧನ ನೀಡುವ ಮೂಲಕ ಚಲನಚಿತ್ರ ರಂಗವನ್ನು ಬಲಪಡಿಸಲು ಆ ಯೋಜನೆಯನ್ನು ಅನುಷ್ಠಾನಗೊಳಿಸಿದರು. ಈ ಯೋಜನೆಯನ್ನು ಮೊಯಿಲಿಯವರು ಇತರ ಭಾಷೆಗಳ ಚಲನ ಚಿತ್ರಗಳಗೂ ವಿಸ್ತರಿಸಿದರು ಆದರೆ ಈ ಚಲನ ಚಿತ್ರಗಳು ಕರ್ನಾಟಕದಲ್ಲಿ ಮಾತ್ರ ಚಿತ್ರೀಕರಣಗೊಂಡಿರಬೇಕು. ೧೯೮೦ರಲ್ಲಿ ಮಂಗಳೂರು ಮತ್ತು ಗುಲ್ಬರ್ಗಾ ವಿಶ್ವವಿದ್ಯಾಲಯ ಸ್ಥಾಪನೆಯಲ್ಲಿ ಮೊಯಿಲಿಯವರು ಅತ್ಯಂತ ಮುತುವರ್ಜಿವಹಿಸಿದರು. ಈ ವಿಶ್ವವಿದ್ಯಾಲಯಗಳ ಕ್ಯಾಂಪಸ ಅಭಿವೃಧಿಗಾಗಿ ಸಾಕಷ್ಟು ಅನುದಾನ ಒದಗಿಸಿದರಲ್ಲದೆ, ಮೈಸೂರಿನಲ್ಲಿ ಜಯಚಾಮರಾಜೇಂದ್ರ ಅಕೆಡೆಮಿ ಆಫ್ ವ್ಹಿಜುವಲ್ ಆರ್ಟ್ಸ ಮತ್ತು ಟೆಕ್ನಿಕಲ್ ಇನ್ಸ್ಟಿಟ್ಯೂಟ್ ಸ್ಥಾಪಿಸಿದರು. ಮುಂದೆ ಈ ಸಂಸ್ಥೆಗಳು ಮೈಸೂರು ವಿಶ್ವವಿದ್ಯಾಲಯದೊಡನೆ ವಿಲೀನಗೊಂಡವು. ಮೊಯಿಲಿಯವರು ಅರ್ಥ ಸಚಿವರಾಗಿದ್ದಾಗ ೧೯೮೧ರಲ್ಲಿ ಬಜೆಟ್ಟಿನ ಭಾಷಣವನ್ನು ಪ್ರಪ್ರಥಮವಾಗಿ ಕನ್ನಡದಲ್ಲಿ ಮಾಡಿ ದಾಖಲೆ ನಿರ್ಮಿಸಿದರು. ಹೀಗೆ ಮೊಯಿಲಿಯವರು ಜಾಣತನದಿಂದ ಸಚಿವರಾಗಿ ಕಾರ್ಯ ನಿರ್ವಸುತ್ತಿದ್ದರಿಂದ ಅವರಿಗೆ ಹೆಚ್ಚುವರಿಯಾಗಿ ಕಾನೂನು ಸಂಸದೀಯ ವ್ಯವಹಾರ, ಯೋಜನೆ, ವಾರ್ತಾ, ಪ್ರಾವಾಸೋದ್ಯಮ, ಯುವಜನಸೇವೆ, ವಾಣಿಜ್ಯ ಮತ್ತು ಕೈಗಾರಿಕೆ ಖಾತೆಗಳನ್ನು ನೀಡಲಾಯಿತು. ಇದು ಅವರ ಕಾರ್ಯದಕ್ಷತೆಗೆ ನಿದರ್ಶನವಾಗಿದೆ.

ಕರ್ನಾಟಕದಲ್ಲಿ ನಿರಾವರಿ ಸೌಲಭ್ಯಗಳ ಕೊರತೆ ಅತ್ಯಂತ ಕಡಿಮೆ ಮಟ್ಟದಲ್ಲಿ ಇದ್ದ ಸಂದರ್ಭದಲ್ಲಿ ಬಂಗಾರಪ್ಪ ಮುಖ್ಯಮಂತ್ರಿಯಾಗಿದ್ದಾಗ ಅನುಷ್ಠಾನಗೊಂಡಿರುವ ನೀರಾವರಿಯಲ್ಲಿಯ ಹೂಡಿಕೆಯ ಮೊತ್ತವನ್ನು ಹೆಚ್ಚಿಸಿದರು. ೧೯೯೪ರಲ್ಲಿ ವಿಶ್ವಬ್ಯಾಂಕಿನ ಸಹಕಾರದೊಂದಿಗೆ ನೀರಾವರಿ ನಿಗಮದ ಪರಿಕಲ್ಪನೆಯನ್ನು ರೂಪಿಸಿದರು. ಇದರನ್ವಯ ಮೊಯಿಲಿಯವರು ಕೃಷ್ಣಾ ಭಾಗ್ಯಜಲ ನಿಗಮವನ್ನು ಸ್ಥಾಪಿಸಿದರು. ಇದರಡಿಯಲ್ಲಿ ಸಾರ್ವಜನಿಕರಿಂದ ಸಂಚಿತ ನಿಧಿಯನ್ನು ಸ್ಥಾಪಿಸಿ ೨೧೧೯-೯೨ ಕೋಟಿ ರೂಪಾಯಿ ಸಂಗ್ರಹಿಸಿ ನೀರಾವರಿ ಯೋಜನೆಗಳಿಗೆ ಈ ನಿಧಿಯನ್ನು ಬಳಕೆಮಾಡಲು ನಿರ್ಧರಿಸಿದರು. ಮೊಯಿಲಿಯವರ ಈ ಚಾಣಾಕ್ಷತೆಯನ್ನು ಭಾರತೀಯ ರಿಜರ್ವ ಬ್ಯಾಂಕ್ ಮತ್ತು ವಿಶ್ವಬ್ಯಾಂಕ್ ಶ್ಲ್ಯಾಘಿಸಿದವು. ಇದರ ಫಲವಾಗಿ ೧೯೯೪ರಲ್ಲಿ ೫.೯ ಲಕ್ಷ ಹೆಕ್ಟೇರ್ ಜಮೀನಿಗೆ ೫೪೪೮-೪೯ ಕೋಟಿ ರೂಪಾಯಿಯನ್ನು ನೀರಾವರಿ ಯೋಜನೆಗಳಿಗೆ ಸಮ್ಮತಿಸಲಾಯಿತು.

ಮೊಯಿಲಿಯವರು ನೀರಾವರಿಗೆ ಹೆಚ್ಚಿನ ಸೌಲಭ್ಯ ನೀಡುವ ಸಲುವಾಗಿ ೧೯೨೯ರಲ್ಲಿ ಆರಂಭಗೊಂಡ ಬಾಗೂರು ನವಿಲೆ ಸುರಂಗ ಯೋಜನೆ ನೆನೆಗುದಿಗೆ ಬಿದ್ದಿರುವುದನ್ನು ಕಂಡು ಅದನ್ನು ಪೂರ್ಣಗೊಳಿಸುವಲ್ಲಿ ಯಶಸ್ವಿಯಾದರು. ಈ ಯೋಜನೆಯು ಸುಮಾರು ೨೧.೧೭ಕಿ.ಮೀ ವಿಸ್ತಾರದ ಸುರಂಗದ ನಾಲೆಯಾಗಿದ್ದು ಹಾಸನ, ತುಮಕೂರು ಮಂಡ್ಯ ಜಿಲ್ಲೆಗಳಿಗೆ ವರವಾಯಿತು. ಅವರ ಕಠಿಣ ಪರಿಶ್ರಮದಿಂದ ಸುಮಾರು ೧೪ ವರ್ಷಗಳ ಕಾಲ ನೆನೆಗುದಿಗೆ ಬಿದ್ದಿದ್ದ ಯೋಜನೆಯನ್ನು ಪೂರ್ಣಗೊಳಿಸಿ ರೈತರಿಗೆ ಇದರ ಪ್ರಯೋಜನ ನೀಡಿದರು.

ಮೊಯಿಲಿಯವರು ಮಂಡ್ಯ ಜಿಲ್ಲೆಯ ಕೆ.ಆರ್.ಪೇಟೆ ತಾಲೂಕಿನಲಿ ಹೇಮಾವತಿ ಜಲಾಶಯಕ್ಕೆ ೧೫.೨ ಕಿ.ಮೀ. ಎಡದಂಡೆ ಕಾಲುವೆ ನಿರ್ಮಿಸಿ ೪೦೦ ಮೀಟರ ಸುರಂಗವನ್ನು ಕೊರೆದು ಚಟ್ಟಮಗೆರೆ ಸುರಂಗ ಯೋಜನೆಯನ್ನು ಮಾಡಿ ಅಲ್ಲಿರುವ ೪೮೫೮೦ ಹೆಕ್ಟೇರ ಪ್ರದೇಶದ ಭೂಮಿಗೆ ನೀರಾವರಿ ಸೌಲಭ್ಯ ಒದಗಿಸಿದರು.

೧೯೮೩ರಲ್ಲಿ ಶಂಕು ಸ್ಥಾಪನೆಯಾಗಿದ್ದ ಆಲಮಟ್ಟಿ ಆಣೆಕಟ್ಟು ೧೯೯೦ರವರೆಗೂ ಈ ಯೋಜನೆಯ ಕಾಮಗಾರಿ ಆರಂಭವಾಗಿರಲಿಲ್ಲ. ಮೊಯಿಲಿಯವರು ತಮ್ಮ ಸರಕಾರದ ಅವಧಿಯಲ್ಲಿ ಯೋಜನಾ ಆಯೋಗ ಮತ್ತು ಪರಿಸರ ಸಚಿವಾಲಯದಿಂದ ಮಂಜೂರು ಪಡೆದು ಸುಮಾರು ೫೨೭ ಮೀಟರ್ ಎತ್ತರ ಏರಿಸಲು ಗೇಟ ಕಮೀಟಿಯ ಅನುಮತಿ ಪಡೆದರು. ಈ ಯೋಜನೆಯನ್ನು ಯಾವುದೇ ವಿಳಂಬವಿಲ್ಲದೆ ಪುನರಾರಂಭಿಸಿದರು.

ಮೊಯಿಲಿಯವರು ಕರ್ನಾಟಕದ ಸಮಗ್ರ ಅಭಿವೃದ್ಧಿಗಾಗಿ ನೀರಾವರಿ ಯೋಜನೆಯನ್ನು ಅನುಷ್ಠಾನಗೊಳಿಸಿ ಕರ್ನಾಟಕದ ಆರ್ಥಿಕ ಅಭಿವೃದ್ಧಿಯನ್ನು ಕೃಷಿ ಕ್ಷೇತ್ರದಿಂದ ಪಡೆಯಬಹುದೆಂದು ಭಾವಿಸಿದರು. ಅಂತೆಯೇ ಅವರು ರೈತರಿಗೆ ಅನುಕೂಲವಾಗುವಂತಹ ನೀರಾವರಿ ಯೋಜನೆಗಳಿಗೆ ಹೆಚ್ಚು ಹೆಚ್ಚು ಅನುದಾನ ನೀಡಿ ರೈತರಿಗೆ ಆಶಾಕಿರಣವಾದರು.

ರಾಷ್ಟ್ರದಲ್ಲಿ ಮಹಿಳೆಯರು ಗೌರವಯುತವಾಗಿ ಜೀವಿಸಬೇಕೆಂಬ ಆಶೆಯಿಂದಾ ಅವರಿಗಾಗಿ ಮೊಯಿಲಿಯವರು ಅನೇಕ ಕಾಯಿದೆಗಳನ್ನು ಜಾರಿಗೆ ತಂದರು. ಮುಖ್ಯವಾಗಿ ಮಹಿಳಾ ಮೀಸಲಾತಿ ಮಸೂದೆ, ಹಿಂದೂ ಉತ್ತರಾಧಿಕಾರತ್ವ ಕಾಯಿದೆ, ಪಂಚಾಯತ್ ರಾಜ್ಯ ಸಂಸ್ಥೆಗಳಲ್ಲಿ ಮಹಿಳೆಯರಿಗೆ ಮೀಸಲಾತಿ, ಮಹಿಳಾ ಸಮೃದ್ಧಿ ಯೋಜನೆ ಮುಂತಾದ

ಯೋಜನೆಗಳನ್ನು ಮಹಿಳೆಯರ ಸಬಲೀಕರಣಕ್ಕಾಗಿ ಮತ್ತು ಸಹಾಯಧನದಂತಹ ಯೋಜನೆಗಳನ್ನು ಜಾರಿಗೆ ತಂದರು. ಕರ್ನಾಟಕ ಸರಕಾರವು ವೀರಪ್ಪ ಮೊಯಿಲಿಯವರ ಅಧಿಕಾರಾವಧಿಯಲ್ಲಿ ೧೯೯೪ನ್ನು ರೇಷ್ಮೆ ಉದ್ಯಮಶೀಲ ವರ್ಷವನ್ನಾಗಿ ಘೋಷಿಸಿತು. ಈ ಹಿಂದೆ ಅನಾಥ ಮಹಿಳೆಯರಿಗೆ ನೀಡುತ್ತಿದ್ದ ಮಾಸಿಕ ೫೦ ರೂಪಾಯಿ ಪಿಂಚಣಿಯನ್ನು ೭೫ ರೂಪಾಯಿಗಳಿಗೆ ಏರಿಸಲು ನಿರ್ಧರಿಸಿತು. ಮಹಿಳೆಯರಿಗೆ ಹೆರಿಗೆ ಭತ್ಯೆಯ ಸಹಾಯಧನ ಸೀರೆಗಳನ್ನು, ಮಕ್ಕಳಿಗೆ ಪೌಷ್ಟಿಕ ಆಹಾರವನ್ನು ನೀಡಲಾಯಿತು.

ಮೊಯಿಲಿಯವರ ಸರಕಾರ ಮಹಿಳೆಯರ ಉದ್ಧಾರಕ್ಕಾಗಿ ಕೈಗೊಂಡ ಕೆಲವು ನಿರ್ಣಯಗಳು

೧) "ಅನಧೀಕೃತ ಬೇಸಾಯವನ್ನು ಸಕ್ರಮಗೊಳಿಸಿ ಈ ಜಮೀನನ್ನು ಪತಿ ಮಾರಾಟ ಮಾಡದಂತೆ ಪತಿ-ಪತ್ನಿಯ ಜಂಟಿ ಹೆಸರಿನಲ್ಲಿ ಜಮೀನು ವಿತರಣಾ ಪತ್ರ ನೀಡಿಕೆ ಸಹಿತ ಮಹಿಳಾ ಬೇಸಾಯಗಾರರಿಗೆ ಆಧ್ಯತೆ ನಿಡಲಾಯಿತು

೨) ಸೂಕ್ತ ತಿದ್ದುಪಡಿಯೊಂದಿಗೆ ಭೂಸುಧಾರಣಾ ಕಾಯಿದೆ ಅನ್ವಯದ ಹೆಚ್ಚುವರಿ ಜಮೀನಿನಲ್ಲಿ ೫೦% ರಷ್ಟು ಮಹಿಳೆಯರಿಗೆ ವಿತರಣೆ

೩) ಭೂ ಸುಧಾರಣಾ ಕಾಯಿದೆ ಅನ್ವಯ ಜಮೀನನ್ನು ಪರಿವರ್ತನೆಗೊಳಿಸಿ ಮಹಿಳೆಯನ್ನು ಆಸಕ್ತರೆಂದು ಪರಿಗಣಿಸಿ ಪತಿ-ಪತ್ನಿಯರಿಬ್ಬರ ಜಂಟಿ ಹೆಸರಿನಲ್ಲಿ ಪರಿವರ್ತನೆಯನ್ನು ದಾಖಲಿಸಿ ಕಾಯಿದೆಗೆ ಸೂಕ್ತ ತಿದ್ದುಪಡಿ

೪) ಕಂದಾಯ ಇಲಾಖೆಯ ವ್ಯಾಪ್ತಿಯಲ್ಲಿ ಬರುವ ವಿವಿಧ ಸಮಿತಿಗಳಲ್ಲಿ ಮಹಿಳೆಯರಿಗೆ ಸಾಕಷ್ಟು ಪ್ರಾತಿನಿಧ್ಯ.

೫) ಶಿಕ್ಷಕರ ನೇಮಕಾತಿಯಲ್ಲಿ ಮಹಿಳೆಯರಿಗೆ ೫೦%ರಷ್ಟು ಮೀಸಲಾತಿಯನ್ನು ಒದಗಿಸಿದರು[೫]"

ಮಹಿಳೆಯರಿಗೆ ಮೊಯಿಲಿಯವರ ಸರಕಾರ ಕಾನೂನಿನಡಿಯಲ್ಲಿ ಅವರ ರಕ್ಷಣೆಗೆ ಮತ್ತು ಸಾಮಾಜಿಕ ಭದ್ರತೆಗೆ ವಿಶೇಷವಾದ ಕಾಳಜಿವಹಿಸಿತು. ಮೊಯಿಲಿಯವರು ನ್ಯಾಯವಾದಿಯಾಗಿ ಮತ್ತು ಸಾಮಾಜಿಕ ಭದ್ರತೆಗೆ ವಿಶೇಷವಾದ ಕಾಳಜಿ ವಹಿಸಿದರು. ಅಂತೆಯೇ ಅಳಿಯ ಸಂತಾನ ಕುಟುಂಬಗಳ ವಿಚ್ಛೇದನ ಪ್ರಕರಣಕ್ಕೆ ತಿದ್ದುಪಡಿ ತಂದು

ಅಳಿಯ ಸಂತಾನಕ್ಕೆ ಕುಟುಂಬಕ್ಕೆ ಸೇರಿದ ದೌರ್ಜನ್ಯ ಕ್ರೌರ್ಯವನ್ನು ತಡೆಗಟ್ಟಲು ಅವರು ಶಾಸಕರಾಗಿ, ಸಚಿವರಾಗಿ, ಮುಖ್ಯಮಂತ್ರಿಯಾಗಿ ಇಂತಹ ಕ್ರೌರ್ಯಗಳನ್ನು ತಡೆಗಟ್ಟಲು ತಿದ್ದುಪಡಿ ಮಾಡುವುದಕ್ಕಾಗಿ ಗೊತ್ತುವಳಿ ಮಂಡಿಸಿದರು.

ಎಂ. ವೀರಪ್ಪ ಮೊಯಿಲಿಯವರು ಕರ್ನಾಟಕ ರಾಜ್ಯದ ಮುಖ್ಯಮಂತ್ರಿಯಾಗಿದ್ದಾಗ ರಾಜ್ಯದ ಅಬಕಾರಿ ಇಲಾಖೆಯು ತುಂಬಾ ನಷ್ಟದಲ್ಲಿತ್ತು. ಇದರಿಂದ ರಾಜ್ಯದ ಖಜಾನೆ ಖಾಲಿ ಇತ್ತು ಇದನ್ನು ಗಮನಿಸಿದ ಮೊಯಿಲಿಯವರು ಅಬಕಾರಿ ಇಲಾಖೆಗೆ ಸಾರ್ವಜನಿಕರಿಗೆ ತೊಂದರೆಯಾಗದಂತೆ ಅಬಕಾರಿ ಆಡಳಿತದ ಸಮಗ್ರ ಅನುಷ್ಠಾನದ ಯೋಜನೆಯನ್ನು ತರಬೇಕೆಂಬುದು ಮೊಯಿಲಿಯವರ ಮಹದಾಸೆಯಾಗಿತ್ತು. ಅವರು ಅಧಿಕಾರ ವಹಿಸಿಕೊಂಡ ಕೂಡಲೇ ಅಕ್ರಮವಾಗಿ ಮದ್ಯಮಾರಾಟ ಮಾಡುತ್ತಿದ್ದ ಅಕ್ರಮವನ್ನು ತಡೆಗಟ್ಟಲು ಕಠಿಣ ಕ್ರಮಕೈಗೊಂಡರು. ಈ ನಿಟ್ಟಿನಲ್ಲಿ ಗುತ್ತಿಗೆದಾರರ ಮೇಲೆ ಮಧ್ಯವರ್ತಿಗಳಲ್ಲಿ ಇದ್ದ ಬಾಟ್ಲಿಂಗ್ ಸಾಮರ್ಥ್ಯ ಶಾಚಾಟ್‌ಗಳನ್ನು ವಶಪಡಿಸಿಕೊಳ್ಳುವುದನ್ನು ಅನುಷ್ಠಾನಗೊಳಿಸಿದರು. ಶಾಚೆಟ್‌ಗಳ ಅನಧಿಕೃತ ಮಾರಾಟವನ್ನು ಇದು ತಡೆಗಟ್ಟಿತು. ಮತ್ತು ಹೊಸ ಡಿಸ್ಟಿಲರಿಗಳ ಪರವಾಣಿಗೆ ನೀಡಲಿಲ್ಲ. ಇದರಿಂದಾಗಿ ರಾಜ್ಯದ ಬೊಕ್ಕಸಕ್ಕೆ ಗಣನೀಯವಾದ ಆದಾಯ ಹರಿದು ಬರತೊಡಗಿತು. ೧೯೯೩-೯೪ರಲ್ಲಿ ೨೪.೦೪% ಆದಾಯ ಹೆಚ್ಚಿತು. ಸರಾಯಿ ಅಂಗಡಿಗಳ ೨೦% ರಷ್ಟು ಕಡಿತ ಹೊಸ ಬಾರ ಅಥವಾ ಬ್ರಾಂಡಿ ಶಾಪಗಳಿಗೆ ಅನುಮತಿ ನೀಡಿಕೆ ನಿಷೇಧದಿಂದ ಅಕ್ರಮ ಸರಾಯಿ ಮಾರಾಟದ ವಿರುದ್ದ ಕಠಿಣ ಕ್ರಮ ತೆಗೆದುಕೊಂಡಿದ್ದರಿಂದ ೨೪.೦೪% ರಷ್ಟು ಆದಾಯ ವೃದ್ಧಿಸಲು ಸಾಧ್ಯವಾಯಿತು.

ಅಬಕಾರಿ ಇಲಾಖೆಯಲ್ಲಿ ಬರುವ ಸರಾಯಿ ಅಂಗಡಿ, ಬಾರ್, ಮತ್ತು ಪಬ್ಬುಗಳು ಹೊಸ ಪರವಾಣಿಗೆ ನೀಡುವಲ್ಲಿ ಆರೋಗ್ಯವಂತ ಕ್ರಮಗಳನ್ನು ರೂಪಿಸಲಾಯಿತು. ೧-೨-೧೯೯೩ ರಿಂದ ರಾಷ್ಟ್ರೀಯ ಹಾಗೂ ರಾಜ್ಯ ಹೆದ್ದಾರಿಗಳಲ್ಲಿ ಸುಮಾರು ೨೦೦ ಮೀಟರ್ ಅಂತರದಲ್ಲಿ ಇಂತಹ ಪರವಾಣಿಗೆ ನೀಡದಿರಲು ನಿರ್ಧರಿಸಲಾಯಿತು. ಮತ್ತು ದೇವಸ್ಥಾನ ಸುತ್ತ ಮುತ್ತ ಹಾಗೂ ಶಾಲಾ-ಕಾಲೇಜುಗಳ ಸಮೀಪ ಹೊಸ ಪರವಾನಿಗೆ ನೀಡದಿರಲು ಕಠಿಣ ನಿರ್ಧಾರ ಅನುಷ್ಠಾನಗೊಳಿಸಲಾಯಿತು.

ವೀರಪ್ಪ ಮೊಯಿಲಿಯವರು ಕರ್ನಾಟಕ ಅಬಕಾರಿ ಮಸೂದೆಯನ್ನು ಅಂಗೀಕರಿಸಿ ಕಾನೂನಿನ ಚೌಕಟ್ಟಿನಲ್ಲಿ ಅನೇಕ ಕಾನೂನು ಬಾಹಿರ ಕೃತ್ಯಗಳನ್ನು ತಡೆಗಟ್ಟಿ ಕಾನೂನು ಕ್ರಮ

ತೆಗೆದುಕೊಳ್ಳಲು ಸಹಾಯವಾಯಿತು. ಇಂತಹ ದಕ್ಷ ಆಡಳಿತದಿಂದ ಮೊಯಿಲಿಯವರು ಸೂಕ್ತ ಮಸೂದೆಗಳನ್ನು ರಚಿಸಿ ಅಬಕಾರಿ ಸೇವಾ ಆದಾಯವನ್ನು ಹೆಚ್ಚಿಸಿ ಅಬಕಾರಿಗಳಲ್ಲಿನ ಸುಧಾರಣೆಯನ್ನು ವಿಪಕ್ಷದವರೂ ಕೂಡ ಮೆಚ್ಚುವಂತೆ ಕಾರ್ಯ ನಿರ್ವಹಿಸಿದರು.

ಎಂ. ವೀರಪ್ಪ ಮೊಯಿಲಿಯವರನ್ನು ಎಸ್.ಎಂ. ಕೃಷ್ಣಾರ ಸರಕಾರದ ಅವಧಿಯಲ್ಲಿ ತೆರಿಗೆ ಸುಧಾರಣೆ ಆಯೋಗದ ಮತ್ತು ಕಂದಾಯ ಸುಧಾರಣೆ ಆಯೋಗದ ಅಧ್ಯಕ್ಷರನ್ನಾಗಿ ನೇಮಿಸಿ ಕರ್ನಾಟಕದಲ್ಲಿ ಅಬಕಾರಿ ಸುಂಕದಲ್ಲಿನ ಸುಧಾರಣೆ ಮೌಲ್ಯವರ್ದಿತ ತೆರಿಗೆ, ಮೋಟರ ವಾಹನ ತೆರಿಗೆ, ಮುಂತಾದ ತೆರಿಗೆಗಳನ್ನು ಈ ಸಮಿತಿಗಳು ಸಿಫಾರಸ್ಸು ಮಾಡಿ ಅನುಷ್ಠಾನಗೊಳಿಸಿ ದೇಶಾದ್ಯಂತ ಹೊಸ ತೆರಿಗೆ ಅಲೆಯನ್ನು ಸೃಷ್ಟಿಸಿ ಈ ಸುಧಾರಣೆ ಆಯೋಗಗಳು ಬೇರೆ ರಾಜ್ಯದಲ್ಲೂ ಅನುಷ್ಠಾನಗೊಳ್ಳಲು ನೆರವಾದವು.

೧೯೮೯ರಲ್ಲಿ ವೀರೇಂದ್ರ ಪಾಟೀಲ ಅವರ ಅವಧಿಯಲ್ಲಿ ವೀರಪ್ಪ ಮೊಯಿಲಿಯವರು ಕಾನೂನು ಮತ್ತು ಸಂಸದೀಯವ್ಯವಹಾರ ಸಚಿವರಾಗಿದ್ದಾಗ ಇವರು ಬಹುಜನರ ಸಮಸ್ಯೆಗಳನ್ನು ಅರಿತು ಇವರು ಶೀಘ್ರ ನ್ಯಾಯ ನಿರ್ಣಯ ಕೈಗೊಳ್ಳುವ ನಿಟ್ಟಿನಲ್ಲಿ ಅತ್ಯಂತ ಮುತುವರ್ಜಿ ವಹಿಸಿ ನ್ಯಾಯದಾನದ ವಿಳಂಬವಾಗದಂತೆ ಸೂಕ್ತ ನೂತನ ಯೋಜನೆಯನ್ನು ಜಾರಿಗೆ ತರುವಲ್ಲಿ ಯಶಸ್ವಿಯಾದರು. ನ್ಯಾಯದಾನದ ವಿಳಂಬ ನೀತಿಯಿಂದ ಸಾಮಾನ್ಯ ಕಕ್ಷಿದಾರರ ಬದುಕು ಛಿದ್ರವಾಗುವುದನ್ನು ಮನಗಂಡು ಮೊಯಿಲಿಯವರು "ಲೋಕ ಅದಾಲತ್" (ಜನತಾ ನ್ಯಾಯಾಲಯ) ಎಂಬ ವಿನೂತನ ಯೋಜನೆಯನ್ನು ೧೯೯೦ರ ಜೂನನಲ್ಲಿ ಆರಂಭಿಸಿದರು. ಪ್ರಪ್ರಥಮಬಾರಿಗೆ ಬೆಂಗಳೂರಿನಲ್ಲಿ ಏರ್ಪಡಿಸಿದ್ದ ಬೃಹತ್ ಲೋಕಅದಾಲತ್ ಶಿಬಿರದಲ್ಲಿ ಸುಧೀರ್ಘ ಕಾಲದಿಂದ ಬಾಕಿ ಉಳಿದಿದ್ದ ೧,೮೪,೦೦೦ ಮೋಟಾರ್ ವಾಹನ ಪ್ರಕರಣಗಳು ಇತ್ಯರ್ಥಗೊಂಡವು. ಜೂನದಿಂದ ಅಕ್ಟೋಬರ್‌ವರೆಗೆ ಜಿಲ್ಲಾ ಹಾಗೂ ತಾಲೂಕ ಕೇಂದ್ರಗಳಲ್ಲಿ ೧೨೦ಲೋಕ ಅದಾಲತ್ ನಡೆಸಿ ಸುಮಾರು ೧,೯೩,೦೦೦ ಸಾವಿರ ಪ್ರಕರಣಗಳನ್ನು ಇತ್ಯರ್ಥಗೊಳಿಸಿದರು. ಲೋಕ ಅದಾಲತ್ ಇಡೀ ದೇಶದ ಇತಿಹಾಸದಲ್ಲಿಯೇ ಅಭೂತಪೂರ್ವ ಹಾಗೂ ಅವಿಸ್ಮರಣೀಯ ಯೋಜನೆಯಾಗಿದೆ. ಸಾವಿರಾರು ಮಂದಿ ಸಂತ್ರಸ್ತ ಕಕ್ಷಿದಾರರಿಗೆ ಲೋಕ ಅದಾಲತ್ ವರದಾನವಾಯಿತು. ಮೊಯಿಲಿಯವರಿಗೆ ಮೂಲತಃ ಕಾನೂನು ಕ್ಷೇತ್ರದಲ್ಲಿ ಕಾರ್ಯನಿರ್ವಹಿಸಿದ ಅಪಾರ

ಅನುಭವ ಇರುವುದರಿಂದ ಈ ಲೋಕ ಅದಾಲತ್ ಯೋಜನೆಯನ್ನು ರೂಪಿಸಿ ಜಾರಿಗೆ ತರಲು ಸಹಾಯಕವಾಯಿತು.

ಮೊಯಿಲಿಯವರು ೧೯೭೬ರಲ್ಲಿ ಚರ್ಮ ಕೈಗಾರಿಕಾ ಅಭಿವೃದ್ಧಿ ನಿಗಮವನ್ನು ಸ್ಥಾಪಿಸಿದರು. ಅನಾದಿ ಕಾಲದಿಂದಲೂ ಗೌರವಯುತ ವೃತ್ತಿಯಾದ ಚಮ್ಮಾರಿಕಾ ವೃತ್ತಿಯನ್ನು ಕರ್ನಾಟಕದಲ್ಲಿ ಬಹುತೇಕ ಜನರು ಅನುಭವ ಪಡೆದ ಸಾಂಪ್ರದಾಯಿಕ ಕೈಗಾರಿಕಾ ಪದ್ಧತಿಗೆ ಸೂಕ್ತವಾದ ಸ್ಥಾನ ನೀಡಬೇಕೆಂಬ ಹಂಬಲದಿಂದ ಮೊಯಿಲಿಯವರು ನಿರ್ದಿಷ್ಟವಾದ ಪರಿಶಿಷ್ಟ ಜಾತಿಯ ಸಶಕ್ತ ಚಮ್ಮಾರ (ಮೋಚಿ) ಜನಾಂಗಕ್ಕೆ ಪ್ರೋತ್ಸಾಹ ನೀಡುವ ನಿಟ್ಟಿನಲ್ಲಿ ಲೆದರ್ ಇಂಡಸ್ಟ್ರೀಜ್ ಡವಲಪ್‌ಮೆಂಟ್ ಕಾರ್ಪೋರೇಶನ್ (LIDCOR) ಲಿಡ್ಕರ್ ಉದ್ಯಮವನ್ನು ಸ್ಥಾಪಿಸಿ ಉದ್ಯಮದ ಅಭಿವೃದ್ಧಿಗೆ ತರಬೇತಿ ಹಾಗೂ ಸಹಾಯ ಧನವನ್ನು ನೀಡಿ ಪೋಲಾಗುವ ಕಾರ್ಮಿಕ ಸಂಪನ್ಮೂಲವನ್ನು ಕಾರ್ಯಶೀಲರನ್ನಾಗಿ ಮಾಡಿದರು. ಮತ್ತು ರಸ್ತೆ ಬದಿಗಳಲ್ಲಿರುವ ಸಣ್ಣ ಸೆಡ್ಡುಗಳಲ್ಲಿರುವ ಕಿರು ಉದ್ಯಮಗಳಿಗೆ ಮುಂಗಡ ಮತ್ತಿತರ ಅಗತ್ಯದ ಪೂರೈಕೆ ಕೆಲಸಗಾರರಿಗೆ ತರಬೇತಿ ನೀಡಿ ಪರಿಶಿಷ್ಟ ಜಾತಿ ಜನಾಂಗಕ್ಕೆ ಮತ್ತು ಅವರ ಅಭ್ಯುದಯಕ್ಕೆ ವಿಶೇಷ ಆಸಕ್ತಿವಹಿಸಿ ಚರ್ಮೋದ್ಯಮವನ್ನು ಬಲ ಪಡಿಸಿದರು.

ಜಗತ್ತಿನಾದ್ಯಂತ ಇಲೆಕ್ಟ್ರಾನಿಕ್ ಉದ್ಯಮ ಅತ್ಯಂತ ಪ್ರಭಾವಿತವಾಗಿರುವಂತಹದ್ದು ಇದನ್ನು ಮನಗಂಡ ಮೊಯಿಲಿಯವರು ಇಸ್ರೋದ ಅಧ್ಯಕ್ಷರಾದ ಬಾಹ್ಯಾಕಾಶ ವಿಜ್ಞಾನಿ ಡಾ.ಯು. ಆರ್. ರಾವ್ ಅವರ ಸಂಪರ್ಕ ಬೆಳೆಸಿ ಇಲೆಕ್ಟ್ರಾನಿಕ್ ಸಿಟಿ ಸ್ಥಾಪಿಸಲು ಯೋಜನೆಯನ್ನು ರೂಪಿಸಿಕೊಂಡರು. ಅಂತೆಯೇ ೧೯೭೬ರಲ್ಲಿ ಮೊಯಿಲಿಯವರು ವೀರೇಂದ್ರ ಪಾಟೀಲ ಅವರ ಸರಕಾರದಲ್ಲಿ ಕೈಗಾರಿಕಾ ಸಚಿವರಾಗಿದ್ದಾಗ ಈ ಬೃಹತ್ ಇಲೆಕ್ಟ್ರಾನಿಕ್ ಸಿಟಿಯನ್ನು ಬೆಂಗಳೂರಿನಲ್ಲಿ ಸ್ಥಾಪಿಸಿದರು. ಇಲೆಕ್ಟ್ರಾನಿಕ್ ಸಿಟಿಯು ಮಾಹಿತಿ ತಂತ್ರಜ್ಞಾನದ ಆವಿಷ್ಕಾರಕ್ಕೆ ಅವಶ್ಯಕವಾದದ್ದು ಆದ್ದರಿಂದ ದೇಶದ ಇತಿಹಾಸದಲ್ಲಿಯೇ ಪ್ರಪ್ರಥಮ ಬಾರಿಗೆ ಬೆಂಗಳೂರಿನಲ್ಲಿ ಸ್ಥಾಪಿಸಿದರು. ವೀರಪ್ಪ ಮೊಯಿಲಿಯವರು ಇಲೆಕ್ಟ್ರಾನಿಕ್ ಸಿಟಿಯನ್ನಾಗಿ ಪರಿವರ್ತಿಸಿದ್ದು ಕರ್ನಾಟಕದಲ್ಲಷ್ಟೇ ಅಲ್ಲ ಜಗತ್ತಿನಲ್ಲಿಯೇ ಐಟಿ ನಗರ ಎಂದು ಸ್ಥಾಪನೆಗೊಂಡು ಇಡೀ ವಿಶ್ವವೇ ಬೆಂಗಳೂರನ್ನು ಆಕರ್ಷಿಸುವಂತಾಯಿತು. ಐ.ಟಿ. ಸಿಟಿ ಸ್ಥಾಪನೆಗೊಂಡು ತಂತ್ರಜ್ಞಾನ ಅಭಿವೃದ್ಧಿಗೆ ಸ್ಫೂರ್ತಿಯಾಯಿತು. ಕರ್ನಾಟಕವು ಇಂದು ಭಾರತದ ಮಾಹಿತಿ ತಂತ್ರಜ್ಞಾನ ನಗರವಾಗುವುದಕ್ಕೆ ಕಾರಣವಾಯಿತು. ಮೊಯಿಲಿಯವರು

ಈ ಯೋಜನೆಯನ್ನು ಸ್ಥಾಪಿಸಿ ಬೆಂಗಳೂರನ್ನು ಜಗತ್ತಿನ ಪರ್ಯಾಯ ಸಿಲಿಕಾನ್ ವ್ಯಾಲಿ ಎಂಬ ಕೀರ್ತಿಗೆ ಪಾತ್ರವಾಗುವಂತೆ ನೋಡಿಕೊಂಡರು.

ಮೊಯಿಲಿಯವರು ಸಣ್ಣ ಕೈಗಾರಿಕಾ ಸಚಿವರಾಗಿದ್ದಾಗ ಸಣ್ಣ ಕೈಗಾರಿಕೆಗಳ ಅಭಿವೃದ್ಧಿಗೆ ಈ ಕೆಳಗಿನ ಯೋಜನೆಗಳನ್ನು ಕೈಗೊಂಡರು. "ಸಹಕಾರಿ ಸಂಘಗಳಿಗೆ ಸಹಕಾರ, ಯಾಂತ್ರೀಕೃತ ನಾರು ತಯಾರಿಕಾ ಘಟಕಗಳು ಕರಕುಶಲತೆ, ಸಣ್ಣ ಕೈಗಾರಿಕೆಗಳು ರೇಷ್ಮೆಗಾರಿಕೆ, ಹುರಿಹಗ್ಗ ತಯಾರಿ ಮುಂತಾದ ಚಟುವಟಿಕೆಗಳಲ್ಲಿ ನಿರತ ಕೈಗಾರಿಕಾ ಸಹಕಾರಿ ಸೊಸೈಟಿಗಳಿಗೆ ಆರ್ಥಿಕ ಸಹಕಾರ, ಇತ್ಯಾದಿ ಈ ಸೊಸೈಟಿಗಳು ಗ್ರಾಮೀಣ ಕರಕುಶಲತೆ ಹಾಗೂ ಸಮುದಾಯದ ದುರ್ಬಲ ವರ್ಗದವರ ಏಳಿಗೆಗಾಗಿ ಶ್ರಮಿಸುತ್ತಿವೆ. ಈ ಪ್ರೋತ್ಸಾಹವನ್ನು ಪಡೆದ ಇನ್ನೊಂದು ವೃತ್ತಿ ಜೇನು ಸಾಕಾಣಿಕೆ, ಆಸಕ್ತ ಜೇನು ಸಾಕಾಣಿಕೆದಾರರಿಗೆ ಇಲಾಖೆಯ ವತಿಯಿಂದ ಜೇನು ಪೆಟ್ಟಿಗೆ, ಜೇನು ಪಾತ್ರೆ ಮತ್ತಿತರ ಸಲಕರಣೆಗಳನ್ನು ಒದಗಿಸಲಾಯಿತು. ಅನಿಲಗೊಬ್ಬರಸ್ಥಾವರ, ಜೈವಿಕಅನಿಲಸ್ಥಾವರ, ಖಾದಿ ನೂಲುವಿಕೆ ಇತ್ಯಾದಿ ಅನುಷ್ಠಾನದ ಕಾರ್ಯವನ್ನು ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿಯು ಬೆಂಬಲಿಸಿತು. 'ಲೋಕ ವಸ್ತ್ರದ' ತಯಾರಿಕೆಗಾಗಿ ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿಯು ಅಗ್ರ ಘಟಕವನ್ನು ಸ್ಥಾಪಿಸಿತು. ಸಣ್ಣ ಕೈಗಾರಿಕೆಗಳ ಇಲಾಖೆಯ ಸಹಾಯಕ ಸಚಿವರಾಗಿ ಮೊಯಿಲಿಯವರ ಇನ್ನೊಂದು ಸಾಧನೆ ಏನೆಂದರೆ, ಸಹಸ್ರಾರು ಗ್ರಾಮೀಣ ನಿರುದ್ಯೋಗಿ ಯುವ ಜನತೆಯು ಸ್ವಉದ್ಯೋಗಿಗಳಾಗಲು ಸಹಕರಿಸುವ ಕೇಂದ್ರ ಪ್ರದರ್ಶಿತ ಯೋಜನೆಯಾದ ಗ್ರಾಮೀಣ ಕೈಗಾರಿಕಾ ಯೋಜನಾ ಕಾರ್ಯಕ್ರಮದ ಯಶಸ್ವಿ ಅನುಷ್ಠಾನ[೬]" ಹೀಗೆ ಅನೇಕ ಗುಡಿ ಹಾಗೂ ಸಣ್ಣ ಕೈಗಾರಿಕೆಗಳಿಗೆ ಮೊಯಿಲಿಯವರು ಪ್ರೋತ್ಸಾಹ ನೀಡಿ ಯೋಜನೆಗಳನ್ನು ಅನುಷ್ಠಾನಗೊಳಿಸಿದರು.

ವೀರೇಂದ್ರ ಪಾಟೀಲರ ಸಂಪುಟದಲ್ಲಿ ಯೋಜನಾ ಸಚಿವರಾಗಿದ್ದ ಎಂ. ವೀರಪ್ಪ ಮೊಯಿಲಿಯವರು ಅವರ ಬಹುದಿನದ ಕನಸಾಗಿದ್ದ ಕೊಂಕಣ ರೇಲ್ವೆಯ ಯೋಜನೆಯನ್ನು ಅನುಷ್ಠಾನಗೊಳಿಸಿದರು. ಈ ಯೋಜನೆಯನ್ನು ಅನುಷ್ಠಾನಗೊಳಿಸಲು ಕೇಂದ್ರ ಸರಕಾರವು ಅನುದಾನದ ಕೊರತೆಯಿಂದ ಆಸಕ್ತಿವಹಿಸಿರಲಿಲ್ಲ. ಎಂ. ವೀರಪ್ಪ ಮೊಯಿಲಿಯವರು ರೇಲ್ವೆ ಸಚಿವ ಜಾರ್ಜ್ ಫರ್ನಾಂಡೀಸ್ ಮತ್ತು ವಿತ್ತಸಚಿವ ಮಧುದಂಡವತೆ ಅವರ ಮನವೊಲಿಸಿ ಕರ್ನಾಟಕ ಮಹಾರಾಷ್ಟ್ರ ಕೇರಳ ಹಾಗೂ ಗೋವಾ ಸರಕಾರಗಳ ಪಾಲುದಾರಿಕೆಯಲ್ಲಿ

ಕೊಂಕಣ ರೇಲ್ವೆ ನಿಗಮವನ್ನು ಸ್ಥಾಪಿಸಬೇಕೆಂದು ಹಠ ಸಾಧಿಸಿ ಇತರ ರಾಜ್ಯಗಳ ಮನ ಒಲಿಸಿ ಈ ಯೋಜನೆಯನ್ನು ಜಾರಿಗೆ ತರುವಲ್ಲಿ ಯಶಸ್ವಿಯಾದರು. ಇದು ದೇಶದಲ್ಲಿಯೇ ಪ್ರಪ್ರಥಮವಾದ ಪ್ರಯತ್ನವಾಯಿತು. ಹೀಗೆ ಮೊಯಿಲಿಯವರ ಛಲ ಹಾಗೂ ಮಹತ್ವಾಕಾಂಕ್ಷೆಯಿಂದ ಯೋಜನೆ ಅನುಷ್ಠಾನಗೊಂಡಿತು. ಮತ್ತು ಕೊಂಕಣ ರೇಲ್ವೆಯ ನಿಗಮವು ರಚನೆಯಾಯಿತು. ಹಾಗೂ ಇತರ ರಾಜ್ಯಗಳೊಂದಿಗೆ ಕರ್ನಾಟಕವು ಪಾಲುದಾರವಾಯಿತು. ಮೊಯಿಲಿಯವರು ಮುಖ್ಯಮಂತ್ರಿಯಾಗಿದ್ದಾಗ ಕೊಂಕಣ ರೇಲ್ವೆ ಅಭಿವೃದ್ಧಿ ನಿಗಮಕ್ಕೆ ಅಪಾರ ಅನುದಾನ ಒದಗಿಸಿ ಈ ರೇಲ್ವೆ ನಿಗಮವನ್ನು ಪುನರುಜ್ಜೀವನಗೊಳಿಸಿದರು.

೧೯೯೩-೯೪ರಲ್ಲಿ ವೀರಪ್ಪ ಮೊಯಿಲಿಯವರ ನೇತೃತ್ವದಲ್ಲಿ ರಾಷ್ಟ್ರೀಯ ಕ್ರೀಡಾ ಕೂಟ ಏರ್ಪಡಿಸಲು ತೀರ್ಮಾನಿಸಲಾಯಿತು. ಇದರ ಫಲವಾಗಿ ಮೈಸೂರಿನ ಚಾಮುಂಡಿ ಕ್ರೀಡಾಂಗಣಗಳ ಉನ್ನತೀಕರಣ ಯೋಜನೆಯನ್ನು ಹಾಕಿಕೊಳ್ಳಲಾಯಿತು. ಕೇಂದ್ರ ಸರಕಾರ ೧೦ ಕೋಟಿ ಅನುದಾನ ಸಹಿತ ಕ್ರೀಡಾ ಸೌಲಭ್ಯಗಳ ಅಭಿವೃದ್ಧಿಗೆ ೩೫ ಕೋಟಿ ರೂಪಾಯಿ ವೆಚ್ಚವನ್ನು ಮಾಡಿ ಎಲ್ಲಾ ಕಾಮಗಾರಿಗಳನ್ನು ನಿಗದಿತ ವೇಳೆಯಲ್ಲಿ ಪೂರ್ಣಗೊಳಿಸಿ ಸೌಲಭ್ಯಗಳನ್ನು ಕ್ರೀಡಾಂಗಣಕ್ಕೆ ಒದಗಿಸಿ ೧೯೯೫-೯೬ರಲ್ಲಿ ರಾಷ್ಟ್ರೀಯ ಕ್ರೀಡಾಕೂಟವನ್ನು ಆರಂಭಿಸಿತು. ಮೊಯಿಲಿಯವರು ಸ್ವತಃ ಕ್ರೀಡಾಪಟುವಾಗಿ ಅನುಷ್ಠಾನವನ್ನು ನೋಡಿ ಕಣ್ತುಂಬ ಸಂಭ್ರಮಿಸಿದರು.

೨೦೦೦ನೇ ಇಸ್ವಿಯಲ್ಲಿ ಎಸ್.ಎಂ. ಕೃಷ್ಣಾ ಅವರ ಸರಕಾರವಿದ್ದಾಗ ಎಂ. ವೀರಪ್ಪ ಮೊಯಿಲಿಯವರನ್ನು ರಾಜ್ಯ ತೆರಿಗೆ ಸುಧಾರಣಾ ಆಯೋಗದ ಅಧ್ಯಕ್ಷರನ್ನಾಗಿ ನೇಮಿಸಲಾಯಿತು. ಈ ಆಯೋಗವು ತೆರಿಗೆ ಸುಧಾರಣೆಯಲ್ಲಿ ಆಗಿರುವ ಲೋಪ ದೋಷಗಳನ್ನು ಕುರಿತು ಸಮಗ್ರವಾಗಿ ಅಧ್ಯಯನ ನಡೆಸಿ ಮಹತ್ವದ ಶಿಫಾರಸ್ಸುಗಳನ್ನು ಸರಕಾರಕ್ಕೆ ಮೊಯಿಲಿಯವರ ನೇತೃತ್ವದ ಸಮಿತಿ ಸಲ್ಲಿಸಿತು. ಈ ಸಮಿತಿ ಸಲ್ಲಿಸಿದ ಬಹುತೇಕ ಶಿಫಾರಸ್ಸುಗಳು ಅಂಗೀಕೃತಗೊಂಡು ಜಾರಿಯಾದವು. ಅವುಗಳಲ್ಲಿ ಮುಖ್ಯವಾದವುಗಳು ಈ ಕೆಳಗಿನಂತಿವೆ.

೧) ಮಾರಾಟ ತೆರಿಗೆ

೨) ರಾಜ್ಯ ಅಬಕಾರಿ ಸುಂಕ

೩) ಸ್ಟ್ಯಾಂಪ್ ಡ್ಯೂಟಿ ಮತ್ತು ನೊಂದಾವಣಿ ಶುಲ್ಕ

೪) ಮೋಟಾರು ವಾಹನ ತೆರಿಗೆ

೫) ಸಂಕೀರ್ಣ ತೆರಿಗೆ ಪದ್ಧತಿ

೬) ಮುದ್ರಾಂಕ ಶುಲ್ಕಗಳು

೭) ಇತರ ತೆರಿಗೆಗಳು

ಹೀಗೆ ಅನೇಕ ತೆರಿಗೆ ಪದ್ಧತಿಗಳನ್ನು ಜಾರಿಗೊಳಿಸಲು ತೆರಿಗೆ ಸುಧಾರಣಾ ಆಯೋಗವು ಕೆಲವು ತತ್ವಗಳನ್ನು ಅನುಸರಿಸಿತು. ಅವು ಈ ಕೆಳಗಿನಂತಿವೆ.

೧) "ಕೆಲವೇ ತೆರಿಗೆಗಳಿರುವ ಮತ್ತು ಕೆಲವೇ ರಿಯಾಯತಿಗಳಿರುವ ಸರಳ ತೆರಿಗೆ ಪದ್ಧತಿಯ ಅನುಷ್ಠಾನ

೨) ಸಂಪನ್ಮೂಲ ಇಳಿಕೆಯನ್ನು ಕನಿಷ್ಟಗೊಳಿಸಲು ಮತ್ತು ತೆರಿಗೆ ತಪ್ಪಿಸುವುದನ್ನು ನಿಲ್ಲಿಸಲು ಸಹಾಯಕ ಮೊತ್ತದ ಇಳಿಕೆಯೊಂದಿಗೆ ಕಡಿಮೆ ಅಂಚಿನ ತೆರಿಗೆ ದರ

೩) ಈ ಸಂಕೀರ್ಣತೆಯನ್ನು ನಿವಾರಿಸಲು ಮಾರಾಟ ತೆರಿಗೆ ವ್ಯವಹಾರ ತೆರಿಗೆ ಮತ್ತು ಮೂಲಭೂತ ಸೌಕರ್ಯ ಶುಲ್ಕದ ಜತೆ ಪ್ರವೇಶ ತೆರಿಗೆಯನ್ನು ವಿಧಿಸುವ ಬಗ್ಗೆ ಮರು ಚಿಂತನೆ ಅಗತ್ಯವಾಗಿತ್ತು. ಏಕೆಂದರೆ ಮೂರು ತೆರಿಗೆಗಳು ಮತ್ತು ಶುಲ್ಕದ ಸೇರ್ಪಡೆ ಅನೇಕ ತೆರಿಗೆ ದರಗಳಿಗೆ ಕಾರಣವಾಗಿ ತೆರಿಗೆಯ ಅಸಮರ್ಪಕ ನಿಷ್ಕರ್ಷೆಗೆ ಕಾರಣವಾಗುತ್ತಿತ್ತು. ಅನೇಕ ತೆರಿಗೆಗಳ ಬದಲು ಏಕೈಕ ತೆರಿಗೆ ಅಗತ್ಯ.

೪) ಬಹು ತೆರಿಗೆಗಳನ್ನು ನಿರ್ಧರಿಸಲು ರಾಜ್ಯಸರಕಾರವು ಕಂದಾಯ ಉತ್ಪಾದಕತೆಯನ್ನು ಹೆಚ್ಚಿಸಬೇಕು. ರಾಜ್ಯ ಆರ್ಥಿಕ ಸಚಿವರ ಸಮಿತಿಯು ನಿಗದಿಗೊಳಿಸಿದ ದರವನ್ನು ಮೀಸಲು ರಚನಾತ್ಮಕ ಹೊಸ ಕ್ರಮ ಅನುಷ್ಠಾನಗೊಳ್ಳಬೇಕು.

೫) ಕರ್ನಾಟಕವು ಮೌಲ್ಯವರ್ಧಿತ ತೆರಿಗೆಯನ್ನು ಜಾರಿಗೊಳಿಸುವುದು ಮುಖ್ಯವಾಗಿದೆ ರವಾನೆ ಆಧಾರಿತ ತತ್ವಗಳೊಂದಿಗೆ ಕಚ್ಚಾ ವಸ್ತು ಮತ್ತು ಸಿದ್ಧವಸ್ತುಗಳೆಡರ ಮೇಲೆಯೂ ತೆರಿಗೆ ಬಗ್ಗೆ ಸಾಮಾನ್ಯ ಸ್ವಿಕೃತಿ ಇತ್ತು. ಇದರ ಅನುಷ್ಠಾನಕ್ಕೆ ರಾಜ್ಯದ ಸ್ವಂತ ರಸ್ತೆ ನಕ್ಷೆಯನ್ನು ಶಿಫಾರಸ್ಸು ನೀಡಿತಲ್ಲದೆ ಅಂತರಾಜ್ಯ ಅನುಷ್ಠಾನದ ಸಿದ್ಧತೆಯನ್ನು ಒದಗಿಸಿತು. ಸರಕುಗಳ

ಜತೆ ಸೇವೆಯ ಮೇಲೆ ತೆರಿಗೆ ವಿಧಿಸುವ ಪ್ರಸ್ತಾವಣೆಗಳನ್ನು ಶಿಫಾರಸ್ಸಿನಲ್ಲಿ ಸೇರಿಸಲಾಯಿತು[2]"

ಈ ಸಮಿತಿಯು ಸರಕಾರಕ್ಕೆ ಶಿಫಾರಸ್ಸುಗಳನ್ನು ಸಲ್ಲಿಸಿತು. ಅದನ್ನು ಅಂಗೀಕರಿಸಿತಲ್ಲದೇ ಈ ತತ್ವದಡಿಯಲ್ಲಿ ರಾಜ್ಯದ ಬೊಕ್ಕಸಕ್ಕೆ ಆದಾಯದ ಹೆಚ್ಚಳವನ್ನು ಕಂಡಿತು. ಈ ಆಯೋಗದ ಮಹತ್ತರ ಶಿಫಾರಸಿನಿಂದ ಆರ್ಥಿಕ ಸಾಧನೆಯು ಭಾರಿ ಪ್ರಮಾಣದಲ್ಲಿ ವೃದ್ಧಿಸಿತು. ಮುಂದಿನ ಐದು ವರ್ಷಗಳಲ್ಲಿ ಶೇಕಡಾ ೧೬% ಹೆಚ್ಚಿನ ಅಭಿವೃದ್ಧಿಯನ್ನು ರಾಜ್ಯದ ಸ್ವಂತ ತೆರಿಗೆಯಲ್ಲಿ ವೃದ್ಧಿಯಾಯಿತು.

ಎಂ. ವೀರಪ್ಪ ಮೊಯಿಲಿಯವರು ಪ್ರವಾಸೋದ್ಯಮ ಸಚಿವರಾಗಿದ್ದ ಅವಧಿಯಲ್ಲಿ ಕರ್ನಾಟಕ ಪ್ರವಾಸೋದ್ಯಮ ಇಲಾಖೆಗೆ ಹೆಚ್ಚಿನ ಅನುದಾನ ಹಾಗೂ ಸೌಲಭ್ಯಗಳನ್ನು ನೀಡಿ ಕರ್ನಾಟಕದ ಶ್ರೀಮಂತ ವಾಸ್ತು ಶಿಲ್ಪ ಕಲೆ, ರಮಣೀಯ ಜಲಪಾತಗಳು ವಿಶಿಷ್ಟ ವೈವಿದ್ಯ ಕಾಡುಪ್ರದೇಶಗಳನ್ನು ಅಭಿವೃದ್ಧಿ ಪಡಿಸಿ ಕರ್ನಾಟಕವನ್ನು ಪ್ರವಾಸಿ ಕೇಂದ್ರವನ್ನಾಗಿ ಮಾಡಿ ಅಂತರಾಷ್ಟ್ರೀಯ ಮಟ್ಟದಲ್ಲಿ ಗುರುತಿಸುವಂತೆ ಮಾಡಿದರು. ಪ್ರವಾಸಿ ಕೇಂದ್ರಗಳಿಗೆ ಉತ್ತಮ ರಸ್ತೆ ಮೂಲಭೂತ ಸೌಕರ್ಯಗಳಾದ ವಸತಿ, ನೀರು ಉಪಹಾರಗೃಹಗಳನ್ನು ಸ್ಥಾಪಿಸುವುದರ ಮೂಲಕ ಪ್ರವಾಸೋದ್ಯಮವನ್ನು ಪುನಃಶ್ಚೇತನಗೊಳಿಸಿದರು. ಈ ಅವಧಿಯಲ್ಲಿಯೇ ಮಯೂರ್ ರೆಸಾರ್ಟಗಳ ಸರಣಿ ಮತ್ತು ಪ್ರವಾಸದ ಹಾದಿಯ ಸೌಲಭ್ಯಗಳು ಸ್ಥಾಪನೆಗೊಂಡವು. ಅರಣ್ಯ ವಸತಿ ಗೃಹಗಳು (ಜಂಗಲ್ ಲಾಡ್ಜ್) ಮತ್ತು ಹುಲಿ ರಕ್ಷಣಾ ಯೋಜನೆಗಳನ್ನು (ಟೈಗರ್ ಪ್ರೊಜೆಕ್ಟ) ಸ್ಥಾಪಿಸಿ ದೇಶದಲ್ಲಿಯೇ ಪ್ರಪ್ರಥಮ ಪರಿಸರ ಪ್ರವಾಸೋದ್ಯಮವನ್ನು ಅನುಷ್ಠಾನಗೊಳಿಸಿದ ಕೀರ್ತಿ ಮೊಯಿಲಿಯವರಿಗೆ ಸಲ್ಲುತ್ತದೆ. ಕೃಷ್ಣ ರಾಜಸಾಗರದ ಬೃಂದಾವನ ಉದ್ಯಾನವನಕ್ಕೆ ನವೀನ ರೀತಿಯ ಯೋಜನೆಯನ್ನು ಸಿದ್ಧಪಡಿಸಿ ಅದಕ್ಕೆ ಬೇಕಾದ ಸೌಲಭ್ಯಗಳನ್ನು ಒದಗಿಸಿ ಅಭಿವೃದ್ಧಿ ಪಡಿಸಿದರು. ಮುಖ್ಯವಾಗಿ ಬೃಂದಾವನದ ನೃತ್ಯ ಕಾರಂಜಿಗಳನ್ನು ಅಳವಡಿಸುವುದು ಬೃಂದಾವನದ ಸೌಂದರ್ಯೀಕರಣಕ್ಕಾಗಿ ಉಸ್ತುವಾರಿ ಸಮಿತಿಯನ್ನು ನೇಮಿಸಿ ಬೃಂದಾವನಕ್ಕೆ ಹೊಸ ಮೆರಗನ್ನು ನೀಡಿ ಕರ್ನಾಟಕದ ಪ್ರವಾಸೋದ್ಯಮವನ್ನು ಮೊಯಿಲಿಯವರು ದೇಶದಲ್ಲಿಯೇ ಗುರುತಿಸುವಂತೆ ಮಾಡಿದರು. ಇದರೊಂದಿಗೆ ಮೊಯಿಲಿಯವರು ಆರೋಗ್ಯ ಪ್ರವಾಸೋದ್ಯಮ ಮತ್ತು ಪರಿಸರ ಪ್ರವಾಸೋದ್ಯಮ ಎಂಬ ವಿನೂತನ ಯೋಜನೆಗಳನ್ನು

ಉಪೇಕ್ಷಿತ ವಲಯಗಳಿಗೆ ನೀತಿ ರೂಪಿಸಿ ಅನೇಕ ಮಹಾ ಯೋಜನೆಗಳಿಗೆ ಶಿಫಾರಸ್ಸು ರೂಪಿಸಲಾಯಿತು.

ವೀರಪ್ಪ ಮೊಯಿಲಿಯವರ ಅಧಿಕಾರ ಅವಧಿಯಲ್ಲಿ ಅಂತರಾಷ್ಟ್ರೀಯ ವಿಮಾನ ನಿಲ್ದಾಣವನ್ನು ಸ್ಥಾಪಿಸಲು ಯೋಜನೆಯನ್ನು ರೂಪಿಸಿದರು. ಕೇಂದ್ರ ಸರಕಾರವು ಈ ಯೋಜನೆಯನ್ನು ಪ್ರಾರಂಭಿಸಲು ವಿಳಂಬಿಸಿದಾಗ ಮೊಯಿಲಿಯವರು ಎಚ್.ಎ.ಎಲ್. ಅಧ್ಯಕ್ಷರ ಸಭೆಯನ್ನು ಕರೆದು ಅಂತರಾಷ್ಟ್ರೀಯ ವಿಮಾನ ನಿಲ್ದಾಣವನ್ನು ಬೆಂಗಳೂರಿನಲ್ಲಿರುವ ವಿಮಾನ ನಿಲ್ದಾಣ ಉನ್ನತೀಕರಿಸಬೇಕೆಂದು ರಾಷ್ಟ್ರೀಯ ವಿಮಾನ ನಿಲ್ದಾಣ ಪ್ರಾಧಿಕಾರಕ್ಕೆ ಒತ್ತಾಯಿಸಿ ಈ ವಿಮಾನ ನಿಲ್ದಾಣದ ಸ್ಥಾಪನೆಯ ಉದ್ದೇಶಕ್ಕೆ ಹೆಚ್ಚುವರಿ ಟರ್ಮಿನಲ್ ಮತ್ತು ರನ್ ವೇ ನಿರ್ಮಾಣದ ಕೆಲಸ ಕ್ರಿಯಾಶೀಲವಾಗಿ ಸಾಗಲು ರಾಜ್ಯ ಮುಂಗಡಪತ್ರದಿಂದ ೫ ಕೋಟಿ ರೂಪಾಯಿ ಅನುದಾನ ಒದಗಿಸಿದರು. ಅಂತರಾಷ್ಟ್ರೀಯ ವಿಮಾನ ನಿಲ್ದಾಣದ ಸ್ಥಾಪನೆಯನ್ನು ಕೇಂದ್ರಸರಕಾರದ ಆಗಿನ ನಾಗರಿಕ ವಿಮಾನಯಾನ ಖಾತೆಯ ಸಚಿವರಾದ ಗುಲಾಮನಬಿ ಅಜಾದರಿಂದ ಉದ್ಘಾಟಿಸಿದರು. ಬೆಂಗಳೂರಿನ ವಿಮಾನ ನಿಲ್ದಾಣವನ್ನು ಉನ್ನತೀಕರಿಸಿದ ಕೀರ್ತಿ ಮೊಯಿಲಿಯವರಿಗೆ ಸಲ್ಲುತ್ತದೆ. ಇದರಿಂದ ಬೆಂಗಳೂರಿನಿಂದ ೩೦ ಕಿ.ಮೀ. ದೂರದಲ್ಲಿ ದೇವನಹಳ್ಳಿಯಲ್ಲಿ ನೂತನ ಅಂತರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ೧೫೦೦ ಎಕರೆಗಳಷ್ಟು ಭೂಸ್ವಾದೀನಕ್ಕೆ ವೀರಪ್ಪ ಮೊಯಿಲಿಯವರ ಪರಿಶ್ರಮವಿದೆ. ಕೇಂದ್ರ ಸರಕಾರವು ಈ ಯೋಜನೆಯನ್ನು ಅನುಷ್ಠಾನಗೊಳಿಸಿತು.

ಎಂ. ವೀರಪ್ಪ ಮೊಯಿಲಿಯವರು ವಿದೇಶಿ ಬಂಡವಾಳವನ್ನು ಆಕರ್ಷಣೆ ಮಾಡುವ ಉದ್ದೇಶದಿಂದ ಅಂತರಾಷ್ಟ್ರೀಯ ಸಮಾವೇಶ ಕೇಂದ್ರ ಸ್ಥಾಪನೆಮಾಡುವ ಯೋಜನೆಯನ್ನು ರೂಪಿಸಿದರು. ಬೆಂಗಳೂರಿನಲ್ಲಿ ಅಂತರಾಷ್ಟ್ರೀಯ ಗುಣಮಟ್ಟದ ಈ ಯೋಜನೆಯ ಅನುಷ್ಠಾನಕ್ಕೆ ಜಾಗತಿಕ ಮಟ್ಟದಲ್ಲಿ ಟೆಂಡರ್ ಕರೆದು ಯೋಜನೆಗೆ ಅವಿರತ ಶ್ರಮಿಸಿದರು. ಆದರೆ ಈ ಯೋಜನೆಯನ್ನು ಅನೇಕ ರಾಜಕಾರಣಿಗಳು ವಿರೋಧಿಸಿದ್ದರಿಂದ ಮತ್ತು ಚುನಾವಣಾ ನೀತಿ ಸಂಹಿತೆ ಜಾರಿಗೊಳಿಸಿದ್ದರಿಂದ ಈ ಬೃಹತ್ ಯೋಜನೆಯು ಕುಂಠಿತಗೊಂಡಿತು. ಈ ಯೋಜನೆ ಕಾರ್ಯಗತಗೊಂಡಿದ್ದರೆ ಭಾರತ ಮತ್ತು ಕರ್ನಾಟಕವು ವಿದೇಶಿ ಬಂಡವಾಳದ ಹೂಡಿಕೆಯಲ್ಲಿ ಒಂದನೇ ಸ್ಥಾನದಲ್ಲಿ ಇರುತ್ತಿದ್ದವು.

ತೆರಿಗೆ ಸುಧಾರಣಾ ಆಯೋಗವು ತನ್ನ ವರದಿಯನ್ನು ಸರಕಾರಕ್ಕೆ ಸಲ್ಲಿಸಿದ ನಂತರ ತೆರಿಗೆಗಳೇತರ ವಿಚಾರಗಳ ಅಧ್ಯಯನಕ್ಕಾಗಿ ಕಂದಾಯ ಸುಧಾರಣಾ ಆಯೋಗವೆಂದು ಪುನರಚನೆಯಾಯಿತು. ವೀರಪ್ಪ ಮೊಯಿಲಿಯವರ ಅಧ್ಯಕ್ಷತೆಯಲ್ಲಿ ಆರು ಜನ ಸದಸ್ಯರು ಹಾಗೂ ಸದಸ್ಯ ಕಾರ್ಯದರ್ಶಿ ಒಳಗೊಂಡಂತೆ ಕಂದಾಯ ಸುಧಾರಣಾ ಆಯೋಗವು ಅನೇಕ ಶಿಫಾರಸ್ಸುಗಳನ್ನು ಮಾಡಿದೆ.

ಮಂಗಳೂರು ನಗರಕ್ಕೆ ಕುಡಿಯುವ ನೀರು ಪೂರೈಕೆಗಾಗಿ ತುಂಬೆಯ ವೆಂಟೆಡ್ ಡ್ಯಾಮ್ ನಿರ್ಮಿಸಿ ಮಂಗಳೂರಿನಲ್ಲಿರುವ ನೀರಿನ ತೀವ್ರ ಸಮಸ್ಯೆಯನ್ನು ಬಗೆಹರಿಸಿದರು. ಮೊಯಿಲಿಯವರು ಈ ನಿಟ್ಟಿನಲ್ಲಿ ಮಹಾನಗರ ಪಾಲಿಕೆ ಮತ್ತು ಜಲಮಂಡಳಿ ಅಧಿಕಾರಿಗಳೊಂದಿಗೆ ಚರ್ಚಿಸಿ ಈ ಯೋಜನೆಯು ಶೀಘ್ರ ಅನುಷ್ಠಾನಗೊಳ್ಳಲು ಕ್ರಮ ಕೈಗೊಂಡರಲ್ಲದೆ ತುಂಬೆಯ ಡ್ಯಾಮ್ ನಿರ್ಮಾಣಕ್ಕಾಗಿ ತಕ್ಷಣವೇ ೧ ಕೋಟಿ ರೂಪಾಯಿ ಹಣವನ್ನು ಮಂಜೂರು ಮಾಡಿದರು. ಕೈಗಾರಿಕಾ ನಗರವಾದ ಮಂಗಳೂರಿಗೆ ೨೪ ಘಂಟೆಗಳವರೆಗೆ ನೀರು ಸತತವಾಗಿ ಸಿಗುವಂತೆ ಮತ್ತು ಪೂರೈಕೆಯಾಗುವಂತೆ ಶ್ರಮ ವಹಿಸಿ ಯೋಜನೆಯನು ಅನುಷ್ಠಾನಗೊಳಿಸಿದರು.

ಎಂ. ವೀರಪ್ಪ ಮೊಯಿಲಿಯವರು ಒಬ್ಬ ಶ್ರೇಷ್ಠ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ಚಿಂತಕರಾಗಿ ಅನೇಕ ಉಪಯುಕ್ತ ಯೋಜನೆಗಳನ್ನು ಕರ್ನಾಟಕಕ್ಕೆ ನೀಡಿ ದೇಶದ ಇತಿಹಾಸದಲ್ಲೇ ಈ ನಾಡನ್ನು ಅಜರಾಮರವಾಗಿಸಿದ್ದಾರೆ. ಮೊಯಿಲಿಯವರು ಕಾನೂನು ಹಾಗೂ ಸಂಸದೀಯ ವ್ಯವಹಾರ ಸಚಿವರು, ಯೋಜನಾ ಖಾತೆಯ ಸಚಿವರು, ವಾರ್ತಾ ಮತ್ತು ಪ್ರವಾಸೋದ್ಯಮ ಯುವಜನಸೇವೆ ಮತ್ತು ಕ್ರೀಡಾ ಇಲಾಖೆ ವಾಣಿಜ್ಯ ಮತ್ತು ಕೈಗಾರಿಕಾ ಸಚಿವರಾಗಿ ತೆರಿಗೆ ಸುಧಾರಣಾ ಆಯೋಗದ ಅಧ್ಯಕ್ಷರಾಗಿ, ಕೇಂದ್ರ ಆಡಳಿತ ಸುಧಾರಣಾ ಸಮಿತಿಯ ಅಧ್ಯಕ್ಷರಾಗಿ ಮತ್ತು ಮುಖ್ಯಮಂತ್ರಿಯಾಗಿ, ಕೇಂದ್ರ ಕಾನೂನು ಸಚಿವರಾಗಿ, ಕಂಪನಿ ವ್ಯವಹಾರಗಳ ಸಚಿವರಾಗಿ ಮತ್ತು ನ್ಯಾಯವಾದಿಯಾಗಿ ಉನ್ನತ ಮಟ್ಟದ ಯೋಜನೆಗಳನ್ನು ರೂಪಿಸಿ ಕಾರ್ಯ ರೂಪಕ್ಕೆ ತಂದು ಕರ್ನಾಟಕದ ಒಬ್ಬ ಅಸಾಮಾನ್ಯ ರಾಜಕೀಯ ಚಿಂತಕರಾಗಿ ದೀನ, ದುರ್ಬಲರ, ಹಿಂದುಳಿದವರ ಹಿತಕ್ಕಾಗಿ ಶ್ರಮಿಸುವ ಒಬ್ಬ ಸಮಾಜಜೀವಿಯಾಗಿದ್ದಾರೆ.

೬. ೩ ಅನ್ವೇಷಣೆ

ಎಂ. ವೀರಪ್ಪ ಮೊಯಿಲಿ ಒಬ್ಬ ರಾಜಕಾರಣಿಯಾಗಿದ್ದರಲ್ಲದೆ ಮುಂದಾಲೋಚನೆಯ ವ್ಯಕ್ತಿತ್ವವುಳ್ಳವರಾಗಿದ್ದಾರೆ. ಅವರ ದಿಟ್ಟ ನಿಲುವು ಅವರ ಕಠಿಣ ಪರಿಶ್ರಮ ಬುದ್ಧಿವಂತಿಕೆಯಿಂದ ಅನೇಕ ಯೋಜನೆಗಳನ್ನು ಯಾವಾಗಲೂ ಚಿಂತಿಸುವ ಒಬ್ಬ ರಾಜಕೀಯ ಮುತ್ಸದ್ದಿಯಾಗಿದ್ದಾರೆ. ಅಂತೆಯೇ ಅವರ ಈಡೆರದ ಕನಸುಗಳು, ಕಾರ್ಯ ಯೋಜನೆಗಳು ಅನುಷ್ಠಾನಕ್ಕೆ ಬರಬೇಕಿದೆ.

ಮೊಯಿಲಿಯವರು ಮೂಲತಃ ರಾಜಕಾರಣಿಯಾಗಿ ನಿಷ್ಠಾವಂತ ಕಟ್ಟಾ ದೇಶಪ್ರೇಮಿಯಾಗಿ ಕರ್ನಾಟಕದ ಹಿತಕ್ಕಾಗಿ ವಾಸ್ತವವಾದಿಯಾಗಿ ಆದರ್ಶಪ್ರಾಯವನ್ನು ರೂಪಿಸಿಕೊಂಡವರಾಗಿದ್ದಾರೆ. ತಮ್ಮ ಧ್ಯೆಯೋದ್ದೇಶಗಳಿಗಾಗಿ ನಾಡಿನ ಹಿತದ ಮಾತು ಬಂದಾಗ ಅವರೆಂದೂ ಸೋತವರಲ್ಲ. ಭವಿಷ್ಯದ ಚಿಂತನೆಗಳ ಬಗ್ಗೆ ಕನಸು ಕಾಣುತ್ತಾ ಕನಸುಗಳನ್ನು ಸಾಕಾರಗೊಳಿಸಿಕೊಂಡವರು. ಅಂತೆಯೇ ಅವರು ಯಾವಾಗಲೂ ಈ ಗೀತೆಯನ್ನು ಹಾಡುತ್ತಿದ್ದರು.

"ನನ್ನ ಶೈಶವದಲ್ಲಿ ನಾನು ಅತ್ತಾಗ, ನಕ್ಕಾಗಲೆಲ್ಲಾ
ಕಾಲ ಸ್ಪೋಟಿಸುತ್ತಿತ್ತು ಃ
ನನ್ನ ಬಾಲ್ಯದಲ್ಲಿ ನಾನು ಹೆಚ್ಚಿನ ಕೆಚ್ಚನ್ನು ಪ್ರದರ್ಶಿಸಿದಾಗಲೆಲ್ಲ
ಕಾಲ ಚಲಿಸುತ್ತಿತ್ತು ನಿಧಾನವಾಗಿ ;
ನನ್ನ ಏರು ಜವ್ವನದಲ್ಲಿ
ಕಾಲ ಓಡುತ್ತಿತ್ತು ನನಗೆ ಮುಪ್ಪಾದಾಗ
ಆದರೆ ಈಗ ಬಹು ಬೇಗ ನನಗರಿವಾಗಬಹುದು
ಕಾಲವಾಗಲೇ ಕಳೆದು ಹೋಗಿದೆ೮"

ಎಂದು ಮೊಯಿಲಿಯವರು ಸಮಯದ ಮಹತ್ವವನ್ನು ಅರಿತು ಮುಂದೆ ಸಾಗಿದವರಾಗಿದ್ದಾರೆ. ತಮ್ಮ ಚಿಂತನೆಗಳು ಹಾಗೆಯೇ ಉಳಿದು ಕೊಂಡಿವೆ. ಅವುಗಳು ಸಾಕಾರಗೊಂಡಾಗ ಮಾತ್ರ ಈ ಅನ್ವೇಷಣೆಗೆ ಪುನಃರೂಪ ಕೊಡಬಹುದಾಗಿದೆ. ಅಂತಹ ಅನ್ವೇಷಣೆಗಳನ್ನು ಈ ಕೆಳಗಿನಂತೆ ಪಟ್ಟಿ ಮಾಡಬಹುದಾಗಿದೆ.

ಶ್ರೀ ಎಂ. ವೀರಪ್ಪ ಮೊಯಿಲಿಯವರು ತಾವು ಮುಖ್ಯಮಂತ್ರಿಗಳಾಗಿದ್ದ ಅವಧಿಯಲ್ಲಿ ಬಡತನ ನಿರ್ಮೂಲನೆಗಾಗಿ ೧೨ ಸೂತ್ರಗಳನ್ನು ಜನರಿಗೆ ನೀಡಿದ್ದಾರೆ. ಇವುಗಳಲ್ಲಿ ಇನ್ನೂ ಕೆಲವು ಇಡೇರಬೇಕಾಗಿದೆ. ಅವರ ಮುಂದಾಲೋಚನೆ ದೂರ ದೃಷ್ಟಿಕೋನದ ಯೋಜನೆಗಳು ಈಗಲೂ ಪ್ರಸ್ತುತ ಎನಿಸುತ್ತವೆ ಅವುಗಳಲ್ಲಿ ಮುಖ್ಯವಾದವುಗಳೆಂದರೆ

೧) ಪ್ರತಿಯೊಬ್ಬರಿಗೂ ಉದ್ಯೋಗ ಖಾತ್ರಿ ಯೋಜನೆಯಡಿಯಲ್ಲಿ ೩೫೦ ಕೋಟಿ ರೂಪಾಯಿ ವೆಚ್ಚದಲ್ಲಿ ೧೫೦೦ ರಷ್ಟು ಮಾನವಗಂಟೆಗಳಷ್ಟು ಉದ್ಯೋಗ ಕಲ್ಪಿಸುವುದು.

೨) ಪ್ರತಿ ಗ್ರಾಮಕ್ಕೆ ಕುಡಿಯುವ ನೀರು ಒದಗಿಸುವುದು ವಸತಿ ಇಲ್ಲದವರಿಗೆ ವಾಸಿಸಲಿಕ್ಕೆ ಯೋಗ್ಯ ಮನೆಗಳನ್ನು ನಿರ್ಮಾಣ ಮಾಡುವುದು.

೩) ಗ್ರಾಮೀಣ ಶಿಕ್ಷಣವನ್ನು ಬಲಪಡಿಸುವುದು. ಅದಕ್ಕಾಗಿ ಶಾಲಾ ಕೊಠಡಿಗಳ ವ್ಯವಸ್ಥೆ ಶಿಕ್ಷಕರ ನೇಮಕಾತಿ ಗುಣಮಟ್ಟ ಸುಧಾರಿಸಲು ಮೂಲಭೂತ ಸೌಲಭ್ಯ ಒದಗಿಸುವುದು.

೪) ಗ್ರಾಮೀಣ ರಸ್ತೆ ನಿರ್ಮಾಣ ಮಾಡುವುದು ಮತ್ತು ರಸ್ತೆಗಳ ಬದಿಯಲ್ಲಿ ಮರನೆಟ್ಟು ರಾಜ್ಯವನ್ನು ಹಸಿರಾಗಿಸುವುದು.

೫) ಇಂದಿರಾ ಗ್ರಾಮದ ಯೋಜನೆಯಲ್ಲಿ ಪ್ರತಿ ಚುನಾವಣಾ ಕ್ಷೇತ್ರದಲ್ಲಿ ಒಂದು ಆದರ್ಶ ಗ್ರಾಮ ನಿರ್ಮಾಣ ಮಾಡುವುದು.

೬) ಗ್ರಾಮೀಣ ಪ್ರದೇಶಕ್ಕೆ ಸಣ್ಣ ಹಾಗೂ ಅತೀ ಸಣ್ಣ ರೈತರಿಗೆ ನೀರಾವರಿ ವ್ಯವಸ್ಥೆಗೆ ಸಹಾಯಧನ ಕಲ್ಪಿಸುವುದು. ಅಚ್ಚುಕಟ್ಟು ಪ್ರದೇಶ ಅಭಿವೃದ್ಧಿಗೆ ಸಾಕಷ್ಟು ಅನುದಾನ ನೀಡಿ ಕೃಷ್ಣಾ, ಹೇಮಾವತಿ, ತುಂಗಭದ್ರಾ ಯೋಜನೆಗಳನ್ನು ಅಭಿವೃದ್ಧಿಪಡಿಸುವುದು.

೭) ಅಂಬೇಡ್ಕರ ಗೃಹ ನಿರ್ಮಾಣ ಯೋಜನೆಯಲ್ಲಿ ಪರಿಶಿಷ್ಟರಿಗೆ ಮನೆ ನಿರ್ಮಾಣ ಮಾಡಿಕೊಡುವುದು ಇತ್ಯಾದಿ.

ಮೊಯಿಲಿಯವರ ೧೨ ಸೂತ್ರಗಳ ಬಡತನ ನಿರ್ಮೂಲನ ಕಾರ್ಯಕ್ರಮಗಳಲ್ಲಿ ಕೆಲವೊಂದು ಅನುಷ್ಠಾನಗೊಂಡಿವೆ ಇನ್ನೂ ಕೆಲವು ಹಾಗೆಯೇ ಉಳಿದುಕೊಂಡಿವೆ.

ಮೊಯಿಲಿಯವರು ಸರಕಾರದ ಕಾರ್ಯಕ್ರಮಗಳನ್ನು ಅತ್ಯಂತ ವಿಶ್ವಾಸರ್ಹತೆಯಿಂದ ಯೋಜನೆಗಳನ್ನು ಜಾರಿಗೆ ತರಬೇಕೆಂಬ ಮಹತ್ವಕಾಂಕ್ಷೆಯನ್ನು ಹೊಂದಿದ್ದರು. ಅದರಂತೆ

ಅವರು ನಡೆದುಕೊಂಡು ಕಾರ್ಯಕ್ರಮಗಳನ್ನು ರೂಪಿಸುವಲ್ಲಿ ವಿಶೇಷ ಆಸಕ್ತಿ ವಹಿಸಿ ಮತ್ತು ನಿಷ್ಠೆಯಿಂದ ದುಡಿದರು. ನೀರಿನ ಸರಬರಾಜು ಯೋಜನೆಯಲ್ಲಿ ವಿದ್ಯುತ್ ಯೋಜನೆಯಲ್ಲಿ ಕೃಷಿ ಯೋಜನೆಯಲ್ಲಿ ಮಂತ್ರಿಗಳೇ ಆಗಲಿ, ಮುಖ್ಯಮಂತ್ರಿಗಳೇ ಆಗಲಿ, ಅಧಿಕಾರಿಗಳೇ ಆಗಲಿ ಅತ್ಯಂತ ಶ್ರದ್ಧೆಯಿಂದ ಕಾರ್ಯ ನಿರ್ವಹಿಸಬೇಕೆಂದು ಸಚಿವ ಸಂಪುಟಕ್ಕೆ ತಮ್ಮ ಕಾರ್ಯ ಕ್ಷಮತೆಯನ್ನು ಮನವರಿಕೆ ಮಾಡುತ್ತಿದ್ದರು. ಮೊಯಿಲಿಯವರು ರಾಜ್ಯದ ಪ್ರಗತಿಯನ್ನಷ್ಟೇ ಅಲ್ಲ ಭಾರತದ ಭವಿಷ್ಯದ ದೃಷ್ಠಿಯಿಂದಲೂ ಕೂಡಾಅನೇಕ ರಾಜಕೀಯ ಚಿಂತನೆಗಳನ್ನು ಮಾಡಿದ್ದಾರೆ. ಮೊಯಿಲಿಯವರು ಒಬ್ಬ ಶ್ರೇಷ್ಠ ಅರ್ಥಶಾಸ್ತ್ರಜ್ಞರಾಗಿ 'ಭಾರತ ದೃಷ್ಟಿ ೨೦೨೦' ಎಂಬ ಕೃತಿಯನ್ನು ರಚಿಸಿ ಆರ್ಥಿಕ ಅಭಿವೃದ್ಧಿಯ ಚಿಂತನೆಮಾಡಿ ಆರ್ಥಿಕ ಅಭಿವೃದ್ಧಿ ಹೊಂದಬೇಕಾದರೆ ಭಾರತವು ಅನೇಕ ಸವಾಲುಗಳನ್ನು ಎದುರಿಸಬೇಕಾಗುತ್ತದೆ ಎಂದಿದ್ದಾರೆ.

೧) "ಕೋಟ್ಯಾಂತರ ಕುಟುಂಬಗಳನ್ನು ಬಡತನ ರೇಖೆಗಿಂತ ಮೇಲೆತ್ತಲು ಗುರಿ ಸಹಿತ ಕಾರ್ಯ ನಿರ್ವಹಣೆ.

೨) ಅಲ್ಪ ಆದಾಯ ಸಮುದಾಯದವರನ್ನು ವಿಶೇಷವಾಗಿ ಗಮನದಲ್ಲಿಟ್ಟು ವಾರ್ಷಿಕವಾಗಿ ಸುಮಾರು ಒಂದು ಕೋಟಿ ಹೊಸ ಉದ್ಯೋಗವಕಾಶಗಳ ನಿರ್ಮಾಣ.

೩) ಅನಕ್ಷರತೆ ನಿವಾರಣೆ.

೪) ಪ್ರಾಥಮಿಕ ಹಾಗೂ ಪ್ರೌಢಶಾಲಾ ವಿದ್ಯಾರ್ಥಿಳ ನೊಂದಾವಣೆಗೆ ಸಂಘಟಿತ ಪ್ರಯತ್ನ ಮತ್ತು ಶಾಲೆಯನ್ನು ತ್ಯಜಿಸುವವರ ಸಂಖ್ಯೆ ಕನಿಷ್ಠಕ್ಕಿಳಿಸುವುದು

೫) ಶಿಶು ಸಾವು ಮತ್ತು ಮಕ್ಕಳ ಅಪೌಷ್ಠಿಕತೆಯನ್ನು ಇಳಿಸಲು ಸಾರ್ವಜನಿಕ ಆರೋಗ್ಯ ಅಭಿವೃದ್ಧಿ.

೬) ವಿದ್ಯುತ್ ಉತ್ಪಾದನೆ ದೂರ ಸಂಪರ್ಕ ಮತ್ತಿತರ ಭೌತಿಕ ಮತ್ತು ಸಾಮಾಜಿಕ ಮೂಲಭೂತ ಸೌಕರ್ಯಗಳಿಗೆ ಅಪಾರವಾದ ಬಂಡವಾಳ ಹೂಡಿಕೆ.

೭) ಕೃಷಿ ಕೈಗಾರಿಕೆ ಮತ್ತು ಸೇವಾ ಕ್ಷೇತ್ರಗಳಲ್ಲಿ ಉತ್ಪಾದಕತೆ ಹೆಚ್ಚಳಕ್ಕೆ ಕ್ಷಿಪ್ರಗತಿಯಲ್ಲಿ ತಾಂತ್ರಿಕತೆ ಅಳವಡಿಸುವುದು.

೮) ವ್ಯಾಪಾರ ಮತ್ತು ಹೂಡಿಕೆ ಎರಡರಲ್ಲೂ ವಿಶ್ವ ಆರ್ಥಿಕತೆಯಲ್ಲಿ ಪ್ರಮುಖ ಪಾತ್ರವಹಿಸುವುದು

ಹೀಗೆ ಭಾರತದ ಮುಂದಿರುವ ಅನೇಕ ಸಮಸ್ಯೆ ಸವಾಲುಗಳನ್ನು ಎದುರಿಸಿದರೆ ಭಾರತ ಆರ್ಥಿಕ ಪ್ರಗತಿ ಸಾಧಿಸಲು ಸಾಧ್ಯವಾಗುತ್ತದೆ ಎಂದಿದ್ದಾರೆ. ಪ್ರಸ್ತುತ ಭಾರತದ ಅಭಿವೃದ್ದಿಯನ್ನು ಗಮನದಲ್ಲಿಟ್ಟುಕೊಂಡು ಉದಾರೀಕರಣ, ಖಾಸಗೀಕರಣ, ಮತ್ತು ಜಾಗತೀಕರಣದಿಂದ ಸಾರ್ವಜನಿಕ ವಲಯಗಳ ಬೆಳವಣಿಗೆಯನ್ನು ಮತ್ತು ಸಾಮಾಜಿಕ ಸಬಲೀಕರಣದಿಂದ ಸಾಧಿಸಬಹುದಾಗಿದೆ ಎಂಬುದನ್ನು ಅವರು ನಿರೀಕ್ಷಿಸುತ್ತಾರೆ.

ಬಡವರ ಆರ್ಥಿಕ ಅಭಿವೃದ್ದಿ ಕಾರ್ಯಗಳನ್ನು ನಮ್ಮ ಆಡಳಿತವರ್ಗ ಪ್ರಾಮಾಣಿಕತೆಯಿಂದ ನಿರ್ವಹಿಸಬೇಕಾಗಿದೆ. ಬಡವರ ಸುಧೀರ್ಘ ಯಾತನೆ ಮತ್ತು ದಾರಿದ್ರ್ಯಗಳಿಂದ ಅವರಿಗೆ ಮುಕ್ತಿ ಇಲ್ಲದಂತಾಗಿದೆ. ಆ ಬಂಧನಗಳಿಂದ ಮುಕ್ತಿಗೊಳಿಸಬೇಕಾಗಿದೆ. ಅದಕ್ಕಾಗಿ ಅವರು ಈ ಕೆಳಗಿನ ಆಶಯಗಳನ್ನು ವ್ಯಕ್ತಪಡಿಸುತ್ತಾರೆ.

- ಬಡತನ, ಅಸಮಾನತೆ, ನಿರುದ್ಯೋಗ ಇಂತಹ ಕಠಿಣವಾದ ಸಮಸ್ಯೆಗಳನ್ನು ಪರಿಹರಿಸುವುದು
- ಜಾತಿ ಮತ್ತು ಧರ್ಮಗಳ ನೆಲೆಯಲ್ಲಿ ದುರ್ಬಲ ವರ್ಗದವರಿಗೆ ವಿಶೇಷವಾದ ಆದ್ಯತೆ ನೀಡಿ ಅವರಿಗೆ ಎಲ್ಲ ಹಂತಗಳಲ್ಲಿ ಸಹಕರಿಸುವುದು
- ಪ್ರಜಾಪ್ರಭುತ್ವವು ಗ್ರಾಮೀಣ ಆರ್ಥಿಕತೆಯನ್ನು ಅವಲಂಸಿದೆ. ಆದ್ದರಿಂದ ಗ್ರಾಮದ ಗೌರವವನ್ನು ಹೆಚ್ಚಿಸುವುದಷ್ಟೆ ಅಲ್ಲ ಗ್ರಾಮ ಸ್ವರಾಜ್ಯ ಮಾಡಿ ಪ್ರಜಾಪ್ರಭುತ್ವವನ್ನು ಸ್ಥಿರಗೊಳಿಸಬೇಕಾಗಿದೆ ಈ ನಿಟ್ಟಿನಲ್ಲಿ ಕಾರ್ಯಕ್ರಮಗಳನ್ನು ರೂಪಿಸಬೇಕು.
- ಹಲವು ವರ್ಷಗಳಿಂದ ಬುಡಕಟ್ಟು ಜನಾಂಗದವರು ನಿರಾಶ್ರಿತರಾಗಿದ್ದು ಅವರಿಗೆ ಪುನರ್‌ವಸತಿ ಕಲ್ಪಿಸಿ ವಿವಿಧ ಸೌಲಭ್ಯಗಳನ್ನು ನೀಡಬೇಕಾಗಿದೆ.
- ದೇಶದಲ್ಲಿರುವ ಅನೇಕ ರಾಜ್ಯಗಳಲ್ಲಿ ಅಸಮಾನತೆ ಉಂಟಾಗುತ್ತಿದ್ದು ಇಂತಹ ರಾಜ್ಯಗಳಲ್ಲಿ ಸಮಾನ ದೃಷ್ಟಿಯ ಅಭಿವೃದ್ದಿಯ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕು.

- ಭಾರತದ ಗ್ರಾಮಗಳ ಅಭಿವೃದ್ಧಿ ಭದ್ರ ಪಡಿಸಲು ಕೈಗಾರಿಕೆ ವಿದ್ಯುತ್‌ಶಕ್ತಿ ಯಂತ್ರ ನಿರ್ಮಾಣ ಮುಂತಾದ ಕಾರ್ಯಕ್ರಮಗಳ ಜೊತೆಗೆ ಗ್ರಾಮೀಣ ಕರಕುಶಲತೆಗಳನ್ನು ಒಟ್ಟೊಟ್ಟಿಗೆ ವಿನ್ಯಾಸ ಗೊಳಿಸಬೇಕಾಗಿದೆ.
- ಕೃಷಿ ಉತ್ಪಾದಿತ ಚಟುವಟಿಕೆಗಳನ್ನು ಉತ್ತೇಜಿಸುವುದು ಕೃಷಿಯನ್ನೇ ನಂಬಿ ಬದುಕುವ ದುಡಿಮೆಗಾರರಿಗೆ ಬಹುಪಾಲು ಯೋಜನೆಗಳನ್ನು ರೂಪಿಸುವುದು.
- ಕಡ್ಡಾಯ ಶಿಕ್ಷಣ ಜಾರಿಗೆ ತರುವುದರ ಜೊತೆಗೆ ಪ್ರೌಢ, ಉನ್ನತ, ಮತ್ತು ವೃತ್ತಿಪರ ಶಿಕ್ಷಣಕ್ಕೆ ಹೆಚ್ಚಿನ ಪ್ರೋತ್ಸಾಹ ನೀಡುವುದು.
- ಸಮಾಜದ ದುರ್ಬಲವರ್ಗದವರಿಗೆ ಸಮಾಜಿಕ ಭದ್ರತೆಯನ್ನು ಒದಗಿಸಬೇಕು ಮತ್ತು ಮೂಲಭೂತ ಸೌಕರ್ಯಗಳನ್ನು ಒದಗಿಸಬೇಕು.
- ಭ್ರಷ್ಟಾಚಾರವನ್ನು ಬೇರು ಸಹಿತ ನಿರ್ಮೂಲನೆಗೊಳಿಸಲು ಪ್ರತಿಯೊಬ್ಬರು ಶ್ರಮಿಸಬೇಕು ಮತ್ತು ಸರಕಾರಿ ಕೆಲಸಗಳಿಗೆ ಮತ್ತು ಕಲ್ಯಾಣ ಕಾರ್ಯಕ್ರಮಗಳಿಗೆ ವಿನಿಯೋಗಿಸಲಾಗುವ ಹಣವನ್ನು ಹಿಂದುಳಿದ ಮತ್ತು ದುರ್ಬಲ ವರ್ಗದವರಿಗೆ ತಲುಪಬೇಕು.
- ಈಗಿರುವ ನಮ್ಮ ಸಂವಿಧಾನ ಮರು ಪರಿಶೀಲಿಸಿ ಸೂಕ್ತವಾದ ಆಯೋಗವನ್ನು ರಚಿಸಿ ಸಂವಿಧಾನಕ್ಕೆ ಹೊಸ ತಿದ್ದುಪಡಿ ತರಬೇಕಾಗಿದೆ.
- ಜಾಗತೀಕರಣ ಸಂಧರ್ಭದಲ್ಲಿ ಭಾರತದ ಹಣಕಾಸು ವ್ಯವಸ್ಥೆ ಕುಸಿಯುತ್ತಿದೆ ಆದ್ದರಿಂದ ಭಾರತೀಯರು ಮಾರುಕಟ್ಟೆ ವ್ಯವಸ್ಥೆಗಿಳಿದು ಜಾಗತಿಕ ಸ್ಪರ್ಧೆಯನ್ನು ಎದುರಿಸಿ ಹಣಕಾಸು ವ್ಯವಸ್ಥೆ ಬಲಪಡಿಸಬೇಕು.
- ಕರ್ನಾಟಕದ ಕೃಷ್ಣಾ ಹಾಗೂ ಕಾವೇರಿ ನದಿನೀರಿನ ಸಮಸ್ಯೆಗಳು ಮತ್ತೆ ಮತ್ತೆ ಉಲ್ಬಣಿಸದಂತೆ ಖ್ಯಾತ ನೀರಾವರಿ ತಜ್ಞರ ಸಲಹೆ ಪಡೆದು ಶಾಶ್ವತ ಪರಿಹಾರ ಕಂಡುಕೊಳ್ಳಬೇಕು.

ಎಂ ವೀರಪ್ಪ ಮೊಯಿಲಿಯವರು ತಮ್ಮ ಜನ್ಮ ಜಾತ ಗುಣಗಳಿಂದ ಮತ್ತು ದೂರದೃಷ್ಟಿ ಆಲೋಚನೆಗಳಿಂದ ಅನೇಕ ಯೋಜನೆಗಳನ್ನು ಅನುಷ್ಠಾನಕ್ಕೆ ತಂದು ಜಾರಿಗೊಳಿಸುವುದರ ಜೊತೆಗೆ ಅವರ ಆಡಳಿತ ಅವಧಿಯಲ್ಲಿ ತಮ್ಮ ಕಾರ್ಯಕ್ರಮಗಳನ್ನು ಚಾಚು ತಪ್ಪದೆ ಅನುಷ್ಠಾನಗೊಳಿಸಿದ್ದಾರೆ. ಭವಿಷ್ಯದ ಮುಂದಿರುವ ಸವಾಲುಗಳಿಗೆ

ಮುಂಬರುವ ರಾಜಕೀಯ ಚಿಂತಕರಿಗೆ ಮಾರ್ಗದರ್ಶಿಯಾಗಿದ್ದಾರೆ. ಮೊಯಿಲಿಯವರು ಪಾಲಿಸುತ್ತಿರುವ ತತ್ವಗಳೆಂದರೆ ಕಾರ್ಯತತ್ಪರತೆ, ಮತ್ತು ಪ್ರಾಮಾಣಿಕತೆ ಪ್ರೀತಿ ಮತ್ತು ಔದಾರ್ಯ, ಸತ್ಯ ಮತ್ತು ನ್ಯಾಯ, ಜ್ಞಾನ ಮತ್ತು ಸ್ವಾತಂತ್ರ್ಯ, ಶಾಂತಿ ಹಾಗೂ ಅಭಿವೃದ್ದಿ ಇವುಗಳ ಅನುಕರಣೆಯಿಂದ ಏನನ್ನಾದರೂ ಮಾಡಬಹುದಾಗಿದೆ ಎಂದು ನಂಬಿದವರು. ಮೊಯಿಲಿಯವರು ಸ್ವತ: ಕವಿಗಳು ಕಾದಂಬರಿಕಾರರು ನಾಟಕರರು ಮತ್ತು ಚಿಂತನಶೀಲ ಬರಹಗಾರರು. ಹೀಗೆ ಮೊಯಿಲಿಯವರ ಹತ್ತು ಹಲವಾರು ಮುಖಗಳು ರಾಜಕೀಯ ಚುಕ್ಕಾಣಿ ಹಿಡಿಯಲು ಪ್ರೇರೇಪಿಸಿದವು. ಮೊಯಿಲಿಯವರು ಸದಾ ಹೇಳುವಂತಹ ಮಾತುಗಳೆಂದರೆ ನಾನೊಬ್ಬ ಪಕ್ಷದ ನಿಷ್ಠಾವಂತ ಸೇವಕ ಕಷ್ಟಬಂದಾಗ ಅಧೀರನಾಗದೆ ಅಧಿಕಾರ ಬಂದಾಗ ಮೆರೆಯದೆ ಕರ್ತವ್ಯ ಪಾಲಿಸುವುದು ನನ್ನ ಜಾಯಮಾನ. ಬಡವರಿಗೆ ಅನುಕೂಲವಾಗುವ ಯಾವುದೇ ಕಾರ್ಯಕ್ರಮಗಳನ್ನು ನಿಲ್ಲಿಸುವುದಿಲ್ಲ. ಇನ್ನಷ್ಟು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಕ್ರಮ ಕೈಗೊಳ್ಳಲಾಗುವುದು ಎಂದು ಪದೇ ಪದೇ ಹೇಳುತ್ತಾರೆ.

ಮೊಯಿಲಿಯವರು ಯೋಜನೆ ಮಾಡುವುದು ಅನುಷ್ಠಾಣಗೊಳಿಸುವುದು ಮತ್ತು ಹೊಸ ಯೋಜನೆಗೆ ಕಾರ್ಯಕಲ್ಪ ಮಾಡುವುದು ಸದಾ ಒಬ್ಬ ಅನ್ವೇಷಕರಾಗಿ ಅವರು ದೇಶದ ರಾಜ್ಯದ ಹಿತ ಚಿಂತನೆಯನ್ನು ಬಯಸುವ ರಾಜಕೀಯ ಪಟುವಾಗಿದ್ದಾರೆ.

ಅಡಿ ಟಿಪ್ಪಣಿ

೧) ಎಲ್ಲಿ ಮನ ಕಳುಕಿರದೋ ಎಲ್ಲಿ ತಲೆ ಬಾಗಿರದೊ ಲೇ ಪುಟ ೧೩೬ ಮಹೇಶ್ವರ ಪ್ರಕಾಶನ ಬೆಂಗಳೂರು ೨೦೦೫

೨) ಅದೇ ಪುಟ ೧೩೬–೧೩೭

೩) ಅದೇ ಪುಟ ೨೩೨

೪) ಅದೇ ಪುಟ ೮೫

೫) ಅದೇ ಪುಟ ೧೮೦–೧೮೧

೬) ಅದೇ ಪುಟ ೬೫

೭) ಅದೇ ಪುಟ ೨೫೪

೮) ಅದೇ ಪುಟ ೩೦೧–೩೦೨

೯) ಅದೇ ಪುಟ ೨೬೮

ಅಧ್ಯಾಯ – ೭ ಸಮಾರೋಪ

ಅಧ್ಯಾಯ-೭

ಸಮಾರೋಪ

ಎಂ. ವೀರಪ್ಪ ಮೊಯಿಲಿಯವರು ವಿಶಿಷ್ಠ ವ್ಯಕ್ತಿತ್ವ ಹೊಂದಿರುವ ಜನನಾಯಕರು, ಸಾಮಾಜಿಕ ನ್ಯಾಯಕ್ಕಾಗಿ ಹೋರಾಡಿದ ಹೋರಾಟಗಾರರು. ಅನೇಕ ರಾಜಕೀಯ ಚಿಂತಕರ ಅನುಭವದ ಚಿಂತನೆಗಳನ್ನು ಅಭ್ಯಸಿಸಿ ತಮ್ಮಲ್ಲಿಯೇ ಒಂದು ರಾಜಕೀಯ ಚಿಂತನೆಯನ್ನು ತಂದುಕೊಂಡವರು. ವಾಸ್ತವವಾದಿ ನೆಲೆಯಲ್ಲಿ ತಾತ್ವಿಕ ಚಿಂತನೆಯನ್ನು ಪ್ರಯೋಗಿಸುವ ನಿಟ್ಟಿನಲ್ಲಿ ಪ್ರಯತ್ನ ಪಟ್ಟವರು. ದೂರದೃಷ್ಠಿಕೋನ ವಿದ್ವತ್ ಪೂರ್ಣ ಮುಂದಾಲೋಚನೆ ಇವು ಇವರ ಅನನ್ಯ ವ್ಯಕ್ತಿತ್ವಗಳಲ್ಲಿ ಒಂದಾಗಿವೆ. ಈ ಕಾರಣಕ್ಕಾಗಿಯೇ ಜನ ಸಮುದಾಯದ ಎಲ್ಲಾ ರಂಗದಲ್ಲಿ ಅವರಿಗೆ ನೈಜವಾದ ಸ್ಥಾನ ಭದ್ರವಾಗಿದೆ. ಮೊಯಿಲಿಯವರು ಹಾಕಿಕೊಂಡ ಯೋಜನೆ-ಅನುಷ್ಠಾನ-ಅನ್ವೇಷಣೆ ಅವರ ರಾಜಕೀಯ ಬದುಕಿಗೆ ಹಾಗೂ ರಾಜ್ಯದ ಮತ್ತು ರಾಷ್ಟ್ರದ ಜನತೆಗೆ ಸಹಾಯಕವಾಗಿವೆ.

ಮೊಯಿಲಿಯವರು ತಮ್ಮ ರಾಷ್ಟ್ರೀಯ ಚಿಂತನಾ ಕೃತಿಯ 'ಮೊದಲ ಮಾತು'ನಲ್ಲಿ ತಾವು ಸಮಾಜವನ್ನು ಯಾವ ದೃಷ್ಟಿಕೋನದಿಂದ ಹಾಗೂ ಯಾವ ಉದ್ದೇಶದಿಂದ ನೋಡಿದ ಕುರಿತು ಹೀಗೆ ಹೇಳುತ್ತಾರೆ. "ದೇಶದ ಜನಸಾಮಾನ್ಯರು ಅನವರತ ಎಲ್ಲ ರಂಗದಲ್ಲಿಯೂ ಸಮರ ಸನ್ನದ್ಧರಾಗಿಯೇ ಇದ್ದಾರೆ. ಅದು ಕೆಟ್ಟ ಆಡಳಿತದ ವಿರುದ್ಧವಿರಬಹುದು, ಜಾತಿ ಅಥವಾ ವರ್ಗ ತಾರತಮ್ಯವಿರಬಹುದು, ಸುಧಾರಣಾ ಪ್ರಕ್ರಿಯೆಯ ಪರ ವಿರೋಧದ ಕ್ರಿಯೆಯಾಗಿರಬಹುದು. ನಾವು ಕೆಲವೊಮ್ಮೆ ಅಗತ್ಯವಿರುವ ಹುಚ್ಚು ಕನ್ನಡಕ ಧರಿಸಿ ಉನ್ಮತ್ತರಾಗಿರುತ್ತೇವೆ. ಇನ್ನು ಕೆಲವೊಮ್ಮೆ ಆಧುನಿಕ ಬದುಕು ತುಂಬಿರುವ ಸ್ವಯಂ ಯಾತನಗೆ ಒಳಗಾಗುತ್ತೇವೆ. ನಮ್ಮ ಸ್ವಾತಂತ್ರ್ಯವನ್ನು ಪುನರ್ ಸಂಘಟಿಸ ಬಲ್ಲ ರಾಜಕೀಯ ಸಾಮಾಜಿಕ, ಆರ್ಥಿಕ ವಿಶ್ಲೇಷಣೆಯನ್ನು," ಮಾಡುವುದು ಮುಖ್ಯವಾಗಿದೆ. ನಾನು ನನ್ನ ಚಿಂತನೆಯ ಅನುಭವದ ಅವಲೋಕನದ ಮೂಲಕ ಕೆಲವು ಸಂಗತಿಗಳನ್ನು ತಮ್ಮ ಮುಂದೆ ಪ್ರಸ್ತುತ ಪಡಿಸಿದ್ದೇನೆ. ಎಂಬುವಲ್ಲಿ ಮೊಯಿಲಿಯವರು ಜಗತ್ತಿನ ವಿಸ್ತಾರತೆಯನ್ನು ಕಂಡು ಹಿಡಿದ ಕೊಲಂಬಸ್, ಬೆಳಕಿನ ಹೊಸ ಹೊಳಪನ್ನು ದರ್ಶಿಸಿದ ನ್ಯೂಟನ್ ಆಗಲು ನಾನು ಹೊರಟಿರದೇ ನಾನೇನಿದ್ದರೂ ಮುಖ್ಯವಾಹಿನಿಯಲ್ಲಿ ಕ್ಷಿಪ್ರವಾಗಿ

ಬದಲಾಗುವ ಕಾಲವನ್ನು ಕಾತರತೆಯ ಮನಸ್ಸಿನಿಂದ ಅನುಭವದ ಮೂಲಕ ಗಮನಿಸುತ್ತಾ ನಿಧಾನವಾಗಿ ಪ್ರತಿ ಹೆಜ್ಜೆಯನ್ನು ತೀಕ್ಷ್ಣವಾಗಿ ಹಾಕುವ ವ್ಯಕ್ತಿ ನಾನಾಗಿದ್ದೇನೆ. ಎಂಬುದು ಮೊಯಿಲಿಯವರ ಅಭಿಮತವಾಗಿದೆ.

ಮೊಯಿಲಿಯವರು ವೃತ್ತಿ ನಿರತ ರಾಜಕಾರಣಿಯಾಗಿದ್ದರೂ ಸಹ ಅವರೊಬ್ಬ ರಾಜಕೀಯ ಚಿಂತನಾ ಶೀಲ ವ್ಯಕ್ತಿ. ಅಷ್ಟೇ ಅಲ್ಲ ಶ್ರೇಷ್ಠ ಸಾಹಿತ್ಯ ಸಾಧಕ. ಸಮಾಜವನ್ನು ಹೊಸ ದೃಷ್ಟಿಕೋನದಿಂದ ವಾಸ್ತವ ನೆಲೆಯಲ್ಲಿ ಕಾಣುವ ಅಪರೂಪ ವ್ಯಕ್ತಿತ್ವ ಗುಣ ವಿಶೇಷತೆಯನ್ನು ಹೊಂದಿರುವಂತವರು ಸೂಕ್ಷ್ಮ ಬರಹಗಾರಿಕೆಯಿಂದ ಗುರುತಿಸಿಕೊಂಡವರು. ಮತ್ತು ವಿಮರ್ಶಕರಿಗಿರುವ ಚಿಕಿತ್ಸಕ ಮನೋಬಲ ಪ್ರಚಲಿತ ವಿದ್ಯಮಾನಗಳಿಗೆ ಸ್ಪಂದಿಸುವ ಹಾಗೂ ಕ್ಲಿಷ್ಟ ವಿಷಯಗಳ ಬಗ್ಗೆ ತಮ್ಮ ನಿಲುವನ್ನು ಅಥವಾ ಮಾನದಂಡವನ್ನು ವಿವಾದಕ್ಕೆ ಎಡೆ ಮಾಡದೆ ಪ್ರಾಮಾಣಿಕತೆ ಮೂಲಕ ತೋರ್ಪಡಿಸುವ ದಿಟ್ಟ ನಿಲುವು ಮೊಯಿಲಿಯವರ ರಾಜಕೀಯ ಚಿಂತನೆಯಲ್ಲಿ ಅಡಗಿದೆ.

ಮೊಯಿಲಿಯವರು ಜಗತ್ತಿನ ಯಾವ ಭಾಗದಲ್ಲೇ ಆಗಲಿ ಅಲ್ಲಿರುವ ಬಡತನ, ದಾರಿದ್ರ್ಯ, ಆರ್ಥಿಕ ಮುಗ್ಗಟ್ಟು, ಸಾಮಾಜಿಕ ನ್ಯಾಯದ ನಿರಾಕರಣೆ, ಅಭಿವೃದ್ಧಿ ಹಿನ್ನೆಲೆ ಮುಂತಾದ ಅಂಶಗಳ ಕುರಿತು ಸ್ಪಂದಿಸುವ ಹಾಗೂ ಅವುಗಳಿಗೆ ಪರಿಹಾರ ಹುಡುಕಿಕೊಳ್ಳುವ ದಿಟ್ಟ ಮಾರ್ಗವನ್ನು ಅವರ ಚಿಂತನೆಯ ಹಿನ್ನೆಲೆಯಲ್ಲಿ ಕಾಣುತ್ತೇವೆ. ತುಂಬಾ ಜಟಿಲವಾದ ಬಗೆಹರಿಯದಂತಹ ಕೆಲವು ಸಮಸ್ಯೆಗಳಿಗೆ ವಿವೇಕಯುತವಾಗಿ, ಸಂಬಂಧಯುತವಾಗಿ ಒಳನೋಟಗಳ ಮೂಲಕವಾಗಿ ಸಶಕ್ತವಾದ ಮಾರ್ಗವನ್ನು ಸೂಚಿಸುವ ಸಂಗತಿಗಳು ಅವರಲ್ಲಿ ಶೇಖರಣೆಗೊಂಡಿರುವಂತಹವುಗಳು.

ಈ ಮೇಲ್ಕಂಡ ಎಲ್ಲ ಅಂಶಗಳನ್ನು ಗಮನಿಸಿದಾಗ ಅವರೊಬ್ಬ ಸಂಸ್ಕೃತಿ ಚಿಂತಕರು, ರಾಜಕೀಯ ನಾಯಕರು, ಸಾಮಾಜಿಕ ಚಿಂತಕರಾಗಿ, ಸಾಹಿತಿಯಾಗಿ ಹಲವು ನಿಟ್ಟಿನಲ್ಲಿ ಕ್ರಿಯಾಶೀಲರಾಗಿರುವುದು ಸ್ಪಷ್ಟವಾಗಿ ಗುರುತಿಸಬಹುದು. ಶ್ರೀಯುತರು ತಮ್ಮ ಅಧಿಕಾರವಧಿಯಲ್ಲಿ ಬದ್ಧತೆ ಹಾಗೂ ತತ್ವ ನಿಷ್ಠತೆಗೆ ಹೆಚ್ಚಿನ ಗಮನವನ್ನು ನೀಡಿದವರು. ಭಾಷೆ, ಸಾಹಿತ್ಯ, ಕಲೆ, ಶಿಕ್ಷಣ, ಇತಿಹಾಸ, ರಾಜಕೀಯ ಆರ್ಥಿಕ ವ್ಯವಸ್ಥೆ, ಆಡಳಿತ ಸುಧಾರಣೆ, ನ್ಯಾಯಾಂಗ ಗ್ರಾಮೀಣಾಭಿವೃದ್ಧಿ ಹೀಗೆ ವೈವಿಧ್ಯವಾದ ಅಂಶಗಳ ಕಡೆಗೆ ಸ್ಪಷ್ಟವಾದ ದಾರ್ಶನಿಕ ನೋಟವನ್ನು ನೀಡಿದವರು. ಮೊಯಿಲಿಯವರ ಹಿಂದೆ ಅಪಾರವಾದ

ಅಧ್ಯಯನದ ವಿಸ್ತೃತ ಅನುಭವದ ಸಾರವಿದೆ, ಆಳವಾದ ಚಿಂತನೆಯ ಬದ್ಧತೆಯಿದೆ. ಇವೆಲ್ಲವುಗಳು ಅವರನ್ನು ರಾಜಕೀಯ ರಂಗದಲ್ಲಿ ಎತ್ತರದ ವ್ಯಕ್ತಿತ್ವಕ್ಕೆ ಕೊಂಡೊಯ್ಯುವ ಸಾಧನೆಯ ಸಲಕರಣೆಗಳಾಗಿವೆ.

ಮೊಯಿಲಿಯವರು ನುಡಿಕಾಣಿಕೆ ಕೃತಿಯಲ್ಲಿ ಮುಖ್ಯಮಂತ್ರಿಯಾದ ಸಂದರ್ಭದಲ್ಲಿ ಮಾಡಿದ ಭಾಷಣಗಳ ಸಂಕಲನದ ಪ್ರಸ್ತಾವಣೆಯಲ್ಲಿ ತಮ್ಮ ಚಿಂತನೆಯ ರೂಪರೇಷ ಹಾಗೂ ಅದರ ಪಕ್ವತೆಯ ಕುರಿತು ಈ ರೀತಿಯಲ್ಲಿ ತೋಡಿಕೊಂಡಿದ್ದಾರೆ. "ಸಾಮಾನ್ಯವಾಗಿ ಮುಖ್ಯಮಂತ್ರಿಗಳ ಭಾಷಣಗಳು ಕೇವಲ ವ್ಯಕ್ತಿಯೊಬ್ಬರ ಅನಿಸಿಕೆಯಾಗದೇ ಅದು ಆಯಾ ಜನಸಮುದಾಯದ ಸಾಂದರ್ಭಿಕ ಚಿಂತನೆಯ ಘನೀರೂಪವಾಗಿರುತ್ತದೆ. ಎಂತಹ ಒತ್ತಡ ಬಂದರೂ ಎಂತಹ ಕಷ್ಟಗಳನ್ನು ಎದುರಿಸಬೇಕಾಗಿ ಬಂದರೂ ಒಳ್ಳೆಯದರಲ್ಲಿ ನಿಷ್ಠೆ, ನಂಬಿಕೆಗಳನ್ನು ಕಳೆದುಕೊಳ್ಳದೇ ಪ್ರಾಮಾಣಿಕವಾಗಿ ಮಿಡಿಯುವ ಕೆಲವು ಅನಿಸಿಕೆಗಳಿಗೆ ನನ್ನ ಒಲವು ನಿಲುವು ಸ್ಪಷ್ಟವಾಗಿದೆ. ಎಂತಹ ಕಷ್ಟ ಕಾರ್ಪಣ್ಯ ಬಂದರೂ ಕಸಿಯಲಾರದ ಆಳವಾದ ಹೃದಯದ ಕರೆಯನ್ನು ಎಂದಿಗೂ ತಿರಸ್ಕರಿಸಿಲ್ಲ. ಮನುಷ್ಯನ ಬಾಳನ್ನು ಶ್ರೀಮಂತಗೊಳಿಸುವ ವಿಚಾರಗಳ ಆಸಕ್ತಿಯ ಚಿಲುಮೆ ಎಂದಿಗೂ ಬತ್ತಲಿಲ್ಲ. ಹಿರಿದಾದನ್ನು ಕಂಡಾಗ ಹಾರ್ದಿಕವಾದ ಮಾರ್ದನಿಗಳ ಸೂಕ್ಷ್ಮತೆಗಳನ್ನು ಎಂದಿಗೂ ಕಳೆದುಕೊಂಡಿಲ್ಲ." ಎನ್ನುವಲ್ಲಿ ಮೊಯಿಲಿಯವರು ಸಾಮಾಜಿಕ ಸ್ಪಂದನೆಯ ಮೂಲಕ ತಮ್ಮ ರಾಜಕೀಯ ಆಳ ನಿರಾಳದ ಚಿಂತನೆಗಳನ್ನು ತಮ್ಮ ಭಾಷಣಗಳ ಮೂಲಕ ಜನಸಾಮಾನ್ಯರಿಗೆ ತಲುಪಿಸಿದ್ದಾರೆ. ಇವುಗಳಲ್ಲಿ ಒಳಗೊಂಡಿರುವ ಅವರ ಚಿಂತನೆಯ ಆಶಯ ವಿನ್ಯಾಸವನ್ನು ಅಭ್ಯಾಸಿಸುವುದು ಮುಖ್ಯವಾದ ನೆಲೆಯಾಗಿದೆ. ಹಾಗಾಗಿ ವೀರಪ್ಪ ಮೊಯಿಲಿಯವರ ರಾಜಕೀಯ ಚಿಂತನೆಗಳು ಎಂಬ ಈ ಅಧ್ಯಯನವು ಏಳು ಅಧ್ಯಾಯಗಳನ್ನೊಳಗೊಂಡ ಅವರ ವೈಚಾರಿಕ ನಿಲುವನ್ನು, ಸಾಮಾಜಿಕ ದೃಷ್ಟಿಕೋನವನ್ನು, ರಾಜಕೀಯ ಕಾರ್ಯ ವೈಖರಿಯನ್ನು, ಸಾಧನೆಯ ಸಫಲತೆಯನ್ನು, ಮತ್ತು ವಿಫಲತೆಯನ್ನು, ಹಾಗೂ ಅವರ ಬದುಕಿನ ರೀತಿ ನೀತಿ ಅವರ ಪರಿಸರದ ಹಿನ್ನೆಲೆ ಅವರು ಎದುರಿಸಿದ ಕಷ್ಟ ನಷ್ಟಗಳು ಹಾಗೂ ಅವರು ಹಲವು ಚಿಂತಕರ ಪ್ರೇರಣೆಗೆ ಮತ್ತು ಪ್ರಭಾವಕ್ಕೆ ಒಳಗಾದ ಮುಂತಾದ ಅಂಶಗಳ ಕುರಿತು ತೀಕ್ಷ್ಣವಾಗಿ ವಿಮರ್ಶಾತ್ಮಕ ದೃಷ್ಟಿಕೋನದ ಮೂಲಕ ಅವರ ರಾಜಕೀಯ ಚಿಂತನೆಯ ಆಳ ಅಗಲವನ್ನು ಅರಿಯುವ ಪ್ರಾಂಜಲ ಪ್ರಯತ್ನದ ಈ ಅಧ್ಯಯನದ ಮುಖ್ಯ ನೆಲೆಯಾಗಿರುವುದನ್ನು ಆಯಾ

ಅಧ್ಯಯನದ ಅಡಿಯಲ್ಲಿ ವಿಶ್ಲೇಷಣಾತ್ಮಕ ವಿಧಾನದ ಮೂಲಕ ಹೆಕ್ಕಿ ತೆಗೆಯುವ ಪ್ರಯತ್ನವನ್ನು ಮಾಡಲಾಗಿದೆ.

ಶ್ರೇಣೀಕೃತ ಸಮಾಜದ ಕೆಳ ಸಮುದಾಯದಲ್ಲಿ ಜನಿಸಿದ ಮೊಯಿಲಿ ಕರ್ನಾಟಕ ರಾಜ್ಯದ ರಾಜಕೀಯ ಕ್ಷೇತ್ರದ ಉನ್ನತವಾದ ಸ್ಥಾನ ಅಲಂಕರಿಸುವುದು ಸಾಮಾನ್ಯವಾದದ್ದಲ್ಲ. ಮೊಯಿಲಿಯವರು ಮುಖ್ಯಮಂತ್ರಿ ಹುದ್ದೆಯನ್ನು ಪಡೆಯಲು ಅವರಲ್ಲಿರುವ ಕಠಿಣವಾದ ಪರಿಶ್ರಮ ಸತತ ಪ್ರಯತ್ನ ಜನಸಮುದಾಯದ ಜೊತೆ ಬೆರೆಯುವುದು, ಜನರ ಆಸೆ, ಆಕಾಂಕ್ಷೆಗಳಿಗೆ ಸ್ಪಂದಿಸುವ, ಕಷ್ಟ ನಷ್ಟದಲ್ಲಿ ಭಾಗಿಯಾಗುವ ಅನ್ಯಾಯವನ್ನು ಎದುರಿಸುವಂತಹ ಹೋರಾಟಗಾರನಾಗಿ ಸ್ವಚ್ಛ ಮನಸ್ಸಿನ ನಿರ್ಮಲ ಹೃದಯದ ಸಮಾಜ ಸೇವಕನಾಗಿ ಜನಪ್ರೀಯತೆಯನ್ನು ಗಳಿಸಿಕೊಂಡು ಇಂದಿಗೂ ಸಹ ರಾಷ್ಟ್ರ ರಾಜಕಾರಣದಲ್ಲಿ ತಮ್ಮ ರಾಜಕೀಯ ಚಿಂತನೆಯನ್ನು ಕಾಯ್ದುಕೊಂಡ ಅಪರೂಪ ರಾಜಕೀಯ ಮುತ್ಸದ್ಧಿ ಚಿಂತಕರಾಗಿದ್ದಾರೆ.

ಕರ್ನಾಟಕ ರಾಜಕೀಯ ಚರಿತ್ರೆಯಲ್ಲಿ ಹಲವು ಜನ ಮುಖ್ಯಮಂತ್ರಿಗಳಾಗಿದ್ದಾರೆ. ಸಾಕಷ್ಟು ಜನ ರಾಷ್ಟ್ರ ರಾಜಕಾರಣದಲ್ಲಿ ಮಿಂಚಿದ್ದಾರೆ. ಆದರೆ ಮೊಯಿಲಿಯವರಲ್ಲಿರುವ ತತ್ವ ರಾಜಕೀಯ ಸರ್ವರನ್ನು ಸಮಾನತೆಯಿಂದ ಕಾಣುವ ಗುಣ ಯೋಜನೆಗೆ ಸ್ಪಷ್ಟವಾದ ಪೂರ್ವ ನೀಲ ನಕ್ಷೆಯನ್ನು ಹಾಕಿಕೊಂಡು ಜನಪರ ಕಾರ್ಯ ಯೋಜನೆಗಳನ್ನು ರೂಪಿಸುವಲ್ಲಿ ಮೊಯಿಲಿಯವರು ಸರ್ವಶ್ರೇಷ್ಠರು. ಉಳಿದ ರಾಜಕೀಯ ವ್ಯಕ್ತಿಗಳ ಹಾಗೆ ಸೋತಾಗ ಸುಮ್ಮನೆ ಕೂರದೆ, ಚುನಾವಣೆಯಲ್ಲಿ ಗೆದ್ದಾಗ ಹಿಗ್ಗದೆ ಸದಾ ಕಾರ್ಯ ಪ್ರವೃತ್ತವಾಗಿರುವ ಕ್ರಿಯಾಶೀಲ ಮನಸ್ಸು ಮೊಯಿಲಿಯವರದಾಗಿರುವದರಿಂದ ಪ್ರಸ್ತುತ ರಾಷ್ಟ್ರ ರಾಜಕಾರಣದಲ್ಲಿ ಅನನ್ಯ ವ್ಯಕ್ತಿತ್ವವನ್ನು ಪ್ರದರ್ಶಿಸಿ ರಾಷ್ಟ್ರದ ಜನತೆಯ ಸಮಸ್ಯೆಗಳಿಗೆ ಸ್ಪಂದಿಸುತ್ತಿರುವುದು ಮುಖ್ಯವಾಗಿದೆ.

ಮೊಯಿಲಿಯವರಲ್ಲಿ ಪ್ರಮುಖವಾಗಿ ಒಳಗೊಂಡಿರುವ ರಾಜಕೀಯ ಚಿಂತನೆಗಳು ವಾಸ್ತವಾದ ನೆಲೆಯಿಂದ ಸಮಾಜವನ್ನು ಕುರಿತದ್ದು, ಪರಂಪರೆ ಹಾಗೂ ಪ್ರಸ್ತುತ ರಾಜಕೀಯ ಒಳನೋಟವನ್ನು ಒಳಗೊಂಡಿದ್ದು, ಆರ್ಥಿಕ ಮುಂದಾಲೋಚನೆಯ ದೂರದೃಷ್ಟಿ ಒಳಗೊಂಡಿದ್ದು, ಶೈಕ್ಷಣಿಕ ಶ್ರೇಯೋಭಿವೃದ್ಧಿಯನ್ನು ಒಳಗೊಂಡಿರುವಂತಹದ್ದು, ನ್ಯಾಯ ಪರವಾದ ದಿಟ್ಟ ಹೆಜ್ಜೆ ಅವರ ಚಿಂತನೆಯ ಮತ್ತೊಂದು ಮಗ್ಗಲು. ಸಾಂಸ್ಕೃತಿಕ ಬದುಕಿನ

ಚಿಂತನೆಗೆ ಮೊಯಿಲಿಯವರು ಹೆಚ್ಚು ಮಹತ್ವ ನೀಡಿದ್ದರು. ಅವರಲ್ಲಿರುವ ಪ್ರಾಮಾಣಿಕತೆ ಅವರನ್ನು ಉನ್ನತ ಮಟ್ಟಕ್ಕೆ ಏರಿಸಿದವು.

ರಾಜಕೀಯ ಪ್ರವೇಶ ಪಡೆಯುವ ಮುಂಚೆ ಅವರೊಬ್ಬ ನ್ಯಾಯವಾದಿ, ಆ ವೃತ್ತಿಯಲ್ಲಿರುವಾಗ ಅವರಿಗಾದ ಆಳ ಅನುಭವವೇ ಅವರನ್ನು ಒಬ್ಬ ಶ್ರೇಷ್ಠ ಚಿಂತಕನನ್ನಾಗಿ ರೂಪಿಸಿದ್ದು ತನ್ನ ಕಕ್ಷಿದಾರರ ಸಮಸ್ಯೆ ಬದುಕು ಬವಣೆ ಹಾಗೂ ನ್ಯಾಯಕ್ಕಾಗಿ ನ್ಯಾಯ ದೊರಕಿಸುವುದಕ್ಕಾಗಿ ಅವರನ್ನು ಬೆಳೆಸಿದಂತವುಗಳು. ಆ ಮೂಲಕ ಅವರು ಆ ಪ್ರದೇಶದಲ್ಲಿ ಜನರಿಗೆ ಹತ್ತಿರವಾದರು. ಜೊತೆಗೆ ಜನಾಭಿಪ್ರಾಯವನ್ನು ಗಳಿಸಿಕೊಂಡರು.

ಮೊಯಿಲಿಯವರಲ್ಲಿ ಅಧ್ಯಯನಶೀಲ ಪ್ರವೃತ್ತಿ ಇದೆ. ಅವರ ವ್ಯಾಪಕ ಓದು ರಾಜ್ಯ, ರಾಷ್ಟ್ರ, ಅಂತರಾಷ್ಟ್ರೀಯ ಮಟ್ಟದ ಸಮಸ್ಯೆ ಹಾಗೂ ಮಹಾನ್ ಚಿಂತಕರ ತತ್ವಗಳ ತಲಸ್ಪರ್ಶಿಯಾಗಿ ಅವರನ್ನು ಉನ್ನತ ಮಟ್ಟದ ಸಾಮಾಜಿಕ ಮತ್ತು ರಾಜಕೀಯ ಚಿಂತಕರಾಗಿ ರೂಪಿಸಿದಂತಹವುಗಳು. ಅವರು ಎಷ್ಟೇ ಒತ್ತಡದಲ್ಲಿದ್ದರೂ ಸಹ ಅವರ ಕವಿ ಹೃದಯ ಮನೋಭಾವನೆ, ಅವರಲ್ಲಿ ಹುದುಗಿರುವ ಗುಣ ಇವು ಅವರ ಯಶಸ್ಸಿನ ಮೆಟ್ಟಿಲುಗಳಾಗಿವೆ. ಶ್ರೀಯುತರು ಅಪಾರವಾದ ಆತ್ಮ ವಿಶ್ವಾಸವುಳ್ಳವರು ಸೌಜನ್ಯ ಮತ್ತು ಸ್ವಯಂ ಶಿಸ್ತಿಗೆ ಆದ್ಯತೆ ನೀಡಿದವರು. ದಣಿವಿಲ್ಲದ ದುಡಿಮೆ ಅವರದು, ಯುವ ಜನಾಂಗದ ಬಗ್ಗೆ ಅವರಲ್ಲಿರುವ ಕಾಳಜಿ ಇವು ಅವರ ರಾಜಕೀಯ ಚಿಂತನೆಯ ವಿಶಿಷ್ಟ ಮಗ್ಗಲುಗಳು. ಅವರಲ್ಲಿರುವ ಇನ್ನೊಂದು ವಿಶಿಷ್ಟತೆ ಎಂದರೆ ಮಹಾನ್ ಚಿಂತಕರ ತತ್ವ ತಮ್ಮ ವ್ಯಕ್ತಿತ್ವದಲ್ಲಿ ಅಳವಡಿಸಿಕೊಳ್ಳುವುದರ ಮೂಲಕ ತಮ್ಮದೇ ಆದ ಚಿಂತನೆಯ ರೂಪರೇಷೆಯನ್ನು ವಿಸ್ತರಿಸುವ ನಿಟ್ಟಿನಲ್ಲಿ ಬೆಳೆದವರು. ಈ ಎಲ್ಲ ಅನ್ವೇಷಕ ಅಧ್ಯಯನ ಮನಸ್ಸು ಮೊಯಿಲಿಯವರದಾಗಿರುವುದರಿಂದ ಅವರ ರಾಜಕೀಯ ಚಿಂತನೆಯ ನೆಲೆಯಲ್ಲಿ ಕಂಡುಕೊಳ್ಳಲಾದ ಫಲಿತವನ್ನು ಈ ರೀತಿಯಲ್ಲಿ ಕಲೆ ಹಾಕಲಾಗಿದೆ.

ಫಲಿತಗಳು

೧) ಮೊಯಿಲಿಯವರು ತಮ್ಮ ರಾಜಕೀಯ ಚಿಂತನೆಯಲ್ಲಿ ಬಹುಮುಖ್ಯ ಪ್ರಾಶಸ್ತ್ಯ ನೀಡಿದ್ದು ಹಿಂದುಳಿದ ಅಲ್ಪಸಂಖ್ಯಾತ ದೀನದುರ್ಬಲ ಶ್ರೇಯೋಭಿವೃದ್ಧಿಗಾಗಿಯೇ ಈ ಕುರಿತು ಹಲವು ಕಾರ್ಯ ಯೋಜನೆಗಳನ್ನು ತಮ್ಮ ಅಧಿಕಾರದ ಅವಧಿಯಲ್ಲಿ ಹಾಕಿಕೊಳ್ಳುವುದರ ಮೂಲಕ ಯಶಸ್ವಿಯನ್ನು ಪಡೆದುಕೊಂಡವರು.

೨) ಮೊಯಿಲಿಯವರು ಸಾಮಾಜಿಕ ನ್ಯಾಯಕ್ಕಾಗಿ ಹೋರಾಡಿದ ಮಹಾನ್ ಸಾಧಕರು ಡಿ.ದೇವರಾಜ ಅರಸರ ಪರಂಪರೆಯನ್ನು ಹಾಗೂ ಕಾರ್ಯ ವೈಖರಿಯನ್ನು ಅಕ್ಷರಶಃ ಪಾಲಿಸಿಕೊಂಡು ಮುಂದುವರೆಸಿಕೊಂಡು ಬಂದವರಲ್ಲಿ ಮೊಯಿಲಿಯವರೇ ಪ್ರಮುಖರು.

೩) ರಾಜ್ಯ ಮತ್ತು ರಾಷ್ಟ್ರ ರಾಜಕಾರಣದಲ್ಲಿದ್ದುಕೊಂಡು ದೇಶದ ಅಭಿವೃದ್ಧಿಗೆ ಮುಂದಾಲೋಚನೆಯ ದೂರದೃಷ್ಟಿಕೋನವನ್ನಿಟ್ಟುಕೊಂಡು ತಾವು ಕೈಗೊಳ್ಳುವ ಕಾರ್ಯವೈಖರಿಯ ಬಗ್ಗೆ ಪರಾಮರ್ಶಿಸಿ ಪೂರ್ವ ನಿಯೋಜಿತವಾದ ಯೋಜನೆಯನ್ನು ರೂಪಿಸಿ ಜನರಿಗೆ ಬಹು ಬೇಗನೆ ತಲುಪುವ ಹಾಗೆ ಮಾಡಿದವರು.

೪) ಮೊಯಿಲಿಯವರು ಕೇಂದ್ರ ಆಡಳಿತ ಸುಧಾರಣೆ ಆಯೋಗದ ಅಧ್ಯಕ್ಷರಾದ ಅವಧಿಯಲ್ಲಿ ಅವರು ಸಲ್ಲಿಸಿದ ಆಡಳಿತ ಸುಧಾರಣೆಯ ವರದಿಯು ರಾಷ್ಟ್ರಕ್ಕೆ ಮಾದರಿಯಾಗಿದ್ದು ಅನೇಕ ವರ್ಷಗಳಿಂದ ಆಗದೇ ಇರುವ ಮಹತ್ವದ ಕಾರ್ಯವನ್ನು ಆ ವರದಿಯ ಮೂಲಕ ಸರ್ಕಾರದಿಂದ ಮಾಡಿಸುವದರಲ್ಲಿ ಮೊಯಿಲಿಯವರಲ್ಲಿ ಪ್ರಬುದ್ಧ ಚಿಂತನೆಯ ಮಹತ್ವದ ಅಂಶ ಗೋಚರಿಸುತ್ತದೆ.

೫) ಮುಖ್ಯಮಂತ್ರಿಯಾಗಿದ್ದಾಗ ಮೊಯಿಲಿಯವರು ಶೈಕ್ಷಣಿಕ ಸುಧಾರಣೆಗೆ ಒತ್ತನ್ನು ನೀಡಿದ್ದು ಪ್ರತಿಯೋರ್ವರು ಶಿಕ್ಷಣದ ಮಹತ್ವವನ್ನು ಪ್ರಯೋಜನೆಯನ್ನು ಪಡೆಯಬೇಕೆಂಬ ಮಹೋನ್ನತವಾದ ಉದ್ದೇಶವನ್ನಿಟ್ಟುಕೊಂಡು ಹಲವು ಚಿಂತನಾ ಪೂರ್ವಕವಾದ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದರ ಮೂಲಕ ಅವುಗಳನ್ನು ಚಾಚು ತಪ್ಪದೇ ಕಾರ್ಯಗತಗೊಳಿಸಿದರು.

೬) ಸುಮಾರು ವರ್ಷಗಳಿಂದ ರಾಜ್ಯದಲ್ಲಿ ಇತ್ಯರ್ಥವಾಗದೇ ಇರುವ ಸಾವಿರಾರು ಮೊಕದ್ದಮೆಗಳನ್ನು 'ಲೋಕ ಅದಾಲತ್' ಎಂಬ ವಿಶೇಷವಾದ ಕಾರ್ಯ ಯೋಜನೆಯನ್ನು ರೂಪಿಸುವ ಮೂಲಕ ರಾಜ್ಯದಲ್ಲಿಯೇ ಪ್ರಥಮ ಬಾರಿಗೆ ಸಾವಿರಾರು ನ್ಯಾಯಾಲಯದ ಮೊಕದ್ದಮೆಗಳನ್ನು ಇತ್ಯರ್ಥ ಮಾಡಿಸಿದ ಕೀರ್ತಿ ಮೊಯಿಲಿಯವರದು. ಈ ಯೋಜನೆಯ ಹಿಂದೆ ಅವರು ನ್ಯಾಯವಾದಿಗಳಾಗಿ ತಮ್ಮ ವೃತ್ತಿಜೀವನ ಆರಂಭಿಸಿದ ಅವಧಿಯಲ್ಲಿ ಜನರು ನ್ಯಾಯಕ್ಕಾಗಿ ಪರದಾಡುವ,

ಹಣವನ್ನು ವ್ಯಯಮಾಡುವ, ಬದುಕನ್ನು ಹಾಳುಮಾಡಿಕೊಳ್ಳುವ, ಸಾಮಾಜಿಕ ಈರ್ಷೆಯನ್ನು ಹೆಚ್ಚಿಸಿಕೊಳ್ಳುವ ಅಪಾಯವನ್ನು ತಮ್ಮ ಚಿಂತನೆಯ ಪ್ರಭುದ್ಧತೆಯ ಮೂಲಕ ಬಗೆಹರಿಸುವ ಕಾರ್ಯ ಶ್ಲಾಘನೀಯ.

೭) ಕನ್ನಡ, ಸಾಹಿತ್ಯ, ಭಾಷೆ, ಸಂಸ್ಕೃತಿಗೆ ಹಿಂದೆ ಮಾಡಿರುವ ಯಾವ ಮುಖ್ಯಮಂತ್ರಿಗಿಂತಲೂ ಅತೀ ಹೆಚ್ಚು ಕಾರ್ಯವನ್ನು ಮಾಡಿ ತೋರಿಸಿದ್ದಾರೆ. ಕನ್ನಡ ಸಾಹಿತ್ಯ ಪರಿಷತ್ತಿಗೆ ಅನುದಾನ, ಸಾಹಿತ್ಯ ಸಮ್ಮೇಳನಾಧ್ಯಕ್ಷರಿಗೆ ಸಚಿವ ಸ್ಥಾನಮಾನ, ಕನ್ನಡ ಸಂಸ್ಕೃತಿ ಇಲಾಖೆಗೆ ಪ್ರತ್ಯೇಕ ಸಚಿವಾಲಯ ಸ್ಥಾನಮಾನ, ಕಲೆ, ಸಂಗೀತ, ಪತ್ರಿಕೋದ್ಯಮ ಮುಂತಾದ ಕ್ಷೇತ್ರಕ್ಕೆ ಸೇವೆ ಸಲ್ಲಿಸಿದ ಮಹಾನ ವ್ಯಕ್ತಿಗಳಿಗೆ ಸರ್ಕಾರದಿಂದ ಪ್ರಶಸ್ತಿ ಪುರಸ್ಕಾರ ವಿವಿಧ ಭಾಷೆಗಳಿಗೆ ಪ್ರತ್ಯೇಕ ಅಕಾಡೆಮಿಗಳ ಸ್ಥಾಪನೆ ಹಿರಿಯ ಸಾಹಿತಿಗಳಿಗೆ ಗೌರವಧನ ಹೆಚ್ಚಳ ಮೊದಲಾದ ಹಲವು ಕಾರ್ಯವನ್ನು ಮಾಡುವುದರ ಮೂಲಕ ಅವರಲ್ಲಿರುವ ಕವಿ ಮನೋಬಲವನ್ನು ತೋರ್ಪಡಿಸುವ ಚಿಂತನೆಯ ಫಲಗಳಾಗಿವೆ.

೮) ತೆರಿಗೆ ಸುಧಾರಣೆಯನ್ನು ರಾಷ್ಟ್ರದಲ್ಲಿಯೇ ಪ್ರಥಮ ಬಾರಿಗೆ ವಿಶಿಷ್ಟ ಚಿಂತನೆಯ ಫಲವಾಗಿ ಜಾರಿಗೆ ತರಲು ಯೋಜನೆಯನ್ನು ರೂಪಿಸಿ ವಿವಿಧ ರಾಜ್ಯಗಳಿಗೆ ಮಾದರಿ ಯೋಜನೆ ಎಂಬ ಹೆಗ್ಗಳಿಕೆಗೆ ಪಾತ್ರವಾಗುವಂತೆ ಹಾಗೂ ಈ ಹಿಂದೆ ಎಂದೂ ಕಂಡರಿಯದ ರಾಜ್ಯದ ವರಮಾನ ಹೆಚ್ಚಳ ಮಾಡಿಸಿದ್ದು, ಮಹತ್ವ ಪೂರ್ಣವಾದ ಚಿಂತನೆಯಾಗಿದೆ. ಸರಾಯಿ ನಿಷೇಧ, ಲಾಟರಿ ನಿಷೇಧ ಬಹುದೊಡ್ಡ ವರಮಾನವಾದ ಇಂತಹ ಜೂಜು ಮತ್ತು ಮಾರಕವಾದ ಪಾನೀಯಗಳನ್ನು ನಿಷೇದಿಸಿ ಇನ್ನುಳಿದ ತೆರಿಗೆಗಳನ್ನು ಬಲಪಡಿಸುವ ನಿಟ್ಟಿನಲ್ಲಿ ಪ್ರಾಮಾಣಿಕ ಪ್ರಯತ್ನಮಾಡಿದವರು ಮೊಯಿಲಿಯವರು. ಈ ಎರಡು ಮಹತ್ವ ಪೂರ್ಣವಾದ ವಿಷಯಗಳು ಬಡವರು ದೀನದಲಿತರು ನೆಮ್ಮದಿಯ ಜೀವನ ಸಾಗಿಸಲು ಇವರ ಕಾರ್ಯಯೋಜನೆ ಕಾರಣವಾಯಿತು. ಇದು ಚಿಂತನೆಯ ಬತ್ತಳಿಕೆಯ ಬಹುಮುಖ್ಯ ಕಾರ್ಯವಾಗಿದೆ.

೯) ಬಹುಕಾಲ ನೆನಗುದಿಗೆ ಬಿದ್ದ ನೀರಾವರಿ ಯೋಜನೆಗಳನ್ನು ಸಮರ್ಪಕವಾದ ಸರಕಾರದ ಆದಾಯದಲ್ಲಿ ರೈತರಿಗೆ ಮುಟ್ಟುವ ಹಾಗೆ ಸೌಲಭ್ಯವನ್ನು ಮಾಡಿ

ತೋರಿಸಿದರು. ಸಾವಿರಾರು ರೈತರ ಕಣ್ಣೀರು ಒರೆಸುವ ಕಾರ್ಯ ಇವರ ನೀರಾವರಿ ಯೋಜನೆಗಳಾಗಿವೆ. ಈ ಕಾರ್ಯ ಮಾಡುವುದರಲ್ಲಿ ಅವರು ತೋರಿದ ಸಮಯ ಪ್ರಜ್ಞೆ ದಿಟ್ಟ ನಿಲುವು ಗಟ್ಟಿ ನಿರ್ಧಾರ ಇವೆಲ್ಲವುಗಳು ಬೃಹತ್ ಯೋಜನೆಯ ಸಮಸ್ಯೆಯನ್ನು ಸರಾಗವಾಗಿ ನಿರ್ವಹಿಸಲು ಮತ್ತು ಸಕಾಲವಾಗಿ ಪೂರೈಸಲು ಕಾರಣಗಳಾದವು.

೧೦) ದೇಶದಲ್ಲಿ ಮೊದಲ ಬಾರಿಗೆ ಕರ್ನಾಟಕ ರಾಜ್ಯದಲ್ಲಿ ಹೊಸ ಹೊಸ ಕೈಗಾರಿಕೆಗಳ ಸ್ಥಾಪನೆ ಹಾಗೂ ಅವುಗಳಿಗೆ ಮೂಲ ಸಂಪನ್ಮೂಲ ಒದಗಿಸುವ ಪ್ರಯತ್ನ ಜೊತೆಗೆ ರಾಜ್ಯದ ವರಮಾನದ ಹೆಚ್ಚಳ ಮಾಡಿಸುವ ನಿಟ್ಟಿನಲ್ಲಿ ಸಾವಿರಾರು ಜನರಿಗೆ ಉದ್ಯೋಗಸೃಷ್ಟಿ ಮುಂತಾಗಿ ಕೈಗಾರಿಕೆಯಲ್ಲಿ ರಾಜ್ಯದ ಹೆಸರು ರಾಷ್ಟ್ರದಲ್ಲಿ ಮನ್ನಣೆಯನ್ನು ಪಡೆಯಲು ಮಾಡಿದ ಕೀರ್ತಿ ಅಲ್ಲಗಳೆಯುವಂತಿಲ್ಲ.

ಈ ಮೇಲ್ಕಾಣಿಸಿದ ಫಲಿತಗಳಲ್ಲದೇ ಇನ್ನೂ ಅನೇಕ ಫಲಿತಗಳು ಇವರ ರಾಜಕೀಯ ಚಿಂತನೆಯ ಅಧ್ಯಯನದಲ್ಲಿ ಕಂಡು ಬರುತ್ತವೆ. ಅವೆಲ್ಲವನ್ನು ಆಯಾ ಅಧ್ಯಾಯಗಳಡಿಯಲ್ಲಿ ಈ ಹಿಂದೆ ಚರ್ಚಿಸಲಾಗಿದೆ. ಬಹುಮುಖ್ಯವಾಗಿ ಮೊಯಿಲಿಯವರ ತಾತ್ವಿಕ ಚಿಂತನೆ, ಮೌಲ್ಯಯುತ ರಾಜಕೀಯ ಹಿನ್ನೆಲೆ, ಗಟ್ಟಿ ನೆಲೆ, ಹಾಗೂ ಸೈದ್ಧಾಂತಿಕ ಸಾಮಾಜಿಕ ನೆಲೆಯ ಮೂಲಕ ಅವರು ಕಂಡುಕೊಂಡ ದಾರಿ ಆದರ್ಶಪ್ರಾಯವಾದದು. ವಾಸ್ತವ ರಾಜಕೀಯ ರಂಗದಲ್ಲಿ ಕಳಂಕ ರಹಿತ ರಾಜಕೀಯ ಪಟುವಾಗಿ ಜನರ ಟೀಕೆ-ಟಿಪ್ಪಣೆಗೆ ಗುರಿಯಾಗದೇ ಅಧ್ಯಯನಶೀಲ ಮನಸ್ಸನ್ನು ಉಳ್ಳಂತಹ ರಾಜಕೀಯ ಚಿಂತಕರಲ್ಲಿ ಸಾಮಾಜಿಕ ಸುಧಾರಕರಲ್ಲಿ ಇನ್ನುಳಿದ ವ್ಯಕ್ತಿಗಳಿಗಿಂತ ಮೊಯಿಲಿಯವರು ಈ ಕಾರಣದಿಂದಾಗಿಯೇ ಭಿನ್ನವಾಗಿ ನಿಲ್ಲುತ್ತಾರೆ. ಶ್ರೀಯುತರ ಸಾಮಾಜಿಕ ಕಳಕಳಿ ರಾಷ್ಟ್ರ ಪ್ರೇಮ, ಮಾನವೀಯತೆಯ ನೋಟ ಸರ್ವರನ್ನು ಸಮಾನರನ್ನಾಗಿ ಕಾಣುವ ಗುಣ ಅವರೊಬ್ಬ ಆದರ್ಶ ರಾಜಕೀಯ ಚಿಂತಕರಾಗಿ ರೂಪಿಸಿದೆ.

ಮೊಯಿಲಿಯವರ ರಾಜಕೀಯ ಚಿಂತನೆಗಳ ಸಮಗ್ರ ಮೌಲ್ಯಮಾಪನ ಮಾಡುವ ಕಾಲ ಇದಲ್ಲ. ಅವರು ಇನ್ನೂ ಸಕ್ರಿಯ ಹಾಗೂ ಕ್ರಿಯಾಶೀಲ ರಾಜಕಾರಣಿ. ಅವರು ಅನೇಕ ಚಿಂತನೆಗಳನ್ನು ಅಭಿವ್ಯಕ್ತಿಸಲು ಯೋಜಿಸಿದ ಶೃಜನಶೀಲ ಬರಹಗಾರರು. ವ್ಯಾಪಕವಾದ ಅವರ ಚಿಂತನೆ ಆದರ್ಶಪ್ರಾಯವಾದವುಗಳು ಹೀಗಾಗಿ ಇದುವರೆಗಿನ ಅವರ ಯೋಜನೆ,

ಯೋಚನೆ, ಅನುಷ್ಠಾನಗಳನ್ನು ಗಮನದಲ್ಲಿಟ್ಟುಕೊಂಡು ಅವರ ಚಿಂತನೆಗಳನ್ನು ನನ್ನ ಅಧ್ಯಯನದಲ್ಲಿ ಸಮೀಕ್ಷಿಸಲಾಗಿದೆ. ಇದು ಈ ಮಹಾಪ್ರಬಂಧದ ಪರಿಮಿತಿಯು ಹೌದು.

ಅನುಬಂಧಗಳು

೧)ಮೊಯಿಲಿಯವರೊಂದಿಗೆ ಸಂದರ್ಶನ

೨)ಮೊಯಿಲಿಯವರ ಜೀವನದ ಘಟನೆಗಳು

೩)ಆಕರ ಗ್ರಂಥಗಳು

ಅನುಬಂಧಗಳು

ಎಂ. ವೀರಪ್ಪ ಮೊಯಿಲಿಯವರ ಸಂದರ್ಶನ

- **ತಾವು ರಾಜಕಾರಣಿಯಾಗಿದ್ದರೂ ಉಳಿದವರಿಗಿಂತ ಭಿನ್ನರಾಗಿದ್ದನ್ನು ಕರ್ನಾಟಕದ ಜನತೆ ಅರಿತಿದೆ ಅದು ತಮಗೆ ಹೇಗೆ ಸಾಧ್ಯವಾಯಿತು ?**

ಈ ಭಿನ್ನತೆಗೆ ನಾನು ಹುಟ್ಟಿ ಬೆಳೆದ ಪರಿಸರ ಹಾಗೂ ಆ ಪರಿಸರದಲ್ಲಿ ನಾನು ಅನುಭವಿಸಿದ ನೋವು ಕಾರಣ. ಕೆಳಸ್ಥರದ ಸಮುದಾಯದಲ್ಲಿ ಜನಿಸಿದ ನಾನು ಬಾಲ್ಯದಲ್ಲಿಯೇ ಸಾಮಾಜಿಕ ತರತಮವನ್ನು ಕಂಡು ಸಮುದಾಯ ಸಮಾನತೆಯ ಚಿಂತನೆಗೆ ಚಿಂತಿಸಿದವನು. ಈ ಹಿನ್ನೆಲೆಯೇ ನನ್ನನ್ನು ರಾಜಕೀಯ ಚಿಂತನೆಯೆಡೆಗೆ ಕೊಂಡೊಯಿತು. ಇದರಿಂದ ನಾನು ರಾಜಕಾರಣಿಯಾಗಿದ್ದರೂ ಚಿಂತಕನಾಗಿ ಬೆಳೆಯಲು ಸಾಧ್ಯವಾಯಿತು.

- **ತಮ್ಮ ರಾಜಕೀಯ ಚಿಂತನೆಗಳ ಸ್ವರೂಪ ಏನು ?**

ನಾವು ಯಾವಾಗಲೂ ಕೂಡಾ ಯಾವುದೇ ಒಂದು ಚಿಂತನೆಯನ್ನು ಮಾಡುವಾಗ ಬರುವ ಚುನಾವಣೆಯನ್ನು ಆಲೋಚನೆ ಮಾಡುವುದಿಲ್ಲ. ರಾಷ್ಟ್ರದ ಜನಾಂಗದ ಚಿಂತನೆ ಮಾಡುತ್ತೇವೆ. ರಾಷ್ಟ್ರದ ಮತ್ತು ಮುಂದಿನ ಜನಾಂಗದ ಅಭಿವೃದ್ಧಿ ಹೇಗೆ ಆಗಬೇಕೆಂಬುವುದನ್ನು ಯೋಚನೆ ಮಾಡುತ್ತೇವೆ. ಹಾಗೀರುವಾಗ ಈ ತಾತ್ಕಾಲಿಕ ಆಮಿಷಗಳು ಮುಖ್ಯವಾಗುವುದಿಲ್ಲ. ಮತ್ತೆ ನಾವು ಇಡೀ ಒಂದು ಸಮುದಾಯದಲ್ಲಿ ನಮ್ಮ ಸ್ಥಾನ ಹುಡುಕಬೇಕೇ ಹೊರತು ಸಮುದಾಯ ನಮಗಾಗಿ ಸ್ಥಾನ ಹುಡುಕುವ ಹಾಗೆ ಮಾಡಬಾರದು ಅದು ಸ್ವಾರ್ಥವಾಗುತ್ತದೆ. ಆದ್ದರಿಂದ ಈ ಹೊತ್ತು ಈ ಸಮುದಾಯದ ಸಮಷ್ಠಿ ದೃಷ್ಟಿಯಿಂದ ಅದು ಮುಂದಿನ ಜನಾಂಗ ಹೇಗೆ ಬೆಳೆಯಬೇಕು ಎಂದು ಆಲೋಚನೆ ಮಾಡಿದಾಗ ನಮಗೂ ಅದರಿಂದ ಶಕ್ತಿ ಬರುತ್ತದೆ. ಇಲ್ಲದಿದ್ದರೆ ಸಮುದಾಯದಿಂದ ಶಕ್ತಿ ಹೀರಿದ್ದರೆ ಸಮುದಾಯದ ಶಕ್ತಿ ಕಡಿಮೆಯಾಗುತ್ತದೆ. ನಮ್ಮ ಶಕ್ತಿಯೂ ಕಡಿಮೆಯಾಗುತ್ತದೆ.

- **ನಿಮ್ಮ ಚಿಂತನೆಯ ಹಿಂದಿನ ಪ್ರೇರಣೆಗಳು ಯಾವವು ?**

ಚಿಕ್ಕಂದಿನಿಂದಲೂ ಹಳ್ಳಿಯಲ್ಲಿ ಬೆಳೆದುಕೊಂಡು ಬಂದ ವಾತಾವರಣ ಮತ್ತು ಬಡತನದ ಕಹಿಯನ್ನು ಉಂಡು ಬೆಳೆದವರು. ಬಡತನದ ಕಹಿ ನಮಗೆ ಗೊತ್ತಿದೆ. ಯಾವ ರೀತಿ ತಾರತಮ್ಯತೆಯಿಂದ, ವ್ಯತ್ಯಾಸದಿಂದ ಶೋಷಣೆಯಿಂದ, ಸಮುದಾಯಕ್ಕೆ ಸಮುದಾಯವೆ ಎಷ್ಟು ಕುಸಿತವಾಗುತ್ತದೆ ಎಂದು ಗೊತ್ತಿದೆ. Arnold Tynbee ಹೇಳುತ್ತಾನೆ. ಜಗತ್ತಿನ ೨೧ ನಾಗರೀಕ ಸಮುದಾಯಗಳಲ್ಲಿ ೧೯ ನಾಗರೀಕ ಸಮುದಾಯಗಳು ಶೀಲದಿಂದಲೇ ಕುಸಿದಿವೆ ಬಾಹ್ಯ ಆಕ್ರಮಣದಿಂದಲ್ಲ. ಆದ್ದರಿಂದ ನಮ್ಮ ಸಮುದಾಯದಲ್ಲಿಯೂ ಕೆಲವು ಶೀಲ ಗುಣಗಳಿವೆ ಅದು ಜಾತ್ಯಾತೀತತೆ ಇರಬಹುದು. ಅಥವಾ ನಾವು ಬೆಳೆಸಿಕೊಳ್ಳುವ ಸಮುದಾಯ ಪ್ರಜ್ಞೆ ಇರಬಹುದು ಇದೆಲ್ಲ ಒಂದು ಸಮುದಾಯದ ಶೀಲವನ್ನು ಸಂರಕ್ಷಿಸುತ್ತದೆ. ಸಮುದಾಯದ ಶೀಲ ಕುಸಿದಾಗ ಸಮುದಾಯವೇ ಕುಸಿಯುತ್ತದೆ. ಆಗ ದೇಶದ ಪ್ರಜಾಪ್ರಭುತ್ವವು ಕುಸಿಯುತ್ತದೆ. ದೇಶದ ನಾಗರೀಕತೆ ಕೂಡಾ ಕುಸಿಯುತ್ತದೆ. ಆ ದೃಷ್ಟಿಯಿಂದ ಸಮುದಾಯದ ಗುಣಮೌಲ್ಯಗಳನ್ನು ಕಾಪಾಡಬೇಕು. ಅದು ಕುಟುಂಬ ಧರ್ಮ, ರಾಷ್ಟ್ರ ಧರ್ಮ, ಮಾನವ ಧರ್ಮ ಎಲ್ಲ ಧರ್ಮಗಳಿಗೂ ಅನ್ವಯವಾಗುವ ಶೀಲ ಸಮೃದ್ಧಿ ಮಾಡಿದರೆ ಆ ರಾಷ್ಟ್ರ, ನಾಡು ಬಲಿಷ್ಟವಾಗಿ ಬೆಳೆಯುತ್ತದೆ.

- **ಚಿಂತನೆಗಳನ್ನು ವಾಸ್ತವಕ್ಕಿಳಿಸಲು ಸಾಧ್ಯವೆ ?**

ಭ್ರಷ್ಟಾಚಾರ ಯಾವಾಗಲೂ ಸಮುದಾಯದ ಮೌಲ್ಯವನ್ನು ಹೀರುತ್ತದೆ. ಆದ್ದರಿಂದ ಪ್ರಜಾಪ್ರಭುತ್ವದ ಮೌಲ್ಯಗಳು ಕುಸಿಯುತ್ತವೆ. ಆದ್ದರಿಂದ ಭ್ರಷ್ಟಾಚಾರ ರಹಿತ ಪ್ರಜಾಪ್ರಭುತ್ವದ ಅನುಷ್ಠಾನಕ್ಕಾಗಿ ಪ್ರಯತ್ನಿಸಿದೆ. ಶಿಕ್ಷಣ ಕ್ಷೇತ್ರದಿಂದ ಮೊದಲುಗೊಂಡು ಆಡಳಿತದ ಹಲವು ಹಂತಗಳಲ್ಲಿ ಭ್ರಷ್ಟಾಚಾರವನ್ನು ತಡೆಗಟ್ಟುವ ಯೋಜನೆ ರೂಪಿಸಿದೆ. ಉನ್ನತ ಶಿಕ್ಷಣಕ್ಕೆ ಸಿ.ಇ.ಟಿ ಹಾಗೂ ಅಧ್ಯಾಪಕರ ನೇಮಕಾತಿ ಪರೀಕ್ಷೆಗಳನ್ನು ಜಾರಿಗೊಳಿಸುವುದರ ಮೂಲಕ ಭ್ರಷ್ಟಾಚಾರವನ್ನು ತಡೆಗಟ್ಟಿ ಪ್ರಜಾಪ್ರಭುತ್ವಕ್ಕೆ ಶಕ್ತಿ ತುಂಬಿದೆ. ಇದರಿಂದ ಮೌಲ್ಯಯುತ ಸಮಾಜ ಕಟ್ಟಲು ಸಾಧ್ಯವಾಗುತ್ತದೆ. ಅಧಿಕಾರ ಇದ್ದಾಗ ಇದನ್ನು ಸಾಧಿಸಬೇಕು ಇಲ್ಲದಿದ್ದರೆ Absoulte Power Corrupt's Absolutely ಅಧಿಕಾರ ಮತ್ತದಿಂದ ಮನುಷ್ಯ

ಕೆಡುತ್ತಾನೆ. ಅದನ್ನು ತಪ್ಪಿಸಲು ನಿಷ್ಪಕ್ಷಪಾತವಾಗಿ ಹಾಗೂ ಮೌಲ್ಯಯುತವಾಗಿ ಕಾರ್ಯನಿರ್ವಹಿಸಬೇಕು.

- **ಚಿಂತನೆಗಳನ್ನು ತಮ್ಮ ಅಧಿಕಾರ ಅವಧಿಯಲ್ಲಿ ಅನುಷ್ಠಾನಗೊಳಿಸಲು ಸಾಧ್ಯವಾಗಿದೆಯೇ ?**

ಸಾಧ್ಯವಾಯಿತು. ಮುಖ್ಯಮಂತ್ರಿಯಾಗಿ CET ಪದ್ಧತಿ ಜಾರಿಗೊಳಿಸಿದೆ ಶಿಕ್ಷಣದ ವ್ಯವಸ್ಥೆಯಲ್ಲಿ ಬದಲಾವಣೆ ತರಲು ಸಾಧ್ಯವಾಯಿತು. ನೀರಾವರಿ ಯೋಜನೆಗಳನ್ನು ಅನುಷ್ಠಾನಗೊಳಿಸಲು ಸಾಧ್ಯವಾಯಿತು. ಇಲ್ಲದಿದ್ದರೆ ಸಮುದಾಯಿಕ ಅಭಿವೃದ್ಧಿ ತರಲು ಅದನ್ನು ಶೃಜನಶೀಲಗೊಳಿಸಲು ಸಾಧ್ಯವಾಗುತ್ತಿರಲಿಲ್ಲ.

- **ತಾವು ತಮ್ಮ ರಾಮಾಯಣ ಮಹಾನ್ವೇಷಣದ ಮೂರನೇ ಸಂಪುಟದಲ್ಲಿ ಕರ್ನಾಟಕದ ನೆಲೆ, ಜಲ, ಭಾಷೆ, ಸಂಸ್ಕೃತಿ ಜನರ ಕುರಿತು ಅನೇಕ ಚಿಂತನೆಗಳನ್ನು ದಾಖಲಿಸಿದ್ದೀರಿ, ಅವುಗಳ ಅನುಷ್ಠಾನದ ತೊಂದರೆಗಳನ್ನು ಹೇಳಿಕೊಂಡಿದ್ದೀರಿ, ಹೀಗಿದ್ದರೂ ರಾಮರಾಜ್ಯದ ಆದರ್ಶ ತಮ್ಮ ತಲೆ ತುಂಬಿಕೊಂಡಿದ್ದು ಹೇಗೆ ?**

ಶ್ರೀರಾಮಚಂದ್ರ ವನವಾಸಕ್ಕೆ ಹೋದಾಗ ರಾಜ್ಯವನ್ನು ಯಾರು ಆಳುತ್ತಿದ್ದರು ? ದಶರಥ ತೀರಿಹೋಗಿದ್ದ, ಭರತ ಅಲ್ಲಿರಲಿಲ್ಲ ಹೀಗಾಗಿ ಆಗ ಜನತೆಯೇ ರಾಜ್ಯವನ್ನು ಆಳಿತು. ಅದುವೇ ಪ್ರಜಾಪ್ರಭುತ್ವ, ಅದುವೇ ಪ್ರಜಾಪ್ರಭುತ್ವದ ಲಕ್ಷಣ, ಅದೇ ರಾಮರಾಜ್ಯ. ರಾಮರಾಜ್ಯಕ್ಕೆ ರಾಮನೇ ಬೇಕಾಗಿಲ್ಲ ರಾಮನ ಗುಣ ಮೌಲ್ಯಗಳು ಬೇಕು. ವ್ಯಕ್ತಿಯ ಪ್ರಸ್ತುತಿ ಮುಖ್ಯವಲ್ಲ ಗುಣಮೌಲ್ಯಗಳು ಮುಖ್ಯ. ಪ್ರಜಾಪ್ರಭುತ್ವದಲ್ಲಿ ವ್ಯಕ್ತಿ ಮುಖ್ಯವಾಗುವುದಿಲ್ಲ ಆ ಗುಣ ಮೌಲ್ಯಗಳೇ ಪ್ರಜಾಪ್ರಭುತ್ವವನ್ನು ಸಬಲೀಕರಣಗೊಳಿಸುತ್ತವೆ.

- **ತಾವು ರಾಮರಾಜ್ಯದ ಕನಸುಗಾರರೊ, ಲಕ್ಷ್ಮಣರಾಜ್ಯದ ಕನಸುಗಾರರೊ ?**

ನನ್ನದು ರಾಮರಾಜ್ಯದ ಕನಸು, ಲಕ್ಷ್ಮಣ ಅದರ ಒಂದು ಭಾಗ ಮಾತ್ರ.

- **ಲಕ್ಷ್ಮಣರಾಜ್ಯದ ಚಿಂತನೆ ರಾಮರಾಜ್ಯದ ಚಿಂತನೆಗಿಂತ ಹೇಗೆ ಭಿನ್ನವಾಗಿದೆ ?**

ಲಕ್ಷ್ಮಣ ಎಂದರೇ ನೆಸ್ಸಿಂಗ್ ಹೇಳುವಂತೆ ದೇವರು ಒಂದು ಕೈಯಲ್ಲಿ ಸತ್ಯವನ್ನು ಮತ್ತೊಂದು ಕೈಯಲ್ಲಿ ಸತ್ಯದ ಶೋಧನೆಯನ್ನು ಹಿಡಿದುಕೊಂಡು ಇವುಗಳಲ್ಲಿ ಯಾವುದು ಬೇಕು ಎಂದು ಕೇಳಿದರೆ ನಾನು ಸತ್ಯ ನಿನಗಿರಲಿ ಸತ್ಯದ ಶೋಧನೆ ನನಗಿರಲಿ ಎಂದು ಹೇಳುತ್ತಾನೆ ತತ್ವಜ್ಞಾನಿ. ನನ್ನ ಅಭಿಪ್ರಾಯ ಕೂಡ ಅದೆ. ಲಕ್ಷ್ಮಣನ ಪಾತ್ರ ಸತ್ಯದ ಶೋಧನೆಯ ರೂಪಕ. ಅದು ಮನುಷ್ಯನ ಬದುಕಿನಲ್ಲಿ ಮೌಲ್ಯ ತುಂಬುತ್ತದೆ ಅದು ಇಚ್ಛಾಶಕ್ತಿಗೆ ಚಾಲನೆ ನೀಡುತ್ತದೆ. ಸತ್ಯಕ್ಕಿಂತ ಶೋಧನೆ ಹೆಚ್ಚು ಕ್ರೀಯಾಶೀಲವಾದುದು ಅದುವೇ ಮನುಷ್ಯನ ಅವಿಷ್ಕಾರದೆಡೆಗೆ ಸೆಳೆಯುತ್ತದೆ ಅದೇ ನಿಜವಾದ ಬದುಕು.

- **ಸದ್ಯದ ಕರ್ನಾಟಕದ ಹಾಗೂ ದೇಶದ ರಾಜಕಾರಣ ಸೈದ್ಧಾಂತಿಕವಾಗಿದೆಯೇ ?**

ಇದೆ ಅವರವರ ದಾರಿಗಳು ಭಿನ್ನವಾಗಿದ್ದರೂ ಮೌಲ್ಯಗಳ ಚಿಂತನೆ ಸೈದ್ಧಾಂತಿಕತೆಗೆ ಧಕ್ಕೆಯಾಗಿಲ್ಲ. ಅವರವರ ಆಡಳಿತ ಸತ್ಯಶೋಧನೆಯ ಒಂದೊಂದು ಕ್ರಮಗಳು ಸತ್ಯ ಶೋಧದ ದಾರಿಯಲ್ಲಿ ನಡೆದಾಗಲೇ ಹೊಸ ವಿಚಾರಗಳು ಬರುತ್ತವೆ.

- **ತಾವು ಮಂತ್ರಿಗಳಾಗಿರುವದರಿಂದ ಸದ್ಯದ ರಾಜಕಾರಣದ ಒಂದು ಭಾಗವಾಗಿದ್ದೀರಿ ತತ್ವ ರಹಿತ ರಾಜಕಾರಣದ ಇಂದಿನ ಸಂದರ್ಭದಲ್ಲಿ ತಾವು ಹೇಗೆ ಸೈದ್ಧಾಂತಿಕ ರಾಜಕೀಯವನ್ನು ರೂಢಿಸಿಕೊಂಡಿದ್ದೀರಿ ?**

ಇಲ್ಲವೆಂದು ಹೇಳಲು ಆಗುವುದಿಲ್ಲ ನಾನು ಆಶಾದಾಯಕವಾಗಿರುತ್ತೇನೆ. ಏಕೆಂದರೆ ಮುಂದೆ ಬರುವ ೨೦-೨೫ ವರ್ಷಗಳಲ್ಲಿ Demagraphic Debident Window of Opportunity ಸಿಗುತ್ತದೆ. ಜಗತ್ತಿನಲ್ಲಿ ಭಾರತ ಯುವರಾಷ್ಟ್ರವಾಗುತ್ತದೆ. ಈ ಪರಿಸ್ಥಿತಿ ಅಮೇರಿಕೆಗೆ ಇನ್ನೂರು ವರ್ಷಗಳ ಹಿಂದೆ ಬಂದಿತ್ತು. ಆಗ ಅವರು ಅದನ್ನು ಭೌತಿಕ ಸೌಲಭ್ಯಗಳಿಗೆ ಬಳಸಿಕೊಂಡು ಇಡೀ ಜಗತ್ತಿನಲ್ಲಿ ಬಲಿಷ್ಠರಾಗಿ ಬೆಳೆದರು. ಅದೆ ಸದಾವಕಾಶ ಇಂದು ಭಾರತಕ್ಕೆ ಬರುತ್ತಿದೆ. ಆದ್ದರಿಂದ ನಮ್ಮ ಚಿಂತನೆ ಮನೋಭೂಮಿಕೆ ಬದಲಾಗಬೇಕು. ಅಭಿವೃದ್ಧಿ ಕೂಡಾ ಅದೇ ರೀತಿ ಬೆಳೆಯಬೇಕು ಆಗ ನಾವು ಅಮೇರಿಕೆಯನ್ನು ಮೀರಿ ಮುಂದೆ ಹೋಗಲು ಸಾಧ್ಯವಾಗುತ್ತದೆ.

- **ದೇಶದ ಅಭಿವೃದ್ಧಿಗೆ ತಮ್ಮ ಸಲಹೆಗಳೇನು ?**

ಅಧಿಕಾರವೇ ಮುಖ್ಯವಲ್ಲ ಆದರ್ಶಗಳು ಮುಖ್ಯ. ನನ್ನ ಪ್ರಥಮ ಪ್ರಾಶಸ್ತ್ಯ ರಾಷ್ಟ್ರ, ಸಮಾಜ ಅದರ ಅಭಿವೃದ್ಧಿಯಲ್ಲಿಯೇ ನಾವು ಅಭಿವೃದ್ಧಿಯನ್ನು ಕಾಣಬೇಕು ನಮ್ಮ ಯೋಜನೆ ಚಿಂತನೆಗಳು ಅದಕ್ಕೆ ಪೂರಕವಾಗಿರಬೇಕೇ ಹೊರತು ಮಾರಕವಾಗಿರಬಾರದು.

- **ಭವಿಷ್ಯತ್ತಿನ ಕರ್ನಾಟಕದ ತಮ್ಮ ಚಿಂತನೆ ಏನು ?**

ಕರ್ನಾಟಕಕ್ಕೆ ಒಳ್ಳೆಯ ಭವಿಷ್ಯವಿದೆ. ಶಿಕ್ಷಣವನ್ನು ವ್ಯಾಪಕಗೊಳಿಸಿದ್ದೇವೆ. ಗುಣಮಟ್ಟ ಹೆಚ್ಚಿದೆ ಪ್ರತಿಯೊಬ್ಬರಿಗೂ ಸಾಮಾಜಿಕ ನ್ಯಾಯ ಸಿಗುವಂತಾಗಿದೆ. ಇವೆಲ್ಲ ಭಾಗ್ಯದ ಬಾಗಿಲುಗಳು. ಅದರಿಂದ ನಾಡಿನ ಸರ್ವಾಂಗೀನ ವಿಕಾಸ ಸಾಧಿಸಲು ಸಾಧ್ಯವಾಗುವುದು ಕೆಲವರು ಕರ್ನಾಟಕದ ವಿಕಾಸವನ್ನು ಕೆಡಿಸಲು ಪ್ರಯತ್ನಿಸಿರಬಹುದು. ಆದರೆ ಒಳ್ಳೆಯ ಸಾಂಸ್ಕೃತಿಕ ಪರಂಪರೆ ಇರುವ ಕರ್ನಾಟಕದ ಸಮಗ್ರ ಅಭಿವೃದ್ಧಿಯನ್ನು ತಡೆಯಲು ಯಾರಿಂದಲೂ ಸಾಧ್ಯವಿಲ್ಲ.

- **ಆಡಳಿತದಲ್ಲಿಯೇ ಭ್ರಷ್ಟಾಚಾರವನ್ನು ನಿರ್ಮೂಲನೆ ಮಾಡಲು ನಿಮ್ಮ ಸಲಹೆ ಏನು ?**

ಭ್ರಷ್ಟಾಚಾರ ನಿರ್ಮೂಲನೆಯನ್ನು ವೈಯಕ್ತಿಕ ನೆಲೆಯಲ್ಲಿ ನೋಡದೆ ವ್ಯವಸ್ಥೆಯ ನೆಲೆಯಲ್ಲಿ ನೋಡಬೇಕು. ನಾನು ರಾಷ್ಟ್ರದ ೨ನೇ ಆಡಳಿತ ಸುಧಾರಣಾ ಸಮೀತಿಯ ಅಧ್ಯಕ್ಷನಾಗಿದ್ದಾಗ ಸರಕಾರಕ್ಕೆ ೧೫ ವರದಿಗಳನ್ನು ಕೊಟ್ಟು ಭ್ರಷ್ಟಾಚಾರದ ನಿರ್ಮೂಲನೆಯ ವಿಧಿ ವಿಧಾನಗಳನ್ನು ವಿವರಿಸಿದ್ದೇನೆ. ವ್ಯಕ್ತಿಗಳನ್ನು ಭ್ರಷ್ಟಾಚಾರದಿಂದ ಮುಕ್ತಗೊಳಿಸುವುದು ಸುಲಭ ಸಾಧ್ಯವಿಲ್ಲ. ಏಕೆಂದರೆ ಸಂತರು, ಶರಣರು ಭ್ರಷ್ಟಾಚಾರವನ್ನು ವಿರೋಧಿಸುತ್ತಲೇ ಬಂದಿದ್ದಾರೆ. ಆದರೂ ಭ್ರಷ್ಟಾಚಾರ ಕೊನೆಗೊಂಡಿಲ್ಲ. ಆದ್ದರಿಂದ ವ್ಯವಸ್ಥೆಯಲ್ಲಿನ ಭ್ರಷ್ಟತೆಯನ್ನು ತಡೆಗಟ್ಟಲು ಯೋಜನೆ ರೂಪಿಸಬೇಕು. ಆನ ಬದಲಾವಣೆಗಿಂತ ಕಾರ್ಯ ವಿಧಾನಗಳಲ್ಲಿಯ ಬದಲಾವಣೆಗಳು ಭ್ರಷ್ಟಾಚಾರವನ್ನು ತಡೆಗಟ್ಟಬಹುದೆಂದು ನನ್ನ ಆಲೋಚನೆ. ನಾನು ವ್ಯವಸ್ಥೆ, ಆಡಳಿತ ಹಾಗೂ ಮನೋಭಾವನೆಯಲ್ಲಿ ನಂಬಿಕೆ ಇಟ್ಟಿದ್ದೇನೆ ಅವುಗಳಲ್ಲಿ ಬದಲಾವಣೆ ಬಂದರೆ ಭ್ರಷ್ಟಾಚಾರ ನಿರ್ಮೂಲನೆ ಸಾಧ್ಯ.

- **ಕುಸಿಯುತ್ತಿರುವ ಅರ್ಥ ವ್ಯವಸ್ಥೆಯನ್ನು ತಡೆಯಲು ತಮ್ಮ ನಿಲುವೇನು ?**

೨೦೦೮ ಮತ್ತು ೧೦ರಲ್ಲಿ ಜಾಗತೀಕ ಆರ್ಥಿಕ ಸುನಾಮಿಯ ಬಿಸಿ ಭಾರತಕ್ಕೆ ತಟ್ಟಿದೆ ನಿಜ. ಭಾರತದ ವ್ಯಾಪಾರ ವ್ಯವಹಾರ ಪ್ರತಿಶತ ೭೫%ರಷ್ಟು ಏಷಿಯಾ ಖಂಡದಲ್ಲಿ ವಿಸ್ತರಣೆಗೊಂಡಿದೆ. ಆದ್ದರಿಂದ ಯುರೋಪದ ಆರ್ಥಿಕ ಕುಷಿತ ಭಾರತದ ಮೇಲೆ ಅಷ್ಟು ಪರಿಣಾಮ ಬೀರುವುದಿಲ್ಲ. ಭಾರತಕ್ಕೆ ಎಂತಹ ಆರ್ಥಿಕ ಕುಸಿತದಿಂದ ಚೇತರಿಸಿಕೊಳ್ಳುವ ಶಕ್ತಿ ಇದೆ. ಆದ್ದರಿಂದ ಅದರ ಕುರಿತು ಭಯ ಪಡುವ ಅಗತ್ಯವಿಲ್ಲ.

೨. ಮೊಯಿಲಿಯವರ ಬದುಕಿನ ಘಟನೆಗಳು

೧) ೧೯೪೦ ಜನೇವರಿ ೧೨ ಮೊಯಿಲಿಯವರ ಜನ್ಮ

೨) ಮೊಯಿಲಿಯವರ ತಂದೆ ತಮ್ಮಯ್ಯ, ತಾಯಿ ಪೂವಮ್ಮ

೩) ಎಂ.ನಾರಾಯಣ ದೇವಾಡಿಗ ಮತ್ತು ವಾಸು ಸಹೋದರರು

೪) ೧೯೪೭ ಜೂನನಲ್ಲಿ ಪ್ರಾಥಮಿಕ ಶಿಕ್ಷಣ ಪ್ರಾರಂಭ

೫) ೧೯೫೫ರಲ್ಲಿ ಮೂಡಬಿದರೆಯ ಡಿ.ಜೆ. ಜೈನ ಪ್ರೌಢಶಾಲೆಗೆ ಸೇರ್ಪಡೆ

೬) ೧೯೫೮ರಲ್ಲಿ ಮಂಗಳೂರಿನ ಸರಕಾರಿ ಪದವಿ ಪೂರ್ವ ಕಾಲೇಜಿಗೆ ಸೇರ್ಪಡೆ

೭) ೧೯೫೯ರಲ್ಲಿ ಮಂಗಳೂರಿನ ಸರಕಾರಿ ಪದವಿ ಕಾಲೇಜಿನಲ್ಲಿ ಬಿ.ಎ. ಅಧ್ಯಯನ ಮುಂದುವರಿಕೆ

೮) ೧೯೬೨ರಲ್ಲಿ ಕಾನೂನು ಅಧ್ಯಯನ ಪ್ರಾರಂಭ

೯) ೧೯೬೫ರಲ್ಲಿ ಮಾಲಿತಿಯವರೊಂದಿಗೆ ವಿವಾಹ

೧೦) ೧೯೬೭ರಲ್ಲಿ ಮಂಗಳೂರಿನ ವೈ.ಕೆ. ಪೂಜಾರಿಯವರಲ್ಲಿ ಕಿರಿಯ ನ್ಯಾಯವಾದಿಯಾಗಿ ಒಂದು ವರ್ಷ ಸೇವೆ

೧೧) ೧೯೬೮ರಲ್ಲಿ ಕಾರ್ಕಳದಲ್ಲಿ ಸ್ವತಂತ್ರ ನ್ಯಾಯವಾದಿಯಾಗಿ ಸೇವೆ ಪ್ರಾರಂಭ

೧೨) ೧೯೬೯ರಲ್ಲಿ ಸಕ್ರೀಯ ರಾಜಕಾರಣಕ್ಕೆ ಪ್ರವೇಶ

೧೩) ೧೯೭೨ರಲ್ಲಿ ಕಾರ್ಕಳ ವಿಧಾನಸಭಾ ಕ್ಷೇತ್ರದಿಂದ ವಿಧಾನಸಭೆಗೆ ಪ್ರವೇಶ

೧೪) ೧೯೭೨ರಿಂದ ದೇವರಾಜ ಅರಸ ಅವರ ಮಂತ್ರಿಮಂಡಳದಲ್ಲಿ ಸಣ್ಣ ಕೈಗಾರಿಕಾ ಸಚಿವರಾಗಿ ಸೇವೆ ಪ್ರಾರಂಭ

೧೫) ೧೯೭೮ರಲ್ಲಿ ೨ನೇ ಬಾರಿಗೆ ಕಾರ್ಕಳ ಕ್ಷೇತ್ರದಿಂದಲೇ ವಿಧಾನಸಭೆ ಪ್ರವೇಶ

೧೬) ೧೯೮೦-೧೯೮೩ರವರೆಗೆ ಗುಂಡುರಾವ ಮಂತ್ರಿಮಂಡಳದಲ್ಲಿ ಅರ್ಥ ಮತ್ತು ಯೋಜನಾ ಸಚಿವರಾಗಿ ಕಾರ್ಯ ನಿರ್ವಹಣೆ

೧೭) ೧೯೮೨ರಲ್ಲಿ ಮತ್ತೆ ನಡೆಯಲಿ ಸಮರ(ಕವನ ಸಂಕಲನ) ಪ್ರಕಟ

೧೮) ೧೯೮೩ ಮೂರನೇ ಬಾರಿಗೆ ವಿಧಾನಸಭೆ ಪ್ರವೇಶ ವಿರೋಧ ಪಕ್ಷದ ನಾಯಕರಾಗಿ ಕಾರ್ಯ ನಿರ್ವಹಣೆ

೧೯) ೧೯೮೫ ನಾಲ್ಕನೇ ಬಾರಿಗೆ ಕಾರ್ಕಳ ವಿಧಾನಸಭಾ ಕ್ಷೇತ್ರದಿಂದ ಆಯ್ಕೆ

೨೦) ೧೯೮೯ರಲ್ಲಿ ಐದನೇ ಬಾರಿ ವಿಧಾನಸಭೆ ಪ್ರವೇಶ ವಿರೇಂದ್ರ ಪಾಟೀಲರ ಮಂತ್ರಿಮಂಡಳದಲ್ಲಿ ಕಾನೂನು ಮತ್ತು ಸಂಸದೀಯ, ಪ್ರವಾಸೋದ್ಯಮ ಸಚಿವರಾಗಿ ನೇಮಕ

೨೧) ೧೯೯೦-೯೨ರಲ್ಲಿ ಬದಲಾದ ರಾಜಕೀಯ ಪರಿಸ್ಥಿತಿಯಲ್ಲಿ ಬಂಗಾರೆಪ್ಪ ಮಂತ್ರಿಮಂಡಳದಲ್ಲಿ ಶಿಕ್ಷಣ ಮತ್ತು ಸಂಸದೀಯ ವ್ಯವಹಾರ ಸಚಿವರಾಗಿ ನೇಮಕ

೨೨) ೧೯೯೨-೯೪ರವರೆಗೆ ರಾಜ್ಯದ ೧೩ನೇ ಮುಖ್ಯಮಂತ್ರಿಯಾಗಿ ಸೇವೆ

೨೩) ೧೯೯೩ ಕೊಟ್ಟ ಕಾದಂಬರಿ ಬಿಡುಗಡೆ

೨೪) ೧೯೯೪ ಆರನೇ ಬಾರಿಗೆ ವಿಧಾನಸಭೆಗೆ ಆಯ್ಕೆ

೨೫) ೧೯೯೭ ಹಾಲುಜೇನು, ಹಿಗೊಂದು ಪ್ರಶ್ನೆ, ಜೊತೆಯಾಗಿ ನಡೆಯೋಣ(ಕವನ ಸಂಕಲನ) ಪ್ರಕಟ

೨೬) ೧೯೯೮ ನುಡಿಕಾಣಿಕೆ ಪ್ರಕಟ (ಆಯ್ದ ಭಾಷಣಗಳ ಸಂಕಲನ)

೨೭) ೧೯೯೯ರಲ್ಲಿ ತೆಂಬರೆ

೨೮) ಸುಳಿಗಾಳಿ

೨೯) ಸಾಗರದೀಪ

೩೦) ೧೯೯೯ರಲ್ಲಿ ಚಿಕ್ಕಮಗಳೂರು ಕ್ಷೇತ್ರದಿಂದ ಲೋಕಸಭೆಗೆ ಸ್ಪರ್ಧೆ ಸೋಲು

೩೧) ೨೦೦೦-೦೨ರವರೆಗೆ ರಾಜ್ಯ ತೆರಿಗೆ ಸುಧಾರಣಾ ಆಯೋಗದ ಅಧ್ಯಕ್ಷರಾಗಿ ಸೇವೆ

೩೨) ೨೦೦೨-೦೪ರವರೆಗೆ ಕಂದಾಯ ಸುಧಾರಣಾ ಆಯೋಗದ ಅಧ್ಯಕ್ಷರಾಗಿ ಸೇವೆ

೩೩) ೨೦೦೪ರಲ್ಲಿ ಮಂಗಳೂರು ಕ್ಷೇತ್ರದಿಂದ ಲೋಕಸಭೆಗೆ ಸ್ಪರ್ಧೆ ಸೋಲು

೩೪) ೨೦೦೬-೦೯ರವರೆಗೆ ಕೇಂದ್ರ ಆಡಳಿತ ಸುಧಾರಣಾ ಸಮಿತಿಯ ಅಧ್ಯಕ್ಷರಾಗಿ ಕಾರ್ಯನಿರ್ವಹಣೆ

೩೫) ೨೦೦೯ ಚಿಕ್ಕಬಳ್ಳಾಪುರ ಕ್ಷೇತ್ರದಿಂದ ಲೋಕಸಭೆಗೆ ಆಯ್ಕೆ

೩೬) ೨೦೦೯ ಫೆಬ್ರವರಿ ೧೬ರಂದು ಮಂಗಳೂರು ವಿಶ್ವವಿದ್ಯಾಲಯದಿಂದ ಗೌರವ ಡಾಕ್ಟರೇಟ್

೩೭) ೨೦೦೯ ಡಾ॥ಮನಮೋಹನ ಸಿಂಗ್‌ರವರ ಮಂತ್ರಿಮಂಡಳದಲ್ಲಿ ಕಾನೂನು ಸಚಿವರಾಗಿ ನೇಮಕ

೩೮) ೨೦೧೧ ಮಂತ್ರಿಮಂಡಳದ ಪುನರ್ ರಚನೆಯಲ್ಲಿ ಕಾರ್ಪೊರೇಟ್ ಸಚಿವರಾಗಿ ನೇಮಕ

೩೯) ೨೦೧೧ ಲೋಕಪಾಲ ಕರಡು ಸಮಿತಿಯ ಸದಸ್ಯರಾಗಿ ನೇಮಕ

ಎಂ. ವೀರಪ್ಪ ಮೊಯಿಲಿಯವರ ಕೃತಿಗಳು

೧) ರಾಷ್ಟ್ರೀಯ ಚಿಂತನಾ ದರ್ಶನ (ಚಿಂತನೆಗಳು)

೨) ನುಡಿಕಾಣಿಕೆ (ಭಾಷಣ ಸಂಕಲನಗಳು)

೩) ಚಿಂತನ ದರ್ಶನ (ಲೇಖನ ಸಂಕಲನಗಳು)

೪) ಕಿರುದಾರಿ ಹೆದ್ದಾರಿ (ಲೇಖನಗಳು)

೫) ಸುಳಿಗಾಳಿ (ಕಾದಂಬರಿ)

೬) ಸಾಗರದೀಪ (ಕಥೆ)

೭) ಕೊಟ್ಟ (ಕಾದಂಬರಿ)

೮) ತೆಂಬರೆ (ಕಾದಂಬರಿ)

೯) ಅಪರಾಜಿತ (ನಾಟಕ)

೧೦) ಪ್ರೇಮವೆಂದರೆ (ನಾಟಕ)

೧೧) ಮಿಲನ (ನಾಟಕ)

೧೨) ಮತ್ತೆ ನಡೆಯಲಿ ಸಮರ (ಕವನ ಸಂಕಲನ)

೧೩) ಹಾಲುಜೇನು (ಕವನ ಸಂಕಲನ)

೧೪) ಹೀಗೊಂದು ಯಕ್ಷ ಪ್ರಶ್ನೆ (ಕವನ ಸಂಕಲನ)

೧೫) ಶ್ರೀ ರಾಮಾಯಣ ಮಹಾನ್ವೇಷಣಂ (ಮಹಾಕಾವ್ಯ)

ಆಕರ ಗ್ರಂಥಗಳು

೧) ಮನೋಹರ ಪ್ರಸಾದ 'ಎಲ್ಲಿ ಮನಕಳುಕಿರದೋ ಎಲ್ಲಿ ತಲೆ ಬಾಗಿರದೋ' ಎಂ. ವೀರಪ್ಪ ಮೊಯಿಲಿಯವರ ಜೀವನ ಕಥನ ಮಾಹೇಶ್ವರಿ ಪ್ರಕಾಶನ ಬೆಂಗಳೂರು ೨೦೦೫.

೨) ಎಂ.ವೀರಪ್ಪ ಮೊಯಿಲಿ 'ರಾಷ್ಟ್ರೀಯ ಚಿಂತನ ದರ್ಶನ' ಸಪ್ನ ಬುಕ್ ಹೌಸ್ ಬೆಂಗಳೂರು ೨೦೦೫.

೩) ಎಂ. ವೀರಪ್ಪ ಮೊಯಿಲಿ 'ಕಿರುದಾರಿ ಹೆದ್ದಾರಿ' ಪ್ರಸಾರಂಗ ಕನ್ನಡ ವಿಶ್ವ ವಿದ್ಯಾಲಯ ಹಂಪಿ ೨೦೦೭

೪) ಎಂ. ವೀರಪ್ಪ ಮೊಯಿಲಿ 'ಚಿಂತನ ದರ್ಶನ' ಕನ್ನಡ ಸಾಹಿತ್ಯ ಪರಿಷತ್ತು ಬೆಂಗಳುರು ೨೦೦೭

೫) ಎಂ. ವೀರಪ್ಪ ಮೊಯಿಲಿ 'ನುಡಿ ಕಾಣಿಕೆ' ಭಾಷಣಗಳ ಸಂಕಲನ ಅಂಕಿತ ಪ್ರಕಾಶನ ಬೆಂಗಳೂರು ೧೯೯೮

೬) ಸಂ. ಡಾ.ಎಚ್.ಟಿ. ಪೋತೆ ಶ್ರೀ ರಾಮಾಯಣ ಮಹಾನ್ವೇಷಣಂ ಮಹಾಕಾವ್ಯ, ಅನ್ವೇಷಣೆ ತಿಪ್ಪಣಂಬುಪ್ರಕಾಶನ ರಾಯಚೂರು ೨೦೦೩.

೭) ಎಂ. ವೀರಪ್ಪ ಮೊಯಿಲಿ ಶ್ರೀ ರಾಮಾಯಣ ಮಹಾನ್ವೇಷಣಂ ದ್ವಿತೀಯ ಸೋಪಾನ ಮಾಹೇಶ್ವರಿ ಪ್ರಕಾಶನ ಬೆಂಗಳೂರು ೨೦೦೨.

೮) ಎಂ. ವೀರಪ್ಪ ಮೊಯಿಲಿ ಶ್ರೀ ರಾಮಾಯಣ ಮಹಾನ್ವೇಷಣಂ ತೃತೀಯ ಸೋಪಾನ ಮಾಹೇಶ್ವರಿ ಪ್ರಕಾಶನ ಬೆಂಗಳೂರು ೨೦೦೩.

೯) ಎಂ. ವೀರಪ್ಪ ಮೊಯಿಲಿ ಶ್ರೀ ರಾಮಾಯಣ ಮಹಾನ್ವೇಷಣಂ ಚತುರ್ಥ ಸೋಪಾನ ಮಾಹೇಶ್ವರಿ ಪ್ರಕಾಶನ ಬೆಂಗಳೂರು ೨೦೦೪.

೧೦) ಎಂ. ವೀರಪ್ಪ ಮೊಯಿಲಿ ಶ್ರೀ ರಾಮಾಯಣ ಮಹಾನ್ವೇಷಣಂ ಪಂಚಮ ಸೋಪಾನ ಮಾಹೇಶ್ವರಿ ಪ್ರಕಾಶನ ಬೆಂಗಳೂರು ೨೦೦೫.

೧೧) ಎಂ. ವೀರಪ್ಪ ಮೊಯಿಲಿ ಶ್ರೀ ರಾಮಾಯಣ ಮಹಾನ್ವೇಷಣಂ ಸಮಗ್ರ ಸಂಪುಟ ಮಾಹೇಶ್ವರಿ ಪ್ರಕಾಶನ ಬೆಂಗಳೂರು ೨೦೦೭.

೧೨) ಎಂ.ವೀರಪ್ಪ ಮೊಯಿಲಿ 'ತೆಂಬರೆ' ಅಂಕಿತ ಪ್ರಕಾಶನ ಬೆಂಗಳೂರು ೧೯೯೯

೧೩) ಎಂ.ವೀರಪ್ಪ ಮೊಯಿಲಿ 'ಕೊಟ್ಟ' ಕಾದಂಬರಿ ಆಶಾಸಾಹಿತ್ಯ ಪ್ರಕಾಶನ ಬೆಂಗಳೂರು ೧೯೯೩.

೧೪) ಎಂ. ವೀರಪ್ಪ ಮೊಯಿಲಿ 'ಸುಳಿಗಾಳಿ' ಆಶಾಸಾಹಿತ್ಯ ಪ್ರಕಾಶನ ಬೆಂಗಳೂರು ೧೯೮೫.

೧೫) ಎಂ. ವೀರಪ್ಪ ಮೊಯಿಲಿ 'ಸಾಗರದೀಪ' ಐ.ಎಚ್.ಬಿ. ಪ್ರಕಾಶನ ಬೆಂಗಳೂರು ೧೯೮೬.

೧೬) ಎಂ. ವೀರಪ್ಪ ಮೊಯಿಲಿ 'ರಾಜ್ಯ ತೆರಿಗೆ ಸುಧಾರಣಾ ಆಯೋಗದ ವರದಿ' ೨೦೦೨.

೧೭) ಎಂ. ವೀರಪ್ಪ ಮೊಯಿಲಿ 'ರಾಜ್ಯ ಕಂದಾಯ ಸುಧಾರಣಾ ಆಯೋಗದ ವರದಿ' ೨೦೦೪.

೧೮) ಎಂ. ವೀರಪ್ಪ ಮೊಯಿಲಿ 'ಕೇಂದ್ರ ಆಡಳಿತ ಸುಧಾರಣಾ ಸಮಿತಿ ವರದಿ ೨೦೦೯.

೧೯) ವಾಲಿ ಎಂ.ಎನ್. (ಸಂ) ಹುಟ್ಟು ಹೋರಾಟಗಾರರು ಭುವನೇಶ್ವರಿ ಪ್ರಕಾಶನ ಬಿಜಾಪೂರ ೨೦೦೬.

೨೦) ಸಂ.ಎಸ್.ವ್ಹಿ. ಶೇಷಗಿರಿರಾವ್ 'ಕರ್ನಾಟಕದ ಮುಖ್ಯಮಂತ್ರಿಗಳು' ವಂದನಾ ಪ್ರಕಾಶನ ಬೆಂಗಳೂರು ೨೦೦೧.

೨೧) ಜ.ಹೋ. ನಾರಾಯಣ ಸ್ವಾಮಿ 'ರಾಮಮನೋಹರ ಲೋಹಿಯಾ' ಪ್ರಸಾರಂಗ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯ ೨೦೦೯.

೨೨) ದೇಜಗೌ 'ಕರ್ನಾಟಕದ ಜ್ಯೋತಿ ಕೆಂಗಲ್ ಹನುಮಂತಯ್ಯ' ಕನ್ವ ಪ್ರಕಾಶನ ೨೦೦೯.

೨೩) ಪ್ರಭಾಕರ ಸಂಝ್‌ಗಿರಿ 'ಡಾ.ಬಿ.ಆರ್. ಅಂಬೇಡ್ಕರ ಜೀವನ ಮತ್ತು ಹೋರಾಟ' ಅನುವಾದ ಸಬಿತಾಶರ್ಮ ೨೦೧೧.

೨೪) ಪ್ರೊ.ಎ.ಎಸ್. ವೇಣುಗೋಪಾಲರಾವ್ 'ಗಾಂಧೀಜಿ ಮತ್ತು ರಚನಾತ್ಮಕ ಕಾರ್ಯಗಳು, ಪ್ರಸಾರಾಂಗ ಮೈಸೂರು ವಿಶ್ವವಿದ್ಯಾಲಯ ಮೈಸೂರು ೨೦೦೫.

೨೫) ಪ್ರೊ.ದಯಾನಂದ ಮಾನೆ 'ಡಾ.ಬಾಬಾಸಾಹೇಬ ಅಂಬೇಡ್ಕರ ಮತ್ತು ದಲಿತ ಚಳುವಳಿಗಳು' ೨೦೦೬.

೨೬) ರಘುರಾಮ್ ಶೆಟ್ಟಿ 'ಬಹುರೂಪಿ ಅರಸು' ಸಪ್ನ ಬುಕ್ ಹೌಸ್ ೨೦೧೧.

೨೭) (ಸಂ) ಡಾ.ವ್ಹಿ.ಎಸ್. ಮಾಳಿ 'ರಸಾಲ' ಶ್ರೀ ಗುರು ಚನ್ನಬಸವೇಶ್ವರ ಗ್ರಂಥ ಮಾಲೆ ಅಥಣಿ ೨೦೦೫.

೨೮) (ಸಂ) ದೇಜಗೌ 'ಬಂಗಾರಪ್ಪ ಸದನ ಸ್ಪಂದನ' ಬಂಗಾರಪ್ಪ ಅಮೃತ ಮಹೋತ್ಸವ ಸಮಿತಿ ೨೦೦೭.

೨೯) ಎಂ.ವಿ. ವೆಂಕಟರಾವ್ 'ಪ್ಲೇಟೋರ ಆದರ್ಶ ರಾಜ್ಯ' ಪ್ರಕಟನೆ ಕನ್ನಡ ಸಾಹಿತ್ಯ ಪರಿಷತ್ತು ೨೦೦೯.

೩೦) ಚಿಂತಾಮಣಿ ಮಹೇಶ 'ಶಿ.ಶಿ. ಬಸವನಾಳದ ಜೀವನ ಮತ್ತು ಸಾಧನೆ' ಪ್ರಸಾರಾಂಗ ಕೆ.ಎಲ್.ಇ. ಸಂಸ್ಥೆ ೧೯೯೮.

೩೧) ಸರೋಜನಿ ಶಿಂತ್ರಿ ಮತ್ತು ರಾಘವೇಂದ್ರರಾವ್ 'ದಿ ಐರನ್ ಮ್ಯಾನ್ ಆಪ್ ಕರ್ನಾಟಕ' ಹಳ್ಳಿಕೇರಿ ಗುದ್ಲೆಪ್ಪ ದಕ್ಷಿಣ ಭಾರತ ಹಿಂದಿ ಪ್ರಚಾರ ಸಭಾ ೨೦೦೦.

೩೨) ಎಸ್.ಉಮೇಶ 'ದಿ ಲಾಸ್ಟ್ ಲೆಕ್ಚರ್' ಧಾತ್ರಿ ಪ್ರಕಾಶನ ಮೈಸೂರು ೨೦೦೮.

೩೩) ವಿ.ನಾಗರಾಜ ರಾವ್ 'ಸಾಕ್ರೆಟೀಸ್' ಸಪ್ನ ದಿವ್ಯ ದರ್ಶನ ಮಾಲೆ ೨೦೦೧.

೩೪) ಎಸ್.ಪಿ. ಶಂಕರನಾರಾಯಣ ರಾವ್ 'ಕಾರ್ಲ ಮಾರ್ಕ್ಸ' ಸಪ್ನ ದಿವ್ಯದರ್ಶನ ಮಾಲೆ ೨೦೦೮

೩೫) ಎಚ್.ಸಿ. ಲೋಹಿತಾಶ್ವ ಪಾಶ್ಚಾತ್ಯ ರಾಜಕೀಯ ಚಿಂತಕರು ವಿದ್ಯಾನಿಧಿ ಪ್ರಕಾಶನ ೨೦೦೬

೩೬) (ಸಂ) ಜಿ.ದಕ್ಷಿಣಮೂರ್ತಿ 'ಸಮ್ಯಕ್ ಶಾಸನ ಸಮತೆಯ ಹರಿಕಾರ' ಕರ್ನಾಟಕ ಕಾನೂನು ಮತ್ತು ಸಂಸದೀಯ ಸುಧಾರಣಾ ಸಂಸ್ಥೆ ಬೆಂಗಳೂರು ೨೦೧೦.

೩೭) ಪ್ರೊ.ಡಿ.ಶಿವರುದ್ರಪ್ಪ 'ನಮ್ಮ ರಾಜ್ಯಾಡಳಿತ' ಕರ್ನಾಟಕ ಕಾನೂನು ಮತ್ತು ಸಂಸದೀಯ ಸುಧಾರಣಾ ಸಂಸ್ಥೆ ಬೆಂಗಳೂರು ೨೦೦೮.

೩೮) ಎಸ್.ಕೆ. ಹೊಳೆಯಣ್ಣವರ 'ಭಾರತ ರತ್ನ ಇಂದಿರಾಗಾಂಧಿ' ಎಮ್.ಎಸ್. ಶಾಬಾದಿಮಠ ಬುಕ್ ಡಿಪೋ ಗದಗ ೨೦೦೮.

೩೯) ಬಸವರಾಜ ಎಂ.ಕೆ. ಲಾಲ್ 'ಬಹಾದ್ದೂರ ಶಾಸ್ತ್ರೀ' ಮಾರುತಿ ಬುಕ್ ಸೆಂಟರ್ ಗದಗ ೨೦೦೭.

೪೦) ಫಾಲಾಕ್ಷ 'ಕರ್ನಾಟಕ ಇತಿಹಾಸ ಮತ್ತು ಸಂಸ್ಕೃತಿ' ಪಾರಸ್ತ ಪ್ರಕಾಶನ ತಿಪಟೂರು ೨೦೦೦.

೪೧) ಮೋಹನದಾಸ ಕರಮಚಂದ ಗಾಂಧೀ 'ಹಿಂದ ಸ್ವರಾಜ್ಯ' ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಬೆಂಗಳೂರು ೨೦೦೯.

೪೨) ಓ.ಆರ್.ಪ್ರಕಾಶ 'ಚಾಣಕ್ಯ' ಸಪ್ನಾ ಬುಕ್ ಹೌಸ್ ಬೆಂಗಳೂರು ೨೦೦೯.

೪೩) ಜಿ.ವ್ಹಿ. ಶಾಸ್ತ್ರೀ ಭಾರತರತ್ನ ಡಾ.ಅಂಬೇಡ್ಕರ ಪಾರು ಪ್ರಕಾಶನ ಸ್ಟೇಶನ ರೋಡ ಗದಗ ೧೯೯೦

೪೪) ದೇ.ಜ.ಗೌ. 'ಟಾಲ್ಸ್‌ಟಾಯ್' ಜೀವನದರ್ಶನ ಪ್ರಸಾರಂಗ ಮೈಸೂರು ವಿಶ್ವವಿದ್ಯಾಲಯ ೨೦೦೭.

೪೫) ಹೆಚ್.ಆರ್. ದಾಸೇಗೌಡ 'ನಿಕೊಲೋ ಮೆಕೆಯಾವೆಲ್ಲಿ' ಪ್ರಸಾರಂಗ ಮೈಸೂರು ವಿಶ್ವವಿದ್ಯಾಲಯ ೧೯೮೮

೪೬) ಹೆಚ್. ಗಂಗಾಧರನ್ 'ಬುದ್ಧ ಭಗವಾನ್' ಪ್ರಸಾರಂಗ ಮೈಸೂರು ವಿಶ್ವವಿದ್ಯಾಲಯ ೧೯೯೭

೪೭) ಸರಜೂ ಕಾಟ್ಕರ್ 'ಬಸವ ಮತ್ತು' ಬಸವ ಸಮಿತಿ ಬೆಂಗಳೂರು ೨೦೦೭.

೪೮) ಟಿ.ಆರ್. ಚಂದ್ರಶೇಖರ ಗ್ರಾಮೀಣ ಅಭಿವೃದ್ಧಿ ಮತ್ತು ವಿಕೇಂದ್ರಿಕರಣ ರಾಜಕೀಯ ವೈಫಲ್ಯದ ಒಂದು ಸಂಕಲನ ಪ್ರಸಾರಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ ೨೦೦೪.

೪೯) ಎಂ. ಚಂದ್ರ ಪೂಜಾರಿ ಸಮಾಜ ಸಂಶೋಧನೆ ಪ್ರಸಾರಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ ೨೦೧೧.

೫೦) ಪ್ರೊ. ಎಸ್.ಎನ್.ಸಿ.ರಾವ್ 'ರಾಜ್ಯನೀತಿಯ ವಿವೇಚಕರು' ವಿಜಯ ಬುಕ ಡಿಪೋ ಗದಗ ೧೯೯೦.

ಆಂಗ್ಲ ಗ್ರಂಥಗಳು

51) Mamtaj Ali khan Development and Social Justice (A case study of Veerappa moily Regime) Parimala mudranalaya Bangalore 1996.

52) C.N. Shankar Rao. 'Study of Social Thought' Jai Bharat Prakashan Mangalore 2001.

53) Y.N. Khanna Indian Constitution. R. Chand & Company New Delhi 2006.

54) Dr.S. Mangalamurthy Indian Constitution and human rights chetan Book House 2004.

55) Ebenstein William; Great Political Thinkers, IBH Publishing Company, New York, 1975.

56) Debey S.N., Political Ideas of the Early Leaders of Indian National Congress, University of Agra, 1956.

57) Dhanapala D.B. Eminent Indian's Nalanda Publishers, Bombay 1947.

58) Clay Henry, Lindgren, Effective Leadership in Human Relations, Thomas Nelson and Sons, Newyork 1954.

59) Brecher Michael Pt. Nehru; A Political Biography, Oxford University Press, London, 1959

60) Kothari Rajani, Politics in Indian Orient Longman Ltd, New Delhi.

61) Jennings E.E., An Anatomy of Ledership Harper & Company New York, 1960.

62) Halappa G.S. Dilemmas of democratic Politics in India, Manakatlas Ltd., Bombay, 1966.

63) Goel M.L., Political Participation in a Developing Nation, India Asia Publishing House Bombay, 1974.

64) Muller Edward N., Aggressive Political Participation, Princeton University Press, Neww Jersey, 1979.

65) Mittal Sheetal Indian Politics Then and Now, Bharat Bhushan Publication, New Delhi, 2006.

66) Mahajan V.D., Leaders of National Movement, Sterling Publishers, New Delhi, 1975.

67) Lipset S.M. Political Man, Arnold, Heinmann Publishers India, 1973.

68) Kulkarni V.B., The Indian Triumuvirate, A Pilitical Biography of Gandhi, Patel, Nehru, Bharatiya vidhya bhavan Bombay, 1969.

69) Lane Robert E., Political Life, Why and How People Get Involved in Politics, The Free Press, New York 1959.

70) M.K. Gandhi Ruskins UN TO THIS LAST A PARAPHRASE, Navajivan Publishing House Ahmedabad 1956.

71) M.K. Gandhi An Autobiography or the study of my experiment with truth Navajivan Publishing House Ahmedabad 1956.

72) M.K. Gandhi 'The Voice of Truth' Navajivan Publishing House Ahmedabad 1949.

73) R.C. Gupta 'Western political Thought' Laxmi Narayan Agarawal 2010-11.

74) R.C. Gupta 'Great Political Thinkers' East and west Laxmi Narayan Agarawal 2010-11.

75) Avasti and Avasti 'Indian Administration' Laxmi Narayan Agarawal 2010-11.

76) David E Mcnabb 'Research methods for political science' PHJ Learning private limited New Dehli 2009.

77) P. Ravindra Prasad 'Administrative Thinkers Sterling Publishers Private Limited New Dehli 2011.

ENCYCLOPEDIA

- Encyclopedia of Social Science Vol. 6 to 8 Macmaill New York, 1931.
- Hastings James Encyclopedia of Religion Wthics, Col. CI, New York, 1958.

ಅಪ್ರಕಟಿತ ಸಂಶೋಧನಾ ಮಹಾಪ್ರಬಂಧಗಳು

೧) ಗುಬ್ಬಣ್ಣವರ ಎಸ್.ವಾಯ್. "ಹರ್ಡೇಕರ ಮಂಜಪ್ಪನವರ ಒಂದು ಅಧ್ಯಯನ" ಅಪ್ರಟಿತ ಪಿ.ಎಚ್.ಡಿ. ಮಹಾಪ್ರಬಂಧ ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ ೧೯೭೪.

೨) ಬಕ್ಕಪ್ಪ ಕೆ.ವಿ. "ಸರದಾರ ವಲ್ಲಭಾಯಿ ಪಟೇಲರ ಭಾರತೀಯ ರಾಜಕೀಯದಲ್ಲಿ ಅವರ 'ಪಾತ್ರ' ಒಂದು ಅಧ್ಯಯನ ಅಪ್ರಕಟಿತ ಮಹಾಪ್ರಬಂಧ ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ ೧೯೮೦.

೩) ಬಿ.ಎಂ. ನುಚ್ಚಿ "ಬಿ.ಎಂ. ಪಾಟೀಲರ ರಾಜಕೀಯ ನಾಯಕತ್ವ; ಅವರ ರಾಜಕೀಯ ಕೊಡುಗೆಗಳ ಒಂದು ಚಿತ್ರಣ" ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ, ೨೦೦೬.

೪) ವಿಜಯ ಬೆಟಗಾರ 'ಶಿರಸಂಗಿ ಸಂಸ್ಥಾನ' ಒಂದು ಅಧ್ಯಾಯ ಅಪ್ರಕಟಿತ ಮಹಾಪ್ರಬಂಧ ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ ೧೯೮

೫) ಎಂ.ಬಿ. ದಳಪತಿ 'ಮಹಾತ್ಮಾಗಾಂಧೀ ಮತ್ತು ಸ್ವರಾಜ್ಯ' (ಗಾಂಧೀಜಿಯವರ ರಾಜಕೀಯ ಚಿಂತನೆಯ ಒಂದು ಅಧ್ಯಯನ) ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ ೨೦೦೨.

೬) ಸುಮಂಗಲಾಮಟ್ಟಿ ಬಸವಣ್ಣನವರ 'ರಾಜಕೀಯ ಚಿಂತನೆಗಳು' ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ ೨೦೦೨.

೭) ಎಸ್.ಬಿ. ಕಲ್ಲೂರ ಡಾ.ಪಾಟೀಲ ಪುಟ್ಟಪ್ಪನವರ ಬದುಕು ಬರಹ ಹಾಗೂ ಸಾಧನೆ, ಒಂದು ಅಧ್ಯಯನ ಕರ್ನಾಟಕ ವಿಶ್ವ ವಿದ್ಯಾಲಯ ಧಾರವಾಡ ೨೦೦೦.

8) Dr. A.S. Anikivi 'A Comparative Study of the Contribution of Mahatma Ghandi and Jawaharalal Nehru. To the Indian National Movement KUD 1989.

9) D.A. Gobbaragumpi : The impact of political leadership on economic development : A case study of shri K.H. Patil K.U.D. 2008.

10) G. S. Halappa B.R. Ambedkar Study of his contribution to the political and constitutional evolution In India K.U.D. 1967.

11) B. Shrimulu Socio – Political ideas and activities of Putti Shrimulu K.U.D. 1982

12) Lokapur I.A. Political Ideas of Jayaprakash Narayan K.U.D. 1984.

13) Gavati S.S. "The Impact of Economic Development on Political Participation A Micro study 1992.

ಪ್ರಕಟಿತ ಸಂಶೋಧನಾ ಗ್ರಂಥಗಳು

೧) ಡಾ.ವ್ಹಿ.ಎಸ್. ಮಾಳಿ 'ಕನ್ನಡ ಸಾಹಿತ್ಯದಲ್ಲಿ ಕರ್ಣ' ಸಿರಿಗನ್ನಡ ಪ್ರಕಾಶನ ಹಾರೂಗೇರಿ ೧೯೯೯.

೨) ಡಾ.ಆರ್. ಬಿ. ಚಿಲಮಿ ; ಬ.ಗಿ. ಯಲ್ಲಟ್ಟಿ ಸಮಗ್ರ ಸಾಹಿತ್ಯ ವೀರಭದ್ರೇಶ್ವರ ಪ್ರಕಾಶನ ಹಾರೂಗೇರಿ ೨೦೦೭.

೩) ಡಾ.ಎಸ್.ವಾಯ್. ಗುಬ್ಬನ್ನವರ "ರಾಷ್ಟ್ರಧರ್ಮ ನಿಷ್ಠ ಹರ್ಡೇಕರ ಮಂಜಪ್ಪ" ರಾಷ್ಟ್ರೋತ್ಥಾನ ಸಾಹಿತ್ಯ ಬೆಂಗಳೂರು ೨೦೧೦.

ನಿಯತಕಾಲಿಕೆಗಳು ಮತ್ತು ದಿನ ಪತ್ರಿಕೆಗಳು :

೧) ಸಂಯುಕ್ತ ಕರ್ನಾಟಕ (ಕನ್ನಡ ದಿನಪತ್ರಿಕೆ) ಬೆಂಗಳೂರು, ಹುಬ್ಬಳ್ಳಿ, ಗುಲ್ಬರ್ಗ.

೨) ವಿಜಯ ಕರ್ನಾಟಕ (ಕನ್ನಡ ದಿನಪತ್ರಿಕೆ) ಬೆಂಗಳೂರು, ಬಾಗಲಕೋಟ ಹುಬ್ಬಳ್ಳಿ, ಗುಲ್ಬರ್ಗ. ದಾವಣಗೇರೆ.

೩) ಪ್ರಜಾವಾಣಿ (ಕನ್ನಡ ದಿನಪತ್ರಿಕೆ) ಬೆಂಗಳೂರು, ಹುಬ್ಬಳ್ಳಿ, ಗುಲ್ಬರ್ಗ.

೪) ಕನ್ನಡ ಪ್ರಭ (ಕನ್ನಡ ದಿನಪತ್ರಿಕೆ) ಬೆಂಗಳೂರು, ಬೆಳಗಾವಿ, ಗುಲ್ಬರ್ಗ.

೫) ಲೋಕದರ್ಶನ (ಕನ್ನಡ ದಿನಪತ್ರಿಕೆ) ಬೆಳಗಾವಿ

೬) ಕನ್ನಡಮ್ಮ (ದಿನಪತ್ರಿಕೆ) ಬೆಳಗಾವಿ.

೭) ಹಾಯ್ ಬೆಂಗಳೂರು (ವಾರ ಪತ್ರಿಕೆ) ಬೆಂಗಳೂರು.

೮) ಲಂಕೇಶ (ವಾರ ಪತ್ರಿಕೆ) ಬೆಂಗಳೂರು.